THE financial outlook in India is anything but bright. There will, it is expected, be a deficit of about three and half crores of rupees, and this will have to be made good. The loss by exchange has been the cause of this vacuum in the Government treasury. A large sum of money has to be sent to England every year and the demand is in gold. The result is that a large number of rupees have to be despatched to make up the amount, hence the great loss complained of. At the present time a sovereign is worth more than seventeen rupees, so it may be imagined what a large number of the coins of this country have to be sent home, and, as we have said, the demand is made in pounds, the result of which is that India is being drained of its money. The closing of the mints has done little or no good, the pressure is as great as ever, and something has to be done to try to make the receipts balance the expenditure. It is a question whether the Finance Minister will be able to accomplish this. There is a yawning gulf that he has to fill, and he is looking round to see where he can find the material to be thrown in. Never before in the history of the country has there been such a deficit, and great sacrifices will have to be made in order to restore an equilibrium of the finances. Fresh taxes are to be imposed, and this was what might have been expected. We are given to understand that many of the articles imported into the country will have a duty put upon them, and not a light one. For instance, petroleum will be taxed at the rate of six annas six pies a gallon, the result being that the price of the article will be doubled. It is now extensively used throughout the country, even in the villages. It can be purchased in all sorts of places, and the people have found the oil very convenient to use. We may be sure that the heavy duty to be imposed on it will decrease the demand; the price will probably be doubled, and only the well-to-do will use the article, while others will revert to the oil manufactured in the country. Probably not a quarter of the amount the Finance Minister hopes to obtain from the tax will be forthcoming, for, as we have said, the quantity used will be far less than at present. There are several articles on which the tax gatherer will lay his hand, but these need not be specified. But the greatest matter of complaint is with regard to what is not taxed rather than what is. The cotton goods brought into India are not to be touched; nothing is to be paid on them, and this is considered a great hardship. It is believed that if a duty were put on these goods a sum of money equal to that from all the others might be obtained. Thus the finances would be considerably lightened, and the gulf would not be so large as it will be sure to be even after money has been taken on account of the several articles on which a duty will be imposed. The reason why cotton goods are to be exempted from taxation can easily be given. The manufacturers of Manchester waited on the Secretary of State for India and told him that he must not put a tax upon their goods. Had he persisted the Government to which he belongs might have suffered at the next election, so he betrayed India in order to gain a few votes. This is not the first time this country has been sold in the same manner. The duty on imported cotton goods was taken off at the bidding of Manchester, and at the bidding of the same place it is not to be put on again It is thus plain to be seen that this country is not to be ruled for its own good, but that of a certain class at home. Party politics are to be looked at, thought of in the first place and India only in the second. To secure a majority at the next election this country is to be sacrificed; taxes have to be imposed on all sorts of articles, and yet on those that would bring in a good sum of money not an anna is to be demanded. It is well known that the Government of this country is only too anxious to put on the duty, but that it is forbidden to do so by the Secretary of State. We are glad to see that the people are protesting against the exclusion of cotton goods from the articles to be taxed. Calcutta has taken the lead in this respect; Bombay is following suit; Cawnpore has held a meeting and made a vigorous stand against the injustice contemplated, and the cry ought to be taken up in this part of the country. Madras has not yet made a move; it is proverbially slow in its movements, and will probably begin to make a protest after all the other places have finished. Bangalore of course, has not done anything in the matter. If Madras is slow this place is much slower—rather it is the slowest of all. We trust, however, that it will in time wake up to its responsibilities; that it will join the rest of the country in making a protest against the injustice intended to be perpetrated. There is no time to be lost. The matter must be taken in hand without the slightest delay. Who will take the lead in the business?

Select News and Notes.

THE revenue of Great Britain for the quarter ending December amounted to £23,528,000.

THE German Emperor has sent to the Emperor of Japan, as a personal gift, a very valuable horse.

ACCORDING to the latest reports to hand, it appears that the Amir has returned from Jellalabad, and is at present in Kabul.

THE Secretary of State for India has appointed Mr. Richard A. Howat to be Assistant Secretary in the Judicial and Public Department of the India Office, in the place of Mr. F G. B. Trevor.

WE Hear that the Non-official members of Council have decided to elect the Hon'ble Mr. V. Bhashyam Iyengar to the Viceregal Legislative Council. The Hon'ble Mr. Bhashyam Iyengar has consented to stand.

Cholera has broken out in the neighbourhood of the Railway Station at Salem. Seven deaths occurred last week, among the victims being the wife of the Station-Master, Mrs. Kirne, who died on the 3rd instant Precautions are being taken by the Railway authorities to prevent the spread of the epidemic among the Railway Staff and servants.

LORD Wenlock during his visit to Calcutta took the opportunity of discussing the railway needs of the Madras Presidency with Lord Elgin and his Public Works advisers. There is no immediate prospect of the Godavery Bridge or of the Madras-Bezwada line being undertaken, but Lord Wenlock fully explained the case from the Madras point of view and His Excellency is not altogether without hope that something may be done before long

BARON DE HORN has been robbed at Singapore of diamonds, jewels, etc., to the value of one million rupees. A ten per cent. reward is out. The following is the list:—Twelve cases of old and rare diamonds, rubies, emeralds, pearls, opals, fantastic and black diamonds; historical jewellery of Alexander I. of Russia, and that monarch's emerald rings; rough uncut Borneo diamonds; collection of Indian gold coins; round, engraved ruby seal of Akbar, Moghul of India, etc.

THE *Hindu* becomes quite cheerful about exchange difficulties it remarks:—"The Indians have no exchange question at all, and they can afford to look calmly, and even cheerfully to the Indian Rupee vanishing even below a shilling! Indeed, the present exchange difficulties of the Government are the only sure means of obtaining that political salvation which the Indian politician has worked to obtain through the Indian National Congress."

THE *Patrika* writes:—They are going to have a statue of Lord Lansdowne. But, why? What purpose will it serve? What his Lordship actually was, we all know. His statue would be an injustice to the British nation. For, among the English, he was not a remarkable man. The statue would, however, remind people that among Englishmen Lord Lansdowne occupied a foremost position as regards ability. But, would not that be—misrepresentation? "He is not a glory but a shame," to use an Indian expression. He was honest; but, then, his Lordship was a little devoid of common sense. To set up a statue of Lord Lansdowne in India where he was tested for five long years, would be a political mistake.

Local and Provincial.

THE MAHARAJAH.—His Highness the Maharajah, the Maharane, family and suite passed through Bangalore on the way to the capital last Monday morning. There was a halt made here of about twenty minutes.

COLONEL MAGRATH.—This gentleman gave over charge of his several offices to Mr. E Hewetson on Tuesday last. He leaves for England on the 15th of this month. It is expected that he will not return to India.

CONVOCATION, 1894.—A Convocation for conferring degrees will be held in the Senate House on Wednesday the 28th instant at 4 30 P. M. Applications from candidates for degrees must reach the Registrar *not later than* the 20th idem.

THE WEATHER.—This is very trying just now. We have never known it so hot at this time of the year as it is now, and the place looks very dry and parched. At times there are clouds on the sky, but the rain does not come down. It is to be hoped we shall have a good shower before long.

THE ACTING DISTRICT MAGISTRATE.—It is stated that the acting appointment of District Magistrate and Municipal President will be held by Mr. Hewetson only as a temporary measure till such time as the Railway Police scheme is passed, in which case he will take over the superintendentship. Mr. Leggatt, of Coorg, is again named as likely to succeed permanently to the District Magistracy and Municipal Presidentship.—B. S.

COMMITTEE OF THE MYSORE LOCAL EXAMINATION.—The Revd C. H Hockin and Revd J. A. Vanes, B A, who had been connected with the above committee for seven and four years respectively, having retired, their places were filled by the appointment of the Revd J. Hudson, B A, and Revd. H. Gulliford, and the committee have placed on record their high appreciation of the valuable services rendered by these gentlemen during their tenure of office. Messrs V. N. Narasim Iyengar, Census Commissioner, N Venkatesa Iyengar, B A, Mir Hamza Hussain, B A, B L, and M. Narasimmachar, M. A. have been appointed by Government as additional members.

THE LATE MR. R. VIJAYENDRA RAO.—We regret to record the untimely death of Mr. R Vijayindra Rao, special duty officer to the Mysore Government, which took place at his residence, on Thursday (8th). The deceased gentleman had been suffering from a severe attack of carbuncle and Dr. McGann pronounced his case as hopeless last Wednesday afternoon. The deceased was one of the ablest officers of the State, who since the rendition of the Province to His Highness the Maharajah discharged the responsible office of Chief Secretary with great ability. This office he vacated in 1892 when he was appointed Excise Commissioner and subsequently special duty officer, which he held up to the time of his death, with great credit and distinction to himself and the Government of His Highness. In his death the Durbar has lost one of the best and ablest officers. He was respected by Europeans and Natives alike for his many good qualities.

The Mysore Gazette.

Bangalore, Thursday March 8, 1894.

NOTIFICATIONS BY THE GOVERNMENT OF HIS HIGHNESS THE MAHARAJAH OF MYSORE.

Under Article 188 of the Mysore Service Regulations, C. N. Chandaiya, Amildar, Bolar Taluk, is granted privilege leave of absence for three months from the 19th February 1894 or from such other date as he may avail himself of the same.

Under Section 12 of the Code of Criminal Procedure, Mr. B. J. Kumaraswami Naik, Assistant Commissioner and 2nd Class Magistrate, Tumkur, is invested with the powers of a Magistrate of the 1st Class, to be exercised during the absence on leave of Mr. A. Raghavendra Rao, Assistant Commissioner, or until further orders.

Rama Rao, Sheristadar of the Hoskote Taluk, was in charge of that Taluk during the absence of Sitaramaiya (Amildar) on the leave granted in Proceedings No 3916—G. 848, dated 29th August 1893, and Notification No. 10765—G. F. 60 93, dated 10th January 1894.

Dr. Choksi, having returned to Bangalore from leave, is hereby re-appointed as a Municipal Commissioner of the Bangalore City Municipality.

Under Section 37 of the Code of Criminal Procedure, Mr. B J. Kumaraswami Naik, Assistant Commissioner and 1st Class Magistrate, Tumkur, is invested with all the additional powers specified in the 4th Schedule as powers which the Government may confer on a Magistrate of the 1st Class except the powers mentioned in clauses 10 and 11 of the said Schedule, viz :—

(10) Power to try summarily (Section 260); and (11) Power to hear appeals (Section 407)

Mr. Narayanaiengar, Assistant Commissioner is posted for duty in the Dewan's Office.

2. Mr Narayanaiengar having reported himself on the forenoon of the 21st February 1894 for duty in the said office, the unexpired portion of the furlough leave granted to him in Notification No 6281—G F. 466 92, dated 30th September 1893, is hereby cancelled.

Under Article 188 of the Mysore Service Regulations, Mr. J. A. Coelho, Sub-Assistant Surgeon, Government City Hospital, Bangalore, has been granted 30 days' privilege leave of absence from the 29th January 1894.

Under Article 204 of the Mysore Service Regulations, Mr. Ramaswami Iyer, Sub-Judge, Mysore, is granted privilege leave of absence for 12 days from 13th March 1894

2. Mr. S Venkatvaradaiengar, Munsiff of Mysore, is appointed to act as Sub-Judge, Mysore, from 13th to 21st March 1894 or until further orders

Mr. T. E. Jayaram Iyer, Judicial Probationer, is appointed to act as Munsiff of Mysore *Sub-protem* in the last grade, during the absence of Mr. Venkatvaradaiengar on other duty or until further orders.

Mr. T E Jayaram Iyer delivered over, and Mr. B. S. Krishnaswamiengar assumed, charge of the Munsiff's Court at Chikballapur on the afternoon of 18th February 1894

2 The unexpired portion of the leave granted to Mr. Krishnaswamiengar in Notification No. 13629 G 2729, dated 30th January 8694, is hereby cancelled

Mr. S. A. Babu Rao, Assistant Conservator of Forests, is appointed Head-quarter Assistant to the Inspector General of Forests, vice Mr. T Abdul Karim posted to the Mysore District.

Under Article 188 of the Mysore Service Regulations, Mr. G. Rama Rao, Forest Probationer in charge of the Shikarpur Sub-Division, was granted privilege leave of absence for one month and fifteen days from 21st November 1893 to 4th January 1894, both days inclusive

Under Article 188 of the Mysore Service Regulations, Mr. H. Muddappa, Sub-Assistant Conservator of Forests, Hassan District, is granted privilege leave of absence for 20 days from 15th March 1894 or from such other date as he may avail himself of the same.

The following transfers are ordered :—

Mr G. Dunning, Assistant Superintendent of Police, Kadur, to be in charge of Railway Police.

Mr D. A. Ballard, Officiating Superintendent of Police in charge, of Railway Police to the Kadur District.

Under Article 188 of the Mysore Service, Regulations, Hema Hanumantaiya, Amildar of Kolar Taluk, is granted privilege leave of absence for 1½ months from such date as he may avail himself of the same

2 D. Shamanna, Sheristadar, Kolar Taluk, is appointed to act as Amildar and 3rd Class Magistrate of Kolar Taluk during the absence of Hema Hanumantaiya on leave or until further orders.

The name of the Biderkere Station on the Mysore State Railway in the Chitaldroog District is hereby changed into "Hosadurga Road"

Under Article 172 of the Mysore Service Regulations, R. Lakshman Rao, Amildar of the Holalkere Taluk, is granted casual leave of absence for 10 days from such date as he may avail himself of the same.

Mr. U Venkatapatiaiengar, Deputy Inspector of Schools, Bangalore District, has been granted casual leave from the 21st to the 28th February 1894.

NOTICE.

FIREWOOD.

Tenders for the supply of 300 to 400 tons per month of Jungle and Casuarina firewood to the Bangalore Central Distillery will be received up to 12th March 1894.

Full particulars may be obtained from the Agent to Parry & Co., Bangalore Central distillery.

ಸೂಚನೆ.

ಕಾಡು ಸೌದೆಯು ಮತ್ತು ಕ್ಯಾಸರೀನ ಸೌದೆಯು ತಿಂಗಳು ೧ಕ್ಕೆ ೩೦೦ ಟನ್ನುಗಳಿಂದ ೪೦೦ ಟನ್ನುಗಳ ವರೆಗು ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿಗೆ ಸರಬರಾಯಿ ಮಾಡುವದಕ್ಕೆ ದರಖಾಸ್ತುಗಳು, ೧೮೯೪ ನೇ ಇಸವಿ ಮಾರ್ಚಿ ತಾರೀಖು ೧೨ ರ ವರಿವಿಗೆ ತಗದುಕೊಳ್ಳಲ್ಪಡುತ್ತೆ.

ಎಲ್ಲಾ ಸಂಗತಿಗಳು, ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿ,ಪ್ಯಾರಿ ಆಂಡ್ ಕಂಪೆನಿ ಯವರ ಏಜಂಟರವರಿಂದ ಹೊಂದಲ್ಪಡಬಹುದು.

ಕರ್ನಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ಮಾರ್ಚಿ ೧೨ ನೇ ತಾ॥ ಸೋಮವಾರ

ಅರಳೇ ಮೇಲಿನ ತೆರಿಗೆಯನ್ನು ವಜಾ ಮಾಡಿದ್ದನ್ನು ಕುರಿತು.

೧೮೯೪—೯೫ ನೇಯ ಸರ್ಕಾರಿ ಸಾಲಿನ ಬಜೆಟ್ಟಿ ಅಂದಾಜಿನಲ್ಲಿ ಸುಮಾರು ಮೂರೂವರೆ ಕೋಟಿ ರೂಪಾಯಿಗಳು ಕಮ್ಮಿ ಕಂಡುಬರುವದಾಗಿ ಫೈನಾನ್ಷಿಯಲ್ ಮಿನಿಸ್ಟರವರು, ಈಚೆಗೆ ಸೇರಿದ ವೈಸರಾಯ್ ಯವರ ಮಂತ್ರಾಲೋಚಕಸಭೆಯ ಮುಂದೆ ಲೆಕ್ಕ ಹಾಜರ್ಮಾಡಲು, ಹೀಗೆ ಕಮ್ಮಿ ಕಂಡುಬರುವ ಮೊತ್ತವನ್ನು ಯಾವ ಮಾರ್ಗದಿಂದ ಭರ್ತಿಮಾಡಬೇಕೆಂಬ ಜಿಜ್ಞಾಸೆಯುಂಟಾಗಿ, ಅನ್ಯರಾಜ್ಯಗಳಿಂದ ಇಂಡಿಯಾ ದೇಶಕ್ಕೆ ಆಮದು ಮಾಡಲ್ಪಡುವ ಪದಾರ್ಥಗಳ ಪೈಕಿ ಕೆರೋಸಿನ್ ಯೆಣ್ಣೆ, ಸೀಮೆ ಇದ್ದಲು, ಕಬ್ಬಿಣ, ಬೆಳ್ಳಿ ಮೊದಲಾದ ಕೆಲವು ಪದಾರ್ಥಗಳ ಮೇಲೆ ಸೇಕಡ ಐದರಂತೆ ಸುಂಕ ವಸೂಲ್ಮಾಡಲ್ಪಡತಕ್ಕದ್ದೆಂದು ನಿರ್ಣಯವಾಗಿ, ಸದರೀ ಪದಾರ್ಥಗಳ ಪಟ್ಟಿಯೊಂದನ್ನು ತಯಾರ್ಮಾಡಿ, ಅದರಲ್ಲಿ ಇಂಗ್ಲೆಂಡು ರಾಜ್ಯದಿಂದ ಇಂಡ್ಯಾದೇಶಕ್ಕೆ ಆಮದು ಮಾಡಲ್ಪಡುವ ನೂಲು, ಬಟ್ಟೆ ವಗೈರೆ ಅರಳೆ ಸಂಬಂಧವಾದ ಪದಾರ್ಥಗಳಂ ಸೇರಿಸಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂಜೂರಾತಿಯ ಬಗ್ಗೆ ಕಳುಹಿಸಿದರು. ಈ ಏರ್ಪಾಡನ್ನು ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚಕ ಸಮಾಜದ ಮೆಂಬರ್‌ಗಳೆಲ್ಲರು ಒಪ್ಪಿದರಲ್ಲದೆ, ಸ್ಟೇಟ್ ಸೆಕ್ರೆಟರಿ ಯವರಿಗೂ ಅಂತು ಉಚಿತವಾಗಿಯೇ ಕಂಡುಬಂತು. ಇಂಗ್ಲೆಂಡ್ ರಾಜ್ಯದಲ್ಲಿ ಲ್ಯಾಂಕಾಷೈರ್ ಎಂಬ ತುಕಡಿಯು ಪರಿನಾನಾವಿಧ ಬಟ್ಟೆಗಳ ತಯಾರೀವಿಷಯದಲ್ಲಿ ಕೇವಲ ಪ್ರಸಿದ್ಧರಾಗಿಯೂ ಬಲಿಷ್ಠರಾಗಿಯೂ ಇರುವವರಿಂದ, ತಾವು ತಯಾರ್ಮಾಡಿ ಕಳುಹಿಸುವ ಪದಾರ್ಥಗಳ ಮೇಲೆ ಸುಂಕ ಹಾಕಿದರೆ ತಮ್ಮ ವ್ಯಾಪಾರಕ್ಕೆ ಕೊರತೆಯುಂಟಾಗಿ ತನ್ಮೂಲಕ ತಮ್ಮ ಆಯತಿಯಲ್ಲೂ ಕೊರತೆಯುಂಟಾಗುವದೆಂಬ ಭೀತಿಯಿಂದ, ಅವರ ಪೈಕಿ ಪ್ರಮುಖರಾದವರು ಕೆಲವರು ಸೇರಿ ಇಂಡಿಯಾಸ್ಟೇಟ್ ಸೆಕ್ರೆಟರಿಯವರ ಬಳಿಗೆ ಹೋಗಿ, ಇಂಡ್ಯದೇಶಕ್ಕೆ ರಫ್ತಾಗುವ ಅರಳೆ ಸಂಬಂಧವಾದ ಪದಾರ್ಥಗಳ ಮೇಲೆ ಸುತರಾಂ ಸುಂಕ ವಸೂಲ್ಮಾಡಕೂಡದೆಂದು ವಾದಿಸಿದರು. ಸ್ಟೇಟ್ ಸೆಕ್ರೆಟರಿ ಯವರು ಸದರೀ ಜನರ ಆಕ್ಷೇಪಣೆಯಂ ಲಕ್ಷ್ಯದಲ್ಲಿಡದೆ ನ್ಯಾಯಮಾರ್ಗವನ್ನನುಸರಿಸಬೇಕಾದವರಾಗಿದ್ದಾಗ್ಯೂ, ಪಾರ್ಲಿಮೆಂಟ್ ಮೆಂಬರ್‌ಗಳ ಚುನಾವಣೆ ಕಾಲದಲ್ಲಿ ಬಲಿಷ್ಠರಾದ ಸದರೀ ತುಕಡಿಯ ಜನರ ಸಹಾಯವು ಉಭಯಪಕ್ಷದವರಿಗೂ, ಅಂದರೆ, ಗ್ಲಾಡ್‌ಸ್ಟನ್ ಪಕ್ಷದವರಿಗೂ ಸಾಲಿಸ್‌ಬರಿ ಪಕ್ಷದವರಿಗೂ ಅತ್ಯಂತಾವಶ್ಯಕವಾಗಿರುವದರಿಂದ ಅವರ ದಾಕ್ಷಿಣ್ಯಕ್ಕೊಳಪಟ್ಟು, ತಮ್ಮ ಮಂತ್ರಾಲೋಚಕಸಭೆಯ ಮೆಂಬರುಗಳ ಅಭಿಪ್ರಾಯಕ್ಕೆ ಪ್ರತ್ಯಕ್ಷವಿರುದ್ಧವಾಗಿ, ಸದರೀ ಪಟ್ಟಿಯಿಂದ ಅರಳೇ ಮೇಲಿನ ಸುಂಕವನ್ನು ವಜಾಮಾಡಿ ಉಳಿದ ಪದಾರ್ಥಗಳ ಮೇಲೆ ಸುಂಕ ವಸೂಲ್ಮಾಡತಕ್ಕದ್ದೆಂದು ತಿಳಿಸಿದರು. ಅದನ್ನನುಸರಿಸಿ ಇಂಡ್ಯ ಗವರ್ನಮೆಂಟಿನವರು ಆ ವಿಷಯದಲ್ಲಿ ಈಚೆಗೆ ಒಂದು ಮಸವಿದಾ ಆಕ್ಟನ್ನು ರಚಿಯಿಸಿ ನ್ಯಾಯವಿಧಾಯಕಸಭೆಯ ಮುಂದೆ ಇಟ್ಟರು. ಈ ವಿಷಯ ಹೊರಗಾದ ಕೂಡಲೆ, ಇಂಡ್ಯದೇಶದೊಳು ಕಲ್ಕತ್ತೆ, ಮುಂಬೈ, ಮದರಾಸು ಮೊದಲಾದ ಪ್ರಸಿದ್ಧ ಷಹರುಗಳಲ್ಲಿರುವ ವ್ಯಾಪಾರ ಸಂಘದವರು, ಗವರ್ನಮೆಂಟಿನವರು ನಡೆಸುವ ಇಂತ ಅನ್ಯಾಯವಂ ಕುರಿತು ಒಗ್ಗಟ್ಟಾಗಿ ಆಕ್ಷೇಪಿಸಬೇಕೆಂದು ಯೋಚಿಸಿ, ಅಲ್ಲಿಯಲ್ಲಿ ಪ್ರಬಲ ಸಮಾಜಗಳು ಸೇರಿ ಮೇಲೆ ತಿಳಿಸಿರುವಂತೆ, ಅರಳೆಯ ಸಂಬಂಧವಾದ ಪದಾರ್ಥಗಳನ್ನು ಸಹ ಸುಂಕಕ್ಕೆ ಗುರಿಮಾಡುವುದು ನ್ಯಾಯ್ಯವಾದದ್ದೆಂದು ನಿರ್ಣಯಗಳಂ ಮಾಡಿ, ಅಂತಹನ್ನು ನಿರ್ಣಯಗಳಂ ತಂತಿಮೂಲಕ ಗವರ್ನಮೆಂಟಿಗೆ ತಿಳಿಸುತಬರುತಲಿದ್ದಾರೆ. ವೈಸರಾಯ್ ಯವರ ನ್ಯಾಯವಿಧಾಯಕ ಸಭೆಯ ಮೆಂಬರ್‌ಗಳ ಪೈಕಿ ಇಬ್ಬರು ಅರಳೆಯ ಮೇಲೆ ಸುಂಕ ವಸೂಲ್ಮಾಡದೆ ಅದನ್ನು ವಿನಾಯಿಸುವದಕ್ಕೆ ಸುತರಾಂ ಕಾರಣವಿಲ್ಲವೆಂದು ಪ್ರತಿಭಟಿಸಿ ಅಭಿಪ್ರಾಯಗಳಂ ಕೊಟ್ಟರು. ಯಾರು ಯೇನು ಮಾಡಿದಾಗ್ಯೂ, ರಾಜಕೀಯ ಪಕ್ಷಪ್ರಯುಕ್ತವಾದ ಆಲೋಚನೆ ಮತ್ತು ಭೀತಿಯಿಂದ ಔದ್ಧತ್ಯದೊಡನೆ ಗವರ್ನಮೆಂಟಿನವರು ತಮ್ಮ ಉದ್ದೇಶವನ್ನೀಡೇರಿಸಿಕೊಳ್ಳುವರೆಂಬುವರಲ್ಲಿ ಸಂಶಯ ಲೇಶವೂ ಇರಲಾರದು.

ಇಂಡ್ಯರಾಜ್ಯದ ಹುಟ್ಟುವಳಿಯ ಪೈಕಿ ಸುಮಾರು ನಾಲ್ಕರಲ್ಲೊಂದು ಭಾಗಕ್ಕೆ ಕಡಮೆಯಿಲ್ಲದೆ, ಇಂಡ್ಯ ದೇಶಕ್ಕೆ ಸಂಬಂಧವಿಲ್ಲದೆಯೂ, ಅನುಪಯುಕ್ತಗಳಾಗಿಯೂ ಇರುವ ಖರ್ಚುಗಳ ಬಗ್ಗೆ ಪ್ರತಿ ವರ್ಷದಲ್ಲೂ ಇಂಗ್ಲೆಂಡಿಗೆ ರವಾನಿಸಲ್ಪಡುತಿದೆ ಸದರೀ ಮೊತ್ತವನ್ನು, ಆ ದೇಶದೊಳು ಚಲಾವಣೆ ನಾಣ್ಯವಾಗಿರುವ ಪೌಂಡ್ ಎಂಬ ಸವರನಿನ ಆಯಾ ಕಾಲದ ಧಾರಣೆಯನ್ನನುಸರಿಸಿ ಲೆಕ್ಕಮಾಡಿ ಕಳುಹಿಸಬೇಕಾಗಿರುವದರಿಂದ, ಸದರೀ ಭಂಗಾರ ನಾಣ್ಯದ ಈಗಿನ ಕ್ರಯವನ್ನನುಸರಿಸಿ, ಸೇಕಡ ೭೫ ರೂಪಾಯಿಗಳ ಮೇಲೆ ಜಾಸ್ತಿ ಕಳುಹಿಸಬೇಕಾಗಿಬಂದು ತನ್ಮೂಲಕವಾಗಿಯೂ ಕೋಟ್ಯಂತರ ರೂಪಾಯಿಗಳು ನಷ್ಟವಾಗುತಲಿದೆ. ಇದು ಶಿವಾಯಿ, ಇಂಡ್ಯದೇಶದ ನೌಕರಿಯಲ್ಲಿರುವ ಯುರೋಪಿಯನ್ ಆಫೀಸರ್‌ಗಳು ತಮ್ಮ ತಲಬ್ ಪೈಕಿ ಒಂದು ಭಾಗವನ್ನು ಇಂಗ್ಲೆಂಡಿನಲ್ಲಿರುವ ತಮ್ಮ ಹೆಂಡತಿ ಮಕ್ಕಳ ಪೋಷಣೆಯಬಗ್ಗೂ ತಮ್ಮ ಮಕ್ಕಳ ವಿದ್ಯಾಭ್ಯಾಸದಬಗ್ಗೂ ಅಲ್ಲಿಗೆ ರವಾನಿಸಬೇಕಾಗಿರುವದರಿಂದ ಅಂತ ಮೊತ್ತವನ್ನು ಸವರನ್ ರೂಪವಾಗಿ ಕಳುಹಿಸುವದರಲ್ಲಿ ಅದರ ತಾತ್ಕಾಲಿಕ ಕ್ರಯವನ್ನನುಸರಿಸಿ ತಮಗೆ ಬಹಳ ನಷ್ಟವುಂಟಾಗುತಿದೆಯಾಗಿ, ಅಂತ ನಷ್ಟಕ್ಕೆ ಗವರ್ನಮೆಂಟಿನವರು ಉಚಿತರೀತಿಯಿಂದ ಈಡು ಮಾಡಬೇಕೆಂದು ಮೊರೆಯಿಡಲು ಗವರ್ನಮೆಂಟಿನವರು ಅದಂ ಲಾಲಿಸಿ ಕೊಡುತ ಬರುವ ಈಡು ಮೊಬಲಗಿನಿಂದಲೂ ಅನೇಕ ಲಕ್ಷ ರೂಪಾಯಿಗಳು ಇಂಡ್ಯ ದೇಶಕ್ಕೆ ನಷ್ಟವಾಗುತಲಿದೆ. ಇಂತ ನಷ್ಟಗಳನ್ನೂ, ಬೇರೆ ವಿಧವಾದ ದುಬಾರಿ ಖರ್ಚುಗಳನ್ನೂ ತಪ್ಪಿಸುವದಕ್ಕೆ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಾಮಾಜಿಕರು ಪ್ರತಿ ಸಂವತ್ಸರದ ಮೀಟಿಂಗ್ ಕಾಲದೊಳು ತಿಳಿಸುವಂತೆ, ಉಚಿತಗಳಾದ ಮಾರ್ಗಗಳನೇಕವಾಗಿದ್ದಾಗ್ಯೂ ಅವುಗಳಿಗೆ ಸುತರಾಂ ನಿಗೇ ಕೊಡದೆ ಅನುಚಿತಗಳಾದ ಮತ್ತು ವ್ಯರ್ಥಗಳಾದ ಖರ್ಚುಗಳಿಂದ ಉಂಟಾಗುವ ನಷ್ಟವನ್ನು ಭರ್ತಿಮಾಡಿಕೊಳ್ಳುವದಕ್ಕಾಗಿ ಬಡವರಾದ ಇಂಡ್ಯ ದೇಶೀಯರನ್ನು ಮಾತ್ರ ಗುರಿ ಮಾಡುವಣವು ಹ್ಯಾಗೆ ನ್ಯಾಯವಾಗಿರುವದೋ ನಾವರಿಯೆವು. ಈಗ ಗ್ರಾಮಾಂತರಗಳಲ್ಲಿ ರೈತರ ಮನೆಗಳಲ್ಲಿ ಸಹ ಉಪಯೋಗಿಸಲ್ಪಡುತಲಿರುವ ಕೆರೋಸಿನ್ ಯೆಣ್ಣೆಯು ಸುಂಕಕ್ಕೆ ಗುರಿಯಾಗುವದಾಗಿರುವದರಿಂದ ಮುಂದೆ ಅದು ದೊಡ್ಡ ಷಹರುಗಳಲ್ಲಿರುವ ಉಪಪನ್ನರಾದವರ ಮನೆಗಳಲ್ಲಿ ಸಹ ಕೇವಲ ಮಿತವಾಗಿ ಉಪಯೋಗಿಸಬೇಕಾದ ಕಾಲವು ಅತ್ಯಾಸನ್ನವಾಗಿದೆಯೆಂದು ಹೇಳಬೇಕಾಗಿದೆ. ಸದರೀ ಯೆಣ್ಣೆಯನ್ನು ವಿಸ್ತಾರವಾಗಿ ರೆಯಿಲ್ವೆ ಕಂಪೆನಿಯವರು ಉಪಯೋಗಿಸಬೇಕಾದವರಾಗಿರುವದರಿಂದ ತನ್ಮೂಲಕ ಉಂಟಾಗುವ ಜಾಸ್ತಿ ಖರ್ಚನ್ನು, ಪ್ರಯಾಣಸ್ಥರ ಟಿಕೆಟಿ ದರವನ್ನೇ ಅಥವಾ ಸರುಕುಗಳ ರವಾನೆ ಕೂಲಿಯ ದರವನ್ನೇ ಹೆಚ್ಚಿಸಿ ಭರ್ತಿ ಮಾಡಿಕೊಳ್ಳುವವರಲ್ಲಿ ಸಂಶಯವಿಲ್ಲವು. ಕೆರೋಸಿನ್ ಯೆಣ್ಣೆಯ ಕ್ರಯವು ಹೆಚ್ಚಿದ ಕೂಡಲೆ ಅದನ್ನು ಕೊಂಡುಕೊಳ್ಳಲಾರದ ಬಡವರು ಪೂರ್ವ ಪದ್ಧತಿಯನ್ನನುಸರಿಸಿ ತ

ಷ್ಟು ಮನೆಗಳೊಳು ದೀವಕ್ಕೆ ಹರಳೆಣ್ಣೆ ಅಥವಾ ಹೊಂಗೇ ಎಣ್ಣೆಯನ್ನು ಉಪಯೋಗಿಸುವದಕ್ಕೆ ಉಪಕ್ರಮಿಸುವದರ ಮೂಲಕ ಅದರ ಗಿರಾಕಿಯೂ ಹೆಚ್ಚಬಹುದು. ವಿಲಾಯತಿಯಿಂದ ಈ ದೇಶಕ್ಕೆ ಆಮದ್ ಆಗುವ ಬಟ್ಟೆಗಳಿಗೆ ಸುಂಕವಿಲ್ಲದೆ ಹೋದಮೇಲೆ ಅದು ಈ ದೇಶದೊಳು ಅಮಿತವಾಗಿ ಖರ್ಚಾಗುತ, ಇಲ್ಲಿನ ತಯಾರೀ ಬಟ್ಟೆಗಳಿಗೆ ಗಿರಾಕಿ ಬಹಳ ಕಡಮೆಯಾಗಿಹೋಗುವುದು. ಇಂಡ್ಯ ದೇಶೀಯರು ಅನೇಕ ವಿಷಯಗಳಲ್ಲಿ ತಾವು ಅನುಭವಿಸುತಲಿರುವ ದುರ್ದಶೆಯಂ ಪರಿಹರಿಸಿ, ತಮ್ಮನ್ನು ಉನ್ನತಸ್ಥಿತಿಗೆ ತರಬೇಕೆಂದು ಮಹಾರಾಜ್ಞೀ ಸರ್ಕಾರನ್ನು ಪ್ರಾರ್ಥಿಸುತ್ತಿರುವಲ್ಲಿ, ಅವರ ಕಷ್ಟವು ಮತ್ತಷ್ಟು ವೃದ್ಧಿಯಾಗುವದಕ್ಕೆ ಕಾರಣಗಳಾಗಿರುವ ಹೊಸ ಪಾರ್ಡುಗಳಂ ಮಾಡುವಣವು ಪಾಲ್ಯಪಾಲಕರಿಗೆ ಪರಸ್ಪರ ಸ್ಥಿರವಾಗಿಯೂ ದೃಢವಾಗಿಯೂ ನೆಲಗೊಂಡಿರಬೇಕಾದ ನಂಬಿಕೆಗೂ ಅನ್ಯೋನ್ಯಬಾಧಕ್ಕೂ ಲೋಪವನ್ನುಂಟುಮಾಡದೆಯಿರದಂತಾಗುವುದು. ಈಗ ಯೋಚಿಸಲ್ಪಡುತ್ತಿರುವ ಆಮದ್ ತೆರಿಗೆಯ ಮೂಲಕ ವಸೂಲಾಗಬಹುದಾದ ಮೊತ್ತವು ಬಡ್ಜಟ್ ಅಂದಾಜಿನಲ್ಲಿ ಕಂಡುಬರುವ ಮೂರುವರೆಕೋಟಿ ರೂಪಾಯಿಗಳಿಗೆ ಈಡಾಗಲಾರದಾಗಿ ಕಮ್ಮಿಯಾಗಿ ಕಂಡುಬರುವ ಮೊತ್ತವು ಇನ್ನು ಯಾವ ರೀತಿಯಲ್ಲಿ ಇಂಡ್ಯ ದೇಶೀಯರ ಮೇಲೆ ಹೊರಿಸಲ್ಪಡುವುದೋ ಎಂದು ಪ್ರಜೆಗಳು ಕೇವಲ ಭೀತರಾಗಿರುತ್ತಾರೆ. ಹೊಸ ವೈಸ್‌ರಾಯ್ ಯವರಾದ ಲಾರ್ಡ್ ಎಲ್ಗಿನ್ ಪ್ರಭುಗಳ ರಾಜ್ಯಾಡಳಿತ ಪ್ರಾರಂಭವು ಇಂಡ್ಯದೇಶೀಯರ ವಿಷಯದಲ್ಲಿ ಅನುತ್ಸಾಹಕರವಾಗಿ ಪರಿಣಮಿಸಿದ ಬಗ್ಗೆ ಬಹಳ ಚಿಂತಿಸಬೇಕಾಗಿದೆ.

ಈ ತಿಂಗಳ ೧೦ ನೇ ತಾರೀಖಿನಲ್ಲಿ ಸೇರಿದ ವೈಸ್‌ರಾಯ್ ಯವರ ನ್ಯಾಯವಿಧಾಯಕ ಸಭೆಯಲ್ಲಿ, ಅರಳೇಮೇಲಿನ ಸುಂಕವನ್ನು ವಿನಾಯಿಸಿ, ಇತರ ಪದಾರ್ಥಗಳ ಮೇಲೆ ಆಮದ್ ತೆರಿಗೆ ವಸೂಲ್ಮಾಡತಕ್ಕದ್ದೆಂಬ ಹೊಸ ಆಕ್ಟು ಅಧಿಕ ಸಂಖ್ಯೆಯುಳ್ಳ ಮೆಂಬರ್‌ಗಳಿಂದ ಮಂಜೂರ್ಮಾಡಲ್ಪಟ್ಟಂತೆ ನಿನ್ನೆಯದಿನ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತಿದೆ.

ಮಿಸ್ಟರ್ ಆರ್ ವಿಜಯೇಂದ್ರರಾಯರವರ ಮರಣ ವೃತ್ತಾಂತವು.

ಈಗ್ಯೆ ಯೆರಡು ವರುಷಗಳ ಕಾಲವಾಗಿ ಈ ಸಂಸ್ಥಾನದ ಸ್ಟ್ಯಾಟಿಸ್ಟಿಕಲ್ ಇಲಾಖಾಧಿಕಾರವಂ ವಹಿಸಿದ್ದ ಮಿ॥ ಆರ್. ವಿಜಯೇಂದ್ರರಾಯರವರು ಫಾಲ್ಗುಣ ಮಾಹೆ ೪ನೇ ತಾರೀಖ್ ಗುರುವಾರದದಿನ ಸಾಯಂಕಾಲ, ಇಲ್ಲಿನ ಲಾಲ್‌ಬಾಗ್ ರೋಡಿನಲ್ಲಿ ಅವರು ವಾಸವಾಗಿದ್ದ ಬಂಗ್ಲೆಯಲ್ಲಿ ಕ್ಲೇಶನಿಮಿತ್ತಕವಾದ ತಮ್ಮ ಪ್ರಾಕೃತ ಶರೀರವಂ ತ್ಯಜಿಸಿ ನಿತ್ಯಾನಂದಮಯವಾದ ಲೋಕಾಂತರವನ್ನೈದಿದರೆಂಬ ವೃತ್ತಾಂತವನ್ನೀ ಪತ್ರಿಕಾ ಮೂಲಕ ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈ ದೊಡ್ಡಮನುಷ್ಯರ ಅನಿರೀಕ್ಷಿತ ವಿಯೋಗವನ್ನೂ ಅತ್ಯಲ್ಪಕಾಲಿಕವಾದ ದುರಂತ ಮೃತ್ಯುಪ್ರದವಾದ ಅವರ ಉಪಾಧಿಸ್ವರೂಪವನ್ನೂ ಕೇಳುವಪ್ರತಿಮನುಷ್ಯನೂ ಆಶ್ಚರ್ಯಪಡದಿರಲಾರನು. ಇವರು ಗತಿಸಲಿಕ್ಕೆ ಹದಿನೈದು ದಿನಗಳಿಗೆ ಪೂರ್ವದೊಳು ಇವರ ಕಾಲಿನಲ್ಲಿ ಸೂಕ್ಷ್ಮವಾದ ಒಂದು ಗುಳ್ಳೆಯು ಹೊರಟು ಅದು ದಿನೇದಿನೆ ವೃದ್ಧಿಯಾಗುತ ಕಡೆಗೆ ರಾಜರಣವಾಗಿ ಪರಿಣಮಿಸಿದ್ದರಿಂದ ತನ್ನಿವೃತ್ತ್ಯರ್ಥ ಮಾಡಲ್ಪಟ್ಟ ಶಸ್ತ್ರಚಿಕಿತ್ಸೆಯು ಪ್ರಾಣವಿಯೋಗಕಾರಿಯಾಗಿ ಪರಿಣಮಿಸಿದಂತೆ ತಿಳಿಯಬುತು. ಮಿ॥ ವಿಜಯೇಂದ್ರರಾಯರವರು ೧೮೪೩ನೇ ಇಸವಿಯಲ್ಲಿ ಜನಿಸಿ ೬೫ ನೇ ಇಸವಿಯಲ್ಲಿ ಮದರಾಸ್ ಇನಾಂ ಕಮಿಷನರವರ ಆಫೀಸ್‌ನಲ್ಲಿ ಒಬ್ಬ ಕ್ಲರ್ಕಾಗಿ ಪ್ರವೇಶಿಸಿ ತರುವಾಯ ಬೆಂಗಳೂರ್ ಮಟ್ಟು ಡಿಸ್ಟ್ರಿಕ್ಟ್ ಸಬ್ ಕಲೆಕ್ಟರ ಆಫೀಸ್‌ನಲ್ಲಿ ೬೭ನೇ ಇಸವಿ ಆಗಸ್ಟ್ ಆಖ್ಯರ್ ವರೆಗೆಮೂರನೇ ಕ್ಲರ್ಕಾಗಿರುತಿದ್ದು, ಅಲ್ಲಿಂದ ಅದೇ ಇಸವಿ ಸೆಪ್ಟಂಬರ್‌ನಲ್ಲಿ ಅಪ್ಪಗ್ರೇಡು ಡಿವಿಜನ್ ರೆವಿನ್ಯೂ ಶಿರಸ್ತೇದಾರರಾಗಿ ನಿಯಮಿಸಲ್ಪಟ್ಟು ಪ್ರಥಮತಃ ಈ ದೇಶಕ್ಕೆ ಬಂದರು. ಅಲ್ಲಿಂದ ಕ್ರಮವಾಗಿ ಅಧಿಕಾರ ವೇತನಾಭಿವೃದ್ಧಿಯಂ ಪಡೆಯುತ್ತ, ಪ್ರಕೃತ ಉನ್ನತ ದಶೆಗೆ ಬಂದರು. ೧೮೮೧ ನೇ ಇಸವಿ ಮಾರ್ಚಿ ೩೦ ರ ಮೊದಲು, ೧೮೮೯ ನೇ ಇಸವಿ ನವಂಬರ್ ವರೆಗೆ ಈ ಗವರ್ನ್‌ಮೆಂಟಿ ಚೀಫ್ ಸೆಕ್ರೆಟರಿಯಾಗಿಯೂ, ತರುವಾಯ ಯೆಕ್ಸೈಜ್ ಕಮಿಷನರಾಗಿಯೂ ಇರುತಿದ್ದು, ಆಖ್ಯರ್‌ನಲ್ಲಿ ಪ್ರಸಕ್ತ ಸ್ಪೆಷಿಯಲ್ ಡ್ಯೂಟಿ ಅಂದರೆ ನಿಯತಾಧಿಕಾರವಿಲ್ಲದ ಉದ್ಯೋಗವಂ ಕೈಗೊಂಡಿದ್ದರು. ಈ ದೇಶೀಯರಿಗೆ ಚಿರಪರಿಚಿತರಾದ ಸದರೀ ದೊಡ್ಡಮನುಷ್ಯರಲ್ಲಿ ಕಂಡುಬರುತಿರ್ದ ಪ್ರಶಂಸನೀಯಗಳಾದವಿದ್ಯಾಬುದ್ಧಿವೈಲಕ್ಷಣ್ಯಾದಿ ಸುಗುಣಗಳಿಗೆ ನಮ್ಮಹೃದಯವೇ ಮುಖ್ಯ ಸಾಕ್ಷಿಯಾಗಿರುತದೆ. ಈ ರಾಯರವರ ಅಸಾಧಾರಣವಾದ ಪ್ರಜ್ಞೆಯೂ, ವಿಶೇಷ ಜಾಗರೂಕತೆಯೂ, ವಾಕ್‌ಚಾತುರ್ಯವೂ, ಲೇಖನಕೌಶಲ್ಯವೂ, ಸರಸತೆಯೂ ಅವರಮರಣಪ್ರಯುಕ್ತವಾದಖೇದವಂ ಮತ್ತಷ್ಟು ವೃದ್ಧಿಗೊಳಿಸತಕ್ಕವಾಗಿರುತಿವೆ. ಇವರು ಲೌಕಿಕ ವ್ಯಾಪಾರದಲ್ಲಿ ಪ್ರವರ್ತಿಸಿದ ಕಾಲದ ಮೊದಲು, ಹರ್ ಮ್ಯಾಜೆಸ್ಟಿಸಶೀಮೆಯಲ್ಲಿಯೂ, ಈಮೈಸೂರು ರಾಜ್ಯದಲ್ಲಿಯೂ, ತಮಗೆ ಮೇಲ್ಪಟ್ಟ ಅಧಿಕಾರಿಗಳಿಗೆ ತೃಪ್ತಿಕರನಾಗಿಯೂ, ಪ್ರಜಾಕಂಟಕಾದಿ ದೋಷಗಳಿಲ್ಲದೆಯೂ, ಸರ್ಕಾರ್ ನೌಕರಿಗಳನ್ನು ಶ್ಲಾಘ್ಯವಾಗಿ ನಿರ್ವಹಿಸುತ ಬಂದರು. ಇಂತವರ ಮರಣವು ಯಾರಿಗೆ ತಾನೆ ದುಃಖವನ್ನುಂಟುಮಾಡದಿರುವುದು. ಆದರೆ ಪ್ರಾಣಿಮಾತ್ರಕ್ಕೆ ಜನನ ಮರಣಗಳೆರಡೂ ದೈವಾಯತ್ತಗಳಾಗಿರುವವಲ್ಲದೆ ಅವುಗಳ ಕಾಲಸ್ವರೂಪವನ್ನರಿಯುವುದು ಸಹ ಅಸಾಧ್ಯವಾಗಿರುವದರಿಂದ ಅದಕ್ಕಾಗಿ ಚಿಂತಿಸಿ ದುಃಖಿಸುವುದು ಯಾರಿಗೂ ಪ್ರಯೋಜನಕರವಲ್ಲವು. ಸಮರ್ಥರಾಗಿಯೂ, ವಿದ್ಯಾವಂತರಾಗಿಯೂ, ವಾಗ್ಮಿಯಾಗಿಯೂ, ಸ್ನೇಹಪರರಾಗಿಯೂ, ಚಿರಾನುಭವವುಳ್ಳವರಾಗಿಯೂ ಇದ್ದ ಒಬ್ಬ ದೊಡ್ಡ ಉದ್ಯೋಗಸ್ಥರನ್ನು ಕಳೆದುಕೊಂಡದಕ್ಕಾಗಿ ಶ್ರೀಮನ್ ಮಹಾರಾಜಾ ಸರ್ಕಾರದವರು ಚಿಂತಿಸದಿರಲಾರರು. ಕೇವಲ ದೈವಾಧೀನವಾದ ಈ ಕಾರ್ಯವು ಅವರ ಇಷ್ಟಬಂಧು ಮಿತ್ರರಿಗೆ ಮಾತ್ರವಲ್ಲದೆ ಅವರಂ ಕಂಡು ಕೇಳರುವ ಸಕಲ ಜನಗಳಿಗೂ ಅತ್ಯಂತ ಶೋಚನೀಯವಾಗಿರುವದೆಂಬುವದಕ್ಕೇನೂ ಸಂದೇಹವಿಲ್ಲವು. ಮುಖ್ಯವಾಗಿ ಮಿ॥ ವಿಜಯೇಂದ್ರರಾಯರವರ ವಿಯೋಗಜನ್ಯಪ್ರಯುಕ್ತವಾದ ಖೇದವಂ ವಿಶೇಷತಃ ಪರಿಭಾವಿಸಿ ಅನುಭವಿಸಲಿಕ್ಕೆ ಬಾಲ್ಯೆಯೂ ಒಬ್ಬ ಪುತ್ರಿಯೂ ಇರುತ್ತಾರೆ. ಲೋಕದಲ್ಲಿ ಸಾಧಾರಣವಾಗಿ ಜನಗಳಿಗೆ ದೈವಭಕ್ತಿಯೂ ವೇದಶಾಸ್ತ್ರಗಳಲ್ಲಿ ನಂಬಿಕೆಯೂ, ಲೋಕಾಪವಾದ ಭೀತಿಯೂ, ಪರಲೋಕಚಿಂತೆಯೂ, ಅಕಾರ್ಯತ್ಯಾಗವೂ ಉಂಟಾಗಲಿಕ್ಕೆ ಅಪರವಯಸ್ಸು ಯುಕ್ತವಾದುದರಿಂದ ತಾದೃಶ ಗುಣಗಳೆಲ್ಲವು ಈಗ ಗತಿಸಿದದೊಡ್ಡಮನುಷ್ಯರಲ್ಲಿ ಈಚೆಗೆ ಕೆಲವುಮಟ್ಟಿಗೆ ನೆಲಗೊಂಡಿದ್ದವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

ಸೇಲ್ಯದ ರೆಯಿಲ್ವೆ ಸ್ಟೇಷನ್ ಬಳಿ ಪಾಂಡಿಚೇರಿ ರೋಗವು ವ್ಯಾಪಿಸಿ ತನ್ಮೂಲಕ ಆಚೇಪಾರದಲ್ಲಿ ಏಳುಮಂದಿ ಮೃತಪಟ್ಟರೆಂದು ತಿಳಿಯಬರುತಿದೆ.

೧೮೯೩ ನೇ ಇಸವಿ ಅಕ್ಟೋಬರ್ ತಿಂಗಳ ಮೊದಲು ಡಿಸೆಂಬರ್ ಆಖ್ಯರ್ ವರೆಗೆ ಮೂರು ತಿಂಗಳ ಕಾಲಕ್ಕೆ ಗ್ರೇಟ್ ಬ್ರಿಟನ್ ಸಂಸ್ಥಾನದ ಹುಟ್ಟುವಳಿಯು ೩೩,೫೨೪,೦೦೦ ಪೌಂಡುಗಳು ಅಂದರೆ ೩೩,೫೨೪,೦೦೦ ರೂಪಾಯಿಗಳು.

ಈ ಸಂವತ್ಸರದಲ್ಲಿ ಮದರಾಸ್ ಯೂನಿವರ್ಸಿಟಿ ಕಾನ್ವೊಕೇಷನ್ ಸಭೆಯಲ್ಲಿ ಅಡ್ರೆಸ್ ಕೊಡುವ ಕಾರ್ಯವನ್ನು ಆನರೆಬಲ್ ಡಾಕ್ಟರ್ ಮಿಲ್ಲರ್ ಯವರು ಕೈಗೊಂಡಿರುತ್ತಾರೆ. ಇವರ ಉಪನ್ಯಾಸವು ಬಹಳ ಶ್ಲಾಘನಾರ್ಹವಾಗಿರುವುದೆಂಬದರಲ್ಲಿ ಸಂಶಯವಿರಲಾರದು.

ವೈಸ್‌ರಾಯ್ ಯವರ ನ್ಯಾಯವಿಧಾಯಕ ಸಭೆಯಲ್ಲಿ ಒಬ್ಬ ಮೆಂಬರಾಗಿದ್ದ ಆನರೆಬಲ್ ಕೃಷ್ಣದಾಸ್ ಪಾಲ್ ಯೆಂಬವರ ಜ್ಞಾಪಕಾರ್ಥ ಕಲ್ಕತ್ತೆಯೊಳು ಸ್ಥಾಪಿಸಬೇಕೆಂದು ಉದ್ದೇಶಿಸಲ್ಪಟ್ಟಿದ್ದ ಅವರ ಬಿಂಬವು ಹಿಂದೆ ತಿಳಿಸಲ್ಪಟ್ಟದ್ದಂತೆ, ಈ ತಿಂಗಳ ೬ ನೇ ತಾರೀಖಿನೊಳು, ಬಹುಜನರ ಸಮಕ್ಷಮದಲ್ಲಿ, ವೈಸ್‌ರಾಯಿಯವರಿಂದ ನೆಲಗೊಳಿಸಲ್ಪಟ್ಟಿತು.

ಕಾಶ್ಮೀರ ಸಂಸ್ಥಾನದ ಮಹಾರಾಜರವರ ಪುತ್ರಿಯವರ ವಿವಾಹದ ಬಗ್ಗೆ ಸಕಲ ಸನ್ನಾಹಗಳೂ ಪೂರ್ತಿಯಾಗಿ, ವರನ ಆಗಮನವು ನಿರೀಕ್ಷಿಸಲ್ಪಟ್ಟದೆ. ವಿವಾಹ ಕಾಲದಲ್ಲಿ ವಧೂವರರಿಗೆ ಕೊಡುವದಕ್ಕಾಗಿ ಅನರ್ಘ್ಯವಾದ ಆಭರಣಗಳು, ಬೆಳ್ಳಿ ಬಂಗಾರದ ಪಾತ್ರಗಳು, ನಾನಾವಿಧ ದುಸ್ತುಗಳು ವಗೈರೆ ಪದಾರ್ಥಗಳು ಕೊಠಡಿಗಳಲ್ಲಿ ತುಂಬಿಡಲ್ಪಟ್ಟಿರುತಿವೆ. ಕೃಷ್ಣಾಪುರ್ ಮಹಾರಾಜರವರು ನೊಡಲಾದ ಬಹುಮಂದಿ ಸಂಸ್ಥಾನಾಧಿಪತಿಗಳಿಗೂ, ಪ್ರಮುಖರುಗಳಿಗೂ ಆಹ್ವಾನಪತ್ರಿಕೆಗಳು ಕಳುಹಿಸಲ್ಪಟ್ಟಿರುತಿವೆ.

ವೈಸ್‌ರಾಯ್ ಯವರ ನ್ಯಾಯವಿಧಾಯಕ ಸಭೆಯಲ್ಲಿ ಮದರಾಸ್ ಪ್ರೆಸಿಡೆನ್ಸಿ ಯವರ ಕಡೆ ಮೆಂಬರಾಗಿ ಚುನಾಯಿಸಲ್ಪಟ್ಟ ಬ್ಯಾರಿಸ್ಟರ್ ಮೆನಾರ್ಟನ್ ಯವರು ಈಚೆಗೆ ಉಂಟಾದ ಒಂದು ಕಾರಣದ ಮೇಲೆ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡಲು, ಅವರ ಸ್ಥಾನಕ್ಕೆ ಯೋಗ್ಯರಾದ ಬೇರೆ ಯೊಬ್ಬರು ಚುನಾಯಿಸಬೇಕಾದ ವಿಷಯದಲ್ಲಿ ಉಚಿತಪ್ರಯತ್ನ ನಡೆಸಲ್ಪಡುತಿದೆ ಯೆಂದು ಗತವಾರದ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆಯಷ್ಟೆ. ಈಚೆಗೆ ತಿಳಿಯಬರುವದರಲ್ಲಿ ಆನರೆಬಲ್ ಮಿ॥ ಭಾಷ್ಯಮಯ್ಯಂಗಾರ್ಯವರನ್ನು ಚುನಾಯಿಸಬೇಕೆಂದು ನಿಷ್ಕರ್ಷಿಸಿ ಅವರಿಗೆ ತಿಳಿಸಲು ಅವರು ಅಂಗೀಕರಿಸಿರುವಂತೆ ಮದರಾಸ್ ಪತ್ರಿಕೆಯೊಂದು ಪ್ರಕಟಿಸಿರುತದೆ.

ಮದರಾಸಿನಲ್ಲಿ ರಾಜಾ ಈಶ್ವರದಾಸ್ ದಯಾವಂತ್ ಬಹದೂರ್ ಎಂಬ ಬಿರುದಾಂಕಿತರಾದ ಪ್ರಸಿದ್ಧ ಸಾಹುಕಾರರೊಬ್ಬರಿರುವುದು ಅನೇಕರು ತಿಳಿದಿರಬಹುದಷ್ಟೆ. ಈ ದೊಡ್ಡ ಮನುಷ್ಯರ ಮೇಲೆ ಮಿ॥ ಇನಾಯತ್ ಮುಸ್ತ್ ಸಾಹೆಬರೆಂಬವರಿಂದ ಯೆಳಂಬೂರ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ತರಲ್ಪಟ್ಟ ಮೋಸದ ಮೊಕದ್ದಮೆಯಲ್ಲ ಅಪರಾಧಿಯಾದ ರಾಜಾ ಈಶ್ವರದಾಸರವರ ಮೇಲೆ ತಕ್ಸೀರ್ ರುಜುವಾಗಿ, ಮ್ಯಾಜಿಸ್ಟ್ರೇಟರು ಅವರಿಗೆ ಒಂದು ದಿನದ ಸಾಮಾನ್ಯ ಖೈದ್ ಸಜಾ ಮತ್ತು ೧೦೦೦ ರೂ॥ ಜುರ್ಮಾನೆ ವಿಧಿಸಿ, ಅದನ್ನು ತೆರದೆ ಹೋದರೆ ಮೂರು ತಿಂಗಳ ಕಠಿಣಖೈದ್ ಸಜಾ ಅನುಭವಿಸತಕ್ಕದ್ದೆಂದು ಈ ತಿಂಗಳ ೭ ನೇ ತಾರೀಖಿನಲ್ಲಿ ಫೈಸಲ್ ಕೊಡಲು ಅಪರಾಧಿಯು ಕೂಡಲೆ ಜುರ್ಮಾನೆಯನ್ನು ಕೊಟ್ಟು ಒಂದು ದಿನ ಸಜಾ ಅನುಭವಿಸಿದ ಮೇಲೆ ಬಿಡುಗಡೆಯಾದರು. ಈ ದೊಡ್ಡಮನುಷ್ಯರಿಗೆ ಉಂಟಾದ ಪರಿಭವಕ್ಕೆ ಅತಿ ಲೋಭ್ಯವೂ ದುರ್ಮಂತ್ರಿಗಳ ಸಲಹೆಯೂ ಮುಖ್ಯಕಾರಣಗಳೆಂದು ಧಾರಾಳವಾಗಿ ಹೇಳಬಹುದಾಗಿದೆ.

THE MONEY MARKET

Stocks, Shares and Exchange

ಮದರಾಸ್, ಶನಿವಾರ, ತಾರೀಖ್ 10ನೇ ಮಾರ್ಚಿ 1894

ಸೇಕಡ ೪ರೂ. ಬಾಬತು ಇಂಡ್ಯಗವರ್ನಮೆಂಟ್ ಪತ್ರಗಳು 102–12–0 ರೂ ಗಳಿಂದ 103–12–0 ರೂ. ವರೆಗೆ.

ಸೇಕಡ ಮೂರುವರ ರೂ ಬಾಬತು, ಗವರ್ನಮೆಂಟ್ ಪತ್ರಗಳು, 99–8–0 ರೂ ಗಳಿಂದ 100–8–0 ವರೆಗೆ.

ಮದರಾಸ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 965–0–0ರೂ ಗಳಿಂದ 970–0–0 ವರೆಗೆ.

ಕಮರ್ಷಿಯಲ್ ಅ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100ರೂ) ಬಾಬತು 150–0–0ರೂ ಗಳಿಂದ 155–0–0 ರೂ ವರೆಗೆ.

ಸವರನ್‌ಗಳು, ದರ 1 ಕ್ಕೆ 17–2–0 ರೂಪಾಯಿಗಳಿಂದ 17–6–0 ರೂ॥ ವರೆಗೆ.

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಯೂನ ದರ್ಶನ ಹುಂಡಿಗಳು —

6 ತಿಂಗಳ ವಾಯಿದೆಗೆ. . 1 s 2 5/32d

4 „ . 1 s 2 3/32d.

ಕೇಳಿದಾಗಕೊಡಲ್ಪಡುವದಕ್ಕೆ . . 1 s /2d

LOCAL AND PROVINCIAL NEWS
ಒಳದೇಶಮತ್ತು ತಾಲ್ಲೂಕ್‌ಜಾತೆವೃತ್ತಾಂತಗಳು

ಈದಿನ ಶ್ರೀಮನ್ಮಹಾರಾಜರವರ ವರ್ಷವರ್ಧಂತಿ ಉತ್ಸವನಿಮಿತ್ತದಿಂದ ಆಬಗ್ಗೆ ಪಡಿವಾ ಶೀಮೇರೆ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿರುತದೆ.

ಬೆಂಗಳೂರ್ ತಾಲ್ಲೂಕ್ ಯಲಹಂಕದಲ್ಲಿ ಬಲವಾದ ಬೆಂಕಿ ಬಿದ್ದು ಅನೇಕ ಮನೆಗಳೂ ರಾಗಿ ಹುಲ್ಲಿನ ಬಣವೆಗಳೂ ಬೆಂದುಹೋದಂತೆ ತಿಳಿಯಲಾದವು.

ಘನವೆಂ ಪಡೆದ ಶ್ರೀಮನ್ಮಹಾರಾಜರವರು ತಮ್ಮ ಕುಟುಂಬ ಪರಿವಾರ ಸಮೇತರಾಗಿ ಬರೀ ಆದಿತ್ಯವಾರದದಿನರಾತ್ರಿ ಸುಮಾರು ೨ ಘಂಟೆಗೆ ಈ ಪುರದ ಮಾರ್ಗವಾಗಿ ರಾಜಧಾನಿಗೆದಯಮಾಡಿದರು.

ರಾಯ್ ಬಹದೂರ್ ರಿಜಿಮಂಡಿದಾರ್ ರಾಮರಾವ್ ರಣನೋರೆ ಯವರು ಮೈಸೂರಿಗೆ ವರ್ಗ ಮಾಡಲ್ಪಟ್ಟದ್ದಾಗಿ ಕಳೆದವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಸದರೀ ಯವರು ಶ್ರೀಮನ್ಮಹಾರಾಜರವರ ಏಡೀಕಾಂಗ್‌ರವರಾಗಿ ನೇಮಕ ಮಾಡಲ್ಪಟ್ಟಂತೆ ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆ ತಿಳಸುತಿದೆ.

ಹವಾ ದಿನೇದಿನೇ ಚುರುಕಾಗುತಲಿದೆ. ಮನೆಗಳ ಬಾವಿಗಳಲ್ಲಿ ನೀರು ಬತ್ತುತ ಬರುತಲಿದೆ ಧರ್ಮಾಂಬುಧಿಕೆರೆಯಲ್ಲಿ ಸದ್ಯ ಕುಡಿಯುವ ನೀರಿಗೆ ಕೊರತೆ ಯಿಲ್ಲವು. ಆಹಾರ ಪದಾರ್ಥಗಳ ಧಾರಣೆಗಳು ಕಳೆದವಾರದಲ್ಲಿ ತಿಳಿಸಿದಂತೆ ಪ್ರಾಯಶಃ ಒಂದೇವಿಧವಾಗಿವೆ. ಜನಾರೋಗ್ಯವು ಸಾಮಾನ್ಯವಾಗಿದೆ. ದೈವಾನುಗ್ರಹದಿಂದ ರೋಗಾದ್ಯುಪದ್ರವಗಳು ಯೇನೂ ಇಲ್ಲವು.

ಇಲ್ಲಿನ ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮತ್ತು ಮ್ಯೂನಿಸಿಪಲ್ ಪ್ರೆಸಿಡೆಂಟರಾದ ಕರ್ನಲ್ ಎಚ್. ಎಂ. ಎಸ್ ಮೆಗ್ರಾತ್ ಸಾಹೆಬರು ಕಳೆದ ಮಂಗಳವಾರದ ದಿನ ತಮ್ಮ ಅಧಿಕಾರಗಳಂ ಮಿ॥ ಹ್ಯೂಯಿಡಿರ್ಸ ಸಾಹೆಬರವರಿಗೆ ಒಪ್ಪಿಸಿದರು. ಈ ತಿಂಗಳ ೧೫ನೇ ತಾರೀಖಿನಲ್ಲಿ ಸ್ವದೇಶಕ್ಕೆ ಪ್ರಯಾಣಮಾಡುವವರಾಗಿರುತ್ತಾರೆ. ತಮ್ಮ ರಜಾ ಪೂರ್ತಿ ಯಾದಕೂಡಲೆ ನೌಕರಿಯಂ ಬಿಟ್ಟು ನಿವೃತ್ತಿಸುಖವು ಪಡೆಯುವರೆಂದು ಕೇಳುತ್ತೇವೆ.

ಆನಂದಸ್ವರೂಪವಿಚಾರವು.

ಬೆಂಗಳೂರು ಥಿಯಸಾಫಿಕಲ್ ಸೊಸೈಟಿಯಲ್ಲಿ ನಡ್ತಮ ವಾರ್ಷಿಕೋತ್ಸವವಾದ ೧೮೯೪ರ ನೇ ಇಸವಿ ಫೆಬ್ರವರಿ ೧೪ ನೇ ದಿನವಲ್ಲಿ ಸೊಸೈಟಿಯಿಲ್ ಮೆಂಬರಾಗಿರುವ ಭೀಮಾಚಾರ್ಯರಿಂದ ಕೊಡಲ್ಪಟ್ಟ ಆನಂದ ವಿಷಯಕೋಪನ್ಯಾಸ ಕ್ರಮ ವೆಂತೆಂದರೆ.—

ಮಹಾಶಯರುಗಳಿರಾ!—ಈ ಕಾಣಬರುವ ಸಮಸ್ತವಾದ ಚರಾಚರಾತ್ಮಕ ಪ್ರಪಂಚದಲ್ಲಿರುವ ಜೀವ ಸಮೂಹವೆಲ್ಲವು ಯಾವ ವಸ್ತುವಿನ ದೆಸೆಯಿಂದ ಹುಟ್ಟಿ ಆ ಹುಟ್ಟಿದವುಗಳೆಲ್ಲವು ಯಾವದರ ದೆಸೆಯಿಂದ ಜೀವಿಸಿ ಕಡೆಗೆ ಯಾವದನ್ನು ಕುರಿತು ಹೋಗಿ ತಾವೆಲ್ಲವು ಒನಾಗಿ ಪ್ರವೇಶಿಸಿ ಯಾವ ವಸ್ತುವೇ ಆಗುತಲಿವೆಯೊ? ಲೋಕದೊಳು "ಪಿಪೀಲಿಕಾದಿ ಬ್ರಹ್ಮಪರ್ಯಂತವಾಗಿ" ಅಂದರೆ ಇರುವೆಯು ಮೊದಲ್ಗೊಂಡು ಚರಾಚರಾತ್ಮಕವಾದ ಪ್ರಪಂಚರಚನಾ ಚಾತುರ್ಯವುಳ್ಳ ಚತುರ್ಮುಖ ಬ್ರಹ್ಮನ ವರೆಗೂ ಇರುವ ಸಮಸ್ತ ಜೀವ ಸಮೂಹವು ಸ್ವಭಾವತಃ ಯಾವ ಸ್ವರೂಪವುಳ್ಳದ್ದೊ? ಮತ್ತು ಯಾವ ವಸ್ತುವು ಗುಣತ್ರಯಂಗಳಿಗತೀತವಾಗಿರುವದೊ? ಯಾವ ವಸ್ತುವು ಅವಿದ್ಯಾಕಾರ್ಯಕ್ಕೆ ಒಳಪಡಲಿಲ್ಲವೊ? ಯಾವ ವಸ್ತುವು ಮನೋವಾಕ್ಕುಗಳಿಗೆ ಗೋಚರವಾಗದೆ ಇರುವದೊ? ಮನಸ್ಸು ವೇದವಾಕ್ಕುಗಳಿಂದ ಕೂಡಿ ಯಾವದನ್ನು ಇಷ್ಟೆಂದು ಹೇಳಲಶಕ್ತಗಳಾಗಿ ಹಿಂತಿರುಗಿ ಬರುತಲಿರುವವೊ? ಯಾವದನ್ನು ತಿಳಿಯುವದರಿಂದ ಯೋಗಿಗಳು ಜನನ ಮರಣ ಪ್ರವಾಹರೂಪವಾದ ಸಂಸಾರ ಸಮುದ್ರದಿಂದುಂಟಾದ ಮಹಾ ಭಯವನ್ನು ಸ್ವಲ್ಪವಾದರು ಗಣನೆಗೆ ತಾರದೆ ನಿರ್ಭೀತರಾಗಿರುವರೊ? ಲೋಕದಲ್ಲಿರುವ ಸಮಸ್ತ ದೇವರ್ಷಿ ರಾಜರ್ಷಿ ಮಹರ್ಷಿಗಳೇ ಮೊದಲಾದ ಮಹಾತ್ಮರುಗಳೆಲ್ಲರು ಯಾವದನ್ನು ಸರ್ವೋತ್ತಮವಾದದ್ದೆಂದರಿತು ಅದನ್ನು ಅನುಭವಿಸುವದಕ್ಕಾಗಿಯೇ ಮಹಾ ಪ್ರಯತ್ನಗಳನು ದೆಸ ಮಾಡುತ್ತಾರೆಯೊ? ಪ್ರಪಂಚದೊಳು ವಿಷಯ ವಿಷಯ ಸಂಬಂಧದಿಂದುಂಟಾದ ಮತ್ತು ತ್ರಿಗುಣಾತ್ಮಕಗಳಾದ ಸುಖದುಃಖಗಳೆಲ್ಲವು ಕೇರಿ ಯಾವ ವಸ್ತುವಿನಲ್ಲಿ ಒಂದು ಲೇಶವನ್ನಾದರೂ ನ್ಯೂನ ಧಿಕಗಳಂ ಮಾಡಲಾರವೊ? ಯಾವ ವಸ್ತುವೇ ಸರ್ವೋತ್ತಮವಾದದ್ದೆಂಬದಾಗಿ ಶಾಸ್ತ್ರಗಳಿಂದಲೂ ಗುರುಮುಖದಿಂದಲೂ ತಿಳಿಯಬರುವದೆಂದರೆ ಅಂಥಾ ವಸ್ತುವನ್ನು ಹೊಂದಲು ಪ್ರಯತ್ನಪಡುವ ಮಹಾತ್ಮರೆಲ್ಲರು ಇತರ ಸಮಸ್ತವಾದ ಅನೇಕ ಭೋಗ್ಯವಸ್ತುಗಳ ಸಮೂಹವನ್ನು ತೃಣಪ್ರಾಯವೆಂತಲೂ ಕಡೆಯದ್ದನ್ನಾಗಿ ಎಣಿಸುವರು

ಪ್ರಪಂಚದಲ್ಲಿ ಅತ್ಯಲ್ಪವಾಗಿಯೂ ಅನಿತ್ಯಗಳಾಗಿಯೂ ಇರುವ ವಿಷಯ ಸುಖಕ್ಕಾಗಿಯೇ ಚರಾಚರಾತ್ಮಕವಾದ ಪ್ರ

ಪಂಚವಂ ಸೃಜಿಸಿದ ಬ್ರಹ್ಮನ ಮೊದಲು ಪಿಪೀಲಿಕೆಯುಂದಿಗೆ ಇರುವೆಯ ವರೆಗೂ ಇರುವ ಪ್ರಾಣಿವರ್ಗವೆಲ್ಲವೂ ಅಜ್ಞಾನದಿಂದ ಮೋಹಿತವಾಗಿರುವದರೊ! ಅಂಥಾ ದೂಷಣೆಗೆ ಒಳಗಾಗದೆಯೂ, ಮತ್ತಾವ ವಸ್ತುವಿನಿಂದಲೂ ಬಾಧಿಸಿಕೊಳ್ಳದೆಯೂ, ವಿಕಾರರಹಿತವಾಗಿಯೂ, ಇನ್ನೂ ಇತರ ಯಾವ ದೋಷಗಳಿಗೂ ಸಿಲುಕದೆಯೂ ಇರುವ ವಸ್ತುವು ಯಾವದೆಂದರೆ ಅದೇ ಆನಂದವಸ್ತುವಾಗಿದೆ. ಪೂರ್ವೋಕ್ತವಾದ ಲಕ್ಷಣಗಳಿಂದೊಡಗೂಡಿರುವ ಆನಂದವೆಂಬುವದೇ ಮೇಲೆ ಹೇಳಿದಂತೆ ಪಿಪೀಲಿಕಾದಿ ಬ್ರಹ್ಮ ಪರ್ಯಂತವಾಗಿಯೂ, ಇರುವ ಜೀವಸಮೂಹದ ಸ್ವರೂಪವಾದದ್ದು. ಈ ಆನಂದವೆಂಬುವದು ಆತನಿಗೆ ಸ್ವಭಾವ ಲಕ್ಷಣವಾಗಿರುವದರಿಂದಲೇ ಆತ್ಮನನ್ನು ಎಡೆಬಿಡದೆ ಯಾವಾಗಲೂ ದೀಪದಲ್ಲಿನ ಉಷ್ಣತ್ವ ಪ್ರಕಾಶತ್ವಗಳಂತೆ ಇರುವದು; ಮತ್ತು ಈ ಆನಂದವೆಂಬುವದು ಆತ್ಮನನ್ನು ಬಿಟ್ಟು ಎಂದಿಗೂ ಇರುವದಿಲ್ಲವು, ಹ್ಯಾಗೆಂದರೆ--ಲೋಕದಲ್ಲಿ ಮನುಷ್ಯನಿಗೆ ಸುಖ ಸಾಧಕಗಳಾದ ಸಮಸ್ತ ವಸ್ತುಗಳು ಸಿದ್ಧವಾಗಿರುವ ಕಾಲದಲ್ಲಿ ಯಾವದಾದರೊಂದು ನಿಮಿತ್ತದಿಂದ ತಾನು ಸಂಪಾದನೆ ಮಾಡಿದ ಭೋಗ್ಯ ವಸ್ತುಗಳಲ್ಲಿ ಒಂದಾದ ಭೂಮಿಯನ್ನು ಶತ್ರುಗಳು ಅಪಹರಿಸಲಾಗಿ ಭೂಮಿಯನ್ನು ಕಳೆದುಕೊಂಡ ಗೃಹಸ್ಥನು ಎಷ್ಟಿಲ್ಲವೆ ಇರುವದರಿಂದ ಭೂಮಿಯು ಹೋದರು ನಾನು ಸಂಪಾದನೆ ಮಾಡಿರುವ ದ್ರವ್ಯದಿಂದಲೇ ಆನಂದವನ್ನು ಪಡೆಯುವೆನೆಂಬದಾಗಿ ಆಲೋಚಿಸಿ ಆ ದ್ರವ್ಯವಂ ಗುಪ್ತವಾಗಿ ಇಟ್ಟುಕೊಂಡಿರುವನು. ಆ ದ್ರವ್ಯವನ್ನು ಕೂಡ ಯಾವನಾದರೂ ಅಪಹರಿಸಿ ಮಾಡಿಕೊಂಡು ಹೋದರೆ ಆಗಲೂ ಯತ್ಕಿಂಚಿತ್ತೂ ಚಿಂತೆಯಿಲ್ಲದೆ ಇರುವದರಿಂದ ಆ ದ್ರವ್ಯವು ಹೋದರೆ ಹೋಗಲಿ ನನಗಿರುವ ಬಂಧುವರ್ಗಗಳಿಂದಲಾದರೂ ಆನಂದಪಡೋಣ ವೆಂಬದಾಗಿರುತ್ತಿರಲಾಗಿ ದೈವಾಧೀನದಿಂದ ಆ ಬಂಧುಗಳೂ ನಾಶವಂ ಪಡೆಯಲು ಅವಶೇಷರಾಗಿರುವ ಹೆಂಡರು ಮಕ್ಕಳುಗಳಿಂದಲಾದರೂ ಆನಂದ ಪಡೋಣವೆಂಬದಾಗಿರುವನು. ಆ ದಾರಾ ಪುತ್ರಾದಿಗಳು ಕೂಡಾ ಕಾಲಾಧೀನವಾಗಲು ಆಗ ಚಿತ್ತವೃತ್ತಿಗಳು ಮಲಿನವಾಗದೇ ಇರುವದರಿಂದ ಬಹಳವಾಗಿ ಆಲೋಚಿಸಿ ಧೈರ್ಯವಂ ತಂದುಕೊಂಡು ತನಗಿಂತಲೂ ಬೇರೆಯಾಗಿರುವ ವಸ್ತುಗಳೆಲ್ಲವೂ ದುಃಖಕರಗಳಾದವೆಂದು ತಿಳಿದು ತನ್ನ ದೇಹವನ್ನು ಸಾಧ್ಯವಾದವರೆಗೂ ಚನ್ನಾಗಿ ಪೋಷಣೆಯಂ ಮಾಡಿಕೊಳ್ಳುತ್ತಿರುವನು. ಹೀಗಿರುವ ಸಮಯದಲ್ಲಿ ಆ ದೇಹವನ್ನು ಆಶ್ರಯಿಸಿಕೊಂಡು ಇರುವ ಅವಯವಂಗಳು ಅಂದರೆ, ಕಾಲು ಕೈಯಿ ಮುಂತಾದವುಗಳು ನಾಶವಾಗುವ ಸಂದರ್ಭದಲ್ಲಿ ಈ ದೇಹವನ್ನಾಶ್ರಯಿಸಿಕೊಂಡಿರುವ ಚಕ್ಷುರಾದಿ ಇಂದ್ರಿಯಂಗಳಿಂದಲಾದರೂ ಆನಂದಿಸೋಣ ವೆಂಬದಾಗಿರುತ್ತಿರಲಾಗಿ ಇಂದ್ರಿಯಂಗಳು ತಮ್ಮ ತಮ್ಮ ವ್ಯಾಪಾರಗಳಿಂದ ರಹಿತಗಳಾಗುತ್ತಿರಲು, ಆಗ ಪ್ರಾಣಗಳಿದ್ದರೆ ಸಾಕೆಂಬಭಿಪ್ರಾಯದಿಂ ಪ್ರಾಣಗಳಂ ರಕ್ಷಿಸಲು ಬಹು ಜಾಗರೂಕತೆಯಾಗಿರುವನು. ಆ ಪ್ರಾಣಗಳಿಗೆ ಅಪಾಯವು ಸಂಭವಿಸುವ ಕಾಲದಲ್ಲಿ ಮಾನ ಒಂದಿದ್ದರೆ ಸಾಕೆಂದು ಆ ಮಾನವಂ ಕಾಪಾಡಿಕೊಂಡಿರುವನು. ಹೀಗೆ ಮಾನಾಭಿಮಾನಗಳಿಂದೊಡಗೂಡಿರುವವನಂ ಕಂಡು ಈ ದುಷ್ಟವಾದ ಮಾನಾಭಿಮಾನಗಳಿಂದ ನಿನಗೆ ಪರಮಪುರುಷಾರ್ಥವೆಂಬುದು ಸಿದ್ಧಿಸಲಾರದು ಎಂದು ಉಪದೇಶಿಸುವ ಗುರುವಾಕ್ಯದಿಂದಲೂ, ಇದೇ ಅರ್ಥವನ್ನು ಹೇಳುತ್ತಿರುವ ವೇದವಾಕ್ಯಗಳಿಂದಲೂ ಆ ಮಾನಾಭಿಮಾನಗಳನ್ನು ಮತ್ತು ವಿಷಯಾನುರಾಗಾದಿಗಳನ್ನು ಬಿಟ್ಟು ನಿತ್ಯವಾಗಿಯೂ ಅಪರಿಮಿತಾನಂದವಂ ಕೊಡುವದಾಗಿಯೂ ಇರುವ ಮೋಕ್ಷವಂ ಹೊಂದುವದರಲ್ಲಿ ಅತ್ಯಾಸಕ್ತನಾಗುವನು. ಆ ಮೋಕ್ಷದಲ್ಲಿ ಯಾವದೊ ತಾನೊಬ್ಬನೇ ಆನಂದಸ್ವರೂಪನಾಗುವಾತನಾಗಿ, ಸ್ವಾತ್ಮಾನಂದ ಸ್ವರೂಪವಾದ ಆ ಸುಖವು ಇತರವಾದ ಎಂಥ ಅವಸ್ಥಾಂತರಗಳು ಬಂದಾಗ್ಯೂ ಅಗಲಲಿಲ್ಲ ಪ್ರತ್ಯಗಾತ್ಮನಾದ ತನ್ನನ್ನು ಬಿಟ್ಟು ಬೇರೆ ಇಲ್ಲವಾಗಿ ಆ ಆನಂದವೇ ತಾನೆಂಬದು ಪರಮ ಸಿದ್ಧಾಂತವಾಗಿದೆ. ಹೀಗೆ ಆತ್ಮನ ಸ್ವಭಾವವಾಗಿರುವ ಆನಂದವು ಸರ್ವ ಕಾಲಗಳಲ್ಲಿ ಯಾತಕ್ಕೆ ತೋರುವದಿಲ್ಲವೆಂದರೆ ಚಿತ್ತವೃತ್ತಿಗಳು ಮಲಿನವಾಗಿರುವದರಿಂದ ಮಲಿನವಾಗಿರುವ ಚಿತ್ತವೃತ್ತಿಗಳನ್ನು ವಿಷಯಂಗಳು ಸೆಳೆಯುವದರಿಂದ ವಿಷಯಾದಿಗಳಿಗೆ ಉನ್ಮುಖವಾಗಿ, ಅಂದರೆ ಅಭಿಮುಖವಾಗಿ ಮಾಡಿಕೊಂಡಿರುತ್ತದಾಗಿ ವಿಷಯಕ್ಕೆ ಅಭಿಮುಖವಾಗಿರುವ ಚಿತ್ತವೃತ್ತಿಯು ಆನಂದಾಭಿಮುಖವಾಗುವ ಪರ್ಯಂತವೂ ಆನಂದವು ಸ್ಫುರಿಸುವದಿಲ್ಲವು. ಆದದರಿಂದಲೇ ಯೋಗಿಗಳು ವಿಷಯಂಗಳನ್ನು ತಡೆದು ಚಿತ್ತವೃತ್ತಿಯನ್ನು ನಿರೋಧವಮಾಡಿ ಕೇವಲ ಆತ್ಮನಲ್ಲಿಯೇ ಚಿತ್ತವನ್ನು ಉಪಪಾದಿಸುತ್ತಾರೆ. ಯಾವಾಗ ಚಿತ್ತವೃತ್ತಿ ನಿರೋಧವಾಗಿ ವಿಷಯಾಭಿಮುಖವು ತಪ್ಪಿ ಆತ್ಮಾಭಿಮುಖವಾಗುತ್ತದೆಯೋ ಆ ತತ್ಕ್ಷಣದಲ್ಲಿಯೇ ಆನಂದವು ಸ್ಫುರಿಸಲು ಅಭ್ಯಂತರವಿಲ್ಲವು. ಯಾವ ಪರ್ಯಂತ ಚಿತ್ತವೂ ಅದರ ವೃತ್ತಿಗಳೂ ವಿಷಯಗಳಲ್ಲಿ ಸೇರುತಲಿವೆಯೋ ಅಷ್ಟರವರೆಗೂ ಆನಂದವೆಂಬುವದು ಸ್ಫುರಿಸಿದರೂ ಆ ಆನಂದವನ್ನು ಲೌಕಿಕಾನಂದವನ್ನಾಗಿ ಎಣಿಸುವರು. ಸ್ವಭಾವತಃ ಆ ಆನಂದವು ಲೌಕಿಕಾನಂದವಲ್ಲದೆ ಇದ್ದಾಗ್ಯೂ ಉಪಾಧಿ ಸಹಿತವಾಗಿರುವದರಿಂದ ಆ ಆನಂದವೇ ಈ ಕೆಳಗೆ ಹೇಳುವಂತೆ ಎಂಟುವಿಧಗಳಾಗಿರುವದು, ಅವು ಯಾವವೆಂದರೆ--ಪುರುಷನು ರಮಣೀಯವಾದ ಪ್ರಾಯವನ್ನು ಹೊಂದಿ ತೇಜಸ್ವಿಗಳಾದ ಮುಖಾದ್ಯವಯವಗಳಿಂದ ಶೋಭಿಸುತ್ತಾ ಬಲಿಷ್ಠನಾಗಿ ನವಮನ್ಮಥನಂತೆ ಹೊಳೆಯುತ್ತಿರುವಾಗ ತನಗನುರೂಪಳಾದ ತರುಣಿಯನ್ನು ಕಾಣಲು ಆ ಸಮಯದಲ್ಲಿ ಪುರುಷನ ಮನಸ್ಸಿನೊಳು ಸ್ಫುರಿಸುವ ಅಂತರ ಜಿಜ್ಞಾಸೆ ಹೊಳೆಯುವ ಸಂತೋಷವೆಂಬುವದು ಯಾವದುಂಟೊ ಅದೇ ವಿಷಯಾನಂದವೆನ್ನಿಸುವದು.

(ಸಶೇಷ)

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಅಪ್ಪಣೆಗಳು.

ಗುರುವಾರ, ತಾ|| ೮ ನೇ ಮಾರ್ಚಿ ೧೮೯೪.

ನಂ|| ೧೪೬೭—ಗ. ೩೧೧೦—ತಾ|| ೨೩ ನೇ ಫೆಬ್ರವರಿ ೧೮೯೪.—ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ಬೇಲೂರು ತಾಲ್ಲೂಕ್ ಅಮಲ್ದಾರ್ ಸಿ. ಎನ್. ಚೌಡಯ್ಯನವರಿಗೆ, ೧೮೯೪ನೇ ಇಸವಿ ಫೆಬ್ರವರಿ ೧೯ನೇ ತಾರೀಖ್ ಲಾಗಾಯಿತು, ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ|| ೧೪೬೮—ಗ. ೧೦೪೬, ತಾ|| ೨೩ ನೇ ಫೆಬ್ರವರಿ ೧೮೯೪.—ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ ಮತ್ತು ೨ ನೇ ಕ್ಲಾಸ ಮ್ಯಾಜಿಸ್ಟ್ರೇಟ್ ಮೆ|| ಬಿ. ಟಿ. ಕುಮಾರಸ್ವಾಮಿ ನಾಯಕರವರಿಗೆ, ಅಸಿಸ್ಟೆಂಟ್ ಕಮಿಷನರ ಮೆ|| ಎ. ರಾಘವೇಂದ್ರಾಚಾರ್ಯರವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಲಾಯಿಸತಕ್ಕ ಬಗ್ಗೆ ಒಂದನೇ ಕ್ಲಾಸ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ನಂ. ೧೪೬೯—ಗ. ೯. ೬೦—೯೩—ತಾ. ೨೬ನೇ ಫೆಬ್ರವರಿ ೧೮೯೪.—ಹೊಸಕೋಟೆ ಅಮಲ್ದಾರ್ ಶ್ರೀನಿವಾಸಯ್ಯನವರಿಗೆ ೧೮೯೩ ನೇ ಇಸವಿ ಆಗಸ್ಟ್ ೨೮ ನೇ ಮಕ್ಕಾಂ ೩೯೦೬—೭. ೯೮೮ ನೇ ನಂಬರ ಪ್ರೊಸೀಡಿಂಗ್ಸ್ ಮೂಲಕವಾಗಿಯೂ ೧೮೯೪ ನೇ ಇಸವಿ ಜನವರಿ ೧೧ ನೇ ಮಕ್ಕಾಂ ೧೨೬೪೭—೯. ೬೧ ೬೩ ನೇ ನಂಬರ ಪ್ರೊಸೀಡಿಂಗ್ಸ್ ಮೂಲಕವಾಗಿಯೂ ಕೊಡಲ್ಪಟ್ಟಿದ್ದ ರಜಾಗಳನ್ನವರು ಉಪಯೋಗಿಸಿಕೊಂಡು ಗೈರುಹಾಜರಾಗಿದ್ದ ಕಾಲದಲ್ಲಿ ಸದರೀ ತಾಲ್ಲೂಕ ಶಿರಸ್ತೇದಾರ ರಾಮರಾಯರವರು, ಆ ತಾಲ್ಲೂಕ ಚಾರ್ಜನ್ನು ಹೊಂದಿರುತಲಿದ್ದರು.

ನಂ|| ೧೪೭೦—ಗ. ೯. ೬೨—೯೩ — ತಾ|| ೧ ನೇ ಮಾರ್ಚಿ ೧೮೯೪.—ಪಿ. ಕೃಷ್ಣ ಚೋಕ್ಸೀ ಯವರು, ರಜಾ ಪೂರೈಸಿಕೊಂಡು ಕೆಲಸಕ್ಕೆ ವಾಪಸು ಬಂದಾದ್ದರಿಂದ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ಒಬ್ಬ ಕಮಿಷನರಾಗಿ ಇದರಿಂದ ಮುಂದೆ ನಿಯಮಿಸಲ್ಪಟ್ಟಿರುತ್ತಾರೆ.

ನಂ|| ೧೪೭೧—ಗ. ೧೮೯೧.—ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್ ೩೭ ನೇ ಸೆಕ್ಷನ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ ಮತ್ತು ೧ ನೇ ಕ್ಲಾಸ ಮ್ಯಾಜಿಸ್ಟ್ರೇಟರಾದ ಮೆ|| ಬಿ. ಟಿ. ಕುಮಾರಸ್ವಾಮಿ ನಾಯಕರವರಿಗೆ, ೪ ನೇ ಷೆಡ್ಯೂಲಿನಲ್ಲಿ ನಮೂದಿಸಿರುವ ಮತ್ತು, ಸದರೀ ಷೆಡ್ಯೂಲಿನ ೧೦—೧೧ ನೇ ಕಾಲಮ್‌ಗಳಲ್ಲಿ ಕಾಣಿಸಿರುವ ಅಧಿಕಾರಗಳು ವಿನಾ, ಗವರ್ನಮೆಂಟಿನವರು ಒಬ್ಬ ಫಸ್ಟ್ ಕ್ಲಾಸ ಮ್ಯಾಜಿಸ್ಟ್ರೇಟಿಗೆ ಕೊಡಬಹುದಾದ ತರವಾ ಜಾಸ್ತೀ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ. (೧೦) ನೇ ಸೆಕ್ಷನ್ ೨೬೦ ಪ್ರಕಾರ ವಿಚಾರಣೆ ಮಾಡುವ ಅಧಿಕಾರ ಮತ್ತು (೧೧) ನೇ ಸೆಕ್ಷನ್ ೪೦೭ ಅಪೀಲ್‌ವಿಚಾರಣೆಯ ಅಧಿಕಾರ.

ನಂ|| ೧೪೭೨ ಗ. ೯. ೬೩—೯೩.—ಅಸಿಸ್ಟೆಂಟ್ ಕಮಿಷನರ ಮೆ|| ನಾರಣಯ್ಯಂಗಾರ್ರವರು ದಿವಾನರ ಆಫೀಸನಲ್ಲಿ ನೌಕರಿಯ ಬಗ್ಗೆ ನಿಯಮಿಸಲ್ಪಟ್ಟಿರುತ್ತಾರೆ. ಮೆ|| ನಾರಣಯ್ಯಂಗಾರ್ರವರು, ೧೮೯೩ ನೇ ಇಸವಿ ಫೆಬ್ರವರಿ ೨೧ ನೇ ಮಕ್ಕಾಂ ಪ್ರೊಸೀಡಿಂಗ್ಸ್‌ನಲ್ಲಿ ಸದರೀ ಆಫೀಸಲ್ಲಿ ನೌಕರಿ ಬಗ್ಗೆ ಹಾಜರಾಗಿರುವಂತೆ ರಿಪೋರ್ಟ್ ಮಾಡುವವರಿಂದ, ಅ ವರಿಗೆ, ೧೮೯೩ ನೇ ಇಸವಿ ಸೆಪ್ಟಂಬರ್ ೩೦ ನೇ ಮಕ್ಕಾಂ ೬೨೮೯೧—೯. ೭೬೬—೯೩ನೇ ನಂಬರ ಅಪ್ಪಣೆಯ ಮೂಲಕ ಕೊಡಲ್ಪಟ್ಟಿದ್ದ ಫರ್ಲೋ ರಜಾ ಪೈಕಿ ಉಪಯೋಗಿಸಿಕೊಳ್ಳಲ್ಪಡದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ನಂ|| ೧೪೭೩ ಗ. ೩೯೮೨.—ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಗವರ್ನಮೆಂಟ್ ಸಿಟಿ ಹಾಸ್ಪಿಟಲ್‌ನಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನ್ ಮೆ|| ಜೆ. ಎ ಕೋಹಿಲೋ ಯವರಿಗೆ, ೧೮೯೪ ನೇ ಇಸವಿ ಜನವರಿ ೨೮ ನೇ ಮಕ್ಕಾಂ ಲಾಗಾಯಿತು ೩೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ|| ೧೪೭೪ — ಗ. ೩೧೧೧ — ತಾ|| ೩ ನೇ ಮಾರ್ಚಿ ೧೮೯೪.—ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೨೦೪ ನೇ ಆರ್ಟಿಕಲ್ ಅನುಸರಿಸಿ ೧೮೯೪ ನೇ ಇಸವಿ ಮಾರ್ಚಿ ೧೩ ನೇ ಮಕ್ಕಾಂ ಲಾಗಾಯಿತು, ಮೈಸೂರ ಸಬ್ ಜಡ್ಜ್ ಮೆ|| ರಾಮಸ್ವಾಮಯ್ಯನವರಿಗೆ ೧೨ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಮೈಸೂರ ಮುನ್ಸಿಫ್ ಮೆ|| ಎಸ್. ವೆಂಕಟವರದಯ್ಯಂಗಾರ್ರವರು ೧೮೯೪ನೇ ಇಸವಿ ಮಾರ್ಚಿ ೧೩ ರ ಮೊದಲು ೨೪ನೇ ತಾರೀಖ್ ವರೆಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಮೈಸೂರ ಸಬಾರ್ಡಿನೇಟ್ ಜಡ್ಜಿಯಾಗಿ ಆಕ್ಟಿಂಗ್ ತಾರೀಖ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಜ್ಯುಡಿಷಲ್ ಪ್ರೊಬೇಷನರ ಮೆ|| ಟಿ. ಜಯರಾಮಯ್ಯರವರು ಮೆ|| ವೆಂಕಟವರದಯ್ಯಂಗಾರ್ರವರು ಇತರ ಕೆಲಸದ ಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಾತ್ಕಾಲದಲ್ಲಿ ಕಚೇರಿಯ ಹೆಚ್ಚಿನಲ್ಲಿ ಮೈಸೂರ ಮುನ್ಸಿಫ್‌ಗೆ ಅಕ್ಟಿಂಗ್ ಪ್ಲೇಕ್ ನಿಯಮಿಸಲ್ಪಟ್ಟಿರುತ್ತಾರೆ.

ನಂ|| ೧೪೭೫ ಗ. ೩೨೦೦— ಮೆ|| ಟಿ ಇ. ಜಯರಾಮಯ್ಯರವರು ಚಿಕ್ಕಬಳ್ಳಾಪುರ ಮುನ್ಸಿಫ್ ಕೋರ್ಟಿನ ಚಾರ್ಜನ್ನು ೧೮೯೪ ನೇ ಇಸವಿ ಫೆಬ್ರವರಿ ೧೮ ನೇ ಮಕ್ಕಾಂ ಅಪರಾಹ್ಣದಲ್ಲಿ ಮೆ|| ಬಿ. ಎಸ್. ಕೃಷ್ಣಸ್ವಾಮಯ್ಯಂಗಾರ್ರವರಿಗೆ ಒಪ್ಪಿಸಿರುತ್ತಾರೆ. ಮೆ|| ಕೃಷ್ಣಸ್ವಾಮಯ್ಯಂಗಾರ್ರವರಿಗೆ ೧೮೯೪ ನೇ ಇಸವಿ ಜನವರಿ ೩೦ ನೇ ಮಕ್ಕಾಂ ೧೪೬೮—೧. ೨೩೮ ನೇ ನಂಬರುವುಳ್ಳ ಅಪ್ಪಣೆ ಮೂಲಕ ಕೊಡಲ್ಪಟ್ಟಿದ್ದ ರಜಾಪೈಕಿ ಅವರುಪಯೋಗಿಸಿಕೊಳ್ಳದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ನಂ|| ೧೪೭೬ ಗ. ೯. ೧೪೬—೯೩.— ಫಸ್ಟ್ ಅಸಿಸ್ಟೆಂಟ್ ಇನಸ್ಪೆಕ್ಟರ ಮೆ|| ಎಸ್. ಎ. ಜಾನ್ಸ್ಟನ್ ರವರು ಮೈಸೂರಿಗೆ ವರ್ಗ ಮಾಡಲ್ಪಟ್ಟ ಮೆ| ಟಿ. ಅಬ್ದುಲ್ ಕರೀಂ ಯವರಿಗೆ ಬದಲಾಗಿ ಫಸ್ಟ್ ಇನ್ಸ್‌ಪೆಕ್ಟರ್ ಜನರಲ್ ಆಫೀಸನ್ನಲ್ಲಿ ಹೆಡ್‌ಕ್ವಾರ್ಟರ್ ಪೊಲೀಸ ಅಸಿಸ್ಟೆಂಟಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ|| ೧೪೭೭—೧ ೩೨೮೯.— ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ ಅನುಸರಿಸಿ ಹಾಸನ ಡಿಸ್ಟ್ರಿಕ್ಟ್ ಫಸ್ಟ್ ಸಬ್ ಅಸಿಸ್ಟೆಂಟ್ ಇನಸ್ಪೆಕ್ಟರ ಮೆ|| ಎಚ್. ಮುದ್ದಪ್ಪನವರಿಗೆ ೧೮೯೪ ನೇ ಇಸವಿ ಮಾರ್ಚಿ ೧೫ ನೇ ಮಕ್ಕಾಂ ಲಾಗಾಯಿತು ಅಥವಾ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ ಲಾಗಾಯಿತು ೨೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ

ನಂ|| ೧೪೭೮—೧. ೯ ೩೯೧—೯೩,—ಅಡಿಯಲ್ಲಿ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ. ಕಡೂರು ಡಿಸ್ಟ್ರಿಕ್ಟ್ ಪೊಲೀಸ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ|| ಜೆ. ಹೆನ್ನಿಂಗಿ ಯವರು ರೇಲ್ವೆ ಪೊಲೀಸ ಇನ್‌ಚಾರ್ಜಿನಲ್ಲಿ ತಕ್ಕದ್ದು. ರೇಲ್ವೇ ಪೊಲೀಸ ಇನ್‌ಚಾರ್ಜಿನಲ್ಲಿದ್ದ ಆಫಿಷಿಯೇಟಿಂಗ್ ಸೂಪರಿಂಟೆಂಡೆಂಟ್ ಮೆ| ಟಿ ಎ. ಬ್ಯಾಲಾರ್ಡ್ ಯವರು ಕಡೂರು ಡಿಸ್ಟ್ರಿಕ್ಟಿಗೆ ಮೇಲೆ ಕಂಡವರಿಗೆ ಬದಲಾಗಿ ವರ್ಗ.

ನಂ|| ೧೪೭೯ ಗ. ೯. ೩೯೩—೯೩.— ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ಕೋಲಾರ ತಾಲ್ಲೂಕ ಅಮಲ್ದಾರ ಶೇಷಾ ಹನುಮಂತರಾಯನವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಕೋಲಾರ ತಾಲ್ಲೂಕ ಶಿರಸ್ತೇದಾರ ಟಿ. ರಾಮಣ್ಣನವರು ಶೇಷಾ ಹನುಮಂತರಾಯನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸದರೀ ತಾಲ್ಲೂಕ ಅಮಲ್ದಾರ ವ ೩ನೇ ಕ್ಲಾಸ ಮ್ಯಾಜಿಸ್ಟ್ರೇಟಾಗಿ ಆಕ್ಟಿಂಗಿ ತಾರೀಖ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ|| ೧೪೮೦ — ಗ. ೩೨೬೦—ತಾ|| ೩ ನೇ ಮಾರ್ಚಿ ೧೮೯೪.—ಮೈಸೂರು ಸ್ಟೇಟ್ ರೈಲ್ವೆ ಪೈಕಿ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಹಾಲೀ ಇರತಕ್ಕ "ಚಿಕ್ಕಜಾಜೂರು" ಸ್ಟೇಷನ್ ಎಂಬುದನ್ನು "ಹೊಸದುರ್ಗ" ರೋಡ್ ಎಂಬದಾಗಿ ಬದಲಾಯಿಸಲ್ಪಟ್ಟಿರುತ್ತದೆ.

ನಂ|| ೧೪೮೧ — ಗ. ೩೨೬೧ — ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೧೭೦ ನೇ ಆರ್ಟಿಕಲ್ ಅನುಸರಿಸಿ ಮುಳಬಾಗಲು ತಾ|| ಅಮಲ್ದಾರ ಎಸ್. ಲಕ್ಷ್ಮೀನಾರಾಯಣರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಮದರಾಸ್ ಸರ್ಕಾರದವರು ಈ ೫ ವರುಷಗಳಿಂದ ಕೂಡಿಸಿದ್ದಂಥ ಉಪ್ಪನ್ನು ಕಳಿಸಿ ಸರ್ಕಾರಿಗೆ ಕೊಡಲಾರದ ಸಮುದ್ರ ಪಾಲಿಗೆ ಅರ್ಪಣೆ ಮಾಡಿದರಂತೆ.—ಕ. ಸು.

ಉರುಳಿನಡ್ಡೆಯನ್ನು ತಿನ್ನುವದರಿಂದ ಕಾಲರಾ ರೋಗ ದೂರವಾಗುತ್ತದೆಂದು ಅಮೇರಿಕಾ ಪತ್ರಿಕೆಯುಂಟು.—ಕ. ಸು.

ಬರೋಡದೇಶದ ನ್ಯಾಯ ಸಭೆಯ ಕಾರ್ಯದಲ್ಲಿ ಪ್ರಾಣ ಕಾರಣಗಳನ್ನು ಮಾಡಲು ಸುಖ ಆಜ್ಞೆಯ ಸರ್ಕಾರದ ಖರ್ಚಿನಿಂದ ಗೋವೆಯಿಂದ ಇಬ್ಬರು ತರುಣರು ಕರೆಸಲ್ಪಟ್ಟು ಮರಳಿದ್ದಾರೆಂತ ತಿಳಿಯುತದೆ.—ಕ. ಸು.

ಮಣಿಯ ಗಿಡವು.—ನ್ಯೂಗ್ರಾನಡದಲ್ಲಿ ಈ ಹೆಸರಿನ ಗಿಡವಿದ್ದು ಇದರ ರಸವು ಬಳ್ಳೀ ಉತ್ತಮ ಮಣಿಯಂತೆ ಬರೆಯುವದಕ್ಕೆ ಬರುತ್ತದೆ. ಈ ಮಣಿಯಿಂದ ಹೋಗಲಿಕ್ಕೆಂಬದಾಗಿ ಪ್ರಯತ್ನಮಾಡಿದರೂ ಹೋಗುವದಿಲ್ಲ.

ಸೋಲಾಪುರದಲ್ಲಿ ಮೊನ್ನೆಮೊನ್ನೆ ಸೋಮವಾರದ ದಿವಸ ಮಧ್ಯಾಹ್ನದಲ್ಲಿ ಒಂದು ಭಯಂಕರವಾದ ನಾಲ್ಕು ತೋಪುಗಳ ಆವಾಜಿನಷ್ಟು ಶಬ್ದವಾಗಿ ಮನೆಗಳೆಲ್ಲ ಅದರಿದವು. ಹ್ಯಾಗಾದದ್ದೆಂದು ಯಾರಿಗೆ ಅದವು ಎಂಬುವಾಗಿ ತಿಳಿಯುವದಿಲ್ಲ.

ಕಲ್ಕತ್ತಾ ಸಮೀಪದಲ್ಲಿರುವ ಹುಗ್ಲೀ ನದಿಯ ಕೆಳಗಿನಿಂದ ಭೂಮಿಯಲ್ಲಿ ಸುರಂಗವನ್ನು ಮಾಡಿ ರೈಲ್ವೆಯನ್ನು ಒಯ್ಯುವ ಕೆಲಸವು ಮುಗಿಯುತ್ತಾ ಬಂದಿದೆ. ಹಾಗೆಯೆ ತೆಂಗಿನ ನಾರಿನಿಂದ ಎಂಬ ತಳಭಾಗದಿಂದ ಸಹ ಸುರಂಗ ಮಾರ್ಗ ಮಾಡಿಸಬೇಕೆಂದು ರೈಲ್ವೆ ಕಂಪೆನಿಯವರು ಇಚ್ಛಿಸುತ್ತಾರೆ!—ಕ. ಸು.

ಚೀನಾ ದೇಶದಲ್ಲಿ ನಾಂಕಿಂಗ್ ಎಂಬಲ್ಲಿ ಒಬ್ಬ ಸಾಹುಕಾರನಿದ್ದಾನೆ. ಅವನು ತನ್ನ ವಯಸ್ಸಿನ ೩೫ ನೇ ವರುಷದಲ್ಲಿ ಲಗ್ನ ಮಾಡಿಕೊಂಡನು. ಇದು ಅವನಿಗೆ ೨೩ ನೇ ಲಗ್ನವಾಗಿರುತ್ತದೆ. ಇವನು ೩೦ ಲಗ್ನಗಳನ್ನು ಮಾಡಿಕೊಳ್ಳುವೆನೆಂದು ಪ್ರತಿಜ್ಞೆ ಮಾಡಿಕೊಂಡಿದ್ದಾನಂತೆ. ಇನ್ನು ಏಳೇ ನಾಲ್ಕು ಲಗ್ನಗಳು ಮಾತ್ರ ನಿಂತಿರುವದರಿಂದ ತನ್ನ ಶಪಥವೆ ಕೊನೆಗಾಣಲಿಕ್ಕೆ ಇನ್ನು ಎಡರುಗಳು ಬರಲಾರವೆಂತ ತೀರಾ ಆನಂದ ಪಡುತ್ತಾನಂತೆ. ಆದರೂ ಈ ತರುಣ ಗೃಹಸ್ಥನು ಮುಂದಿನ ಲಗ್ನಗಳನ್ನು ಬೇಗನೇ ಮುಗಿಸಿಕೊಂಡರೆ ಒಳ್ಳೇದಲ್ಲವೆ.—ಕ. ಸು.

ಅಮೇರಿಕೆಯಲ್ಲಿ ನೂರು ವರುಷ ಪ್ರಾಯದ ಒಬ್ಬ ಸ್ತ್ರೀಯಳಿದ್ದಾಳೆ. ಇವಳು ತಾನು ಇಷ್ಟು ದೀರ್ಘಕಾಲ ಬದುಕಿರುವದರ ಕಾರಣವು ತಾನು ಜನ್ಮತಃ ಚಹಾ, ಕಾಫಿ ಕುಡಿಯದೇ ಇದ್ದದ್ದೇ ಎಂತ ತೋರಿಸಿರುತ್ತಾಳೆ. ನಮ್ಮ ದೇಶದಲ್ಲಿ ಜನರಿಗೆ ಇತ್ತೀಚೆಲಾಗಿ ಮತ್ಯಾವುದರ ಕೊರತೆ ನಿಸ್ಸಂಶಯವಾಗಿಲ್ಲ; ಕಾಫೀ ಕುಡಿದ ವಿನಾ ನಿದ್ರೆಯು ಕಮ್ಮಿ ಮಾಡಲಿಕ್ಕಾಗುವದಿಲ್ಲ. ಚಹಾ ಕುಡಿಯದೇ ಇದ್ದರೆ ಕೆಲಸಕ್ಕೆ ಹೋಗುವದಿಲ್ಲ. ಬಿಸ್ಕೆಟ್, ಮೊಟ್ಟೆ ಇತ್ಯಾದಿಗಳನ್ನು ತಿಂದ ಹೊರತು ಹಸಿವೆಯೇ ಶಾಂತವಾಗುವದಿಲ್ಲ! ಇಂತಹ ನಮ್ಮ ದೇಶದ ತರುಣರು ಅಲ್ಪಾಯುಗಳಾಗಲು ವಿಚಾರವೇಕೆ?

ಒಂದುವಿಧ ವಿಚಿತ್ರದ, ಚಮತ್ಕಾರ ಶಸ್ತ್ರಸಂಬಂಧ ವಿವರಣೆ.

ಆಸ್ಟ್ರಿಯಾ ದೇಶ ದ ವಿಯನ್ನಾ ಪಟ್ಟಣದಲ್ಲಿರುವ ಡಾಕ್ಟರ ಅಂಡ್ರೈದೆಸ್, ಅಮೇರಿಕಾದೇಶದ ಕೆಲವರಿಗೆ ಒಂದು ಚಮತ್ಕಾರದ ಶಸ್ತ್ರಚಿಕಿತ್ಸೆ ಸಂಗತಿಗಳು ತಿಳಿಯಪಡಿಸಿದನು. ವಿಶೇಷ ಪಂಡಿತನಾದ ಬಿಲ್‌ರಾತು ನಾಮಧೇಯ ಅಂಡ್ರೈದೆಸ್ ಒಬ್ಬನಿಗೆ, ಗರ್ಭವನ್ನು ಕತ್ತರಿಸಿ, ಅದರಲ್ಲಿ ಮೂರಡಿ ಪರಿಮಾಣವು ಇಂದ್ರಿಯ ರಾಸಾಯನಿಕಗಳನ್ನು ಉಳಿದು ತೆಗೆದು ಆ ಮನುಷ್ಯನಿಗೆ ಶಸ್ತ್ರಚಿಕಿತ್ಸೆಗಳು ನಿರ್ಮಾಣಮಾಡಿದನು. ಈ ಚಮತ್ಕಾರ ಶಸ್ತ್ರವಿಧ ಯಾರು ಇರುವದೇಕೆ ವಿವಾದವಿಲ್ಲ. ಗರ್ಭವು ಕತ್ತರಿಸಿ ಶೋಧನೆ ಮಾಡಿದ ಕಾಲದಲ್ಲಿ, ಆ ಮನುಷ್ಯನಿಗೆ ಗರ್ಭದಲ್ಲಿ ಒಂದುವಿಧ ಸಂಕೋಚವು ಇದ್ದಿತ್ತು. ಆ ಕಾರಣದ ಈ ಕೆಳಗೆ ವಿವರಿಸಿದ ಪ್ರಕಾರ ಆ ಮನುಷ್ಯನಿಗೆ ಚಿನ್ಹೆಗಳು, ಇಲ್ಲದೆ, ಗುರುತುಗಳು ಇದ್ದವು:—ಅನ್ನ ಹಿತವು ಕೆಡುವು, ಗರ್ಭದಲ್ಲಿ ಒಂದುವಿಧ ಉಷ್ಣತ್ರಯದ ವ್ಯಾಕುಲವು, ನಿತ್ರಾಣದ ಮೂರ್ಛೆ "ಪ್ರಾಣವು ಹೋಗುವಾಗ" ದೈನ್ಯವು, ದಂತಗಳಲ್ಲಿ ಕಡ್ಡಿಯು, ಉದರದಲ್ಲಿ ದುರ್ಗಂಧದ ಹುಳಿ ಆಂಟು, ಬಾಯಿಯಲ್ಲಿ, ಬಿಳುಪು, ಕೆಂಪು, ಅನ್ನ ತಿನ್ನುವದಕ್ಕೆ ತಾಳದಂಥ ಇಷ್ಟ ಕಡಿಮೆ, ಶರೀರದಲ್ಲಿ ನಿಶ್ಶಕ್ತಿ ಯು, ಕಣ್ಣುಗಳು ಆಳಕ್ಕೆ ಎಳದುಕೊಂಡು ಇರುವದು, ಇದಲ್ಲದೆ ಹಸಿವು, ಕೈಯ್ಯುಗಳಲ್ಲಿ ಪಾದಗಳಲ್ಲಿ ಶೀತದ ಬಂಡೆಯು ಶಿತ ಬೆವರು, ಈ ಪ್ರಕಾರ ಬಾಧ್ಯಗ್ರಸ್ತನು ಕ್ರಮೇಣವಾಗಿ, ನಿದ್ರೆಬಾರದೆ ವಿಶೇಷ ಆಯಾಸವು. ಆ ನೀಲಿ ಆಪರೇಷನಿಗೆ ಬಾಧ್ಯಗ್ರಸ್ತನಿಗೆ ಬೇರೆ ತಲೆ ಕೊಂಪು, ಮುಖದಲ್ಲಿ ಮಂದವು, ಮನಸ್ಸಿನಲ್ಲಿ ಭಯಂಕರವಾದ ಕೆಟ್ಟ ಚಿತ್ತಗಳು ತೋರುವವು. ಪಕ್ಕದಿಂದ ಆಕಸ್ಮಿಕವಾಗಿ ಎದೆಯ ಕಡೆ ದಲ್ಲಿ ಚುಚ್ಚಿದಂತಿರುವದು, ಕೆಳಗೆ ಬೀಳದ ಹಾಗೆ ಉರುವದಕ್ಕೆ ಗೋಡೆಯಾಗಲಿ, ಇಲ್ಲದೆ ಕಂಭವನ್ನಾಗಲಿ ಹಿಡಿಯುವದಕ್ಕೆ ಯತ್ನಿಸುವದು. ಗರ್ಭದಲ್ಲಿಯ ನಾನಾ ಗತಿಗಳು ಕರುಳುಗಳು ಬಂಧಿಸಿ ಮಲವನ್ನು ಬಂಧನಮಾಡಿ, ಆ ಕಾರಣಗಳಿಂದ, ಶರೀರ ಚರ್ಮವು ಹಳದಿಯಾಗಿ, ರಕ್ತವನ್ನು ಮಂದವಾಗಿ, ಶರೀರದಲ್ಲಿ ರಕ್ತವು ಸರಿಯಾಗಿ ಪ್ರವಹಿಸದಾಗಿ, ಆ ತರದ ನಂತರವು, ಬಾಧ್ಯಗ್ರಸ್ತನು ಅನ್ನವು ಭುಜಿಸಿದ ಕಾಲದಲ್ಲಿ ಬಾಯಿಯಲ್ಲಿ ಉರುಳುತದೆ, ಭುಜಿಸಿದ ಅನ್ನವು ಗರ್ಭದಲ್ಲಿ ಜೀರ್ಣವಾಗದೆ, ಅದು ಉಕ್ಕಿಸಿ, ವಾಯುಯಲ್ಲಿ ಶೀಘ್ರದ ಆರುಚಿಯು, ಎದೆಯಲ್ಲಿ ಬಲವಾದ ಆದುರು, ಆಕಾರಣದಿಂದ ಬಾಧ್ಯಗ್ರಸ್ತನು, ತನಗೆ ಎದೆಯಲ್ಲಿ, ಎದೇ ಕ್ಷೀಣದ ರೋಗವು ಇದ್ದಹಾಗೆ ನೆನಸುವದು. ಆ ತದನಂತರವು, ಬಾಧ್ಯಗ್ರಸ್ತನಿಗೆ ಅನ್ನದ ಆಸೆಯು, ಕಡಿಮೆಯಾಗಿ ಅನ್ನವನ್ನೆ ಗರ್ಭದಲ್ಲಿ ದಕ್ಕಿಸದಹಾಗೆ ಊರೋದು, ಜೀರ್ಣದ ದ್ವಾರಗಳು, ಗರ್ಭದಲ್ಲಿ ಕೆಲವು ಮುಚ್ಚಿಕೊಂಡು ಊರೋದು, ಇತ್ಯಾದಿಗಳು ಸರ್ವವು ಗರ್ಭದಲ್ಲಿ ಇದರಿಂದ ಉತ್ಪತ್ತಿ ಆಗಿದ್ದಲ್ಲ. ಅದರೆ ಅಜೀರ್ಣ ಕಾರಣದಿಂದ ಮುಖ್ಯವಾಗಿ ಜನರೋಳಗೆ ಈ ದುರ್ಗುಣಗಳು ಉತ್ಪತ್ತಿ ಆಗುತ್ತಾವೆ. ಸಾವಿರದಲ್ಲಿ ಒಬ್ಬನಿಗೆ ಮಾತ್ರ ಗರ್ಭದಿಂದ ಈ ದುರ್ಗುಣಗಳು ಕಾಣುತದೆ ಆಗಲಿ ಇತರವು ಅಲ್ಲ. ಈ ಬಾಧ್ಯಗಳ ನಿವಾರಣೆ ನಿಮಿತ್ತವು ತಾಯಿಶೀಗೀಲು ಕಷಾಯವನು ಪಾನವು ಮಾಡುವದರಿಂದ ಈ ಬಾಧ್ಯಗಳು ಸರ್ವವು ಶಾಂತವಾಗಿ ದೇಹಕ್ಕೆ ಆರೋಗ್ಯವನ್ನು ಮಾಡುತದೆ. ಈ ಕಷಾಯವು ಔಷಧ ಎಲೆಗಳಿಂದ ಮಾಡಿ ಸರ್ವ ದೇಶಗಳಲ್ಲಿ ಕೆಮಿಸ್ಟ್ ಆಸ್ಪತ್ರೆ ಬಜಾರುಗಳಲ್ಲಿ ಕ್ರಯಕ್ಕೆ ಮಾರುತ್ತದೆ. ಈ ಕಷಾಯವನ್ನು ಪಾನಮಾಡುವದರಿಂದ ಬಾಧ್ಯಗಳ ಅಸ್ತಿವಾರಗಳನ್ನು ನಿರ್ಮೂಲ ಮಾಡಿ ಶರೀರಕ್ಕೆ ಬಲವನ್ನು ಉತ್ಪತ್ತಿ ಮಾಡುತದೆ.

S. G.

BANGALORE:—Printed and Published at the KARNATAKA PRESS, No. 40 HOSPITAL Road, CITY.—1894.

THE

Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning.

[illegible]

Vol. XXI. BANGALORE:—MONDAY MARCH 19, 1894. No. 11.

Select Telegrams

London, 13th March.—In the House of Lords last night Lord Salisbury urged Government to take the verdict of the people on *Home Rule immediately as delay* would be disastrous both to England and Ireland.

Lord Rosebery said Government was prepared to appeal to the country on the question of Home Rule when the time was ripe, but it would not concede the right of the Lords to force a Dissolution.

London, 12th March.—Lord Rosebery speaking at a meeting of the Liberal Party declared that he adhered *absolutely to Home Rule* and Mr Gladstone's last speech in the Commons against the Lords. The present constitution *of the Lords* he said was an anomaly and has become a danger to the country, since it obeyed the dictates of a leader of a single party. Government, he said, would not lose sight of any means of constitutionally presenting to the country that the anomaly was a danger. His Lordship was loudly cheered at the conclusion of his speech.

London, 13th March.—Advices from *Rio de Janeiro* state that the insurgent Admiral Dagama has gone on board the Portuguese corvette and intimated his readiness to surrender to Marshal Peixoto with his officers if protection is guaranteed to them.

London, 14th March.—An amendment to the address in reply to the *Queen's speech* was moved by Sir George Chesney in the House of Commons last night regretting the omission of *cotton duties from* the new Indian Tariff Act.

Mr. H. H. Fowler, Secretary of State for India, *deprecated* any discussion on the subject at this stage in view of his promise to give facilities for debate on Indian finances at an early date. He denied that the competition of Manchester with India was harmful, and said that if a duty was levied on cotton imports while none was levied on fabrics manufactured in India, the Indian consumers would have to pay it. The amendment was then negatived without a division.

London, 15th March.—The House of Commons last night, on the motion of Sir William *Harcourt*, rejected the Address in reply to the Speech from the Throne with Mr Labouchere's amendment and adopted a substitute merely thanking Her Majesty for her gracious speech.

London, 17th March.—Mr Fowler, replying to several questions, said Lord *Kimberley's* decision regarding the exemption of cotton goods from duty in India was not taken with *the assent of the Council.* Mr *Fowler further said he would endeavour to lay the Despatches* that passed between Lord Kimberley and the Viceroy on the subject of the Indian Tariff on the table of the House before the debate on Indian Finance came on.

Mr. Herbert Gladstone has been re-elected for West Leeds unopposed.

Lahore, 16th March.—Florence, Maharani of Patiala, *is lying dangerously ill at Umballa*, Dr Owen is in attendance.

Calcutta, 17th March.—The Amir's Agent leaves next Mail for England with orders to purchase a large quantity of war material including 60 Gatling guns. The workshops at Kabul are to be enlarged and there are to be extra coining machines and rolling mills a complete plant for cash making and for making gunpowder besides shedmaking machinery, saw-mills and others.

THE

Karnataka Prakasika.

MONDAY, MARCH 19, 1894.

EDUCATION IN HYDERABAD AND MYSORE.

Under Article 188 of the Mysore Service Regulations K C Shamanna, Amildar on Special duty, is granted privilege leave of absence for one month from the 4th April 1894

Mr P N Parmiya, Deputy Commissioner Hassan District, delivered over, and Mr K Muhammad Ali assumed, charge of the Hassan District and Treasury on the afternoon of the 30th April 1894

EDUCATION

It is hereby notified that the Office of the Education Secretary will be closed from Wednesday the 16th to Thursday the 31st May 1894. It will re open at Mysore on Friday the 1st June 1894

Extracts

MRS BESANT'S KNOWLEDGE OF SANSKRIT AND HINDU PHILOSOPHY

Colonel Olcott writes to correct a mis apprehension of ours in regard to Mrs Besant's knowledge of Sanskrit, and the time she has given to the study of Indian philosophy. He says that so far from being ignorant of Sanskrit Mrs Besant carries with her in all her travels the Bhagavat Gita and Sankara's Commentary on Upanishads in the original Sanskrit, and reads them attentively whenever she finds a spare moment; in fact she reads them daily in the train and with the same absorbing interest that her average compatriot gives to the latest novel or sporting paper. She uses no dictionary in this railway carriage but refers to one or other English translation when she encounters some word whose meaning she cannot instinctively grasp at the first reading. Colonel Olcott has been present on frequent occasions when she has consulted some English-knowing Hindu Sanskritist, and found that almost invariably she had already a very definite idea of the word or sentence under discussion, her difficulty being as to the best of the synonyms that might be employed to render it clearest. Nobody is more surprised than Mrs Besant herself to see how upon opening a fresh page in one of the ancient books a sense of its familiarity rushes into her mind, as though vanished memories were coming back to her. In fact, she does not hesitate to say that the picture of her last birth before this has been brought vividly before her mind, and that she positively knows that she was then a Brahmin pundit of what is now called the N W Province. In this birth she has—Colonel Olcott says, on her own statement to him—been studying both Hindu and Buddhist philosophies during the past *fourteen*—not four years. While as a leader of the materialistic party, she used to quote the best ethical maxims they contained to offset the pretended superior moral code of Christianity, hence her familiarity with the ancient Aryan literature is not the miraculous growth of the past four years as we, with the general Indian public, had supposed

ಕರ್ಣಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ಮೇ ೧೪ ನೇ ತಾ|| ಸೋಮವಾರ

ಮದರಾಸ್ ಸ್ಮಾಲ್‌ಕಾಸ್‌ಕೋರ್ಟ್ ಅವ್ವಲ್ ಜಡ್ಜಿಯು ನಿಯಾಮಕ

ಮದರಾಸ್ ಸ್ಮಾಲ್‌ಕಾಸ್ ಕೋರ್ಟ್ ಅವ್ವಲ್ ಜಡ್ಜಿಯವರಾಗಿದ್ದ ಮೆ|| ಪಿ ಡಿ ಷಾ ಎಂಬವರು ದೈವಯೋಗದಿಂ ಈಚೆಗೆ ಮೃತಪಟ್ಟದ್ದರಿಂದ ಅವರ ಕೆಲಸವು ಕಾಯಮಾಗಿ ಖಾಲೀಯಾಗಿರುತ್ತಿದೆಯಷ್ಟೆ. ಈ ಅಧಿಕಾರವನ್ನು ಈಚೆಗೆ ಒಂದು ವರ್ಷದ ಕಾಲದ ಮೊದಲು ಬದಲೀ ನೋಡುತಲಿರುವ ಮೆ|| ಸುಬ್ರಹ್ಮಣ್ಯಂ ಎಂಬವರು ಇಂಗ್ಲಿಷ್ ಬ್ಯಾರಿಸ್ಟರಾಗಿರುತ್ತ, ಸರ್ವಾಂಶದಲ್ಲೂ ಪ್ರಕೃತ ಪದವಿಯಲ್ಲಿ ಕಾಯಂ ಮಾಡಲ್ಪಡುವದಕ್ಕೆ ಅರ್ಹರೆನಿಸಿರುವದರಿಂದ ಅವರನ್ನು ಅದೇ ಕೆಲಸದಲ್ಲಿ ಕಾಯಂ ಮಾಡುವದವು ಸಜ್ಜನರ ಸಮ್ಮತವಾಗಿಯೂ, ಮದರಾಸ್ ಗವರ್ನಮೆಂಟಿನವರ ನಿಷ್ಪಕ್ಷಪಾತತೆ ಮತ್ತು ಗುಣಗ್ರಾಹಕತಾಶಕ್ತಿ ನಿರೂಪಣಕ್ಕೆ ಇದು ಉಚಿತ ಸಮಯವಾಗಿಯೂ ಇರುವದೆಂದು ನೇಟಿವ್ ವೃತ್ತಾಂತ ಪತ್ರಿಕೆಗಳು ಅಭಿಪ್ರಾಯ ಪಡುತಿವೆ ಇದೇ ಕೆಲಸಕ್ಕೆ ಮದರಾಸ್ ಹೈಕೋರ್ಟ್ ಬ್ಯಾರಿಸ್ಟರುಗಳಾದ ಮೆ|| ಆರ್ ಬಿ. ನಿಜೋಲ್ ಮತ್ತು ಮೆ|| ಬ್ರೌನ್ ಎಂಬವರು ಉಮೇದ್ವಾರರಾಗಿರುತ್ತಾರೆ. ನೇಟಿವ್‌ಗಳು ಎಷ್ಟು ಸಮರ್ಥರಾಗಿದ್ದರು, ದೊಡ್ಡ ಅಧಿಕಾರಿಗಳ ನಿರೀಕ್ಷಣೆ ವಿಷಯದಲ್ಲಿ ಪ್ರತ್ಯರ್ಥಿಗಳಾದವರು ಯೂರೋಪಿಯನ್ನರಾಗಿರುವರಾದರೆ ಅವು ಪ್ರಾಯಶಃ ನೇಟಿವ್‌ಗಳಿಗೆ ಲಭಿಸುವದಿಲ್ಲವು. ಇದೇ ವಿಷಯದಲ್ಲಿ ಮದರಾಸ್ ಸ್ಟ್ಯಾಂಡರ್ಡ್ ಎಂಬ ಪತ್ರಿಕೆಯು ತಿಳಿಸುವ ಅಭಿಪ್ರಾಯವೇನಂದರೆ, ಮಿ|| ಸುಬ್ರಹ್ಮಣ್ಯಂ ಯವರು ಸ್ಮಾಲ್‌ಕಾಸ್ ಕೋರ್ಟ್ ಚೀಫ್ ಜಡ್ಜಿ ಅಧಿಕಾರವಂ ವಹಿಯಿಸಲಿಕ್ಕೆ ಆವಶ್ಯಕಗಳಾದ ಯೋಗ್ಯತೆಗಳನ್ನೆಲ್ಲಾ ಪಡೆದಿರುತ್ತಾರೆ, ಅದರೊಂದಿಗೆ ಒಬ್ಬ ಯೂರೋಪಿಯನ ಹೆಸರೂ, ಬಣ್ಣವೂ ಉಂಟಾಗಿರುವದಾದರೆ ಚೀಫ್ ಜಡ್ಜಿಯ ಪದವಿಯಲ್ಲಿ ಕಾಯಂ ಮಾಡಲ್ಪಡುವ ವಿಷಯದೊಳು ಆಕ್ಷೇಪಣೆ ಲೇಶವೂ ಉಂಟಾಗಲಾರದು. ಒಂದುವೇಳೆ ಈಗ ಅವರು ಪಡೆದಿರುವ ಯೋಗ್ಯತೆ ಇಲ್ಲದೆ ಹೋದಾಗ್ಯೂ ಯೂರೋಪಿಯನ್ ಹೆಸರೂ ಬಣ್ಣವೂ ಸುಲಭವಾಗಿ ಅರ್ಹತೆಯನ್ನುಂಟುಮಾಡುವವು. ಮಿ ಸುಬ್ರಹ್ಮಣ್ಯಂಯವರು ನೇಟಿವಾಗಿರುವದರಿಂದ ಸದರಿ ಅಧಿಕಾರಕ್ಕೆ ಅವರು ಅನರ್ಹರೆಂದು ಕೆಲವರು ಭಾವಿಸುವರು ಮದರಾಸ್ ಗವರ್ನರಾದ ಲಾರ್ಡ್ ವೆನ್‌ಲಾಕ್ ಸಾಹೇಬರೂ ಅವರ ಮಂತ್ರಾಲೋಚಕರೂ ಮೇಲಿನವರಂತೆಯೇ ಅಭಿಪ್ರಾಯ ಪಡುವರೊ ಹ್ಯಾಗೋ ಇನ್ನು ಸ್ವಲ್ಪದಿವಸಗಳೊಳಗಾಗಿ ವ್ಯಕ್ತವಾಗುವುದು, ಎಂಬದು ವಗೈರೆ. ದೊಡ್ಡ ಅಧಿಕಾರಗಳ ನಿರೀಕ್ಷಣೆ ವಿಷಯದಲ್ಲಾಗಲಿ, ಕ್ರಿಮಿನಲ್ ನ್ಯಾಯ ವಿಮರ್ಶೆಯಲ್ಲಾಗಲಿ, ಇಂಡ್ಯದೇಶದ ನೇಟಿವ್‌ಗಳೂ ಯೂರೋಪಿಯನ್ನರೂ ಪ್ರತಿಕಕ್ಷಿಯವರಾಗಿ ಏರ್ಪಡುವ ಸಂದರ್ಭಗಳಲ್ಲೆಲ್ಲ ಪ್ರಾಯಶಃ ನೇಟಿವ್‌ಗಳಿಗೆ ನ್ಯಾಯವು ದುರ್ಲಭವಾಗುತಿದೆಂಬದಕ್ಕೆ ಅನೇಕ ನಿದರ್ಶನಗಳು ಲೋಕಪ್ರಸಿದ್ಧವಾಗಿರುವಲ್ಲಿ ಅದಂಕುರಿತ ಲೇಖನವು ಚರ್ವಿತ ಚರ್ವಣವಾಗಿರುವುದು. ಬ್ರಿಟಿಷ ಸರ್ಕಾರದವರ ಆಡಳಿತದಲ್ಲಿ ಜಾತಿ ಮತ ಪ್ರಯುಕ್ತವಾದ ತಾರತಮ್ಯಗಳು ಪರಿಗಣಿಸಲ್ಪಡಲಾರವೆಂದು ಇದುವರೆಗೆ ಅನೇಕ ಸಂದರ್ಭಗಳೊಳು ಗವರ್ನಮೆಂಟಿನವರು ಶಬ್ದತಃ ಘಂಟಾಘೋಷವಾಗಿ ಪ್ರಕಟಿಸಿದ್ದಾಗ್ಯೂ ಕಾರ್ಯತಃ ಅದಕ್ಕೆ ಪ್ರತ್ಯಕ್ಷ ವಿರುದ್ಧವಾಗಿ ನಡೆಸುತಬರುತಿರುವರೆಂಬದಕ್ಕೆ ನಿದರ್ಶನಗಳಿಲ್ಲದೆ ಹೋಗಲಿಲ್ಲವು ಜಾತ್ಯಭಿಮಾನ, ಮತ್ತು ಬಾಂಧವ್ಯಾಭಿಮಾನಗಳಂ ದೂರಪಡಿಸಿ, ನ್ಯಾಯೈಕಪರರಾಗಿ ವರ್ತಿಸತಕ್ಕ ಪುರುಷರು ಪ್ರಾಯಶಃ ದುರ್ಲಭರಾಗಿರುತ್ತಾರೆ, ಕದಾಚಿತ್ ಅಂತ ಸತ್ಪುರುಷನ್ಯಾವನಾದನೊಬ್ಬನಿದ್ದರೆ ಅವನು ಸಮಾನವರ್ತಿಗಳಾದ ಮಂತ್ರಾಲೋಚಕರ ದುಚ್ಚೋದನೆಗೆ ಕಿವಿಗೊಟ್ಟು, ನ್ಯಾಯ ಲೋಪವನ್ನುಂಟುಮಾಡಿ, ಪ್ರಜಾನುರಾಗವು ಕಳಕೊಂಡು ಲೋಕ ನಿಂದೆಗೆ ಗುರಿಯಾಗುತ್ತಾನೆ, ಮುಖ್ಯವಾಗಿ ಪ್ರಕೃತ ವಿಚಾರಕ್ಕೆ ವಿಷಯವಾಗಿರುವ ಅಧಿಕಾರ ನಿಯಾಮಕವು ಇನ್ನು ಆಗದಿರುವ ಕಾಲದಲ್ಲಿ ಅದಂಕುರಿತು ಕಠಿಣಶಬ್ದಗಳಿಂದ ಆಕ್ಷೇಪಿಸುವದಾವ್ಯ ಯುಕ್ತವಾಗಿರಲಾರದು, ಪರಂತು ಮಿ|| ಸುಬ್ರಹ್ಮಣ್ಯಂಯವರ ಯೋಗ್ಯತೆಯನ್ನು ಹಕ್ಕುದಾರಿಯನ್ನೂ ಉಚಿತ ಶಬ್ದಗಳಿಂದ ಗವರ್ನಮೆಂಟಿನವರ ಅವಧಾನಕ್ಕೆ ತರುವದರಲ್ಲಿ ಯಾವವಿಧ ಆಕ್ಷೇಪಣೆಯೂ ಇರಲಾರದು, ಮತ್ತು ಪ್ರಜಾ ಪ್ರತಿನಿಧಿಗಳೆನ್ನಿಸಿರ್ಪ ವೃತ್ತಾಂತ ಪತ್ರಿಕಾ ಲೇಖಕರು ತಮ್ಮ ಕರ್ತವ್ಯವನ್ನು ನೆರವೇರಿಸಿದಂತೆಯೂ ಆಗುವುದು

ಶ್ರೀ ಶೃಂಗೇರಿ ಸ್ವಾಮಿಗಳವರ ಜ್ಞಾನೋಪದೇಶವು.

ಜಗದ್ಗುರುಗಳಾದ ಶ್ರೀ ಶೃಂಗೇರಿ ಸ್ವಾಮಿಗಳವರು ಶಿಷ್ಯಾನುಗ್ರಹಾರ್ಥ ಈಗ ದೇಶಾಟನ ಮಾಡುತಲಿರುವ ಅಂಶವು ಪ್ರಸಿದ್ಧವಾಗಿದೆಯಷ್ಟೆ. ಶ್ರೀ ಸ್ವಾಮಿಗಳವರು ಈಚೆಗೊಂದು ಪ್ರಕರಣದಲ್ಲಿ ತಮ್ಮ ಅನುಗ್ರಹ ಪಾತ್ರರಾದ ಶಿಷ್ಯಕೋಟಿಗೆ ಪಠಿಸಿದ ಜ್ಞಾನೋಪದೇಶವು ಸರ್ವೋಪನಿಷದರ್ಥಬೋಧಕವಾದುದಾಗಿಯೂ, ಜ್ಞಾನಪ್ರದವಾದುದಾಗಿಯೂ, ಇದ್ದುದರಿಂದ, ಶ್ರೀಸ್ವಾಮಿಗಳವರ ದಿವ್ಯಸೂಕ್ತಿಗಳನ್ನು ಇದರಡಿ ಸಂಗ್ರಹಿಸಿ ಪ್ರಕಟಿಸುತ್ತೇವೆ. ಅದು ವೇನೆಂದರೆ.—ಸರ್ವೈಕ್ಯಸ್ವರೂಪರಾದ ಬ್ರಹ್ಮಾ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳಿರುವಂತೆಯೂ, ಸಾತ್ವಿಕ, ರಾಜಸ, ತಾಮಸಗಳೆಂಬ ಗುಣತ್ರಯಗಳೂ, ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿಗಳೆಂಬ ತ್ರೇತಾಗ್ನಿಗಳೂ, ಗಂಗಾ, ಯಮುನಾ, ಸರಸ್ವತೀ ಎಂಬ ಮೂರು ಪುಣ್ಯ ನದಿಗಳೂ ನೆಲೆಗೊಂಡಿರುವಂತೆಯೂ, ಆತ್ಮೋತ್ಕರ್ಷಾರ್ಥ ಪ್ರತಿಪಾದ್ಯನಿಗೂ ಮೂರು ವಿಷಯಗಳು ಅಪೇಕ್ಷಿತಗಳಾಗಿರುತಿವೆ. ಕೇವಲಾಪೇಕ್ಷಿತಗಳಾದ ಈ ಮೂರು ವಿಷಯಗಳು ಬಹಳ ದುರ್ಲಭಗಳಾಗಿಯೂ, ಪಡೆಯಲು ಕಷ್ಟಸಾಧ್ಯವಾದವಾಗಿಯೂ, ಪರಂತು ಸುಕೃತಶೇಷದಿಂ ಲಭಿಸತಕ್ಕವಾಗಿಯೂ ಇರುತಿವೆ ಅವು ಯಾವವೆಂದರೆ ಮೊದಲನೆಯದು—ಮಾನವಜನ್ಮವು, ಜೀವನ್ಮುಕ್ತಿಯಲ್ಲಪೇಕ್ಷೆಯು, ಆತ್ಮಸ್ವರೂಪ ವಿವೇಚಕನಾದ ಸದ್ಗುರುಕಟಾಕ್ಷವು. ಪೂರ್ವಜನ್ಮಕೃತ ಪುಣ್ಯ ವಿಶೇಷದಿಂದಲೇ ಈ ಭೂಮಂಡಲದಲ್ಲಿ ಮಾನವ ಜನ್ಮವೆಂಬುವದು ಸಿದ್ಧಿಸಬೇಕಾದುದಾಗಿರುತಿದೆ. ತಥಾಪಿ ಜಗದ್ಸ್ವರೂಪವನ್ನರಿಯಲಿಕ್ಕೆ ಶಕ್ತವಾದ ಮೇಧಾ ಬುದ್ಧಿ ಶಕ್ತಿಯುಕ್ತವಾದ ಪುರುಷಜನ್ಮವು ಕೇವಲ ಭಗವತ್ಕೃಪೆಯಿಂದಲೇ ಲಭಿಸಬೇಕಾಗಿರುತಿದೆ. ನಿದ್ರೆ, ಆಹಾರ, ಮೈಥುನಾದಿಗಳ ವಿಷಯದಲ್ಲಿ ಪುರುಷನಿಗೂ ಮೃಗಕ್ಕೂ ವಿಶೇಷ ತಾರತಮ್ಯಗಳೇನೂ ಕಾಣಿಸುವದಿಲ್ಲವು. ಪರಂತು ಪುರುಷನಿಗೆ ಇತರಂಗಳ್ಗಿಂತ ಸದಸದ್ವಿವೇಕ ವಿವೇಚಕತಾಜ್ಞಾನವು ಒಂದು ಅಧಿಕವಾಗಿರುವದರಿಂದಲೇ ಅವನು ಉತ್ಕೃಷ್ಟನೆನಿಸಿಕೊಂಡವನಾಗಿರುತ್ತಾನೆ. ಆತ್ಮಜ್ಞಾನ ಪ್ರಯುಕ್ತವಾದ ಉತ್ತಮ ಪ್ರಯೋಜನಗಳನ್ನೈದಲಿಕ್ಕೆ ಮೇಲೆಕಂಡ ಜ್ಞಾನವು ಮುಖ್ಯವಾದುದಾಗಿರುತಿದೆ. ಅಂತ ಜ್ಞಾನವು ಮೃಗಾದಿಗಳಿಗೆ ದೃಶ್ಯವಾಗಿರುವದರಿಂದ ಆತ್ಮಸಂಬಂಧವಾದ ಪ್ರಯೋಜನವನ್ನೈದುವ ಪ್ರತ್ಯಾಶೆ ಅವುಗಳಿಗೆ ಇಲ್ಲದಿರುತಿದೆ ಮಾನುಷಜನ್ಮವೆಷ್ಟರ ಅನರ್ಘವೆನಿಸಿದ್ದಾಗ್ಯೂ ಕೇವಲ ಮನುಷ್ಯಸಾಮಾನ್ಯನಾಗಿ ಜನಿಸಿ ತನ್ನ ಆಯುಷ್ಯವೆಲ್ಲ ವಿಷಯಾಂತರಗಳಲ್ಲಿ ಕಳೆದು, ಕಡೆಗೆ ಮೃಗಗಳಂತೆಯೇ ಕರ್ಮ ನಿಮಿತ್ತಕವಾದ ಶರೀರವ ತೊರೆಯುವದರಿಂದೇನೂ ಸಾರ್ಥಕವಿಲ್ಲವು, ಪರಂತು ಅವನಿಗೆ ಬಂಧವಿಮೋಚನದೊಳು ನಿಜವಾದ ಆಸಕ್ತಿಯುಂಟಾದ ಹೊರತು ಸದ್ಗತಿಯುಂಟಾಗಲಾರದು. ಜೀವನ್ಮುಕ್ತನಾಗಬೇಕೆಂಬ ಅಭಿಲಾಷೆಯುಳ್ಳ ಪುರುಷನು ಸಂಪೂರ್ಣಾರ್ಹನಾದ ಒಬ್ಬ ಗುರುವಂ ಸಂಪಾದಿಸಿಕೊಳ್ಳುವನಾದರೆ ಆಗ ಅವನ ಉದ್ದೇಶವು ಲಭಿಸುವುದು. ಗುರು ಸಹಾಯವಿಲ್ಲದೆ ಮುಕ್ತಿಯಂ ಪಡೆಯಲಪೇಕ್ಷಿಸುವ ಪುರುಷನು ಸಕಲವಿಧ ದುಃಖಗಳಿಗೂ ಪಾತ್ರನಾಗದೆ ಹೋಗಲಾರನು. ಗುರುವೆನಿಸಿದವನೇ ಸಕಲ ಕಾರ್ಯನಿರ್ವಹಣ ಧುರೀಣನಾದುದರಿಂದ ಅಂತ ಗುರುವಂ ವರಿಸುವಾಗ ಬಹಳ ಜಾಗರೂಕ

ನಾಗಿಯೂ, ಪುರೋದೃಷ್ಟಿಯುಳ್ಳವನಾಗಿಯೂ ಇರಬೇಕು, ಗುರುಗಳಾದವರನಂತವಾಗಿದಾರೆ. ಆದರೆ ಒಬ್ಬ ಸದ್ಗುರುಕೃಪಾಕಟಾಕ್ಷಕ್ಕೆ ಪಾತ್ರನಾದ ಪುರುಷನು, ತನ್ನ ಗುರುವನ್ನಾಶ್ರಯಿಸಿದ ಬಳಿಕ ಶರಣಾಗತವತ್ಸಲನಾದ ಭಗವಂತನಲ್ಲಿ ತಾನು ಎಷ್ಟರ ಭಕ್ತಿ ಗೌರವವುಳ್ಳವನಾಗಿರುವನೊ ಅಷ್ಟರ ಭಕ್ತಿ ಗೌರವಗಳನ್ನು ತನ್ನ ಗುರುವಿನಲ್ಲಿಟ್ಟಿರತಕ್ಕದ್ದು. ಭಗವಂತನು ಅದೃಶ್ಯನು, ಪರಂತು ಆಚಾರ್ಯನು ದೃಶ್ಯನು. ಈಶ್ವರನು ನಿಸ್ಪೃಹನು, ಗುರುವು ಅಭಿಮಾನವುಳ್ಳವನು. ಆದಕಾರಣ ನ್ಯಾಯವಾಗಿ ಈಶ್ವರನಲ್ಲಿರಬೇಕಾದ ಭಕ್ತಿಗಿಂತಲೂ ಆಚಾರ್ಯನಲ್ಲಿ ವಿಶೇಷ ಭಕ್ತಿ ಇಡಬೇಕಾದುದು ಅವಶ್ಯಕವಾಗಿರುತ್ತದೆ, ಏತಕ್ಕೆಂದರೆ, ಭಗವದಪರಾಧಕ್ಕಿಂತಲೂ ಆಚಾರ್ಯಾಪರಾಧವು ಬಲಿಷ್ಟವಾದುದಾಗಿಯೂ, ಪ್ರಬಲಾನರ್ಥಕಾರಿಯಾದುದಾಗಿಯೂ ಇರುವುದು. ಭಗವದಾಗ್ರಹ ಪ್ರಾಪ್ತವಾದಾಗ ಆಚಾರ್ಯನು ಅತ್ಯಂತರಕ್ಷಣಾರ್ಥ ಮಧ್ಯವರ್ತಿಯಾಗಿದ್ದು, ತನ್ನ ಶಿಷ್ಯನು ಕಾಪಾಡುವನು. ಆದರೆ ಗುರುಕಟಾಕ್ಷವು ಕಡಿಮೆಯಾಗಿ ಆತನ ಆಗ್ರಹಕ್ಕೆ ಪಾತ್ರನಾದಾಗ ಈಶ್ವರನು ರಕ್ಷಕನಾಗಲಾರನು. ಇದಲ್ಲದೆ ಶಿಷ್ಯನು, ಭಸ್ಮಾಸುರನಂತೆ, ಗುರು ಪ್ರಾಣಾಪಹಾರಕನಾಗಿರಕೂಡದು, ಅದು ಹ್ಯಾಗೆಂದರೆ:—ಹಿಂದೊಂದು ಕಾಲದಲ್ಲಿ ಭಸ್ಮಾಸುರನೆಂಬ ಅಸುರನೊಬ್ಬನು ಶಿವಭಕ್ತನೆನಿಸಿ ಆತನಂ ಕುರಿತು ಘೋರತರವಾದ ತಪವಂಗೈಯಲು ಆತನು ಪ್ರಸನ್ನನಾಗಿ ಅವನ ಅಭೀಷ್ಟವಂ ಕೇಳಲು, ಆಗ ಆ ಅಸುರನು ತನ್ನ ತಮೋಗುಣ ಪ್ರಾಚುರ್ಯದಿಂದ ಬೇರೆ ವರಗಳನ್ನಾಶಿಸದೆ, ತಾನು ಯಾವ ಪದಾರ್ಥದ ಮೇಲೆ ಕೈಯಿಟ್ಟಾಗ್ಯೂ ಅದು ತತ್ಕ್ಷಣದಲ್ಲಿಯೇ ಭಸ್ಮವಾಗುವಂತೆ ಒಂದು ವರವಂ ಕೃಪೆಗೈಯಬೇಕೆಂದು ಪ್ರಾರ್ಥಿಸಿದನು. ಆಗ ಈಶ್ವರನು ಸತ್ಯಸಂಕಲ್ಪನಾದುದರಿಂದ ಅವನ ಕೋರಿಕೆಯಂತೆ ವರವಂ ಕೊಟ್ಟನು. ತರುವಾಯ ಭಸ್ಮಾಸುರನು ಈಶ್ವರ ಕೃಪಾಲಬ್ಧವಾದ ವರವಂ ಪರೀಕ್ಷಿಸಿ ನೋಡಲಿಕ್ಕೆ ಯೋಗ್ಯವಾದ ಬೇರೆಯೊಂದು ಪದಾರ್ಥವು ದೊರಕದೆ, ಈಶ್ವರನಲ್ಲಿಯೇ ಅದಂ ಪರೀಕ್ಷಿಸಲೆತ್ನಿಸಿದನು. ಈ ಸಂದರ್ಭದಲ್ಲಿ ಸ್ಥಿತಿಕರ್ತನಾದ ಶ್ರೀಮಹಾವಿಷ್ಣುವು ಜಗನ್ಮೋಹನಾವತಾರಮಂ ಕೈಕೊಂಡು ಭಸ್ಮಾಸುರನ ಬಳಿ ಬರಲು, ಆಸರ್ವಾಂಗಳಾ ಕೃತಿಯಂ ಕಂಡು ಅವನು ಮೋಹಪರವಶನಾಗಿ, ಆಲಿಂಗನವಂ ಮಾಡಿಕೊಳ್ಳಲಿಕ್ಕೆ ಹೋಗುವಲ್ಲಿ ಅದು ಸಂಧ್ಯಾಕಾಲವಾಗಿದ್ದುದರಿಂದ, ನಿತ್ಯಕರ್ಮವನ್ನೀಡೇರಿಸಿಕೊಂಡು ಬಂದರೆ ತಾನು ಇಷ್ಟಾನುಸಾರ ವಶ್ಯಳಾಗುವಂತೆ ಅಸುರನಿಗೆ ಜಗನ್ಮೋಹಿನಿಯು ಹೇಳಿದಳು. ಆ ಮೋಹನಾಂಗಿಯ ವ್ಯಾಮೋಹದಿಂದ ಮಗ್ನನಾಗಿ ಉತ್ತರಕ್ಷಣದೊಳು ಸಂಭವಿಸಬಹುದಾದ ತನ್ನ ಪರಿಣಾಮವು ಸಹ ಚಿಂತಿಸದೆ, ಅಸುರನು ನಿತ್ಯಕರ್ಮವಂ ಮಾಡಲುಪಕ್ರಮಿಸಿ, ಜಪಾಂಗವಾದ ಅಂಗನ್ಯಾಸ ಕರನ್ಯಾಸವು ಮಾಡುವಲ್ಲಿ ತನ್ನ ತಲೆಯಮೇಲೆ ಕೈಯನ್ನಿಡಲು ಕೂಡಲೆ ಸ್ವತಃ ಭಸ್ಮವಾಗಿ ಹೋದನು. ಗುರುವೂ ಶಿಷ್ಯನೂ ಪರಸ್ಪರ ಗುಣಪರಿಶೀಲನವು ಮಾಡಬೇಕು. ಯೋಗ್ಯನಾದ ಗುರುವು ಲಭಿಸಿದಬಳಿಕ ಆತನಲ್ಲಿ ಶಿಷ್ಯನು ಕೇವಲಸ್ನಿಗ್ಧನಾಗಿಯೂ, ಭಕ್ತಿ ಯುಕ್ತನಾಗಿಯೂ, ನಮ್ರನಾಗಿಯೂ, ವರ್ತಿಸತಕ್ಕದ್ದು. ಇದು ಹಾಗಿರಲಿ, ಮೋಕ್ಷ ಮಾರ್ಗಕ್ಕೆ ಪ್ರಥಮದಲ್ಲಿ ನಾಲ್ವರು ದ್ವಾರಪಾಲಕರೇರ್ಪಟ್ಟಿದಾರೆ. ಇವರು ವಶ್ಯರಾಗಿ, ಆ ಮಹಾಮಾರ್ಗದ್ವಾರದ ಕವಾಟವಂ ತೆರವು ಬಿಟ್ಟಹೊರತು ಒಳಗೆ ಪ್ರವೇಶಿಸಲಿಕ್ಕೆ ಎಂತವನಿಗೂ ಸಾಧ್ಯವಾಗಲಾರದು. ಅವರ್ಯಾರೆಂದರೆ—ಶಮ, ವಿಚಾರ, ಸಂತೋಷ, ಸಾಧುಸಂಗಮಗಳೆಂಬವರು. ಅಂದರೆ ಮನೋನಿಶ್ಚಲತೆ, ಆತ್ಮವಿಚಾರ, ಮನೋಲ್ಲಾಸ, ಸಜ್ಜನಸಹವಾಸವು. ಮನೋನಿಶ್ಚಲತೆಯೆಂಬುದು ಆತ್ಮಜ್ಞಾನ ಸಂಪಾದನಕ್ಕೆ ಪೂರ್ವಾವಸ್ಥೆಯಾಗಿರುತ್ತದೆ. ಈ ಪ್ರಾಪಂಚಿಕಗಳಾದ ಸುಖದುಃಖಗಳಿಂದ ಬಾಧಿತವಾದ ಮನಸ್ಸುಳ್ಳವನಿಗೆ ಆತ್ಮಜ್ಞಾನವು ಸುಲಭವಾಗಿ ಲಭಿಸಲಾರದು. ಮೊದಲು ಸತ್ಸಂಗತ್ವವೂ, ಅನಂತರ ನಿಸ್ಸಂಗತ್ವವೂ, ಬಳಿಕ ನಿರ್ಮೋಹತ್ವವೂ, ತರುವಾಯ ನಿಶ್ಚಲತತ್ವವೂ, ಕಡೆಗೆ ಜೀವನ್ಮುಕ್ತಿಯೂ ಉಂಟಾಗುವದೆಂದು ಶ್ರೀ ಆದಿ ಶಂಕರಾಚಾರ್ಯರವರು ಆಜ್ಞಾಪಿಸಿರುತ್ತಾರೆ. ಆದಕಾರಣ ಎಲ್ಲದಕ್ಕಿಂತಲೂ ಮೊದಲು ಗುರುಭಕ್ತಿಯೂ, ಆತ್ಮಸ್ವರೂಪಜ್ಞಾನ ಸಂಪಾದನಾಭಿಲಾಷೆಯೂ ಉಂಟಾದರೆ ಸ್ವತಏವ ಆತ್ಮಜ್ಞಾನವು ಲಭಿಸದೆ ಹೋಗುವದಿಲ್ಲವು. ಮನುಷ್ಯನಿಗೆ ಅಪೇಕ್ಷಿತ ವಿಷಯಗಳು ಕೇವಲ ಅಲ್ಪವಾಗಿರುತ್ತವೆ. ಅವನಿಗೆ ಬೇಕಾಗಿರುವವೆಲ್ಲವು ಘೃತಮಿಶ್ರವಾದ ಪರಿಮಿತಾನ್ನವು, ಶರೀರಾಚ್ಛಾದನಾರ್ಥ ವಸ್ತ್ರ, ಈ ಎರಡು ವಿನಾ ಬೇರೆ ಏನೂ ಬೇಕಾಗಿರುವದಿಲ್ಲವು. ಏತದರ್ಥ ಮಾಡತಕ್ಕ ಪ್ರಯತ್ನ ವಿನಾ ಮಿಕ್ಕವೆಲ್ಲವು ಭೋಗೇಚ್ಛೆಯಿಂದ ನಡೆಸಲ್ಪಡತಕ್ಕವಾಗಿರುತ್ತವೆ. ಭೋಗಾರ್ಥವಾಗಿ ವಿನಿಯೋಗಿಸಲ್ಪಡುವ ಕಾಲವೆಲ್ಲವು ದುರ್ವಿನಿಯೋಗಗೊಳಿಸಲ್ಪಟ್ಟಂತೆಯೇ ಭಾವಿಸತಕ್ಕದ್ದು. ಯಾರ ಸಹಾಯವನ್ನೂ ಅಪೇಕ್ಷಿಸದಿರುವಂತ ಪುರುಷನೇ ಪ್ರಬಲನೆಂದು ಎಣಿಸಬೇಕು. ಆತ್ಮಸ್ವರೂಪವನ್ನರಿಯಬೇಕೆಂಬ ಕುತೂಹಲವುಳ್ಳ ಪುರುಷನು ಜನಪದದಲ್ಲಿ ವಾಸ ಮಾಡಬೇಕೆಂಬ ಅಪೇಕ್ಷೆಯನ್ನೂ ವಿಷಯಾಸಕ್ತಿಯನ್ನೂ ತೊರೆದು ನಿರ್ಜನಪ್ರದೇಶದಲ್ಲಿ ಕಾಮಕ್ರೋಧಾದಿ ಅರಿಷಡ್ವರ್ಗಗಳಂ ಜಯಿಸಿ ಏಕಾಂಗಿಯಾಗಿ ಆತ್ಮವಿಚಾರವಂ ನಡೆಸುತ್ತ ಗುರು ಕಟಾಕ್ಷದಿಂದ ಸ್ವಸ್ವರೂಪಜ್ಞಾನವಂ ಸಂಪಾದಿಸಬೇಕು.

(ಸಶೇಷ)

Occasional Notes.
ನೈಮಿತ್ತಿಕ ವಿಷಯನ್ಯಾಸ.

ಶ್ರೀಮನ್ಮಹಾರಾಜ್ಞೀ ಇಂಡಿಯಾಚಕ್ರವರ್ತಿನೀಯವರ ವರ್ಷ ವರ್ಧಂತಿ ಉತ್ಸವವು ಇಂಡ್ಯ ದೇಶದೊಳು ಈ ತಿಂಗಳ ೨೬ನೇ ತಾರೀಖ್ ಶನಿವಾರದಿನ ಆಚರಿಸಲ್ಪಡತಕ್ಕದ್ದೆಂದು ಇಂಡಿಯಾ ಗವರ್ನಮೆಂಟಿನ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ.

ಕಳೆದ ಮಾರ್ಚ ೩೧ನೇ ತಾರೀಖ್ ವರೆಗೆ ಇಂಡಿಯಾ ಸರ್ಕಾರಕ್ಕೆ ಇಂಗ್ಲಾಂಡ್ ರಾಜ್ಯದಲ್ಲಿ ಎಲ್ಲನ್ನು ಸೇರಿ ೧೧,೮೧,೧೩,೭೫೦ ಪೌಂಡುಗಳ ಸಾಲವಿರುವಂತೆಯೂ, ಇದಕ್ಕಾಗಿ ಕಳೆದ ವರ್ಷದಾಖೆಯಲ್ಲಿ ೧೪,೯೯,೯೦೭ ಪೌಂಡುಗಳು ಬಡ್ಡಿ ಕೊಟ್ಟಿರುವಂತೆಯೂ ತಿಳಿಯಬರುತ್ತದೆ.

ರಷಿಯಾ ಚಕ್ರವರ್ತಿಯವರು ಅಂತರವಾದ ದೈವಭಕ್ತಿ ಗುರುಭಕ್ತಿ ಯುಳ್ಳವರಾಗಿ, ಸರ್ಕಾರ ಬದಲತಕ್ಕೆ ಸಂಬಂಧಪಟ್ಟ ಪ್ರತಿಯೊಂದು ನೂತನ ಕಾರ್ಯವನ್ನೂ ದೇವತಾ ಪ್ರಾರ್ಥನಾಪೂರ್ವಕವಾಗಿ ಮಾಡುತ್ತಾರೆಂದು ಇಂಗ್ಲಿಷ ಪತ್ರಿಕೆಗಳು ತಿಳಿಸುತಿವೆ.

ಇಂಡ್ಯ ದೇಶದೊಳು ಯಾವ ಯಾವ ಭಾಗದಲ್ಲಿ ಯಾವಯಾವ ಲೋಹಗಳು ಸಿಕ್ಕಬಹುದೆಂದು ಶೋಧಿಸಿ ನೋಡುವದಕ್ಕಾಗಿ, ಇಂಗ್ಲಾಂಡಿನಲ್ಲಿರುವ ಸದರೀ ಶಾಸ್ತ್ರದೊಳು ಪ್ರವೀಣರಾದವರು ಕೆಲವರನ್ನು ಈ ದೇಶಕ್ಕೆ ಕಳುಹಿಸತಕ್ಕ ಬಗ್ಗೆ ಏರ್ಪಾಡುಗಳು ನಡಿಸಲ್ಪಡುತಲಿರುವಂತೆ ತಿಳಿಯಬರುತ್ತದೆ.

ಕಳೆದ ಸೋಮವಾರದ ದಿನ ವಿಳಪುರದಲ್ಲಿ ಬಲವಾದ ಬಿರುಗಾಳಿ ಮಳೆ ಹೊಡೆದು ಅಲ್ಲಿನ ಸ್ಟೇಷನಬಳಿ ರಸ್ತೆಯಲ್ಲಿ ನಿಂತಿರ್ದ ಗಾಡಿಗಳು ಬಹು ದೂರ ಹೊಡೆಮಕೊಂಡು ಹೋದವಲ್ಲದೆ ಕೆಲವು ಗಾಡಿಗಳು ಪನರುಟ್ಟಿ ಸ್ಟೇಶನಿಗೆ ಹೋಗಿ ಸೇರಿದವು. ಅವೆಲ್ಲವು ಮೇಲಿನಿಂದ ಬಂದ ಮೆಯಿಲ್ ಟ್ರೇಯಿನಿಗೆ ಸೇರಿಸಿ ವಿಳಪುರಕ್ಕೆ ಮರಳಿ ತರಲ್ಪಟ್ಟವು.

ಬಾಡಿಗೆಗೆ ಕೊಟ್ಟಿರುವ ಒಂದು ಮನೆಯ ಮಾಲೀಕನು, ಇನ್ಕಂಟ್ಯಾಕ್ಸ್ ಆಕ್ಟನ್ನನುಸರಿಸಿ ಸದರೀ ಮನೆಯಿಂದ ತನಗೆ ಬರುವ ಬಾಡಿಗೆಯನ್ನು ಅಂದಾಜ್ ಮಾಡುವಲ್ಲಿ, ಅಂತ ಮನೆಯ ಸ್ವಂತಗಾರನಾಗಿ ತಾನು ಕೊಡಬೇಕಾದ ಮುನ್ಸಿಪಾಲಿ ಅಥವಾ ಇತರ ತೆರಿಗೆಗಳನ್ನು ಬಾಡಿಗೆ ಮೊಬಲಗಿನಿಂದ ವಜಾ ಮಾಡುವದಕ್ಕೆ ಅವಕಾಶ ಕೊಡತಕ್ಕದ್ದೆಂದು ಇಂಡ್ಯ ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ.

ಇಂಗ್ಲಂಡ್ ರಾಜ್ಯದ ಪ್ರಧಾನ ಮಂತ್ರಿಯವರಾಗಿದ್ದು ಈಚೆಗೆ ಕೆಲವು ತಿಂಗಳ ಹಿಂದೆ ತಮ್ಮ ಅಧಿಕಾರಕ್ಕೆ ರಾಜೀನಾಮೆ ಕೊಟ್ಟು ನಿವೃತ್ತಿ ಸುಖವಂ ಪಡೆದಿರುವ ಮೆ॥ ಗ್ಲೇಡಸ್ಟನ್ ಸಾಹೇಬರವರು ಇತರ ವ್ಯಾಪಾರಗಳನ್ನೆಲ್ಲ ತೊರೆದು ಇಂಡ್ಯದೇಶಕ್ಕೆ ಬಂದು ಕಾಶೀ ಕ್ಷೇತ್ರದಲ್ಲಿ ಯಾರಾದರೊಬ್ಬ ಸನ್ಯಾಸಿಯ ಸೇವಾವೃತ್ತಿಯನ್ನವಲಂಬಿಸಿರುವದುಚಿತವೆಂದು ಶ್ರದ್ಧಾಳುವಾದ ಒಬ್ಬ ವೃತ್ತಾಂತ ಪತ್ರಿಕಾ ಲೇಖಕನು ಸೂಚಿಸುತ್ತಾನೆ.

ದಕ್ಷಿಣ ಇಂಡಿಯಾ ರೆಯಿಲಿ ೩ನೇ ತರಗತಿ ಗಾಡಿಗಳಲ್ಲಿ ಒಂದು ಪಕ್ಕದಲ್ಲಿ ನಾಲ್ವರಿಗೆ ಅಧಿಕವಾಗಿ ಕುಳಿತುಕೊಳ್ಳಕೂಡದೆಂಬ ನಿಬಂಧನೆಯು ಈಗ ಜಾರಿಯೊಳಿರುತ್ತದಷ್ಟೆ. ಮುಂದೆ ಒಂದು ಪಕ್ಕದಲ್ಲಿ ೫ ಜನ, ಅಂದರೆ, ಒಂದು ಕಂಪಾರ್ಟಮೆಂಟಿನಲ್ಲಿ ೧೦ ಜನ ಕುಳಿತುಕೊಳ್ಳುವಂತೆ ನಿಬಂಧನೆ ಮಾಡಬೇಕೆಂದು ಸದರೀ ರೆಯಿಲ್ವೆ ಕಂಪೆನಿಯ ಏಜಂಟರು ಕೊಟ್ಟ ಸಲಹೆಯು ಬೋರ್ಡಿನವರ ಮುಂದಿಡಲ್ಪಟ್ಟಿದೆ. ಇದರವ್ಯವಸಾನವು ಹ್ಯಾಗಾಗುವದೋ ಮುಂದೆ ತಿಳಿಯಬೇಕಾದ್ದಾಗಿದೆ.

ಕರ್ನೂಲ್ ಡಿಸ್ಟ್ರಿಕ್ಟ ಕಲೆಕ್ಟರವರು, ವರ್ಷಾಕಾಲದೊಳು ಡಿಸ್ಟ್ರಿಕ್ಟಿನಮೇಲೆ ಸಂಚಾರ ಮಾಡುವಾಗ ಡಿಸ್ಟ್ರಿಕ್ಟ ಆಫಿಸರ್‌ಗಳ ಮತ್ತು ಕೈಬರ್‌ಗಳ ವಾಸಕ್ಕಾಗಿ ಬಂಗ್ಲೆಗಳನ್ನೂ ಮನೆಗಳನ್ನೂ ಕಟ್ಟಿಸಬೇಕೆಂದು ಕೊಟ್ಟ ಅಭಿಪ್ರಾಯವನ್ನು ಗವರ್ನಮೆಂಟಿನವರು ಚೆನ್ನಾಗಿ ಯೋಚಿಸಿ, ವರ್ಷಾಕಾಲದಲ್ಲಿ ಸಂಚಾರ ಮಾಡುವ ವಾಡಿಕೆಯನ್ನು ತಪ್ಪಿಸಬೇಕೆಂದಲೂ, ವಸತಿಯ ವಿಷಯದಲ್ಲಿ ದಕ್ಷಿಣ ಕನಡಾ ಡಿಸ್ಟ್ರಿಕ್ಟಿನಲ್ಲಿ ಜಾರಿಯೊಳಿರುವ ಪದ್ಧತಿಯನ್ನನುಸರಿಸತಕ್ಕದ್ದೆಂತಲೂ ಹುಕುಂ ಕೊಟ್ಟಿರುತ್ತಾರೆ.

ಈಚೆಗೆ ಬಂಗಾಳೇದೇಶಕ್ಕೆ ಸೇರಿದ ಬರಿಸಾಲ್ ಎಂಬ ಡಿಸ್ಟ್ರಿಕ್ಟಿನಲ್ಲಿ ಒಂದು ಪಾಠಶಾಲೆಯ ಪ್ರಧಮೋಪಾಧ್ಯಾಯನು ಒಂದು ದಿನ ರಾತ್ರಿ ತನ್ನ ಮನೆಯೊಳು ಒಂದು ಕೋಣೆಯಲ್ಲಿ ಮಲಗಿ ನಿದ್ರೆಹೋಗುತ್ತಿರುವಾಗ ಅರ್ಧರಾತ್ರಿ ವೇಳೆಯಲ್ಲಿ ಸಂದಡಿ ಮಾಡದೆ ಯಾರೋ ಸದರೀ ಕೋಣೆಯಲ್ಲಿ ಪ್ರವೇಶಿಸಿ, ಉಪಾಧ್ಯಾಯನ ಕಿವಿಗಳನ್ನು ಕೊಯಿದುಬಿಟ್ಟು ಹೊರಟುಹೋದಂತೆಯೂ, ಈಕೃತ್ಯವು ಸದರೀಯವನ ವಿದ್ಯಾರ್ಥಿಗಳಿಂದ ನಡೆಸಲ್ಪಟ್ಟಿರಬೇಕೆಂಬ ಅನುಮಾನ ಪುಟ್ಟಿರುವಂತೆಯೂ ಒಂದಾನೊಂದು ಪತ್ರಿಕೆಯ ಬಂಗಾಳೀ ಬಾತಮೀದಾರನು ತಿಳಿಸಿರುತ್ತಾನೆ.

ಫ್ರಾನ್ಸ್ ದೇಶದೊಳು ಪೋಸ್ಟ ಕಾರ್ಡಗಳ ವಿಷಯದಲ್ಲಿ ಕೇವಲ ಉಪಯುಕ್ತವಾದ ಒಂದು ನೂತನ ಮಾರ್ಗವಂ ಕ್ಷಿಪ್ರದಲ್ಲಿ ಅವಲಂಬಿಸತಕ್ಕವರಾಗಿರುತ್ತಾರೆ. ಮುಂದೆ ಸದರೀ ಪೋಸ್ಟ ಕಾರ್ಡಗಳು ಚೆಕ ಬುಕ್ಕುಗಳ ನಮೂನೆಯಲ್ಲಿ ಎರಡು ಭಾಗವಾಗಿ ಮಾಡಲ್ಪಟ್ಟು, ಬಲಭಾಗದಲ್ಲಿ ತಮಗೆ ಬೇಕಾದ ವರ್ತಮಾನವಂ ಬರೆದು ಅದರ ಮುಖ್ಯಾಭಿಪ್ರಾಯವಂ ಎಡಭಾಗದಲ್ಲಿ ಗುರ್ತುಮಾಡಿ ದಾಖಲೆಯಬಗ್ಗೆ ಇಟ್ಟುಕೊಂಡು, ಮಧ್ಯೆ ಕತ್ತರಿಸಿ ಬಲಭಾಗವನ್ನು ರವಾನೆ ಮಾಡುವದಕ್ಕೆ ಅನುಕೂಲವಾಗಿರುವಂತೆ ಮಾಡುವರು. ಎಡಭಾಗಕ್ಕೆ ಪೋಸ್ಟಾಫಿಸ್ ಮೊಹರ್ ಸಹ ಹಾಕಿಕೊಡಲ್ಪಡುವುದು. ಈ ನೂತನ ಮಾರ್ಗವು ಸಾಮಾನ್ಯವಾಗಿ ಎಲ್ಲ ದೇಶದೊಳಗೂ ಜಾರಿಯಲ್ಲಿ ತರಲ್ಪಟ್ಟರೆ ಅತ್ಯಂತೋಪಯುಕ್ತವಾಗಿರುವದು.

ಈಚೆಗೆ ವೈಸರಾಯಿಯವರ ಮಂತ್ರಾಲೋಚಕ ಸಭೆ ಸೇರಿದ್ದ ಕಾಲದಲ್ಲಿ, ಇಂಡ್ಯ ಗವರ್ನಮೆಂಟ ಕೌನ್ಸಿಲ್ ಮೆಂಬರಗಳು ರಾಜ್ಯಕಾರ್ಯಾರ್ಥ ಪರಸ್ಥಳಗಳಿಗೆ ಹೋಗಬೇಕಾದ ಸಂದರ್ಭಗಳೊಳು ಮೆಯಿಲ್ ಟ್ರೇಯಿನ್ ಪ್ರಥಮ ತರಗತಿ ಗಾಡಿಗಳೊಳು ಕುಳಿತು ಸಂಚಾರ ಮಾಡತಕ್ಕದ್ದೇ ಹೊರತು ಸ್ಪೆಷಲ್ ಟ್ರೇಯಿನ್ನಲ್ಲಿ ಹೋಗುವದರಿಂದ ಸರ್ಕಾರಕ್ಕೆ ವ್ಯರ್ಥವಾದ ದುಬಾರಿ ಖರ್ಚುಗಳಾಗುತ್ತಿರುವದಾಗಿ ಸದರೀ ವಾಡಿಕೆಯಂ ತಪ್ಪಿಸಬೇಕೆಂದು ಪ್ರಸ್ತಾಪಿಸಲು ಅದರ ಮೇಲೆ ಸದರಿ ಕೌನ್ಸಿಲ್‌ನಲ್ಲಿ ಮಿಲಿಟರಿ ಮೆಂಬರಾಗಿರುವ ಜನರಲ್ ಬ್ರಾಕೆನಬರಿ ಎಂಬವರು, ಮಹಾರಾಜ್ಞೀಯವರ ಪ್ರತಿನಿಧಿಗಳಾಗಿರುವಂತವರು ಸಾಮಾನ್ಯ ಗಾಡಿಗಳಲ್ಲಿ ಸಂಚಾರ ಮಾಡುವದು ರಾಜ್ಞೀಯವರ ಗೌರವಕ್ಕೆ ಲೋಪವನ್ನುಂಟು ಮಾಡುವದಾದುದರಿಂದ ಅದು ಸುತರಾಂ ಉಚಿತವಾಗಿರಲಾರದೆಂದು ಆಕ್ಷೇಪಿಸಿದರು. ಅದರಮೇಲೆ ಹಾಜರಿದ್ದ ಮೆಂಬರಗಳ ಅಭಿಪ್ರಾಯಗಳಂ ಕೇಳಿ ಅವುಗಳ ಲೆಕ್ಕ ಮಾಡುವಲ್ಲಿ ವೈಸರಾಯ್ ಸಾಹೇಬರೊಬ್ಬರು ವಿನಾ ಮಿಕ್ಕವರೆಲ್ಲರು ಒಗ್ಗಟ್ಟಾಗಿ ಸ್ಪೆಷಲ್ ಟ್ರೇಯಿನ್ನಲ್ಲೇ ಸಂಚಾರ ಮಾಡತಕ್ಕದ್ದೆಂದು ಅಭಿಪ್ರಾಯ ಕೊಟ್ಟರಾಗಿ ಈ ಕೌನ್ಸಿಲ್‌ಮೆಂಬರಗಳು ಸ್ಪೆಷಲ್ ಟ್ರೇಯಿನ್ನಲ್ಲಿ ಸಂಚಾರ ಮಾಡುವ ವಾಡಿಕೆಯಂ ತಪ್ಪಿಸಬೇಕೆಂದು ಸ್ಟೇಟ ಸಕ್ರೆಟರಿಯವರಿಗೆ ತಂತಿಮೂಲಕ ತಿಳಿಸಿರುತ್ತಾರೆಂದು ಈಚೆಗೆ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತ್ತದೆ.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು.

ಈ ದೇಶದ ಅಮೃತಮಹಲ್ ಇಲಾಖೆಗೆ ಸೇರಿದ ದನುಗಳನ್ನೂ ಎತ್ತುಗಳನ್ನೂ ಅಪೇಕ್ಷಿಸುವ ಜನರಿಗೆ ನ್ಯಾಯವಾದ ಕ್ರಯಕ್ಕೆ ಕೊಡತಕ್ಕದ್ದೆಂದು ಗವರ್ನಮೆಂಟಿನವರು ಹುಕುಂ ಮಾಡಿರುವಂತೆ ಕೇಳುತ್ತೇವೆ.

ಬರುವ ಬುಧವಾರ ದ್ವಾದಶೀದಿನ ಶ್ರೀಜಗದ್ಗುರು ಶಂಕರ ಭಗವತ್ಪಾದಾಚಾರ್ಯರವರ ಪುಣ್ಯ ದಿನವಾದುದರಿಂದ, ಆಬಗ್ಗೆ ಈವೂರು ನಿವಾಸಿಗಳಾದ ಸ್ಮಾರ್ತ ಮಂಡಲಿಯವರು ಈವೂರು ಸುಲ್ತಾನಪೇಟೆಯಲ್ಲಿರುವ ದೇವಾಲಯದಲ್ಲಿ ಮಾಮೂಲಿ ಅನುಸರಿಸಿ ದೇವತಾರಾಧನೆ ಮೊದಲಾದ ಉತ್ಸವಗಳನ್ನಡಿಸುವರೆಂದು ಕೇಳಲಿಕ್ಕೆ ಬಹಳ ಸಂತೋಷಿಸುತ್ತೇವೆ.

ಇಲ್ಲಿನ ಮಿಲಿಟರಿ ಸ್ಟೇಷನ್ನಲ್ಲಿ ಪ್ರಕಟಿಸಲ್ಪಡುವ ಈವನಿಂಗ್ ಮೆಯಿಲ್ ಪತ್ರಿಕೆಯ ಪ್ರೊಪ್ರೈಟರಮೇಲೆ ಹೈದರಾಬಾದ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ಮಾನನಷ್ಟದ ಮೊಕದ್ದಮೆಯು ತರಲ್ಪಟ್ಟಿರುವದಾಗಿ ಕಳೆದ ವಾರದ ಪತ್ರಿಕೆಯಮೂಲಕ ತಿಳಿಸಿದ್ದೆವಷ್ಟೆ. ಸದರೀ ಮೊಕದ್ದಮೆಯಲ್ಲಿ ಪ್ರತಿವಾದಿಯಾದ ಈವನಿಂಗ್ ಮೆಯಿಲ್ ಪ್ರೊಪ್ರೈಟರವರು ತಮ್ಮ ತಪ್ಪಂ ಒಪ್ಪಿಕೊಂಡು ಅಪರಾಧ ಕ್ಷಮಾಪಣೆಯಂ ಕೇಳಿಕೊಂಡದರಿಂದ ಮೊಕದ್ದಮೆಯು ರಾಜೀಯಾಗಿ ಹೋದಂತೆ ತಿಳಿಯಬರುತ್ತದೆ.

ಕಳೆದವಾರದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ ಕ್ಲೋಸೆಪೇಟೆ ಸಬ್ ಡಿವಿಜನ್ ಆಫಿಸರಾದ ಮೆ॥ ರಾಘವಾಚಾರ್ಲು ಎಂಬವರು ಇಲ್ಲಿನ ರೆಯಿಲ್ ಸ್ಟೇಷನ್ನಲ್ಲಿ ಒಬ್ಬ ಪೋರ್ಟರನ್ನು ಹೊಡೆಯ ಮೇಲೆ ಹೊಡೆದು ಜುಲುಂ ನಡೆಸಲು ಸದರೀ ಯವನಿಗೆ ಮೂರ್ಛೆ ಬಂದು ಎರಡು ಘಂಟೆಯಕಾಲ ದೇಹದಲ್ಲಿ ಪ್ರಜ್ಞೆ ತಪ್ಪಿಹೋಗಿ ತರುವಾಯ ಆಸ್ಪತ್ರಿಗೆ ಸಾಗಿಸಲ್ಪಟ್ಟಂತೆಯೂ, ಈ ಮೊಕದ್ದಮೆಯು ಧಾರ್ವಾಡಿನಲ್ಲಿರುವ ರೆಯಿಲ್ವೆ ಅಧಿಕಾರಿಗಳಿಗೆ ತಂತಿ ಮೂಲಕ ರಿಪೋರ್ಟಾಗಿರುವಂತೆಯೂ ಕೇಳುತ್ತೇವೆ.

ಇಲ್ಲಿನ ಸೆಂಟ್ರಲ್ ಜೆಯಿಲಿನಲ್ಲಿ ಸಜಾ ಅನುಭವಿಸುತಲಿರುವ ಖೈದಿಯರ ಪೈಕಿ ಕೇವಲ ದುರ್ಬಲರಾಗಿರುವಂತವರ ಹೆಸರುಗಳನ್ನೂ ಅವರವರು ಅನುಭವಿಸುತಲಿರುವ ಸಜಾವಿನ ಸ್ವರೂಪವನ್ನೂ ಸಾಧ್ಯವಾದಷ್ಟು ತ್ವರೆಯಲ್ಲಿ ರಿಪೋರ್ಟ ಮಾಡಬೇಕೆಂದು ಗವರ್ನಮೆಂಟಿನವರು ಜೆಯಿಲ್ ಸೂಪರಿಂಟೆಂಡೆಂಟರಿಗೆ ಹುಕುಂ ಕಳುಹಿಸಿರುವತೆಯೂ, ಮೆಡಿಕಲ್ ಸರ್ಟಿಫಿಕೇಟಿನಮೇಲೆ ಸಾಧ್ಯವಾದ ಮಟ್ಟಿಗೆ ಸದರೀ ಜನರನ್ನು ಖುಲಾಸೆ ಮಾಡಬೇಕೆಂದು ಗವರ್ನಮೆಂಟಿನವರು ಉದ್ದೇಶಿಸಿರುವಂತೆಯೂ ಒಳದೇಶದ ಸ್ಪೆಕ್ಟೇಟರ ಪತ್ರಿಕೆ ತಿಳಿಸುತಿದೆ.

ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವ ಕಳೆದ ಬೃಹಸ್ಪತಿವಾರದ ಮೈಸೂರ್ ಗೆಜೆಟಿನ ಮೂಲಕ, ಬಹುಕಾಲದಿಂದಲೂ ಈವೂರಲ್ಲಿ ಸ್ಥಾಪಿತವಾಗಿದ್ದ ವಿದ್ಯಾಭ್ಯಾಸದ ಇಲಾಖೆಯು ಕಾಯಮಾಗಿ ಮೈಸೂರಿಗೆ

ವರ್ಗಮಾಡಲ್ಪಟ್ಟು ಬರುವ ಜೂನ್ ೧ನೇ ತಾರೀಖು ಮೊದಲು ಅಲ್ಲಿ ಕಚ್ಚೇರಿ ಮಾಡಲ್ಪಡುವದೆಂದು ತಿಳಿಯಬರುತಿದೆ. ಈ ಹೊಸ ಏರ್ಪಾಟಿನ ಮೂಲಕ ಸದರೀ ಇಲಾಖಾ ತಾಜೇದಾರಿ ನೌಕರರಿಗೆ ಉಂಟಾಗಬಹುದಾದ ಕಷ್ಟಗಳನ್ನು ಕುರಿತು ಅವರು ಕೇವಲ ಭಗ್ನಮನಸ್ಕರಾಗಿ ತಾವಾತ್ತಾರೆ. ಪ್ರಸಕ್ತ ಬದಲಾವಣೆಗೆ ಗವರ್ನ್‌ಮೆಂಟಿಗೆ ಯೇನು ಆವಶ್ಯಕತೆ ಕಂಡುಬಂತೋ ಅದು ಮಾತ್ರ ಸ್ಪಷ್ಟವಾಗಿ ಹೊರಗೆ ಗಲಿಲ್ಲವು.

ಈಚೆಗೆ ಈ ಪ್ರಾಂತದಲ್ಲಿ ಹತ್ತು ದಿನಗಳ ಮೊದಲು ದಾಕ್ಷಿಣ್ಯಕೀ ಪ್ರತಿದಿನವು ಸಾಯಂಕಾಲದಲ್ಲಿ ಸಿಡಿಲು ಮಿಂಚುಗಳೊಡನೆ ಮೋಡ ಮುಸಿರಿ, ಒಂದೇ ದಿನದಲ್ಲಿ ಕೆರೆಕುಂಟೆಗಳೆಲ್ಲವು ತುಂಬಿಹೋಗಬಹುದೆಂಬ ಪ್ರತ್ಯಾಶೆಗೆ ಅವಕಾಶವುಂಟು ಮಾಡುವಷ್ಟರ ಆಡಂಬರಗಳು ಕಾಣಬರುತಿವೆ, ಪರಂತು ಒಂದು ಹನಿಯಾದರೂ ಬೀಳುವದಿಲ್ಲವು. ಆಸುಪಾಸು ಪ್ರಾಂತಗಳಲ್ಲಿ ಆಗಿಂದಾಗ್ಯೆ ಅಲ್ಪ ಮಳೆ ಬೀಳುವಂತೆ ತಿಳಿಯಬರುತಿದೆ. ಈ ಸ್ಥಳದಲ್ಲಿ ಜಲದೌರ್ಲಭ್ಯದ ಮೂಲಕ ಉಂಟಾಗಿರುವ ಕಷ್ಟವು ಪರಿಹಾರವಾಗುವ ಕಾಲವು ಇನ್ನು ಪ್ರಾಪ್ತವಾಗಲಿಲ್ಲವು. ಇತರ ವಿಷಯಗಳು ಹಿಂದಿನ ವಾರದಲ್ಲಿ ತಿಳಿಸಿದಂತೆಯೇ ಇವೆ.

ಈ ಸಂಸ್ಥಾನದ ಸರಕಾರದ ನೌಕರಿ ಯಲ್ಲಿರುವ ಒಬ್ಬರು, ಈ ಪಟ್ಟಣದ ಉತ್ತರಭಾಗದಲ್ಲಿ ಹೊಸದಾಗಿ ಮನೆ ಕಟ್ಟಿಕೊಳ್ಳುವದಕ್ಕಾಗಿ ಸರಕಾರದಿಂದ ಕೆಲವು ಹಣವನ್ನು ಸಾಲವಾಗಿ ತೆಗೆದುಕೊಂಡು ಪ್ರಕೃತ ಕೆಲಸಕ್ಕೆ ಪ್ರಾರಂಭಿಸಿದ ಮೇಲೆ ಅದು ಸಾಲದೆಹೋಗಿ ಮರಳಿ ಕೆಲವು ಹಣ ಸಾಲ ಕೊಡಬೇಕೆಂದು ಗವರ್ನ್‌ಮೆಂಟನವರನ್ನು ಕೇಳಲಾಗಿ, ಮನೆ ಕಟ್ಟುವದಕ್ಕೆ ಸರಕಾರದವರಿಂದ ಸಾಲದ ಮೂಲಕ ಪಡೆಯಲು ಯೋಗ್ಯನಾದ ದಾಕ್ಷಿಣ್ಯವಿಲ್ಲವು, ಮತ್ತು ಸಿಬ್ಬಂದಿ ಆಫೀಸರನು ತನ್ನ ಅಧಿಕಾರ ಸರಹದ್ದಿನೊಳಗೆ ಸಾಲ ಮಾಡಕೂಡದೆಂದು ಮಾಡಿರುವ ನಿಬಂಧನೆಯನ್ನು ಸಡಿಲ ಪಡಿಸುವದಕ್ಕಾಗುವದಿಲ್ಲವೆಂದೂ ಗವರ್ನ್‌ಮೆಂಟಿನವರು ಜವಾಬ್ ಕೊಟ್ಟರೆಂದು ಬಳಲೇರದ ಸ್ಪೆಕ್ಟೇಟರ್ ಪತ್ರಿಕೆಯು ತಿಳಿಸುತಿದೆ.

THE MONEY MARKET.

Stocks, Shares and Exchange.

ಮದರಾಸ್, ಶನಿವಾರ, ತಾರೀಖು ೧೨ನೇ ಮೇ 1894

ನೇಕಡ ೪ರೂ. ಬಾಬತು ಇಂಡ್ಯಾಗವರ್ನ್‌ಮೆಂಟ್ ಪತ್ರಗಳ 102–8–0 ರೂ. ಗಳಿಂದ 103–8–0 ರೂ. ವರೆಗೆ

ನೇಕಡ ಮೂರುವರೆ ರೂ. ಬಾಬತು, ಗವರ್ನ್‌ಮೆಂಟ್ ಪತ್ರಗಳು, 100–2–0 ರೂ.ಗಳಿಂದ 101–0–0 ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 989–0–0ರೂ ಗಳಿಂದ 995–0–0 ವರೆಗೆ

ಕಮರ್ಷಿಯಲ್ ಮ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100ರೂ.) ಬಾಬತು 150–0–0ರೂ ಗಳಿಂದ 155–0–0 ರೂ ವರೆಗೆ.

ಸವರ್ನಗಳು, ದರ ೧ ಕ್ಕೆ 18–4–0 ರೂಪಾಯಿಗಳಿಂದ 18–11–0 ರೂ. ವರೆಗೆ,

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ದರ್ಶನ ಹುಂಡಿಗಳು :—

6 ತಿಂಗಳ ವಾಯಿದೆಗೆ...1 s 1 1/32d.

4 „ ...1 s. 1 d.

ಕೇಳಿದಾಗ ಕೊಡಲ್ಪಡುವದಕ್ಕೆ . .1 s. 0 15/16d

ನೋಟೀಸ್.

ನಮ್ಮ ಚಂದಾದಾರರಿಗೆ ಇದರಿಂದ ತಿಳಿಸುವ ದೇನೆಂದರೆ—

ಈ ಪತ್ರಿಕೆಯನ್ನು ಸಾಮಾನ್ಯವಾಗಿ ಅನೇಕ ಜನರು ಸಹ ಪಡೆಯುವದಕ್ಕೆ ಅನುಕೂಲವಾಗಿರುವಂತೆ ಅದರ ಚಂದಾದರವನ್ನು ಸ್ವಲ್ಪ ಕಡಮೆ ಮಾಡಬೇಕೆಂದು ಅನೇಕರು ತಿಳಿಸಿದ ಅಭಿಪ್ರಾಯವನ್ನು ನಾವು ಉಚಿತವಾಗಿ ಭಾವಿಸಿ, ೧೮೯೩ನೇ ಇಸವಿ ಜನವರಿ ತಿಂಗಳ ಮೊದಲು, ಚಂದಾ ಹಣವನ್ನು ಆಯಾ ಸಾಲಿ ಮುರುವಿನಲ್ಲೇ, ಅಂದರೆ ಸಾಲ್ ಪ್ರಾರಂಭವಾದ ಒಂದೆರಡು ಅಥವಾ ಮೂರು ತಿಂಗಳೊಳಗಾಗಿ ಪಾವತಿ ಮಾಡುವ ಸ್ಥಳದವರಿಗೆ ಸಾಲೀಯಾನಾ ಮೂರು ರೂಪಾಯಿಗಳಗೂ, ಪರಸ್ಥಳದವರಿಗೆ ಹಾಸಲೆ ದೇಖಿತೆ ನಾಲ್ಕು ರೂಪಾಯಿಗಳಗೂ ಕಮ್ಮಿ ಮಾಡಿ

ದ್ದಾಗ್ಯೂ ಕೆಲವರು ಚಂದಾದಾರರು ಕಳೆದಸಾಲಿ ಬಾಕೀಯನ್ನು ಸಹ ಇದುವರೆಗೆ ಕಳುಹಿಸದೆಯೂ ಆ ಜಗ್ಗ ನಾವು ಆಗಿಂದಾಗ್ಯೆ ಬರೆಯುವ ತಾಗಾದೆ ಕಾಗದಗಳಿಗೆ ಜವಾಬ್ ಕೊಡದೆಯೂ ಇರುತ್ತಾರಾಗಿ, ಅಂತವರೆಲ್ಲರಿಗು ಮುಂದಿನ ತಿಂಗಳಿಂದ ಈ ಪತ್ರಿಕೆ ರವಾನಿಸಲ್ಪಡಲಾರದು.

ಚಾಲತಿ ಸಾಲಿನಲ್ಲಿ ನಾಲ್ಕನೆಯ ತಿಂಗಳು ಕಳೆಯುತ ಬರುತ್ತಿದೆಯಾಗಿ ಇದುವರೆಗೆ ಈ ಸಾಲಿ ಚಂದಾ ಹಣವನ್ನು ಕಳುಹಿಸದೆ ಇರುವಂತವರೆಲ್ಲರು ಮುಂದೆ ಸಾಲೀಯಾನಾ ಮುದ್ರಿತವಾಗಿ ೫ ರೂಪಾಯಿಗಳಂತೆ ಕೊಡಬೇಕಾಗಿರುವದೆಂದು ತಿಳಿಯಬೇಕು.

ತಾ|| ೧೩ನೆ ಮೇ.   ಟಿ. ಸಿ. ಶ್ರೀನಿವಾಸಚಾರ್ಯ,
ಪ್ರೊಪ್ರೈಟರ್, ಕ. ಪ್ರ

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜರವರ ಸರ್ಕಾರದಿಂದ ಕೊಡೋಣವ ಇಸ್ತಿಹಾರನಾಮೆಗಳು.

ಗುರುವಾರ, ತಾ|| ೧೦ ನೇ ಮೇ ೧೮೯೪.

ನಂ||೧೮೩೬–೭ ೧, ೧೨೦೦, ತಾ|| ೨೦ನೇ ಏಪ್ರಿಲ್ ೧೮೯೪.. ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೦ನೇ ಸೆಕ್ಷನ್ ಅನುಸಾರ ಮಾಗಡಿ ತಾಲ್ಲೂಕ್ ಅಮಲ್ದಾರ್ ಕೇಶವಯ್ಯಂಗಾರ್ಯರವರು ಸದರೀ ತಾಲ್ಲೂಕ್ ಸರಹದ್ದಿನಲ್ಲಿರುವ ಕಾಲದೊಳು ಚಲಾಯಿಸತಕ್ಕ ಬಗ್ಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ ೧೮೩೬೭–೮, ೯೦–೯೩ — ಮೆ|| ಸಿ ವಿಜನಾಕ್ಷಯ್ಯನವರು, ಸನ್ ೧೮೯೪ನೇ ಇಸವಿ ಜನವರಿ ೧೯ ನೇ ತಾರೀಖು ಸನ್ ೧೮೯೪-೮ ಸಂಬರ್ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ಮೂರು ತಿಂಗಳ ಪ್ರಿವಿಲೇಜ್ ರಜವನ್ನು ಅದೇ ತಿಂಗಳ ೨೫ ನೇ ತಾರೀಖು ಮೊದಲು ಉಪಯೋಗಿಸಿಕೊಂಡು ೧೮೯೪ನೇ ಇಸವಿ ಏಪ್ರಿಲ್ ೧೦ನೆಯ ತಾರೀಖಿನ ಮಧ್ಯಾಹ್ನದ ಪೂರ್ವ ಕೆಲಸಕ್ಕೆ ವಾಪಸ್ ಬಂದದಾಗಿ, ಸದರೀ ರಜಾ ಪೈಕಿ ಉಳಿದಿರುವಷ್ಟು ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ನಂ||೧೮೩೬೬ ೧ ೪, ೧೧೭–೫೭, ತಾ|| ೨ನೇ ಮೇ ೧೮೯೪ — ಮೈಸೂರು ಸಿಟಿ ಮ್ಯುನಿಸಿಪಲ್ ಇಂಜಿನೀರ್ ಮೆ|| ಆರ್ ವಿ. ಸುಂದರಂ ಅಯ್ಯರವರಿಗೆ ೧೮೯೪ನೇ ಇಸವಿ ಏಪ್ರಿಲ್ ೧೮ನೇ ಮಾರ್ಚಿ ೧೩೫೯ ೧, ೪ ೧೮೯೩–೯೪ನೇ ಸಂಬರ್ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ಪ್ರಿವಿಲೇಜ್ ರಜಾ ಇದರಿಂದ ೭ ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿರುತಿದೆ.

ನಂ|| ೧೮೩೬೧೦–೧, ೪೦೯೦ — ಮೈಸೂರು ಸರ್ವೆ ರೆಗ್ಯುಲೇಷನ್‌ಗಳ ೧೮೯೯ನೇ ಆರ್ಟಿಕಲ್ ಅನುಸಾರ, ಕುಣಿಗಲ್ ತಾಲ್ಲೂಕು ಅಮಲ್ದಾರ್ ಪೋರ್ಷನ್‌ ಅಯ್ಯಂಗಾರ್ಯರವರು ೧೮೯೪ನೇ ಇಸವಿ ಮೇ ೧ನೇ ತಾರೀಖು ಮೊದಲು ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

೨. ಕುಣಿಗಲ್ ತಾಲ್ಲೂಕು ಶಿರಸ್ತೇದಾರರು ಕೃಷ್ಣಪ್ಪನವರು, ಮೇಲ್ಕಂಡ ಅಯ್ಯಂಗಾರ್ಯರವರು ರಜಾಮೇಲೆ ಗೈರುಹಾಜರುವ ಕಾಲದಲ್ಲಿ ಅಥವಾ, ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಕುಣಿಗಲ್ ತಾಲ್ಲೂಕು ಕಚ್ಚೇರಿ ಇನ್‌ಚಾರ್ಜಿನಲ್ಲಿರುವರು.

ನಂ|| ೧೮೩೬೧೩ — ೯ ೪೦೧೯ — ಹಾಸನ ತಾಲ್ಲೂಕು ಅಮಲ್ದಾರ್ ಎ. ಎನ್. ಗೋಪಾಲರಾಯರವರಿಗೆ, ೧೮೯೪ನೇ ಇಸವಿ ಮಾರ್ಚಿ ೨೯, ಮತ್ತು ಏಪ್ರಿಲ್ ೧೧ನೇ ಸಂಬರುಗಳುಳ್ಳ ೧೮೩೬೩–೧. ೩೯೧೦೬ ಮತ್ತು ೧೩೪೧೧೦ –೧. ೩೯೧೦೭ ನೇ ನಂಬರುಗಳ ಬಾಬತು ಇಸ್ತಿಹಾರನಾಮೆಗಳ ಮೂಲಕ ಕೊಡಲ್ಪಟ್ಟ ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಇದರಿಂದ ೧೫ ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿರುತಿದೆ.

ನಂ||೧೮೩೬೧೬–೧, ೪೦೧೭ — ಮೈಸೂರು ಸರ್ವೆ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸಾರ, ಸ್ಪೆಷಲ್ ಡ್ಯೂಟಿಯಮೇಲಿರುವ ಅಮಲ್ದಾರ್ ಕೆ. ಜಿ ರಾಮಣ್ಣನವರು ಸನ್ ೧೮೯೪ನೇ ಇಸವಿ ಏಪ್ರಿಲ್ ೭ನೇ ತಾರೀಖು ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

ನಂ|| ೧೮೩೬೭೭–೧ ೪೦೧೭, ೨೯ನೇ ಮೇ ೧೮೯೪ — ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಬಿ ಎನ್. ಪೂರ್ಣಯ್ಯನವರು, ಸನ್ ೧೮೯೪ ನೇ ಇಸವಿ ಏಪ್ರಿಲ್ ೩೦ ನೇ ತಾರೀಖಿನ ಮಧ್ಯಾಹ್ನಾತ್ಪರ ಸದರೀ ಡಿಸ್ಟ್ರಿಕ್ಟ್ ಮತ್ತು ಟ್ರೆಜರೀ ಚಾರ್ಜನ್ನು ಕೊಟ್ಟು ಮೆ|| ಕೆ. ಸುಬ್ಬಮ್ಮ ದಲ್ಲಿರುವರು ತೆಗದುಕೊಂಡಿರುತ್ತಾರೆ.

ವಿದ್ಯಾಭ್ಯಾಸದ ಇಲಾಖಾ

೫. ನಂ||೬೩, ತಾ||೬ನೇ ಮೇ ೧೮೯೪ — ಸನ್ ೧೮೯೪ನೇ ಇಸವಿ ಮೇ ೧೬ನೇ ತಾರೀಖ್ ಬುಧವಾರದ ಮೊದಲು ೩೧ ನೇ ತಾರೀಖ್ ಬೃಹಸ್ಪತಿವಾರದ ವರೆಗೆ ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿಯವರ ಆಫೀಸ್ ಮುಚ್ಚಲ್ಪಡುವದು. ೧೮೯೪ ನೇ ಇಸವಿ ಜೂನ್ ೧ನೇ ತಾರೀಖಿನಲ್ಲಿ ಮೈಸೂರೊಳು ಮರಳಿ ತೆರೆಯಲ್ಪಡುವದು.

SUMMARY OF NEWS.
ವೃತ್ತಾಂತ ಸಂಗ್ರಹವು.

ಗ್ರೀನ್‌ಲ್ಯಾಂಡ್ ಎಂಬ ದ್ವೀಪದಲ್ಲಿ ಯಾವನೊಬ್ಬ ಹುಡುಗನು ಮೃತಪಟ್ಟರೆ ಆ ಹುಡುಗನ ಕೂಡ ಒಂದು ಜೀವಂತ ನಾಯಿಯನ್ನು ಹೂಳುತ್ತಾರೆ. ಹೀಗೆ ಮಾಡುವದಕ್ಕೆ ಅವರು ಹೇಳುವ ಕಾರಣವೇನಂದರೆ, ಮೃತಪಟ್ಟ ಹುಡುಗನಿಗೆ ಸ್ವರ್ಗಕ್ಕೆ ಹೋಗಲಿಕ್ಕೆ ದಾರಿಯನ್ನು ತೋರಿಸುವದಕ್ಕೆ ಆ ನಾಯಿಯು ಬೇಕಾಗುತದೆ, ನಾಯಿಯ ಹೊರತು ಬೇರೆ ಪ್ರಾಣಿಗೆ ಸ್ವರ್ಗ ದಾರಿಯು ಸಿಕ್ಕುವದಿಲ್ಲವಂತೆ — ಕ. ಪ.

ದಂಡಿನೊಳಗಣ ೨ ಜನ ಯೂರೋಪಿಯನ್ ಗೃಹಸ್ಥರನ್ನು ಕೊಂದಿದ್ದ ಬಿಹಾರಿ ಎಂಬ ಕೆಂಪನೋಲ್ಜರನನ್ನು ಗಲ್ಲಿಗೇರಿಸಿದರು. ಆ ಗೃಹಸ್ಥನು ಸ್ವಜಾತಿಯವರನ್ನು ಕೊಂದದ್ದರಿಂದ ಕೊಲ್ಲಲ್ಪಟ್ಟ ಗೃಹಸ್ಥರು ಕರದಿ ನರ ನಾಯಿಗಳಾಗುವದಕ್ಕೂ, ಸಾಕ್ಷಿಗಾರರು ಸಹಾ ಇಲ್ಲದವರಾಗುವದಕ್ಕೂ, ಮಧ್ಯವಾನ ಮುಂತಾದ ಸವಗಳನ್ನು ತೋರಿಸುವದಕ್ಕೂ, ಜಡ್ಜಿಯವರ ಹಾಗೂ ಜ್ಯೂರಿಯ ಅಭಿಪ್ರಾಯಗಳಲ್ಲಿ ಭೇದ ಹುಟ್ಟುವದಕ್ಕೂ, ದಾರಿ ಇಲ್ಲದಿರುವ ಹುಡುಗರನ್ನು ಹೊಂದಲಿಕ್ಕೂ ಮಾರ್ಗ ಇಲ್ಲ. ಕೊಲ್ಲಲ್ಪಟ್ಟವರು ಏತದ್ದೇಶದವರಾಗಿದ್ದರೆ ಅವರ ಭಯ ಏನಾಗುತ ಯಾವದಾದರೊಂದು ನೆಪವು ಮುಂದೆ ಬಂದು ನಿಲ್ಲುತಿತ್ತು. ಇದರಮೇಲಿಂದ ಇಂಗ್ಲಿಷ್ ನ್ಯಾಯ ನಿರ್ಣಯದ ತಕ್ಕಡಿಯು ಹ್ಯಾಗೆ ಏರಿಳಿಯುತಲಿರುತ್ತದೆಂಬುದು ಸ್ಪಷ್ಟ ಕಾಣುವುದು — ರಾ. ಪ.

ಲಕ್ನೋ ಪಟ್ಟಣದಲ್ಲಿ ಒಬ್ಬ ಗೃಹಸ್ಥನದೊಂದು ತೋಟವಿತ್ತು. ಅದರೊಳಗೆ ಇರುವದೊಂದು ಗಿಡದ ಫಲಗಳನ್ನು ಆ ಗೃಹಸ್ಥನ ಮಕ್ಕಳೂ ತೋಟಿಗನೂ ತಿಂದರು. ಅದರಿಂದ ಅವರ ಕೈಕಾಲುಗಳು ಸೆಳೆಯುತ್ತಿದ್ದು ಬಾಯಿಗೆ ಬುರುಗು ಬಂದು ಸ್ಮೃತಿ ತಪ್ಪಿತು. ಹೀಗಾಗುವದಕ್ಕೆ ಕಾರಣವೇನೆಂಬದಾಗಿ ಆ ತೋಟದೊಡೆಯನು ಬಹಳ ಶೋಧ ಮಾಡಿದಾಗ್ಯೂ ಗೊತ್ತು ಹತ್ತಲಿಲ್ಲ. ಆಮೇಲೆ ಆತನು ಆ ಗಿಡದ ಫಲದ ರಸ ತೆಗೆದು ಅದನ್ನು ಪೃಥಕ್ಕರಣ ಮಾಡಲಾಗ ಅದರಲ್ಲಿ ಸ್ವಲ್ಪ ವಿಷದ ಭಾಗ ದೊರೆಯಿತು. ತರುವಾಯ ಗಿಡದ ಫಲಗಳಲ್ಲಿ ವಿಷ ಉತ್ಪನ್ನವಾಗುವ ಕಾರಣವೇನೆಂಬುದಕ್ಕೆ ಶೋಧ ನಡಿಸಲಾಗಿ ತೋಟಿಗನು ಆ ಗಿಡಕ್ಕೆ ಬಹಳ ಫಲಗಳು ಆಗಬೇಕೆಂಬ ಉದ್ದೇಶದಿಂದ ಅದರ ಬುಡದಲ್ಲಿ ಸತ್ತ ನಾಯಿಯನ್ನು ಹೂಳಿಟ್ಟರೆಂತಲೂ ಆ ನಾಯಿಗೆ ಹುಚ್ಚು ಹಿಡಿದಿತ್ತೆಂತಲೂ ತಿಳಿಯಬಂತು — ವೃತ್ತ್ರಿಕೆ.

ಜೋಧಪುರದಲ್ಲಿ ಕವಿರಾಜ ಮುರಾರಿದಾನಜೀ ಎಂಬವರಿಂದ ಅಲ್ಲಿನ ಮಹಾರಾಜರಿಗೆ "ಜಸವಂತ ಯಶೋಭೂಷಣ" ನಾಮಕ ನವೀನ ಒಂದು ಅಲಂಕಾರ ಗ್ರಂಥ ತಯಾರ್ಮಾಡಲ್ಪಟ್ಟು ಸಮರ್ಪಣೆ ಕೊಡಲ್ಪಟ್ಟಿತು. ಈ ಗ್ರಂಥವನ್ನು ತಯಾರ್ಮಾಡುವದಕ್ಕೆ ಇವರಿಗೆ ೧೫ ವರ್ಷಗಳ ವರೆಗೆ ಶ್ರಮ ಪಡ್ಡಿದ್ದು ಇದನ್ನು ನೋಡಿದ್ದರಿಂದ ಮಹಾರಾಜರಿಗೆ ಅತಿ ಆನಂದಕ್ಕೆ ಪಾರವೇ ದೊರೆಯದೆ, ಅವರು ಆ ಗ್ರಂಥಕಾರರಾದ ಮುರಾರಿದಾನಜೀ ಎಂಬವರಿಗೆ "ಕವಿರಾಜ" ಎಂಬ ಕಿತಾಬನ್ನು ಕೊಟ್ಟರು ಮತ್ತು ೧ ಲಕ್ಷ ರೂಪಾಯಿ ರೊಕ್ಕ, ಅಲಂಕಾರದಿಂದ ಅಲಂಕೃತವಾದ ಒಂದು ಆನೆ, ಒಂದು ಕುದುರೆ, ಇವುಗಳ ಭಂಗಾರದ್ದೊಂದು ಛತ್ರ, ಮುತ್ತಿನ ಕಂಠಿ, ಚಲ್ಲಣ, ಜಾಮಾ (ದೊಡ್ಡ ಅಂಗಿ) ಮುಂಡಾಸ, ಇಜಾರು, ಕಿನಖಾಬಿನ ಅಂಗಿ, ಒಂದು ರತ್ನಖಚಿತವಾದ ಕಠಾರಿ, ಮತ್ತು ಒಂದು ಕಾಶ್ಮೀರಿ ಶಾಲು ವಸ್ತುಗಳನ್ನು ಕೊಟ್ಟದ್ದಲ್ಲದೆ ಆತನು ವಂಶ ಪರಂಪರೆಯಿಂದ ಅನುಭವಿಸುವಂತೆ ಒಂದು ಗ್ರಾಮ ಭಕ್ಷೀಸ ಕೊಟ್ಟರು — ಸ, ವೃ

ADVERTISEMENTS.

Bangalore City Municipality.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೪ನೇ ಇಸವಿ ಮೇ ಮಾಹೆ ೩

ಸಮಸ್ತ ಜನಗಳಿಗೂ ತಿಳುಹಿಸುವದೇನಂದರೆ :—

ಕಟ್ಟಡಗಳು ಮತ್ತು ಜಮೀನುಗಳ ಆಳತೆ.

ಬೆಂಗಳೂರು ಪೇಟೆ ೪ನೇ ಡಿವಿಜನ್ನಲ್ಲಿ, ಕಂದಾಯಗಳು ವಸೂಲಿಸಲು ಅರ್ಹವಾದ ಕಟ್ಟಡಗಳು ಮತ್ತು ಜಮೀನುಗಳ ವ್ಯಾಲ್ಯುಯೇಷನ್, ಆಳತೆ, ಕಂದಾಯ ರಚಿಸುವಿಕೆ ಇವುಗಳು ಪೂರೈಸಿದೆ ಮೇಲೆ ನಮೂದಿಸಿರುವ ವ್ಯಾಲ್ಯುಯೇಷನ್ ಆಳತೆ ಮತ್ತು ರಚಿಯಿಸಿದ ಕಂದಾಯಗಳನ್ನು ತೋರಿಸುವ ಪುಸ್ತಕವನ್ನು ಬೆಂಗಳೂರು ಕೋಟೆ ಸಿಟಿ ಮ್ಯುನಿಸಿಪಲ್ ಆಫೀಸನಲ್ಲಿ (ಭಾನುವಾರ ಮತ್ತು ರಜಾ ದಿನಗಳು ವಿನಾ) ಯಾವ ದಿವಸದಲ್ಲಿಯಾದರೂ ಬೆಳಿಗ್ಗೆ ೧೧ ಘಂಟೆ ಆರಂಭಿಸಿ ಸಾಯಂಕಾಲ ೫ ಘಂಟೆ ವರೆಗೆ ಸಮಸ್ತರೂ ನೋಡಬಹುದು ಮತ್ತು ಮೇಲೆ ನಮೂದಿಸಿರುವ ವ್ಯಾಲ್ಯುಯೇಷನ್ ಆಳತೆ, ಮತ್ತು ರಚಿಯಿಸಿದ ಕಂದಾಯಗಳನ್ನು ಸಿಟಿ ಮ್ಯುನಿಸಿಪಲ್ ಕಮಿಷನರ್ ಪ್ರೆಸಿಡೆಂಟ್ ಸಾಹೇಬರವರು ೧೮೯೪ನೇ ಇಸವಿ ಮೇ ಮಾಹೆ ೩೧ನೇ ತಾರೀಖಿನಲ್ಲಿ ಪುನರ್ವಿಮರ್ಶೆ ಮಾಡುತ್ತಾರೆ ಆದ್ದರಿಂದ ಮೇಲ್ಕಂಡ ವ್ಯಾಲ್ಯುಯೇಷನ್ ಆಳತೆ ಮತ್ತು ಕಂದಾಯಗಳ ವಿಷಯವಾಗಿ ಯಾರಾದರೂ ಆಪೀಲ್ ಇದ್ದರೆ ಅಂತಾ ಅಪ್ಪೀಲ್ ಅರ್ಜಿಗಳನ್ನು ೧೮೯೪ನೇ ಇಸವಿ ಮೇ ಮಾಹೆ ೩೦ನೇ ತಾರೀಖಿನೊಳಗಾಗಿ ಪ್ರೆಸಿಡೆಂಟ್ ಸಾಹೇಬರವರಿಗೆ ತಲುಪುವಹಾಗೆ ಬರಹಮೂಲಕ ಸಿಟಿ ಮ್ಯುನಿಸಿಪಲ್ ಆಫೀಸಿನಲ್ಲಿ ದಾಖಲ್ಮಾಡತಕ್ಕದ್ದಲ್ಲದೆ ಆಪೀಲ್ ಅರ್ಜಿ ಫೈಸಲಾಗುವ ಕಾಲದಲ್ಲಿ ಹಾಜರಿರಬೇಕೆಂಬ ಆಕ್ಷೇಪಣೆಯುಳ್ಳವರು ಮೇಲ್ಕಂಡ ಆಫೀಸಿನಲ್ಲಿ ೧೮೯೪ ನೇ ಇಸವಿ ಮೇ ಮಾಹೆ ೩೧ನೇ ತಾರೀಖು ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ಹಾಜರಿರಬೇಕು.

K. SRINIVASA RAO,
For President.

ಬೆಂಗಳೂರ್ ಸಿಟಿ ಮ್ಯುನಿಸಿಪಾಲಿಟಿ.

ತಾರೀಖ್ ೩೦ ನೇ ಏಪ್ರಿಲ್, ೧೮೯೪,

ಇಷ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ಸಿಟಿ ಮುನಿಸಿಪಾಲಿಟಿನಲ್ಲಿರುವ ಜನಗಳ ಪ್ರಯೋಜನಕ್ಕಾಗಿ ೩ ಜನ ತಯಾರಾದ ಸೂಲಗಿತ್ತಿಯರನ್ನು ನೇಮಿಸಿರುವದರಿಂದ ಅವರ ಉಪಯೋಗವು ಯಾರಿಗೆ ಆವಶ್ಯಕ ವುಂಟೋ ಅಂತವರು ಕೋಟೆ ಬಳಿಯಿರುವ ಆಸ್ಪಿಟಲ್ ಅಸಿಸ್ಟೆಂಟರಿಗಾಗಲಿ, ದೊಡ್ಡಪೇಟೆ ಆಸ್ಪಿಟಲ್ ಅಸಿಸ್ಟೆಂಟರಿಗಾಗಲಿ, ಅಥವಾ ತಾಲ್ಲೂಕ ಕಚ್ಚೇರಿಯಲ್ಲಿರುವ ಇಟನಿರೆಂಟ ವ ಡಿಕಲ್ ಆಫೀಸರವರಿಗಾಗಲಿ ತಿಳಿಸಿದಲ್ಲಿ ಸೂಲಗಿತ್ತಿಯರನ್ನು ಕಳುಹಿಸುತ್ತಾರೆ. ಅವರು ಮಾಡುವ ಕೆಲಸಕ್ಕಾಗಿ ಫೀ ವಗೈರೆ ಕೊಡತಕ್ಕ ಕೆಲಸವಿಲ್ಲವು.

K. SRINIVASA RAO,
For President

ನಮ್ಮಗಳಿಗೆ ಬರತಕ್ಕ ಜಾಡ್ಯಗಳು ಎಂತಾವು.

ರಾಪ್ರದೇಶದ ಕೆಲವರಿಗೆ ನಮ್ಮಗಳಿಗೆ ಬರುವ ಜಾಡ್ಯಗಳು ನಮ್ಮಲ್ಲಿ ಪ್ರಸ್ತಾಪ ಮಾಡುತವೆ. ಸಾಧಾರಣವಾಗಿ ಮನುಷ್ಯಕೋಟಿಗಳಿಗೆ ಎದೆಯಲ್ಲಿ, ಪಕ್ಕೆಗಳಲ್ಲಿ, ಕಾಲುಗಳು ಕಾಣುತವೆ. ಆ ಕಾಲುಗಳಲ್ಲಿ ಜರದು ಸಾಧಾರಣವಾಗಿ ಮಂದವಾಗಿ ವಿಶ್ರಾಂತವಾಗಿ ಬಾಯಲ್ಲಿ ಒಂದು ವಿಧ ವೈಯು, ಇವುಗಳು ಪ್ರಾರಂಭವಾಗುವದಲ್ಲದೆ ಉಂಟಾಗಿರುತವೆ, ಆಗ, ದಂತಗಳಲ್ಲಿ ಮಾಂಸ ಅಂಟಿಕೊಂಡು ಕಟ್ಟಿಕೊಂಡು ಬೇರೆ ಚಿಕ್ಕ ವಿಷಯಗಳಲ್ಲಿ ಆಹಾರವು ಕಮ್ಮಿ, ಗರ್ಭದಲ್ಲಿ ಒಂದು ಬಗೆ ಭಾರವು, ಕೆಲವು ಕಾಲುಗಳಲ್ಲಿ ಮೃತವು, ನರ್ಮದ ಅಸ್ತಿಭಾಗದಲ್ಲಿ ನೋವು, ಬೇಸಗೆಯಲ್ಲಿ ಅತ್ಯುಷ್ಣವು, ಕಣ್ಣುಗಳು ಅಲ್ಪಕ್ಕೆ ಎಳಕೊಂಡು ಇರುವದು, ಕೈ ಕಾಲುಗಳು ಬದಲಾಗುವ ಕೀಲವು. ಮೇಲೆ ಕೆಮ್ಮು ಆರಂಭಿಸಿ ಸ್ವಲ್ಪ ದಿಂಗಳುದರಂತೆ ಆ ಕೆಮ್ಮಿನಿಂದ ಬಾಯಲ್ಲಿ ಸೇರುವನೀರು ಗಲ್ಲದ ಕೆಳಗೆ ಇಳಿಯುವದು. ಇತ್ಯಾದಿ ಕಾರಣಗಳಿಂದ ಬಿಂದ್ವೈಷ್ಟ್ಯ ಕ್ಷಯದೋಷದ ಚಿಹ್ನೆಗಳನ್ನು ತೋರುವದು, ನಿರಾಶ್ರಯವು, ಆಹಾರದಿಂದ ಜಾಡ್ಯಗ್ರಸ್ತನಿಗೆ ಒಂದು ಬಗೆ ಪಿತ್ತದ ರೋಗವು, ಪಿತ್ತದ ಮನೋವ್ಯಾಧಿ, ಕೆಟ್ಟ ವ್ಯಸನವು ಬೆಂತವುಂಟು ಮಾಡುತವೆ. ಈಗ್ಗದರಿಂದ ತಲೆಯಲ್ಲಿ ತೀವ್ರವಾದ ತಿರುಗುವಿಕೆ, ಆಕಸ್ಮಾತ್ತಾಗಿ ನಿಲುವ ಕಾಲದಲ್ಲಿ ಕಾಣುತವೆ. ಆ ಪರಿಮಾಣ ಗರ್ಭದಲ್ಲಿ ರೋಗಗಳು ಬಿಗಿಸಿ, ಮಲಬದ್ಧ ನೋವು, ಕೋಗದ ಚರ್ಮವನ್ನು ಒಣಗಿಸಿ, ಊರ್ಧ್ವಶ್ವಾಸ, ರಕ್ತವನ್ನು ಮುರಿದು, ಶರೀರದಲ್ಲಿ ಬಟ್ಟೆಗೆ ರಕ್ತವು ಓಡದೆ, ಕಣ್ಣುಗಳಲ್ಲಿರುವ ಕಾರಣದಿಂದಾದ ಬಿಳಿಪಸ್ಸಿನ ಮಂಡಿ, ಕಣ್ಣುಗಳಲ್ಲಿ ಹಸರು ಚುಕ್ಕೆಗಳು, ಅಲ್ಪಾಭಿಮಾನವು ಬಿದ್ದು, ಇಲ್ಲದ ಕಿಡಿಮೆಯಾಗಿ, ಅದರಲ್ಲಿ ಮೇಲೆ ಹೇಳಿದ ಬಣ್ಣ, ಸಾಧಾರಣವಾಗಿ ಮೂತ್ರವು ಬಾರದ ಕತೆಯಂತೆ ಆಧಿಗಳು ಇದ್ದು ಮೂತ್ರವನ್ನು ಕಲ್ಲಿನಂಗೆ ಮುಂದೆ ಮಾಡುತವೆ. ಆ ಕಾರಣದಿಂದ ಭುಜಿಸಿದ ಅನ್ನವನ್ನು ಅರಗಿಸದು, ಭುಜಿಸಿದ ಅನ್ನವು ಬಾಯಲ್ಲಿ ಕೆಟ್ಟ ರುಚಿ ಯುಂಟಾಗುವದು, ಮತ್ತು ಎದೆಯಲ್ಲಿ ಆದರು, ಕಣ್ಣು ದೃಷ್ಟಿ ಕಡಮೆ, ಕಣ್ಣುಗಳಲ್ಲಿ ಮಬ್ಬುಗಳು, ವಿಶೇಷವಾಗಿ ಶರೀರದಲ್ಲಿ ಬಲವು ಕಡಿಮೆ ಇತ್ಯಾದಿ ಚಿಹ್ನೆಗಳುಯುಕ್ತವಾಗಿ ಕ್ರಮೇಣ ಕಾಣುತವೆ ಈ ಜಾಡ್ಯದ ಚಿಹ್ನೆಗಳು ಅನೇಕವಿಧವಾಗಿ ಮುಖ್ಯವಾದ ಜನರೋಗಿಗಳಿಗೆ ಪರಿಪರಿವಿಧಗಳಾಗಿ ಕಾಣುತವೆ. ಈ ಜಾಡ್ಯಗಳನ್ನು ವೈದ್ಯಶಾಸ್ತ್ರಗಳು ನಿಶ್ಚಯಕ್ಕೆ ಪರಿಶೋಧಿಸಿ ಮುಂದೆ ತಿಳಿಯದ ಒಂದುವಿಧವಾದ ಜಾಡ್ಯಕ್ಕೆ ಮತ್ತು ಚಿಕಿತ್ಸೆ ಮಾಡದವರು, ಇತ್ಯಾದಿ ಕಾರಣಗಳಿಂದ ಈ ಜಾಡ್ಯಗಳು ಸ್ವಸ್ಥವಾಗದಹಾಗೆ ಇರುತದೆ. ಇತ್ಯಾದಿ ಜಾಡ್ಯಗಳಿಗೆ ಸಮಾಂಗವಾದ ಔಷಧವು ಗರ್ಭದಲ್ಲಿ ಚಿಕಿತ್ಸೆ ಹುಟ್ಟಿದ ಪಕ್ಷದಲ್ಲಿ ಇವುಗಳನ್ನು ಸ್ವಸ್ಥ ಮಾಡುತವೆ ವೈದ್ಯರು ಸಾಧಾರಣವಾಗಿ ಅಜೀರ್ಣವ್ಯಾಧಿಗೆ ತಕ್ಕ ಚಿಕಿತ್ಸೆ ಮಾಡಿದಾಗ್ಯೆ ಮತ್ತೊಂದು ವಿಧವಾದ ಚಿಕಿತ್ಸೆ ಮಾಡುವದರಿಂದ ಈ ಜಾಡ್ಯಗಳು ಸ್ವಸ್ಥವಾಗದೆ ಇರುತದೆ.

ಮುಂದೆ ವಿವರಿಸಿದ ಜಾಡ್ಯಗಳನ್ನು ನಿರ್ಮೂಲ ಮಾಡಿ ಶಾಂತಿ ಮಾಡತಕ್ಕ ಔಷಧವು ತಾಯೊರ್ಗಿಲು ಕಷಾಯವು ಈ ಕಷಾಯವನ್ನು ಕ್ರಮವಾಗಿ ಸೇವನ ಮಾಡುವದರಿಂದ ಸ್ವಾಸ್ಥ್ಯ ಲೋಪಗಳನ್ನು ಯಾವತ್ತು ಮಂತ್ರದಂತೆ ಮಾಯವು ಮಾಡಿ ಶರೀರಕ್ಕೆ ಬಲವನ್ನು ಕೊಟ್ಟು ಅಲ್ಪಾವಿಲ್ಲದಹಾಗೆ ಸ್ವಸ್ಥ ಮಾಡುತದೆ

ತಾಯ ಸೀಗೆಲು ಕಷಾಯ ಔಷಧವು ಕೆಮಿಸ್ಟು ಅಂಡೊ ಕೃಷ್ಣ ಆಸ್ಪತ್ರೆ ಬಜಾರುಗಳಲ್ಲಿ ವಿಕ್ರಯಕ್ಕೆ ಸಿಕ್ಕುತದೆ.

W. D

BANGALORE:—Printed and Published at the KARNATAKA PRESS, No. 40 HOSPITAL Road, CITY.—1894

THE
Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning.

ಸ್ವಕಾಮವಿವರ್ಧನ್ಯವೃತ್ತ್ಯನಗಮಾರ್ಥ ಕರ್ಣಾಟಕಪ್ರಕಾಶನಪರಃ ... ॥

Vol. XXI. BANGALORE:—MONDAY MAY 21, 1894. No. 20.

Select Telegrams

Allahabad, 13th May.—The *Morning Post* says it is believed in official circles at Simla that the Viceroy will resign if the Secretary of State does not support His Excellency's policy of retrenchment.

London 15th May.—Diplomatic relations have been broken off between Brazil and Portugal owing to the latter Power harbouring Admiral D. Gama and other insurgents on board Portuguese warships at Rio.

Simla 15th May.—I am making enquiries about the discussion in the Executive Council on ... the *Moraraj Jose* ... I understand that as the Executive Council's ... always strictly confidential, the statement must be received with extreme caution.

London 16th May.—The National ... Federation ... conference ... at Leeds on the 20th June to consider the attitude of the Liberals regarding the House of Lords.

London 17th May.—A manifesto has been issued by the English ... which declares that the Disestablishment of the Welsh Church would weaken the unity of the Church, ... the poor of the ... rights ... the Church in Wales ... penury and ... unable to worship God. The manifesto urges the clergy and laymen to explain the effects of the Bill to the people, but deprecates any reference being made to it in the pulpit.

At a meeting held at ... Mr. Lloyd George, Member for Carnarvon, and three other Welsh Members ... Government with breaking its pledges by relegating the Welsh Disestablishment Bill to the tenth instead of the second place. A resolution was adopted in favour of an independent attitude henceforth.

THE
Karnataka Prakasika.

MONDAY, MAY 21, 1894

MYSORE *VERSUS* HYDERABAD

Mr. Eardley Norton lately presided at a meeting in Madras, and among other things pointed out to his audience the great difference between the condition of Mysore and Hyderabad. We cannot quite endorse everything that the speaker said, though in the main he was right. There is a striking contrast between these two provinces, and this contrast is growing more apparent every day. In every particular the advantage is on the side of Mysore. It stands out in bold relief to the State governed by His Highness the Nizam. In the first place, and the most important, the finances of this Province are in a flourishing condition. Every year we are told there is a surplus and a substantial one, while in the other State there is not only a deficit but a heavy debt. The Nizam has at different times borrowed large sums from his subjects, and it is supposed that about £10,000,000 are owing. This is an enormous sum, and though the amount may have been overstated, it is very large. It is said that the Government of His Highness does not exactly know how large the debt is. No proper accounts have been kept, so that some of the claims may be fictitious. The interest on this debt is mounting up, so that it is increasing without any more money being borrowed. It seems likely that the creditors will before very long demand their money, and if it is not forthcoming they may appeal to the British Government, and ask it to compel the Hyderabad authorities to pay them. Of course, the people have to pay heavy taxes in the Nizam's dominions, but they get very little in return for their money. It is believed that a very large proportion of the money collected never reaches the treasury. It is swallowed up by those who come between the people and the Government. They become rich while everybody else is growing poorer. The way in which the taxes are collected is very objectionable and oppressive, and a change is urgently required. In one part of the dominion the people pay far more than they do in other parts, and the want of system and uniformity is apparent everywhere. The cries of the ryots cannot be heard at head quarters, and the oppression going on is something fearful to contemplate. When the matter becomes known to the Government and the public at large a change will have to be made; till then, we suppose matters will go on as they do now. Lord Ripon, when he visited Hyderabad told the Nizam to be careful about his finances, if there were not in good order the people would not be happy. But very little attention has been paid to this, although the late Viceroy repeated the advice. It may be that the next time advice will not be given, but the Nizam and his Government will be ordered what to do, and they will have to do it. In the next place the difference between the way justice is administered in the two States is very marked. In Mysore the courts are regularly organised. They begin with the Chief Court, and end with the smallest establishment in a village. There is, probably, a miscarriage of justice sometimes, but this there must be everywhere. Probably Mysore is not worse off in this respect than any other part of the world. That substantial justice is done in this Province there cannot be a doubt, while the same cannot be said of Hyderabad. In some parts of the Hyderabad dominions justice is scarcely known. It is simply a matter of payment. It has to be bought like any other commodity. Then again it may take months for a case to be heard, and there are instances where litigants have had to wait for years before they would obtain decisions. Cases drag on till the people interested become disgusted and do not care how they may be decided. They may have been ruined during the process, and it does not signify in the least what the termination is. We have, among other things, to notice education, and here the contrast between the two States is very striking. In Mysore education has made great progress even in the outlying villages. There are Colleges and Schools, the former in the large towns the latter in the same places and everywhere else. In fact, in some respects education in Mysore compares well with any other part of the country. Large numbers of young men go up for the different tests, and they are as successful in getting through as the same class anywhere else. Then again, the village schools are better organised than they are in other parts of the country, while female education has taken root in the Province. The schools in which the girls read are filled, and in some of them the instruction is of a superior kind. The Maharani's school at Mysore is one of the best in India, and improvements are continually being made. Female education is almost unknown in the Nizam's dominions. These are a few points of contrast between the two States but we could give many more, and the question arises, what ought to be done? Mr. Norton is of opinion that unless the Nizam's Government improves very much the British Government will have to step in and take possession for a time. He thinks that the latter will have to put matters right, and then hand the country back to the Nizam. It is to be hoped matters will not proceed so far as this, but this may happen. The Supreme Government ought not to hesitate to take possession of the administration if it was believed such a step would be for the good of the people. They have to be considered in the first place, and not the rulers. Mysore had the advantage of fifty years of British Rule, and it may become necessary for Hyderabad to have a few years of the same.

A MUNICIPAL ANOMALY
(COMMUNICATED.)

One of the subjects to be laid before the next monthly meeting of the Bangalore City Municipal Board is a "Petition from H. Shan P... dated 19th April 1894 protesting against the grant of the site behind Doddapet Venkatramana Swami Temple and requesting to grant him a portion of the said site." The above petition is apparently a protest against a Resolution of the last meeting of the Board granting the site to Ch... Sastrear.

I do not mean to discuss here the relative claims of the two competitors which is entirely a matter for the Board to decide. But all I wish to know is, if the Dharkhastdars or even the Municipal Commissioners are aware that the President was sanctioned an Endorsement (No 1597, dated 2nd May 1894) declining to remove the Municipal latrine standing on this very site in spite of repeated prayers from the residents of the locality. If the Municipality are in earnest against the removal of the latrine on some grounds of public utility and convenience, which, by the way, are best known only to them less than, why should they play the farce of inviting and considering rival darkhasts for the same site in question? They might at once state in plain words that the site cannot be given out for building purposes as the Municipal latrine erected thereon cannot be removed without inconveniencing the public. But if, on the other hand, the Municipal Board are of opinion that it could be advantageous (as it really is) to give out the site for building purposes, then why not order the removal of the latrine at once?

The site in question is bounded between two fine temples—the Doddapet Venkata ramana Swami temple on one side, and the Tolasi ... on the other,—and adjoins big mansion houses of respectability. And, what more, it is in this part of the City that a good supply of fresh water is available throughout the year. The existence of a Municipal latrine in the midst cannot therefore be felt otherwise than as a nuisance which the Board will do well to remove.

BANGALORE
2... *May* 1894

News and Notes.

The Sultan of Turkey, it is said, purposes visiting England shortly.

Prince Bismarck is the possessor of 483 crosses and decorations. These, placed side by side cover a space of twenty one feet by several inches deep.

A question which is agitating Radical circles is—"Why was not the Prince of Wales called upon to answer a charge of trying to enter a Moving Train on the occasion when His Royal Highness nearly met with an accident on the Continent the other day?"

A Japanese Contemporary says—A man in K... Chiba-Ken, recently sold his wife to a neighbour and gave him the following receipt:—"Received the sum of one yen and fifty sen for the sale of my wife to Mr. ..., and I hereby promise not to call her my wife hereafter."

Orders may shortly be expected on the question of the defacement of postage labels. It is believed that the use of rubber-stamps of all kinds will be prohibited, but that perforations and ink lines will be allowed as usual. Ample notice will however, be given to commercial firms before rubber-stamps are prohibited.

When commanding the Galatea, some years ago, the Duke of Edinburgh called in plain clothes on an Admiral, who rebuked him with the stiff greeting,—"I should have been very happy to receive your Royal Highness on any other occasion, but at this moment I am expecting a visit from the Captain of the Galatea." The Duke went back to his ship, and put on his uniform.

A local correspondent of the *Behar Herald* (Bankipur, writes to that paper to say that Mr. Bell City Magistrate of Patna, is a great admirer of the Hindu religion and institutions. We are told by the correspondent that the Magistrate daily bathes in the sacred waters of the Ganges and takes the *prasad* of the Goddess Kali of Hirmandirkgali. Recently he replaced the old bell of the temple by a larger one.

Missionary activity has met with an unexpected check at Lahore. Some missionaries had been making desperate efforts to convert two Hindu students. This coming to the knowledge of the local Hindu community they held a public meeting at which the following resolution was passed without a single dissentient voice:—"That high class Hindus shall not permit their sons to study in mission schools and colleges at Lahore or any other part of the province in future." This is tit for tat. So writes the *Hindu Patriot*.

An Association has been started in the Madras presidency the object of which is to support and enforce the ancient institutions of India, chiefly the caste and asrama system; to throw open the Hindu spiritual faith, science, and knowledge, to all deserving persons without distinction of caste, sex or creed, and to raise the condition of India's fallen children, pro-

cipally that of the pariah Persons, of whatever caste, sex or creed, sympathising with the movement, are requested to communicate their name and address and the particular branch or branches with which they desire to connect themselves. No fee of any kind is charged.

H H The Amir has, according to news from Kabul, promised to pay Rs 1,000 per month to Muhammad Ibrahim Khan, son of the late Amir Sher Ali, who is now at Hassan Abdul, getting Rs 1,000 per month from the British Government His name has been registered as a salaried servant of the Amir of Cabul, and will be posted at Simla to represent the Amir with the Government Nusrat Jang Khan Alkozai, who is at Peshawar, will also get a salary of Rs 500 per month from the Amir, apparently because he has been instrumental in persuading Muhammad Ibrahim Khan to enter service of the Amir

Local and Provincial.

The Chief Court —This will re open on Saturday next, the 26th instant

The Maharajah —Will return to the capital from Ootcamund on the 28th of this month

The Dewan —Will proceed in a few days to Mysore to meet H H the Maharaja on his return from the Hills

Mr Paramasiva Iyer, B A, Assistant Commissioner, we understand, has been appointed a Sub Judge —B E

D P. W Accountants' Test Examination —We understand that ten of the subordinates of the Comptroller's office have sent in their names for this test,

A New Book —We are told that the comptroller has been ordered by the Mysore Government to compile a short Civil Account Code to be used by those in charge of district treasuries.

Excise Commissioner of Mysore —It is rumoured that Mr T Ananda Rao, Chief Secretary to the Dewan, is to be appointed Excise Commissioner of Mysore, in place of the late Mr. R Vijaindra Rao.

Marikanave Project —We are given to understand that the Madras Government after a hard struggle has withdrawn its objection to restoring the Marikanave project. It is now time for the Mysore durbar to take the work in hand as it is a good source for the increase of State Revenue —F M

The Revision of the house-tax in the City has given greatest dissatisfaction No rule or law appears to have been followed in settling the rates, and several appeals have been lodged in the Municipal office If not more satisfactorily disposed of, people intend going up to the Dewan for redress

The Mysore Gazette.

Bangalore, Thursday May 17, 1894.

Notifications by the Government of His Highness the Maharajah of Mysore

Under Article 189 of the Mysore Service Regulations, Mr B Ramaswamaiengar, Assistant Commissioner, Dewan's Office, is granted privilege leave of absence for 3 months from such date as he may avail himself of the same

Under Section 12 of the Code of Criminal Procedure, N Subba [illegible], Amildar and 3rd Class Magistrate of the Mudgere Taluk, is appointed a Magistrate of the 2nd Class, and under Section 37, he is invested with the following powers specified in the 4th Schedule as additional powers which Government may confer on a Magistrate of the said Class —

1 Power to make orders prohibiting repetitions of nuisances, Section 143

2 Power to hold inquests Section 174

3. Power to take cognizance of offences upon complaint, Section 191.

4 Power to take cognizance of offences upon Police reports, Section 191.

5. Power to take cognizance of offences upon information, Section 191

Under Article 188 of the Mysore Service Regulations, Mr. K. Ramachandra Rao, General Assistant Commissioner, Tumkur District, is granted privilege leave of absence for 3 weeks from such date as he may avail himself of the same

2 During the absence of Mr K Ramachandra Rao, Mr B J Krishnaswami Naik will be in charge of his duties and exercise the powers of a Magistrate of the 1st Class, with which he is hereby invested under Section 12 of the Criminal Procedure Code

J A Coelho and V Abbay Naidu, who were promoted from the grade of Hospital Assistant, 1st Grade, to the grade of Sub Assistant Surgeons, 2nd Grade, on probation for 6 months in Proceedings Camp No 110 11—G F 193 dated 20th October 1893, are hereby confirmed in the grade of Sub-Assistant Surgeons, 2nd Class, with effect from the 20th of October 1893

The 15 days privilege leave granted to Mir Nizamuddin Ali Khan, Amildar of the Tunmakudla-Narsipur Taluk, in Notification No 17546—G 3582 dated 17th April 1894, is hereby cancelled

The 1½ months' privilege leave granted to Hom[illegible] Hanumanthaiya, Amildar of the Kolar Taluk, in Notification No 14815—G F 153-92, dated 6th March 1894, is hereby extended by six weeks

Mr H Ingles, Assistant Comptroller, having availed himself of the three months' privilege leave granted to him in Notification No 14375—G 3121, dated 26th February 1894, from the afternoon of the 3rd March 1894 and having returned to duty on the forenoon of the 9th May 1894 the unexpired portion of the leave is hereby cancelled

The 1½ months privilege leave granted to Mr C Narayana Rao, Assistant Conservator of Forests, in Notification No 16251—G 3561 dated 27th March 1894 is hereby extended by one month

MILITARY

The following transfers, promotions and appointments in the Mysore Horse have been sanctioned by Government —

Risaldar Muhammad M[illegible] of the Imperial Service Lancers is transferred to the 1st or Local Service Regiment, vice Risaldar Mir Hussain Ali, retired

2 Supernumerary Jemadar Ch[illegible] Arus is transferred from the 1st Local Service Regiment to the Imperial Service Lancers

3 Sur[illegible] Abdul Rahiman of the Imperial Service Lancers is promoted to 4th Grade Risaldar, vice Risaldar Muhammad Maharodin, transferred.

4 Probationer Chandra Rao Ramanavaro of the Imperial Service Lancers to be Jamadar and to act as Adjutant until further orders

Mr H Gopalraj Ars, Mr P Nagaraj Ars Mr. K Subramanyaraj Ars. To be Military Probationers

ಕರ್ನಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ಮೇ ೨೧ನೇ ತಾ|| ಸೋಮವಾರ

ಸಮುದ್ರಯಾನದೋಷ ಪ್ರಾಯಶ್ಚಿತ್ತ.

ಈಚೆಗೆ ಕೊಯಂಬತ್ತೂರಲ್ಲಿ ನಡೆದ ಒಂದು ವಿಶೇಷ ಸಂದರ್ಭವು ಅಲ್ಲಿನ ಬಾತ್ಮೀದಾರರೊಬ್ಬರು ಮದರಾಸ್ ಹಿಂದೂ ಪತ್ರಿಕೆಗೆ ಬರೆದಿರುತ್ತಾರಾಗಿ ಅವರ ಸಾರಾಂಶವನ್ನು ಇವರಡಿ ಪ್ರಕಟಿಸುತ್ತೇವೆ.—

ಸೇಲಂ ಡಿಸ್ಟ್ರಿಕ್ಟ್ ಮುನಸಫರಾದ ಮ|| ಮಲ್ಹಾರಿರಾಯರವರ ಅಳಿಯನಾದ ನಾನಾಸಾ ಮಿರಾವ್ ಎಂಬ ಬ್ರಾಹ್ಮಣ ಜಾತಿ ಬಾಲಕನು ಯಾವದೋ ಒಂದು ಕಾರ್ಯಾರ್ಥವಾಗಿ ಇಂಗ್ಲಂಡ್ ರಾಜ್ಯಕ್ಕೆ ಹೋಗಿದ್ದು ಅಲ್ಲಿಂದ ತಿರುಗಿ ಬಂದ ಮೇಲೆ, ಕೆಲವು ದಿನಗಳ ಹಿಂದೆ ಭವಾನಿಯಲ್ಲಿ ಆತನು ವಿಧ್ಯುಕ್ತಪ್ರಾಯಶ್ಚಿತ್ತವಂ ಮಾಡಿಕೊಂಡಿರುವದರಿಂದ ಆತನಂ ಮರಳಿ ಬ್ರಾಹ್ಮಣ ಕುಲಕ್ಕೆ ಸೇರಿಸಿಕೊಳ್ಳುವದರ್ಹನ ಔಚಿತ್ಯವಂ ಕುರಿತು ವಿಚಾರ ಮಾಡಿ ನಿರ್ಧರಿಸುವದಕ್ಕಾಗಿ, ಈ ತಿಂಗಳ ೧ನೇ ತಾರೀಖಿನಲ್ಲಿ ಕೊಯಂಬತ್ತೂರಲ್ಲಿರುವ ಶೃಂಗೇರಿ ಶ್ರೀಮಠದಲ್ಲಿ ಬ್ರಾಹ್ಮಣ ಸಭೆಯೊಂದು ಸೇರಿಸಲ್ಪಟ್ಟು, ಅದಕ್ಕೆ ಅನೇಕರು ವಿದ್ವಾಂಸರುಗಳೂ, ಗುರುಪೀಠದವರೂ, ಸದರೀ ಪಟ್ಟಣನಿವಾಸಿಗಳಾದ ದೊಡ್ಡಮನುಷ್ಯರೂ ಬಂದಿದ್ದರು. ಸಮುದ್ರಯಾನವು ಹಿಂದೂಶಾಸ್ತ್ರಸಮ್ಮತವಾದುದೆ, ಸಮುದ್ರಯಾಯಿಯಾದವನು ಪ್ರಾಯಶ್ಚಿತ್ತಗಳಿಂದ ಪಾಪವಿಮುಕ್ತನಾಗುತ್ತಾನೆಯೋ ಎಂಬ ವಿಷಯದಲ್ಲಿ ಬಹಳಹೊತ್ತು ವಿಚಾರ ನಡೆದ ತರುವಾಯ ಹಾಗೆ ಪ್ರಾಯಶ್ಚಿತ್ತವನ್ನು ವಿಧಿಸುವ ಅನೇಕ ಪ್ರಮಾಣವಚನಗಳು ಸಭೆಯಲ್ಲಿ ಓದಲ್ಪಟ್ಟಮೇಲೆ, ಸಮುದ್ರಯಾಯಿಯಾದ ಬ್ರಾಹ್ಮಣನು ವಿದ್ಯುಕ್ತಪ್ರಾಯಶ್ಚಿತ್ತವಂ ಮಾಡಿಕೊಂಡರೆ ತನ್ನ ಜಾತಿಕುಲಗಳಿಗೆ ಸೇರುವದರಲ್ಲಿ ಯಾವ ಬಾಧಕವೂ ಇರುವದಿಲ್ಲವೆಂತಲೂ, ನಾನಾಸಾಮಿ ರಾಯರು ವಿದ್ಯುಕ್ತ ಪ್ರಾಯಶ್ಚಿತ್ತವಂ ಮಾಡಿಕೊಂಡಿರುವದರಿಂದ, ಯಾವ ಬ್ರಾಹ್ಮಣನೇ ಆಗಲಿ, ನಿಶ್ಶಂಕವಾಗಿ ಆತನ ಮತ್ತು ಆತನ ಕುಟುಂಬದಲ್ಲಿ ಮಿಳಿತವಾಗಿರಬಹುದೆಂತಲೂ ಸಭಾಸದರು ನಿರ್ಣಯಿಸಿದರು, ಎಂಬದು ವಗೈರೆ

ಕಲ್ಕತ್ತೆ ನಿವಾಸಿಯಾದ ಡಾಕ್ಟರ್ ಉಪೇಂದ್ರದತ್ತರೆಂಬವರು ಕೆಲವು ಸಂವತ್ಸರಗಳಹಿಂದೆ ವೈದ್ಯಶಾಸ್ತ್ರಾಭ್ಯಾಸಕ್ಕಾಗಿ ಇಂಗ್ಲಾಂಡಿಗೆ ಹೋಗಿ ಕೆಲವುಕಾಲ ಅಲ್ಲಿ ವಾಸಿಸಿ, ಅಲ್ಲಿಯೊಬ್ಬ ಯೂರೋಪಿಯನ್ ಹೆಂಗಸನ್ನು ಮದುವೆ ಮಾಡಿಕೊಂಡು, ಆಕೆಯನ್ನು ತನ್ನ ಸಂಗಡ ಕರೆದುಕೊಂಡು ಬಂದ್ಮೇಲೆ ಒಂದು ಎರಡು ಸಂವತ್ಸರಗಳಕಾಲ ಆಕೆಯೊಡನೆ ಸಾಂಸಾರಿಕ ವೃತ್ತಿಯಲ್ಲಿರುತ ಆಕೆಯ ಮೂಲಕ ಸಂತಾನಾಭಿವೃದ್ಧಿಯುಂ ಸಹ ಪಡೆದು ತರುವಾಯ ಯಾವದೋ ಒಂದು ಕಾರಣದಮೇಲೆ ಆಕೆಯಂ ತ್ಯಜಿಸಿ ಮರಳಿ ತನ್ನ ಜಾತಿ ಮತವಂ ಸೇರಲು ಪ್ರಯತ್ನ ಪಡಲು ಬಂಗಾಳೇ ದೇಶದ ಪಂಡಿತವರ್ಯರನೇಕರು ಪ್ರಾಯಶ್ಚಿತ್ತಪೂರ್ವಕ ಆತನಂ ಮರಳಿ ಕುಲಕ್ಕೆ ಸೇರಿಸಿಕೊಳ್ಳುವದಕ್ಕೆ ಶಾಸ್ತ್ರಗಳಲ್ಲಿ ಸಂಪೂರ್ಣ ಪ್ರಮಾಣವಿರುವದಾಗಿ ಕೊಟ್ಟ ಅಭಿಪ್ರಾಯವಂ ಅನುಸರಿಸಿ ಸದರೀ ಡಾಕ್ಟರರು ಪ್ರಾಯಶ್ಚಿತ್ತಪೂರ್ವಕ ಸ್ವಜಾತಿ ಮತಕ್ಕೆ ಸೇರಿಸಿಕೊಳ್ಳಲ್ಪಟ್ಟರೆಂದು ಹಿಂದಿನ ಪತ್ರಿಕೆಯಮೂಲಕ ತಿಳಿಸಿರುತ್ತೇವಷ್ಟೆ

ಈಚೆಗೆ ಸುಮಾರು ಎರಡು ವರ್ಷಗಳಹಿಂದೆ ಮದರಾಸಿನಲ್ಲಿ ಸಾಯನಶಾಸ್ತ್ರಿ ಯೆಂಬವರು ಬಹಿರಂಗವಾಗಿ ಹೋಟೆಲಿನಲ್ಲಿ ಕುಳಿತು ಭೋಜನವಂ ಮಾಡಿದರೆಂಬ ಕಾರಣದಮೇಲೆ ಕೆಲವು ಕಾಲ ಬಹಿಷ್ಕೃತರಾಗಿದ್ದು, ತರುವಾಯ ತಾನು ಮಾಡಿದ ಕೃತ್ಯವು ಕೇವಲ ನಿಷಿದ್ಧವಾದುದೆಂದು ಅವರ ಮನಸ್ಸಿನಲ್ಲಿ ತೋರಿ ದರಾಮು ಪ್ರಾಯಶ್ಚಿತ್ತಪೂರ್ವಕ ಬ್ರಾಹ್ಮಣ ಸಮೂಹಕ್ಕೆ ಸೇರಿಸಿಕೊಳ್ಳಲ್ಪಟ್ಟಿರುತ್ತಾರೆ. ಹೀಗೆಯೇ ಇನ್ನೂ ಅನೇಕರು ಶಾಸ್ತ್ರನಿಷಿದ್ಧಗಳಾದ ಅನೇಕ ಕಾರ್ಯಗಳಂ ಮಾಡಿದ ಸ್ವಲ್ಪಕಾಲದಮೇಲೆ ಪ್ರಾಯಶ್ಚಿತ್ತ ಪೂರ್ವಕ ಬ್ರಾಹ್ಮಣ್ಯವಂ ಹೊಂದಿರುತ್ತಾರೆ ಇವನ್ನೆಲ್ಲ ಯೋಚಿಸಲು ಈಚೆಗೆ ಕೊಯಂಬತ್ತೂರಿನಲ್ಲಿ ನಾನಾಸಾಮಿ ರಾಯರ ವಿಷಯದೊಳು ನಡೆದಿರುವ ಪ್ರಾಯಶ್ಚಿತ್ತವು ಆಕ್ಷೇಪಣೀಯವಾದುದೆಂದು ನಾವು ಹೇಳಲಾರೆವು. ಮುಖ್ಯವಾಗಿ ಪ್ರಸಕ್ತ ವಿಷಯವಂ ಕುರಿತ ವಿಚಾರವು ಕೊಯಂಬತ್ತೂರಲ್ಲಿರುವ ಶೃಂಗೇರಿ ಶ್ರೀ ಸ್ವಾಮಿಗಳವರ ಶ್ರೀಮಠದಲ್ಲಿ ನಡೆದಿರುವದರಿಂದಲೂ, ಶ್ರೀ ಸ್ವಾಮಿಗಳವರು ಈಗ ಮಧುರೆ ಪ್ರಾಂತದಲ್ಲಿರುವದರಿಂದಲೂ ಪ್ರಸಕ್ತ ಪ್ರಾಯಶ್ಚಿತ್ತ ವಿಷಯದಲ್ಲಿ ಶ್ರೀಸ್ವಾಮಿಗಳವರ ಅಭಿಪ್ರಾಯವು ಕೃಪಾಳುಗಳಾದ ವರರೇಳರು ಕೇವಲ ಆತುರದಿಂದ [illegible] ತಿಳಿದಿರುವರು. ಪ್ರಸಕ್ತ ಸಭೆಯಲ್ಲಿ ಮಾಡಲ್ಪಟ್ಟ ನಿರ್ಣಯಕ್ಕೆ ಉದಾರ ಚರಿತರಾಗಿದ್ದ ಪಾದಿರರು ಮೊದಲಾದವರು ಮುಂದೆ ಅದಕ್ಕೆಬದ್ಧರಾಗಿ ನಡೆದುಕೊಳ್ಳುವರೇಎಂಬ ವಿಷಯದಲ್ಲಿ ಅನೇಕರಿಗೆ ಸಂಶಯ ತೋರದಿರಲಿಲ್ಲವು, ಏತಕ್ಕೆಂದರೆ, ಹಿಂದೆ ಒಂದೆರಡು ಸಂದರ್ಭಗಳಲ್ಲಿ ವಿಧವಾ ವಿವಾಹಕ್ಕೆ ಪ್ರೋತ್ಸಾಹಕರಾಗಿರುವ ಕೆಲವರು ದೊಡ್ಡಮನುಷ್ಯರು, ಅದೇ ವಿಷಯದಲ್ಲಿ ಹಿಂದೆ ತಾವು ಸೇರಿ ಮಾಡಿದ ನಿರ್ಣಯಕ್ಕೆ ಬದ್ಧರಾಗದೇ ಕೇವಲ ಅಲ್ಪಜನಗಳಾದ ಕೆಲವು ಕಾರಣಗಳಂ ನಮೂದಿಸಿ ತಪ್ಪಿಸಿಕೊಂಡದ್ದು ಜನಗಳ ಹೃದಯಗಳಲ್ಲಿ ಅದ್ಯಾಪಿ ನೂತನವಾಗಿದೆ ? ಇದೆ ಆದುದರಿಂದ ಮೇಲಿನ ಕಾರ್ಯದಲ್ಲಿ ಪ್ರವರ್ತಿಸಿದ ದೊಡ್ಡಮನುಷ್ಯರ ವರ್ತನೆಗಳು ಮುಂದೆ ನಿರ್ಧರವಾಗಬೇಕಾಗಿರುತಿದೆ.

“ಮೈಸೂರು ದೇಶಾಭಿಮಾನಿ”

Our Simla Correspondent telegraphs that Sir S... P... is now arranging an early meeting between Lord Elgin and the Amir. Obviously His Highness's object is to obtain permission to visit England. At one time, during Lord Lansdowne's *regime* His highness seemed to consider this formality as unnecessary, but he was promptly informed to the contrary.

Under a recent decision of Government the pay or salary of a statutory civil servant holding an office, the pay of which has been fixed with a view to its being held by a member of the Indian Civil Service, or a member of a Commission is, unless otherwise specially ordered, 40 per cent of what would be the gross pay or salary of the office if it were held by a member of the Indian Civil Service.

A tragic instance of the Hindu female's modesty is reported by the *Bengal Times*. A house at P... a village near Tikari, containing eleven females, caught fire. One of the women, a newly married bride not willing to expose herself to the public gaze, declined to leave the place. The rest, encouraged by her example, resolved to stay with her. The consequence was they were all fearfully scorched before they could be rescued. Seven of them are said to have since died, and the others are lying in a precarious state.

The *Literary World* publishes the following story:—"There has been lately started in Victoria, British Columbia, a paper called the *Province*. Under the heading of 'The Library' we find this story of Miss Mary Ternan:—It appears that Mr Benson wrote to her and said, 'Dear Miss Ternan,—All the world is talking of you and my novel; when may I come to see you?' she replied 'Dear Mr Benson,—Did you really write a novel? How clever of you! Come and see me at any time.' When he came, she was out."

The St. Petersburg Correspondent of the *Vedomosti* telegraphs that it is stated in Russian Court circles that Queen Victoria has decided, should her health remain in a satisfactory condition to be present at the marriage of her grand daughter Princess Alix of Hesse to the Czarevitch at St. Petersburg. In this case the Prince of Wales might not go to St. Petersburg, and her Majesty would be accompanied by the Princess of Wales, the Czarea vitch's aunt. The Queen's journey, the correspondent adds, would be all the more remarkable, as it would be the first visit paid by her Majesty to the Russian capital.

The Government of India has written a long letter to Sir S. Pyne conveying its high appreciation of his valuable services during the Kabul Mission. The Government of India recognises the ability and loyalty which have distinguished his conduct in his altogether exceptional position as Engineer in Afghanistan. The letter concludes with an assurance that it is a source of much satisfaction to the Viceroy to believe that the Amir is gratified at the honours bestowed upon him.

It is now practically decided that the Amir will pay a visit to England at the commencement of next year and that the Viceroy will meet him prior to his departure.

The *Indian Spectator* writes:—Great has been the relief amongst our educated classes on hearing of the complete success of the operation on Mr Gladstone's eye, and his fully maintaining his strength under it. As maker of the political history of the last fifty years, Mr. Gladstone has acquired an ascendency over all the English speaking races, that none of his bitterest opponents could gainsay. This ascendency, may have more of the moral ingredient in it than of the political—we ourselves believe it to be so—but the fact of it is undeniable, as also the fact that much of what is most mischievous in the exclusively political life of England is held in check by the over-powering moral presence of the statesman. "just emancipated," as we Indians would put it.

The *Englishman* still continues to be flooded with correspondence on the tree-daubing affair. A correspondent the other day sent that paper five hairs secured from mud-daubed on a mango tree, with a request that the Editor would submit them to a microscopist for examination. This was done, but from the elaborate note written by the scientist all that we can gather is that he is not by any means sure that the hair submitted for examination is what it is alleged to be, namely, the hair from the tuft of a cow's tail. The result of his examination is a pronouncement which is best reproduced from a quotation from the Micrographic Dictionary which says that "in regard to the discrimination of the hairs of one animal from those of another the examination of individual hairs can be but little depended on."

The Special Sessions Court, for the trial of the Prabhas Patan rioters, consisting of the Hon'ble Pherozeshah M. Mehta as President, and Messrs Saiyad Nuruddin Khan and R. S. Tipnis, of the Statutory Civil Service, whose services were lent to the Junagad State, as Members, assembled yesterday (30th *May*) to deliver judgment in the cases which were tried by this Court. The members unanimously acquitted six accused persons of the second case, a... fifty five accused men of the first case, on all the charges, and convicted eighteen accused men on charges relating to disobedience to lawful orders, rioting, and various other offences, and sentenced seven men to three years, one man to two years and ten months, two men to four years, one man to one year, and seven men to five years' rigorous imprisonment.

So far as can be judged from popular opinion the judgment has given satisfaction to both communities, and everything was orderly throughout.

We notice in the Public Service Notification laying down the educational qualifications for

the admission of candidates to the public service, published in the last issue of the *Fort St George Gazette*, that a desirable addition has been made to the class of candidates in whose favour a concession is made in regard to the Criminal Judicial Tests of the Special Test Examinations. In the draft notification it was stated that owing to the supply of F A's being insufficient in certain localities to allow of the immediate enforcement of the rule that persons who are not F A's should not be allowed to appear for the Criminal Higher and Lower Grades, the Government had resolved to direct "that the Criminal Tests shall remain open to persons who are not F A's and who come from the Ceded Districts and the Northern Circars until the 1st January 1896". In the Notification now published it is laid down that, "the Criminal Judicial Tests, Higher and Lower Grades, shall be open only to graduates, to candidates who have passed the First Examination in Arts, and to all students of the College of Agriculture who have obtained the Diploma in Agriculture at the Government Technical Examinations. In the case of Mahomedans, however, and of candidates who can prove that they were born and have been mainly educated in the Ceded Districts or the Northern Circars, men who are not F A's, shall continue to be eligible to appear for these Tests until 1st January 1896."

Local and Provincial.

THE STATUE in bronze of the late Sir James Gordon, the 1st Resident of Mysore after Rendition is to be erected at the Capital, at a cost to Government of Rs 23,800, which amount has been duly sanctioned.—S

THE TOWN MAGISTRATES' COURT AT MYSORE.—In the contingencies account of this Court a discrepancy has occurred and the Government have called upon the Comptroller to report the name of the officials who are responsible for an alleged loss.—B S

CURIOUS things are sometimes filed as exhibits in Courts of Law, but to file as an exhibit a dozen over ripe jack fruits, as was recently done in Rangoon in a prolonged trial, is, we imagine, playing it rather low down on the olfactory nerves of the public having business at the Court.

HIS HIGHNESS THE MAHARAJAH.—We learn that His Highness the Maharajah has applied to the Imperial Government for an increase of two lakhs to his annual allowance of fifteen lakhs. The education of his children calls for the increased allotment which, we hear, by private report, has been sanctioned.—S

RAILWAY PASSENGERS.—In future passengers on the Madras Railway who wish to break their journey *en route* are required to obtain an endorsement on the back of their tickets at the halting Station to the effect that they broke their journey at the Station with the date and signature of the Station Master. Otherwise they will be liable to pay full fare and penalty at destination.

TRAVELLING ALLOWANCE.—Heretofore the Public Prosecutors of the Mysore State, when obliged to attend for the prosecution of cases away from Head Quarters, submitted travelling bills for double first class fare which has been paid to them, but of late on a reference being made to the authorities they have ranked the Public Prosecutors under the Civil Allowance Code as only entitled to 2nd class double fare, which will hereafter be paid them.—B. S.

THE Government of India was recently addressed regarding the proposed retention by the Mysore Durbar, till the 1st April, 1898, of the services of Brigade-Surgeon Lieutenant Colonel T. J. McGann, I. M. S., (Madras), on the understanding that he forgoes all claim to promotion in the administrative grade of the Madras Medical Service. We have already stated the grounds upon which the request was made. The Government of India has now declined to sanction the proposal for the reason that similar cases have recently occurred in which the Secretary of State for India has enjoined a close observance of the orders regulating the advancement of Medical Officers to the administrative grade. It is, however, pointed out that the wishes of the Durbar in this matter might be met if Dr. McGann avails himself of the permission that has been accorded him to resign his appointment in the British service and take up employment in Mysore.—S

A MOTHER POISONING HERSELF AND THREE CHILDREN.—On Saturday before last a frightful tragedy was brought to light. A Hindu female residing at Clarkespet, Cavalry road, who had been in the keeping of a wealthy Hindu, and against whom she had obtained a decree of Rs. 10 for maintenance of herself and her three children, determined to destroy herself and her little ones, and this diabolical resolution she carried out by administering arsenic in cooked rice first to her oldest, a lad 16 years of age, the day following to a child 9 years of age, and lastly to herself and an infant about three years old—all the cases proving fatal. An inquest was yesterday (27th) held after a *post mortem* examination at the Bowring Civil Hospital. It is strange that the sudden death of the first victim, in so crowded a locality as Cavalry road, did not rouse the suspicions of the police of that division, stranger still perhaps, that the death of the second child of 9 years the following day did not move the Divisional Police to action. Not till after the death of the infant and the mother was foul play suspected.—S

THE GOVERNMENT OF MYSORE AND THE MADRAS BANK.—In supersession of former orders the Government of His Highness the Maharajah have been pleased to approve of a revised agreement with the Madras Bank, Bangalore. The following is the arrangement now sanctioned.—The rates of interest to be, from 1st July to 31st December, 2 per cent. From 1st January to 30th June, the minimum to be 2 per cent, but the rate to vary with the Bank's published minimum rate charged for loans against the Government Paper as follows:—

Bank's rate,	4 per cent	Interest	2½	per cent
Do	5 do	Do	3½	do
Do	6 do	Do	5	do
Do	7 do and upwards		6	do

The Mysore Government undertaking to pay into credit of their account the whole of their available balances and not to draw for ordinary requirements between 1st March and 30th September more than . lakhs in any one month and between 1st October and 28th February more than eight lakhs in any one month, in addition to such amounts as may be required for payment to the Government of India on the 31st January and the 31st March. Drawings for special requirements, such as purchase of Government paper, &c., to be arranged for beforehand with reasonable notice. This arrangement to be terminable on the 30th June or 31st December in any year by six months' previous notice on either side. The amounts payable to the Government of India are Rs 12,25,000 on the 31st January and a similar amount on the 31st March.—S

PRINCELY GENEROSITY.—The following is a list of donations made by H. H. the Maharajah of Mysore to various Bombay charitable organisations:—Institution for Deaf Mutes, Rs 300; Indian Temperance Association, Rs 200; H P B Theosophical Society, Surat, Rs 200; Eduljee Framjee Allbless Leper Home, Rs 350; Students' Literary and Scientific Society, Rs. 500; Native General Library, Rs 300; Convalescent Home, Khandalla, Rs 200; Bombay East Indian Association, Rs 100; English School for Hindu Girls, Rs 150; General Education Institute, Dadar, Rs 100; Society of St Vincent De Paul, Rs 100; Theistic Association's Night Schools, Rs 100; Prarthana Samaj, Rs 100; Grant Medical Society Rs 100; District Benevolent Society Rs 100; Jain Association of India, Rs 100; Jain Union Reading Room and Library, Rs 100; Mount Road Library, Rs 50; St Isabel's Ladies Charitable Association, Rs 50; St Joseph's Foundling Hospital, Rs 50; Patronage of Catholic Youth, Rs 50; Sir Jamsetjee Jejeebhoy Hospital through Dr Hatch, Rs 50; Bhooleshwar Library, Rs 50; for erection of Ram Mandir to Dayal Kalidas Rs 50; Bharat Kathasar, Rs 50; for reconstructing a temple and a cowshed near Girgaum Rs. 50; Cow Protection Sabha, Rs 300; Shantaram Bhiknoba Dewoolkar, Rs 150; Poona Institutions:—Sassoon Hospital Nursing Fund, Rs 200; Deccan Education Society, Rs 300; Poona Sarvajanik Sabha, Rs 250; Poona Native Institution, Rs 150; Poona Camp Education Society, Rs 50; Church and School at Ahmednuggur, Rs 50; total Rs 5,000

ಕರ್ಣಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ಜೂನ್ ೪ ನೇ ತಾ|| ಸೋಮವಾರ

ಶ್ರೀ ಶೃಂಗೇರಿ ಸ್ವಾಮಿಗಳವರ ಜ್ಞಾನೋಪದೇಶವು.

ಗತವಾರದ ಶೇಷವು

ಮಸಲಾ ಒಬ್ಬ ಬ್ರಾಹ್ಮಣನು, ತಾನು ಅಗ್ನಿಷ್ಟೋಮ ಮಾಡಬೇಕಾಗಿರುವದರಿಂದ ತನಗೇನಾದರು ದ್ರವ್ಯ ಸಹಾಯ ಮಾಡಬೇಕೆಂದು ಒಬ್ಬ ರಾಜನನ್ನು ಕುರಿತು ಪ್ರಾರ್ಥಿಸುತ್ತಾನೆ. ಆಗ ಅರಸನು ಆತನಿಗೆ ಬೇಕಾದಷ್ಟು ಧನ ಸಹಾಯ ಮಾಡುತ್ತಾನೆ. ಬ್ರಾಹ್ಮಣನು ಆ ಧನವನ್ನು ಉದ್ದಿಷ್ಟ ವಿಷಯಕ್ಕೆ ವಿನಿಯೋಗಿಸದೆ ಗೃಹನಿರ್ಮಾಣಾದಿ ಕಾರ್ಯಗಳಿಗಾಗಿಯೂ, ಭಾರ್ಯೆಗೆ ಆಭರಣಾದಿಗಳಂ ಮಾಡಿಸುವದರಲ್ಲಿಯೂ ವಿನಿಯೋಗಿಸುತ್ತಾನೆ. ಆ ದ್ರವ್ಯವೆಲ್ಲವು ಮುಗಿದಂತೆ ವ್ಯಯವಾದ ಬಳಿಕ ಬ್ರಾಹ್ಮಣನು ತಾನು ಮೊದಲು ಸಂಕಲ್ಪಿಸಿದ್ದ ಕಾರ್ಯವು ನೆರವೇರದೆ ಹೋದಬಗ್ಗೆ ನಿರ್ವಿಣ್ಣನಾಗಿ ಅದೇ ಅರಸನಬಳಿಗೆ ಹೋಗಿ ಪುನಃ ಯಾಚಿಸುತ್ತಾನೆ. ಆಗ ಅರಸನು, ತಾನು ಮೊದಲು ಕೊಟ್ಟ ಧನವು ಅನ್ಯಥಾ ವಿನಿಯೋಗಿಸಲ್ಪಟ್ಟದ್ದನ್ನು ಚೆನ್ನಾಗಿ ತಿಳಿದಿದ್ದಾಗ್ಯೂ ಮರಳಿ ಧನಸಹಾಯ ಮಾಡಿದರೆ ಆತನು ಭ್ರಾಂತನೆಂದು ಯಾರಾದರು ಭಾವಿಸಲಾರರೆ, ಅಥವಾ ಆ ರೀತಿ ಕೊಡುವದಕ್ಕೆ ಆತನು ಜ್ಞಾನಹೀನನೆ? ಮೋಸಗಾರನಾದ ಬ್ರಾಹ್ಮಣನು ರಾಜಕೋಪಕ್ಕೆ ಪಾತ್ರನಾಗಿ ಆತನ ಸಾನ್ನಿಧ್ಯದಿಂ ಹೊರಡಿಸಲ್ಪಡದಿರುವನೆ? ಈರೀತಿ ಮಾಡಲಿಕ್ಕೆ ಬದಲಾಗಿ ಅದೇ ಬ್ರಾಹ್ಮಣನು ಸದರೀ ಧನವನ್ನು ಪಡೆದು ತಾನು ಮೊದಲು ಸಂಕಲ್ಪಿಸಿದಂತೆ ಕ್ರತುವಿಗುಪಕ್ರಮಿಸಿ ಪ್ರಯಾಣಕತೆಯೊಡನೆ ಅದುನಡೆಸಿ ಬಾದುವೇಳೆ ಅದುಪೂರ್ತಿಗೊಳ್ಳಲಿಕ್ಕೆ ಧನವು ಸಾಲದೆ ಹೋಗಿ ಸಂಕಲ್ಪಿತ ಕಾರ್ಯಕ್ಕೆ ಮಧ್ಯೆ ವಿಘಾತ ಪ್ರಾಪ್ತವಾಗುವದಾಗಿದ್ದರೆ, ಅದಂ ಅರಸನಿಗೆ ಕೂಡಲೆ ತಿಳಿಸಿ ಅಧಿಕವಾಗಿ ಧನಸಹಾಯ ಮಾಡಬೇಕೆಂದು ಯಾಚಿಸಿದೊಡೆ ಆಗ ಆತನು ಸಂತೃಪ್ತನಾಗಿ ಯಾಚಿತ ಧನವಂ ಮರಳಿ ಕೊಡದೆ ಹೋಗುವನೆ? ಕದಾಚಿತ್ ಆ ರಾಜನಲ್ಲಿ ಧನವು ಇಲ್ಲದಿದ್ದಾಗ್ಯೂ ಸಹಾಯಶೂನ್ಯನಾದ ಆ ವಿಪ್ರನ ಆಶಾಭಂಗ ಮಾಡುವದಕ್ಕಿಂತಲೂ ತಾನು ಸಾಲಗಾರನಾದರೂ ಬಾಧಕವಿಲ್ಲವೆಂದೆಣಿಸಿ ಅನ್ಯರಲ್ಲಿ ತೆಗೆದಾದರೂ ಆತನಿಗೆ ಕೊಟ್ಟು ಅವನ ಪ್ರಯತ್ನವಂ ಕೊನೆಮುಟ್ಟಿಸದೆ ಹೋಗುವನೆ? ಅವಕಾರಣ ನಾವು ತಿಳಿಸುವದೇನಂದರೆ—ನೀವೆಲ್ಲರೂ ಕೂಡಲೇ ಪ್ರಯತ್ನಪಡಿರಿ, ಆದರೆ ಈ ಜನ್ಮದಲ್ಲಿಯೇ ನೀವೆಲ್ಲರೂ ಜೀವನ್ಮುಕ್ತರಾಗಿ ಹೋಗಿಬಿಡುವಿರೆಂದು ನಂಬಬೇಡಿರಿ. ನಿಮ್ಮ ಪ್ರಯತ್ನಕ್ಕೆ ತಕ್ಕ ಫಲವು ಈ ಜನ್ಮದಲ್ಲಿ ಸಿದ್ಧಿಸಲಾರದು. ನಿಷ್ಫಲವಾದ ನಿಮ್ಮ ಈಗಿನ ಪ್ರಯತ್ನವು ಭವಿಷ್ಯತ್ಪ್ರಯತ್ನಗಳಂ ಮಾಡಲಿಕ್ಕೆ ಅನುಕೂಲವಾದ ಸಮಯವನ್ನೂ ಸಾಮಗ್ರಿಗಳನ್ನೂ ಒದಗಿಸಿ ಕೊಡದೆ ಹೋಗಲಾರದು. "ಉದ್ಯೋಗಿನಂ ಪುರುಷಸಿಂಹ ಮುಪೈತಿ ಲಕ್ಷ್ಮೀ" ಎಂಬದಾಗಿ ಪ್ರಯತ್ನವಂತನಾದ ಪುರುಷನಿಗೆ ಸಕಲಾಭೀಷ್ಟಗಳೂ ಸಿದ್ಧಿಸಿ ಭಾಗ್ಯದೇವತೆಯು ವಶ್ಯಳಾಗದೆ ಹೋಗಲಾರಳು. ಜ್ಞಾನಹೀನರು ಸಕಲವೂ ಕರ್ಮಾಯತ್ತವೆಂದು ನುಡಿಯುವರು. ಅಂತೆ ಅದೃಷ್ಟವೆಂಬುವದನ್ನು ದೂರವಿಡಿ. ನಿಮ್ಮಿಂದ ಸಾಧ್ಯವಾದ ಪ್ರಯತ್ನಗಳಂ ನಿರ್ವ್ಯಾಜನೆಯಾಗಿ ಮಾಡಿದರೆ ನಿಮಗೆ ಫಲ ಪ್ರಾಪ್ತವಾಗದೆ ಹೋಗಲಾರದು. ಅಥವಾ ಬಂದುವೇಳೆ ಲಭಿಸದೆ ಹೋದರೆ "ಯತ್ನೇ ಕೃತೇ ಯದಿ ನ ಸಿದ್ಧ್ಯತಿ ಕೋತ್ರ ದೋಷಃ" ಎಂಬಂತೆ ಯಾವ ಬಾಧಕವೂ ಉಂಟಾಗಲಾರದು. ಇಲ್ಲಿ ಮತ್ತೊಂದು ಉಪಮಾನವು ನಿಮಗೆ ತಿಳಿಸುವೆವು ಏನಂದರೆ:—ಯೂನಿವರ್ಸಿಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂಬ ಕುತೂಹಲದೊಡನೆ ನೀವು ಶ್ರದ್ಧೆಯೊಡನೆ ವ್ಯಾಸಂಗಮಾಡಿ ಎಷ್ಟು ಶ್ರಮಿಸುತ್ತೀರೋ ಅದಂ ಪರಿಭಾವಿಸಿ ಅದು ಒಂದೆರಡಾವರ್ತಿ ಸಫಲವಾಗದೆ ತಪ್ಪಿಹೋದರೆ ಖಿನ್ನರಾದರೂ ಆ ಪ್ರಯತ್ನವಂ ತೊರೆಯದೆ ತೇರ್ಗಡೆಯಾಗುವತನಕ ಮೇಲೆಮೇಲೆ ವ್ಯಾಸಂಗವಂ ಮಾಡುತ ಕೃಷಿ ಮಾಡುವದಿಲ್ಲವೆ? ಕೇವಲ ಐಹಿಕಗಳಾದ ಮತ್ತು ಅಸ್ಥಿರಗಳಾದ ಪ್ರಯೋಜನೋದ್ದೇಶಗಳೊಡನೆ ಇಷ್ಟರ ಶರೀರಶ್ರಮವನ್ನೂ ಮನೋಕ್ಲೇಶವನ್ನೂ ಅನುಭವಿಸಲಿಕ್ಕೆ ಸನ್ನದ್ಧರಾಗಿರತಕ್ಕ ನೀವು ನಿತ್ಯಸುಖವಂ ಪಡೆಯಲಿಕ್ಕೆ ಅಭಿಲಾಷೆಯುಳ್ಳವರಾಗಿ ತದರ್ಥ ಶ್ರಮ ಪಡಬೇಕಾದುದು ಬಹಳ ಆವಶ್ಯಕವೆಂದು ನಿಮಗೆ ಏತಕ್ಕೆ ತೋರದೆ ಹೋಯಿತು? ಮೊದಲನೆಯದಕ್ಕಿಂತಲೂ ಎರಡನೆಯದು ಕೇವಲ ಅಪೇಕ್ಷಿತವಾದುದಲ್ಲವೆ! ಏಕದಾ ನಿಮಗೆ ಮುಕ್ತಿ ಯುಂಟಾಗುವದಿಲ್ಲವೆಂಬದೇನೋ ನಿಜವು. ಕೆಲವರಿಗೆ ಮಾತ್ರವೇ ಅದು ಸಿದ್ಧಿಸುವುದು. ಪರಿಪಕ್ವಮತಿಯುಳ್ಳವರು ಕೆಲವರು ಮಾತ್ರವೇ ಇದೇಜನ್ಮದಲ್ಲಿ ಜೀವನ್ಮುಕ್ತರಾಗುವರು. ಅಂತವರೊಂದುವೇಳೆ ಅದಂ ನಿರೀಕ್ಷಿಸಬಹುದು. ನಾವು ಪ್ರಯತ್ನವೇನೋ ಮಾಡಬೇಕು, ಫಲಂತು ಫಲಪ್ರಾಪ್ತಿಗಾಗಿ ಆತುರಪಡಲಾಗದು. ನಮ್ಮ ಪ್ರಯತ್ನಗಳು ನಿರ್ದುಷ್ಟಗಳಾಗಿದ್ದರೆ ಅವುಗಳಿಂದ ಉತ್ತಮ ಪ್ರಯೋಜನಗಳುಂಟಾಗುವದರಲ್ಲಿ ಎಷ್ಟುಮಾತ್ರವೂ ಸಂದೇಹವಿಲ್ಲವು. ಸತ್ಫಲ ಪ್ರಾಪ್ತವಾಗದೆ ಹೋದರೆ ನಮ್ಮ ಪ್ರಯತ್ನಗಳಲ್ಲೇನೂ ನ್ಯೂನತೆ ಯುಂಟಾಗಬೇಕು. ಒಬ್ಬ ರೋಗಿಗೆ ಚಿಕಿತ್ಸಕನು ಒಂದು ಔಷಧವನ್ನು ಕೊಟ್ಟು ಅದಕ್ಕೆ ಪಥ್ಯವಂ ವಿಧಿಸುತ್ತಾನೆ. ರೋಗಿಯು ವಿರುದ್ಧ ಸೇವನೆಯಂ ಮಾಡಿ ಪಥ್ಯವನ್ನು ಕ್ರಮವಾಗಿ ನೆರವೇರಿಸದೆ ಉದಾಸೀನ ಮಾಡುತ್ತಾನೆ. ಇದರಿಂದ ಔಷಧವು ನಿಷ್ಫಲವಾಯಿತೆಂದು ರೋಗಿಯು ಹೇಳಬಹುದೆ? ಚಿಕಿತ್ಸಕನು ಅಸಮರ್ಥನಾಗುವನೆ! ಆತ್ಮಸ್ವರೂಪವನ್ನರಿಯುವಬಗ್ಯೆ ನಾವು ಮಾಡಬೇಕಾದ ಪ್ರಯತ್ನಗಳಂ ಲೋಪವಿಲ್ಲದಂತೆ ಮಾಡುವೆವಾದರೆ ಇದೇಜನ್ಮದಲ್ಲಿಯೇ ಯಥೋಚಿತ ಜ್ಞಾನವಿಕಾಸವಾಗದೇ ಹೋಗಲಾರದು. ಕೆಲವರಿಗೆ ಮಾತ್ರವೇ ಜೀವನ್ಮುಕ್ತಿ ಯುಂಟಾಗುವದೆಂಬ ಭಾವವು, ನಿಮ್ಮ ಮುಕ್ತಿಮಾರ್ಗಾನ್ವೇಷಣಕ್ಕೆ ಪ್ರತಿಬಂಧಕವಾಗಿರಕೂಡದು. ಮುಕ್ತರಾಗುವ ಕೆಲವರೊಳು ನೀವೂ ಒಬ್ಬರೆಂದು ಭಾವಿಸಬೇಕು. ಒಂದು ದೇವಾಲಯದಲ್ಲಿ ಅರ್ಚಕನು ಭಗವದರ್ಪಿತಗಳಾದ ಪತ್ರ ಕುಸುಮಗಳನ್ನು ಬಹುಜನ ಭಕ್ತರ ಮಧ್ಯೆ ಎರಚುತ್ತಾನೆ. ಈ ಕುಸುಮಗಳನ್ನು ಪಡೆಯುವದರಲ್ಲಿ ಅಲ್ಲಿ ನೆರದಿರುವವರೆಲ್ಲರೂ ಸಮಾನ ಕೋರಿಕೆಯುಳ್ಳವರಾಗಿದ್ದರೂ ಅವರಲ್ಲಿ ಯಾರೋ ಹತ್ತುಮಂದಿಗೆ ಮಾತ್ರವೇ ಆ ಪುಷ್ಪಗಳು ದೊರೆಯುವವು. ಅವರಲ್ಲಿಯೂ ಒಂದಕ್ಕಿಂತ ಅಧಿಕ ಪುಷ್ಪಗಳು ದೊರೆತವರು ಬಹಳ ಕಡಿಮೆಯಾಗಿರುವರು. ಹೀಗಿದ್ದರೂ ಆಗುಡಿಯಲ್ಲಿರುವ ಪ್ರತಿ ಮನುಷ್ಯನೂ ಅದನುಪಕ್ಷ ತತ್ಕುಸುಮಪ್ರಾಪ್ತ್ಯಾಕಾಂಕ್ಷೆಯೊಡನೆ ಅದಕ್ಕಾಗಿ ತನ್ನ ಯಾವಚ್ಛಕ್ತಿಯಂ ವಿನಿಯೋಗಿಸುವದಂ ನಾವು ನೋಡಿದೇವಷ್ಟೆ! ಆದಕಾರಣ ಪ್ರತಿ ಮನುಷ್ಯನೂ ಶಾಸ್ತ್ರಾಭ್ಯಾಸವಂ ಮಾಡಿ ಮೊದಲು ಜ್ಞಾನವಂ ಸಂಪಾದಿಸಬೇಕು. ಶಾಸ್ತ್ರಗಳಾದರೋ ಅಪಾರವಾಗಿವೆ. ನಾವು ತಿಳಿದುಕೊಳ್ಳಬೇಕಾಗಿರುವ ವಿಷಯಗಳೋ ಅನಂತಗಳಾಗಿವೆ. ನಮ್ಮ ಜೀವಿತಕಾಲವಾದರೋ ಅನಿಶ್ಚಿತವಾಗಿಯೂ, ಅತ್ಯಲ್ಪವಾಗಿಯೂ, ಬಹುವಿಧ ಪ್ರತಿಬಂಧಯುಕ್ತವಾಗಿಯೂ ಇರುತಿದೆ. ಹ್ಯಾಗಂದರೆ, ಹಂಸವು ಜಲಮಿಶ್ರವಾದ ಕ್ಷೀರದಲ್ಲಿ ಹ್ಯಾಗೆ ಕ್ಷೀರವನ್ನು ಪ್ರತ್ಯೇಕಿಸಿ ಗ್ರಹಿಸಿ ಉದಕವಂ ತ್ಯಜಿಸುತಿದೆಯೋ ತದ್ವತಿ ನೀವು ಸಾರಗ್ರಾಹಕಪರರಾಗಿ ಗುಣಾಂಶಗಳನ್ನೇ ಗ್ರಹಿಸತಕ್ಕದ್ದು.

ಸಶೇಷವು.

ನೇಪಾಳ ಸಂಸ್ಥಾನದವರ ಸತ್ಕಾರಗಳು.

ಶೃಂಗೇರಿ ಶ್ರೀಮಠದ ಏಜಂಟರಾದ ಬ್ರಹ್ಮಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳವರು ಶ್ರೀಮಠದ ಕಾರ್ಯಾರ್ಥ ವೈಸರಾಯ್ ಸಾಹೇಬರವರ ಭೇಟಿಯ ಬಗ್ಗೆ ಈಚೆಗೆ ಸುಮಾರು ಹತ್ತು ತಿಂಗಳ ಹಿಂದೆ ಕಲ್ಕತ್ತೆಗೆ ಪ್ರಯಾಣ ಮಾಡಿದರಷ್ಟೆ. ಅಲ್ಲಿಂದ ನೇಪಾಳ ಸಂಸ್ಥಾನಕ್ಕೆ ಹೋಗಿದ್ದ ಸಂದರ್ಭ

ದೊಳು ಅಲ್ಲಿ ನಡೆದ ವಿಶೇಷಾಂಶಗಳನ್ನು ಅವರ ಸಂಗಡ ಹೋಗಿರುವ ಒಬ್ಬ ಲೇಖಕರ ಮೂಲಕ ತಿಳಿದು, ಅದಂ ಯಥಾವತ್ತಾಗಿ ಇದರಡಿಯಲ್ಲಿ ಪ್ರಕಟಿಸುತ್ತೇವೆ:—

ನಾವು ನೇಪಾಳ ಸಂಸ್ಥಾನಕ್ಕೆ ಹೋಗಿಬರಬೇಕೆಂಬ ಉದ್ದೇಶದಿಂದ ಕಲ್ಕತ್ತೆಯಲ್ಲಿರುವ ಸದರೀ ಸಂಸ್ಥಾನದ ವಕೀಲರ ಭೇಟಿಯಂ ಮಾಡಿಕೊಂಡು, ನಮ್ಮ ಅಭಿಲಾಷೆಯಂ ಅವರಿಗೆ ತಿಳಿಸಲು ಅವರು ನೇಪಾಳಕ್ಕೆ ಬರೆದು ರಹದಾರಿ ಮತ್ತು ವಾಹನಾದಿಗಳಂ ಬರಮಾಡಿ ನಮ್ಮನ್ನು ಇಲ್ಲಿಗೆ ಕಳುಹಿಸಿಕೊಟ್ಟರು. ನಾವು ಇಲ್ಲಿಗೆ ಬಂದ ಕಾಲದಲ್ಲಿ ಅರಸರವರ ಸವಾರಿಯು ಮೃಗಯಾವಿನೋದಾರ್ಥ ಪರಸ್ಥಳಕ್ಕೆ ಚಿತ್ತೈಸಿದ್ದುದರಿಂದ ವಾಪಸು ಬಂದಮೇಲೆ ಮಹಾರಾಜರವರಿಗೆ ತಿಳಿಯಪಡಿಸಿದೆವು. ಮಹಾರಾಜರವರು ತಮ್ಮ ರಥವನ್ನೂ ತಮ್ಮ ಗುರುಗಳಾದ ಬ್ರಹ್ಮಶ್ರೀ ವಾಮದೇವ ಪಂಡಿತರವರನ್ನೂ ಕಳುಹಿಸಿ ನಮ್ಮನ್ನು ಬರಮಾಡಿಕೊಂಡರು. ನಾವು ಅರಮನೆಗೆ ಹೋಗಿ ಗಾಡಿಯಿಂದ ಇಳಿಯುವ ಸಮಯದಲ್ಲಿ ರಾಜರವರ ಸೆಕ್ರೆಟರಿಯವರು ಬಂದು ಹಸ್ತಲಾಘವ ಪೂರ್ವಕ ಪಂಡಿತರಾದ ಬ್ರಹ್ಮಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳವರನ್ನು ಬರಮಾಡಿಕೊಂಡು ಅರಮನೆಗೆ ಕರೆದುಕೊಂಡು ಹೋಗುವಲ್ಲಿ ಅರಸರವರು ತಮ್ಮ ಆಸ್ಥಾನದ ಬಾಗಿಲಬಳಿ ಬಂದು ಕೈಮುಗಿದು ನಮಸ್ಕಾರ ಮಾಡಿ, ಒಳಗೆ ಕರೆದುಕೊಂಡು ಹೋಗಿ ಕುರ್ಚಿಯಮೇಲೆ ಕುಳ್ಳಿರಿಸಿ, ತಾವೂ ಕುಳಿತುಕೊಂಡು, ಶ್ರೀ ಸ್ವಾಮಿಗಳವರ ಯೋಗಕ್ಷೇಮವಂ ನಿರಂತರಯ ಭಕ್ತಿಶ್ರದ್ಧಾಪೂರ್ವಕ ವಿಚಾರಿಸಿ, ತರುವಾಯ ಮೈಸೂರು ಶ್ರೀಮನ್ಮಹಾರಾಜ ರಾಜೇಸಾಹೆಬ ಬಹದೂರರವರ ಕ್ಷೇಮವನ್ನೂ ನಮ್ಮ ಕ್ಷೇಮವನ್ನೂ ವಿಚಾರಿಸಿ, ನಿರತಿಶಯಾನಂದ ತುಂದಿಲಾಂತಃಕರಣರಾದರು. ತರುವಾಯ ಶ್ರೀ ಸ್ವಾಮಿಗಳವರ ಶ್ರೀಮುಖವನ್ನು ವಚನ ಮಾಡಿಸುವ ಸಮಯದಲ್ಲಿ ಇಂಗ್ಲಿಷ್ ವಾದ್ಯ ಘೋಷವಂ ಮಾಡಿಸಿದರು. ಈ ಸಂಸ್ಥಾನದ ಪುರಾತನ ಮರ್ಯಾದಾನುಗುಣವಾಗಿ ಶಾಸ್ತ್ರಿಗಳವರಿಗೂ ಇತರರಿಗೂ ಅತ್ತರ್ ಮೊದಲಾದ ಸುಗಂಧದ್ರವ್ಯಗಳಂ ಕೊಡಿಸಿ, ತಾವು ಇಳಿದಿರುವ ಜಾಗ ಸುಖಕರವಾಗಿದೆಯೆ, ಇಲ್ಲವಿದ್ದರೆ ಅನುಕೂಲವಾದ ಬೇರೆ ಸ್ಥಳವಂ ಸಿದ್ಧಪಡಿಸಲೆ, ಎಂದು ಅಪ್ಪಣೆ ಕೊಡಲು, ತಾವು ಇಳಿದಿರುವ ಸ್ಥಳವು ಪಶುಪತೀಶ್ವರ ಸಾನ್ನಿಧ್ಯವಾಗಿಯೂ, ವಾಗ್ಮತೀತೀರವಾಗಿಯೂ ಇರುವದರಿಂದ ಅತ್ಯಂತ ರಮಣೀಯವಾಗಿರುತ್ತದೆಂದು ಶಾಸ್ತ್ರಿಗಳವರು ಕೊಟ್ಟ ಪ್ರತ್ಯುತ್ತರವಂ ಅರಸರವರು ಬಹಳ ಸಂತೋಷದಿಂ ಕೇಳಿ, ಮರಳಿ ತಮ್ಮ ರಥವಂ ಕೊಟ್ಟು ನಮ್ಮೆಲ್ಲರಂ ವಾಪಸು ಕಳುಹಿಸಿದರು. ಶಾಸ್ತ್ರಿಗಳವರ ಖರ್ಚಿನಬಗ್ಗೆ ದಿವಸ ಒಂದಕ್ಕೆ ಇಪ್ಪತ್ತು ರೂಪಾಯಿಗಳಮೇಲೆ ಕಳುಹಿಸಿಕೊಡುವಂತೆ ಅಪ್ಪಣೆ ಮಾಡಿರುತ್ತಾರೆ. ಕ್ಷಿಪ್ರದಲ್ಲಿ ಪ್ರಯಾಣ ಮಾಡಬೇಕೆಂದು ಶಾಸ್ತ್ರಿಗಳವರು ತಿಳಿಸಿದ್ದಕ್ಕೆ ಇದು ಉಷ್ಣಕಾಲವಾದುದರಿಂದ ತಾಲ್ಲೂಕಿನಲ್ಲೂ ಆನೆ ಟಪಾಲ್ ಇಡಿಸಿ ಕಳುಹಿಸಿಕೊಡುವದಾಗಿ ಅಪ್ಪಣೆಕೊಡಿಸಿದರು. ಆನೆಗಳು ಬಂದಕೂಡಲೆ ಶಾಸ್ತ್ರಿಗಳೂ ನಾವೂ ಪ್ರಯಾಣಮಾಡುತ್ತೇವೆ.

ಮುಖ್ಯವಾಗಿ ಶ್ರೀಮನ್ಮಹಾರಾಜರವರು ಮತ್ತು ಈ ಪ್ರಾಂತದೊಳಗಿನ ದೊಡ್ಡಮನುಷ್ಯರೆಲ್ಲರು ಶ್ರೀ ಸ್ವಾಮಿಗಳವರ ಚರಣದರ್ಶನದಲ್ಲಿ ಅತ್ಯಂತ ಕುತೂಹಲ ಯುಕ್ತರಾಗಿ, ಅಂತ ಶುಭಸಮಯವಂ ಔತ್ಸುಕ್ಯದೊಡನೆ ನಿರೀಕ್ಷಿಸುತ್ತಲಿದ್ದಾರೆ. ಶ್ರೀಮನ್ಮಹಾರಾಜರವರ ದರ್ಶನಾರ್ಥ ನಾವು ಇಲ್ಲಿಗೆ ಬರುವ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿ ಫಾರಿನ್ ಸೆಕ್ರೆಟರಿಯವರು ಇಲ್ಲಿನ ಬ್ರಿಟಿಷ್ ರೆಸಿಡೆಂಟರವರಿಗೆ ಲೆಟರ್ ಬರೆದು ಶಾಸ್ತ್ರಿಗಳಿರುವಗೆ ಗಯಾ ಮೊಕಾಮಿಗೆ ಕಳುಹಿಸಿದರು, ಎಂಬದು.

ಪುರುಷನ ದಾರಿದ್ರ್ಯ ದುಃಖಗಳು—ಸುಗುಣವರ್ಧಕಗಳು.

ಮನುಷ್ಯನಿಗೆ ದಾರಿದ್ರ್ಯವೂ ನಿರಂತರದುಃಖವೂ ಉಂಟಾಗಲಿಕ್ಕೆ ದೈವಾನುಗ್ರಹರಾಹಿತ್ಯವೂ, ದುರದೃಷ್ಟವೂ ಕಾರಣವೆಂಬದಾಗಿ ಅನೇಕರು ಅಭಿಪ್ರಾಯ ಪಡುತ್ತಾರೆ. ಇದು ಪ್ರಬಲ ಭ್ರಾಂತಿ ಯೆಂದು ನಮ್ಮ ಅಭಿಪ್ರಾಯವು. ಏತಕ್ಕೆಂದರೆ—ಐಹಿಕಗಳಾದ ಕಷ್ಟಸುಖಗಳು ಕೇವಲ ಕರ್ಮಫಲಾಯತ್ತವಾದದ್ದೆಯೊರತು ಅನ್ಯಥಾ ಅಲ್ಲವು. ಯೌವನಪ್ರಾದುರ್ಭಾವ ಕಾಲದಲ್ಲಿ ಪುರುಷನಿಗೆ ಕೋರಿಕೆಗಳು ನಾನಾರೂಪವಾಗಿರುವದರಿಂದ ಅವುಗಳಿಗೆ ಧನವು ಪ್ರೋತ್ಸಾಹಕವಾದುದಾಗಿರುತ್ತದೆ. ಧನಿಕನಿಗೂ ನಿರಂತರ ಸಂತುಷ್ಟಮನಸ್ಕನಿಗೂ ಕಷ್ಟದುಃಖಗಳ ಸ್ವರೂಪವು ಈ ತೆರನಾದುದೆಂದು ತಿಳಿಯಲಾರದಾಗಿ ಅಂತವನ ಜೀವನವು ಅನ್ಯರಿಗೆ ನಿಷ್ಪ್ರಯೋಜಕವಾಗುತ್ತದೆ. ದಾರಿದ್ರ್ಯವೆಂಬದು ಪುರುಷನಿಗೆ ಲೋಕಾನುಭವಗಳಂ ಬಹಳವಾಗಿ ಬೋಧಿಸುತ್ತಿದೆ. ಅದರಿಂದ ಪರದುಃಖಸ್ವರೂಪವಿಂತೆಂದು ಗೊತ್ತಾಗುವದು. ನಮ್ರತೆಯನ್ನೂ, ಸೌಲಭ್ಯವನ್ನೂ, ಅನುರಾಗವನ್ನೂ, ಯಥೋಚಿತ ದಾಕ್ಷಿಣ್ಯವನ್ನೂ, ಅನ್ಯೋನ್ಯಭಾವವನ್ನೂ, ರಿಕ್ತತೆ ಯುಂಟುಮಾಡುತ್ತಿದೆ. ಈ ಗುಣಗಳನ್ನು ಸಂಪತ್ತು ಸೇರಿಸಲಾರದು. ದಾರಿದ್ರ್ಯವು ಶಾಸ್ತ್ರತಜ್ಞಾನವನು ಹೋಗಲಾಡಿಸಿ, ಸಕಲವೂ ಅಸ್ಥಿರವೆಂಬ ಭಾವವನ್ನೂ, ಸರ್ವವೂ ದುಃಖಮಯವೆಂಬ ನಂಬಿಗೆಯನ್ನೂ, ಪಾಪಭೀತಿಯನ್ನೂ ಲೋಕಾಂತರ ಚಿಂತೆಯನ್ನೂ, ಸತ್ಪ್ರವೃತ್ತಿಯನ್ನೂ ಉಂಟುಮಾಡುತ್ತಿದೆ. ಐಶ್ವರ್ಯಕ್ಕೆ ಅಪ್ಪಟ ಗುಣಪ್ರದವಲ್ಲವು. ಕಷ್ಟವು ಮನುಷ್ಯನಿಗೆ ವೈರಾಗ್ಯವನ್ನೂ ಭಗವದ್ಭಕ್ತಿಯನ್ನೂ ಉಂಟುಮಾಡುವುದು, ಧನವು ಮತ್ತತೆಯನ್ನೂ, ಅತ್ಯಾಶೆಯನ್ನೂ, ಅಸೂಯೆಯನ್ನೂ ಉಂಟುಮಾಡುತ್ತದೆ. ಮುಖ್ಯವಾಗಿ ಪುರುಷನಿಗೆ ಕಷ್ಟದಶೆಯಲ್ಲಿ ಬಂದೊದಗುವಂತ ಸುಗುಣಗಳು ಅವನು ಧನಿಕನಾಗಿ ಸಂತುಷ್ಟನಾಗಿರುವಾಗ ಬರಲೊಲ್ಲದು. ಒಬ್ಬನು ತನ್ನ ಕಷ್ಟಕಾಲದೊಳು ಅನ್ಯರಲ್ಲಿ ಅಭಿಮಾನವನ್ನೂ, ಅನುನಯವನ್ನೂ ವ್ಯಕ್ತಪಡಿಸುವಂದದಿ ಒಳ್ಳೇ ಸ್ಥಿತಿಯೊಳಿರುವಾಗ ತೋರಿಸುವದಿಲ್ಲವು. ಅದಲ್ಲದೆ ದಾರಿದ್ರ್ಯವು ಮುಕ್ತಿದಾಯಕವೆಂದು ಮತ್ತೊಂದು ಪ್ರಕಾರದಿಂ ನಿರೂಪಿಸುವೆವು. ಹ್ಯಾಗಂದರೆ, ಅಭಾವದಶೆಯಲ್ಲಿ ವಿರಕ್ತಿ ಯುಂಟಾಗುವಂತೆ ಸರ್ವಸಮೃದ್ಧವಾದ ಸ್ಥಿತಿಯೊಳುಂಟಾಗುವುದು ಪ್ರಯಾಸವು. ವಿರಕ್ತಿಯುಂಟಾಗುವತನಕ ಅಭಿಮಾನವು ತಪ್ಪಲಾರದು. ಅಭಿಮಾನ ನಿವಾರಣವಾಗುವತನಕ ಯಾವದೂ ಕೈಕೂಡಲಾರದು. ಆದ ಕಾರಣದಿಂದಲೇ ಪ್ರಖ್ಯಾತರಾದ ಮಹನೀಯರನೇಕರು ಸಕಲವಂ ಪರಿತ್ಯಜಿಸಿ, ರಿಕ್ತತೆಯಂತಾಳ್ದು ಬಹು ಕಷ್ಟಗಳಿಗೊಳಗಾಗಿ ಬಹು ವಿಷಯಗಳಂ ತಿಳಿದು ತಮ್ಮ ಹೃದಯವಂ ಪರಿಶುದ್ಧಮಾಡಿ ಕಡೆಗೆ ವಿರಾಗಿಗಳಾಗಿ ಮುಕ್ತರಾದರು. ಆದಕಾರಣ ದರಿದ್ರರೂ, ದುಃಖಪೀಡಿತರೂ, ಕಷ್ಟಜೀವಿಗಳೂ ಆದ ಪುರುಷರು ಸಂಪತ್ಪ್ರದವ ವೈಭವಾಧಿಕಾರ ಮತ್ತರಾದವರಿಗೆ ಸದ್ಗುಣಗಳುಪದೇಶಿಸುವರಾಗಿರುತ್ತಾರೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

ಕಳೆದ ತಿಂಗಳ ೨೦ನೇ ತಾರೀಖಿನಲ್ಲಿ ಧೋಲ್ಪುರದ ಮಹಾರಾಣಿಯವರು ಕಾಲಗತಿಯನ್ನೈದಿದರೆಂದು ತಿಳಿಯಬರುತ್ತದೆ.

ಬಾಲ್ಯವಿವಾಹವು ನಿರೋಧಿಸುವದಕ್ಕಾಗಿಯೂ ಇನ್ನು ಬಹುವಿಧ ಸಮಯಾಚಾರ ಪರಿಷ್ಕರಣಕಾರ್ಯದ ಬಗ್ಗೂ ಕಾಶ್ಮೀರದೇಶದ ಪಂಡಿತರು ಶ್ರೀನಗರದಲ್ಲಿ ಒಂದು ಸಭೆಯನ್ನೇರ್ಪಡಿಸಿರುತ್ತಾರೆ.

ಕಳೆದ ಏಪ್ರಿಲ್ ತಿಂಗಳಲ್ಲಿ ಸಾಲ್ಯಗಳು ಸೇರಿ ೩೫ ಲಕ್ಷ ರೂಪಾಯಿಗಳ ಬೆಳ್ಳಿಯು ಇಂಡ್ಯಾ ರಾಜ್ಯಕ್ಕೆ ಆಮದು ಆಗಿರುತ್ತದೆ. ಈ ಮೊತ್ತವು ಅದರ ಹಿಂದಿನ ತಿಂಗಳಲ್ಲಾದದಕ್ಕಿಂತಲೂ ಬಹಳ ಕಡಿಮೆಯಾಗಿರುತ್ತದೆ.

ಕಾಬುಲ್ ಅಮೀರರವರು ಈಚೆಗೆ ವೈಸರಾಯ್ ಸಾಹೇಬರವರಿಗೆ ಬರೆದ ಕಾಗದದಲ್ಲಿ ಇಂಗ್ಲೆಂಡ್ ರಾಜ್ಯಕ್ಕೆ ಹೋಗಿ ಬರಬೇಕೆಂಬ ಭಾವ ತಮಗೆ ಇರುವಂತೆ ವ್ಯಕ್ತಪಡಿಸಿರುತ್ತಾರೆ. ಈ ವಿಷಯದ ವ್ಯವಸ್ಥೆಯಬಗ್ಗೆ ಅಮೀರರವರಿಗೂ ವೈಸರಾಯ್ ಸಾಹೇಬರವರಿಗೂ ಕ್ಷಿಪ್ರದಲ್ಲಿ ಸಮಾಗಮವಾಗುವಂತೆ ಕಾಣುತ್ತದೆ.

ವಿಲಾಯತಿಯಿಂದ ಬಂದು ಈದೇಶದೊಳು ನೌಕರಿ ಮಾಡುವ ಯುರೋಪಿಯನ್ನರು, ಸ್ವದೇಶದಲ್ಲಿ ತಮ್ಮ ಮನೆಖರ್ಚು ಮೊದಲಾದದ್ದಕ್ಕೆ ಇಲ್ಲಿಂದ ಕಳುಹಿಸುವ ಮೊತ್ತಕ್ಕೆ ಸರ್ಕಾರದಾರಣೆಯನ್ನನುಸರಿಸಿ ಸ್ವಲ್ಪ ಹೆಚ್ಚುಕಡಿಮೆಯಾಗಿ ಒಂದಕ್ಕೆರಡರಷ್ಟು ಕೊಡಬೇಕಾಗಿಬಂದು, ತನ್ಮೂಲಕ ನಷ್ಟ ಪಡುತ್ತಾರೆಂಬ ಕಾರಣದಮೇಲೆ, ಈಚೆಗೆ ಕೆಲವು ದಿನಗಳ ಮೊದಲು ಸದರೀ ಜನರಿಗೆ ಗವರ್ನಮೆಂಟಿನವರು ಒಂದು ದರದಮೇಲೆ ಈ ದು ಮೊಬಲಗು ಕೊಡುತಲಿದ್ದಾರೆಯಷ್ಟೆ. ಹಾಗೆ ನಷ್ಟದ್ರವ್ಯವಂ ಪಡೆಯುವಂತವರೆಲ್ಲರು ತಪ್ಪದೆ ಸ್ವದೇಶಕ್ಕೆ ಹಣಕಳುಹಿಸುತಲಿದ್ದಾರೆಯೆಂಬ ಅಂಶವನ್ನು ಗವರ್ನಮೆಂಟಿನವರು ಸಿಗೇಯಿಂದ ವಿಚಾರಿಸುತಲಿರುವಂತೆ ಒಂದಾನೊಂದು ಪತ್ರಿಕೆ ತಿಳಿಸುತ್ತದೆ. ಇದು ಕೇವಲ ಆವಶ್ಯಕವಾದಕಾರ್ಯವೆ.

ಮದರಾಸ್ ಪ್ರೆಸಿಡೆನ್ಸಿ ಡಿಸ್ಟ್ರಿಕ್ಟು ಜಾತಿ ಅಧಿಕಾರಿಗಳು ತಮ್ಮ ಅಧಿಕಾರಕ್ಕೆ ಒಳಪಟ್ಟ ನೌಕರರಪೈಕಿ [illegible] ಗೋಪಿನಲ್ಲಿ ಪ್ರಕಟಿಸಲ್ಪಡುವದಿಲ್ಲವೊ ಅಂತವರಿಗೆ ಪ್ರಿವಿಲೇಜ್ ರಜಾ ಕೊಡುವ ಅಧಿಕಾರವನ್ನವರಿಗುಂಟುಮಾಡಬೇಕೆಂದು ಮದರಾಸ್ ಗವರ್ನಮೆಂಟಿನವರು ಮಾಡಿದ ಶಿಫಾರಸ್ಸನ್ನು ಇಂಡ್ಯ ಗವರ್ನಮೆಂಟಿನವರು ಮಂಜೂರ್ಮಾಡಿರುತ್ತಾರೆ.

ಚೀನಾದೇಶದಲ್ಲ ಯಾವದಾದರೊಂದು ಬ್ಯಾಂಕ್ ದಿವಾಲೀ ಆದರೆ ಅದರಲ್ಲಿ ಕೆಲಸಮಾಡುವ ಗುಮಾಸ್ತೆಗಳು ಮತ್ತು ಮ್ಯಾನೇಜರುಗಳನ್ನು ತಲೆಕಡಿಯುವದಲ್ಲದೆ ಬ್ಯಾಂಕಿನ ಲೆಕ್ಕಬುಕ್ಕುಗಳನ್ನೂ ಕಡಿದ ತಲೆಗಳನ್ನೂ ಒಂದುರಾಶಿಯಾಗಿ ಹಾಕುವದು ವಾಡಿಕೆಯಾದುದರಿಂದ ಈಗ್ಗೆ ೫೦೦ ವರ್ಷಗಳ ಮೊದಲು ಒಂದು ಬ್ಯಾಂಕಾದರೂ ದಿವಾಳಿಯಾಗುವದಿಲ್ಲವೆಂದು ಒಂದಾನೊಂದು ಪತ್ರಿಕೆ ತಿಳಿಸುತ್ತದೆ.

ಕಳೆದ ಮೇತಿಂಗಳ ೨೨ನೇ ತಾರೀಖಿನಲ್ಲಿ ಕನ್ಯಾಕುಮಾರೀ ದೇವಸ್ಥಾನದಲ್ಲಿ ನಡೆದ ಕಳವು ಪತ್ತೆಯಾಗುವದಕ್ಕೆ ಸಹಾಯವಾದ ಸಮಾಚಾರವನು ಕೊಡುವಂತವನಿಗೆ ೧,೦೦೦ ರೂಪಾಯಿಗಳು ಇನಾಂ ಕೊಡಲ್ಪಡುವದೆಂದು ಮದರಾಸ್ ಗವರ್ನಮೆಂಟಿನವರು ಪ್ರಕಟಿಸಿರುತ್ತಾರೆ.

ಮಹಾರಾಜಾ ದುಲೀಪ್‌ಸಿಂಗರವರ ಪುತ್ರರಾದ ವಿಕ್ಟರ್ ದುಲೀಪ್‌ಸಿಂಗರವರು ತಮ್ಮ ತಂದೆಯವರ ಪ್ರತಿನಿಧಿಯಾದ ಮಹಾರಾಜಾ ಎಂಬ ಗೌರವವ ಪಡೆಯುವ ವಿಷಯದಲ್ಲಿ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಸಲಹೆಯಮೇಲೆ ಮಹಾರಾಣಿಯವರು ತಮ್ಮ ಅನುಮತಿಯಂ ಕೊಡದಿಲ್ಲವೆಂಬ ಪ್ರವಾದ ಹುಟ್ಟಿದೆ.

LOCAL AND PROVINCIAL NEWS.
ಒಳದೇಶವೃತ್ತಾಂತ ಪ್ರಾಂತದೇಶವೃತ್ತಾಂತಗಳು

ಮೈಸೂರು ಡಿವಿಜನಿಗೆ ಸೇರಿದ ಡಿಸ್ಟ್ರಿಕ್ಟ್ ಎಂಜನಿಯರ್ ನೆ. ಬಿ. ಸಿ. ಮಾಧವರಾಯರವರು ಅವರು ಬಿಡುಗಡೆ ಹೊಂದಿದ ತಾರೀಖ್ ಮೊದಲು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಮೈಸೂರ್ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಮಿ|| ಎ. ಡಬ್ಲ್ಯು. ಬೆರಾರ್ಡಿಯವರು ಈ ತಿಂಗಳ ೪ನೇ ತಾರೀಖ್ ಮೊದಲು ೩ ತಿಂಗಳು ೨ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಈ ಸಂಸ್ಥಾನದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಆದ ಮಿ|| ಸಿ. ಪಿ. ಮಾಧವರಾಯರವರು ಒಂದು ತಿಂಗಳ ಪ್ರಿವಿಲೇಜ್ ರಜಾ ಮೇಲೆ ಮದರಾಸ್ ಮತ್ತು ಕೊಯಿಂಬತ್ತೂರ್ ಪ್ರಾಂತಕ್ಕೆ ಹೋಗಿದ್ದರಷ್ಟೆ. ಸದರೀ ಅಧಿಕಾರಿಯು ಕಳೆದ ಮಂಗಳವಾರದಿವಸ ಇಲ್ಲಿಗೆ ವಾಪಸ್ ಬಂದರು.

ನೆಲಮಂಗಲ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುವ ತಿಪ್ಪಟೂರು ತಾಲ್ಲೂಕು ಅಮಲ್ದಾರ್ ಎ. ಸಿ. ರಾಜಗೋಪಾಲಾಚಾರ್ಯರವರು ಹಿಂದೆ ತಗದುಕೊಂಡಿದ್ದ ೨೦ ದಿನಗಳ ಪ್ರಿವಿಲೇಜ್ ರಜಾ ಅಲ್ಲದೆ ಮರಳಿ ೧ ತಿಂಗಳು ೨೯ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಈ ಸಂಸ್ಥಾನದ ರೆಸಿಡೆಂಟರಾಗಿದ್ದ ಸರ್ ಜೇಂಸ್ ಗಾರ್ಡನ್ ಸಾಹೆಬರವರುತೆ ಲೋಹದಲ್ಲಿ ತಯಾರ್ಮಾಡಲ್ಪಟ್ಟು ಬಂದಿರುವ ಪ್ರತಿಮೆಯನ್ನು ಮೈಸೂರು ಪಟ್ಟಣದಲ್ಲಿ ಸ್ಥಾಪಿಸುವದಕ್ಕಾಗಿ ಈ ಸರ್ಕಾರದವರು ೨೩,೪೦೦ ರೂಪಾಯಿಗಳು ಮಂಜೂರ್ಮಾಡಿರುವದಾಗಿ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತ್ತದೆ.

ಶ್ರೀಮನ್ಮಹಾರಾಜರವರ ಅರಮನೆ ಖರ್ಚಿನಬಗ್ಗೆ ಸಂಸ್ಥಾನದ ಮುಖ್ಯವಳಿಯಿಂದ ಸಾಲೀಯಾನಾ ಕೊಡಲ್ಪಡುತ್ತ ಬರುವ ಹದಿನೈದು ಲಕ್ಷ ರೂಪಾಯಿಗಳು ಸಾಕಾಗಿಲ್ಲವಾಗಿ, ಇನ್ನು ಎರಡುಲಕ್ಷ ರೂಪಾಯಿಗಳು ಜಾಸ್ತಿ ಮಾಡಬೇಕೆಂದು ಶ್ರೀಮನ್ಮಹಾರಾಜರವರು ಇಂಡ್ಯ ಗವರ್ನಮೆಂಟಿಗೆ ತಿಳಿಸಲು ಅವರು ಅದೇ ಪ್ರಕಾರ ಮಂಜೂರ್ಮಾಡಿರುವಂತೆ ಅಂತರಂಗದಲ್ಲಿ ತಿಳಿಯಬರುವದಾಗಿ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯು ಪ್ರಕಟಿಸಿರುತ್ತದೆ.

ಒಂದುವಿಧ ವಿಚಿತ್ರದ, ಚಮತ್ಕಾರ ಶಸ್ತ್ರಸಂಬಂಧ ವಿವರಣೆ.

ಅಮೆರಿಕಾ ದೇಶದ ಫಾಯಟಿ, ವಿಯನಾನಾ ಪಟ್ಟಣದ ಬುರುಕಸೂನು ಅಂಬ್ರೆಡರೆ, ಅಮೆರಿಕಾದೇಶದ ಧೂರೆತನವರಿಗೆ ಒಂದು ಚಮತ್ಕಾರದ ಶಸ್ತ್ರಪರೀಕ್ಷೆ ಸಂಗತಿಯ ತಿಳಿಯಮಾಡಿದನು. ವಿಶೇಷ ಪಂಡಿತನಾದ ಬಿಲರಾತು ಸಾಮವಸ್ಥ ಅಂಬ್ರೆಡರೆ ಒಬ್ಬನಿಗೆ, ಗರ್ಭವನ್ನು ಕತ್ತರಿಸಿ, ಅದರಲ್ಲಿ ಮುಕ್ಕಾಲು ಪರಿಮಾಣವು ಇಂದ್ರಿಯ ರಾಗವಾಹಿಕಸೂತ್ರಗಳನ್ನು ಉಳಿದು ತೆಗೆದು ಆ ಮನುಷ್ಯನಿಗೆ ಶಸ್ತ್ರಬಾಧೆಗಳು ನಿವಾರಣವಾಗಿದನು. ಈ ಚಮತ್ಕಾರ ಶಸ್ತ್ರವಿಧಿ ಯಾರು ಇದುವರೆಗೆ ಮಾಡಲಿಲ್ಲ. ಗರ್ಭವು ಕತ್ತರಿಸಿ ತೋರಿದನೆ ಮಾಡಿದ ಕಾಲದಲ್ಲಿ, ಆ ಮನುಷ್ಯನಿಗೆ ಗರ್ಭದಲ್ಲಿ ಒಂದುವಿಧ ಸೂಲರೋಗವು ಇದ್ದಿತ್ತು. ಆ ಕಾರಣಗಳಿಂದ ಈ ಕೆಳಗೆ ವಿವರಿಸಿದಪ್ರಕಾರ ಆ ಮನ ಬ್ಯಸಿಗೆಬೆಸ್ಟಿಗಸು, ಇಲ್ಲದೆ, ನುರುತುನಳು ಇದ್ದಿತ್ತು:—ಅನ್ನ ತಿನ್ನವು ಕಡೆಮೆ, ಗರ್ಭದಲ್ಲಿ ಒಂದುವಿಧ ಉಪದ್ರವವಾದ ಶಕೆ, ಪ್ರಕೃತಿ ನಿತ್ರಾಣದ ಮಾರ್ಗ "ಪ್ರಾಣವು ಹೋಗುವಾಗ ಬೈರನಪ್ರ," ದುತರಲ್ಲ ಸರ್ಪದ, ಉದರಾರಾಲದಲ್ಲ ದುರ್ಗಂಧದ ತಾಚೆ ಅಂಬು, ವಾಂತಿ, ಬಿಕ್ಕು, ಕೆಂಪು, ಅನ್ನ ತಿನ್ನುವದ [illegible] ಕಾಲದಲ್ಲಿ ವ್ಯಾಕೆ, ಕಣ್ಣುಗಳು ಆಳಕ್ಕೆ ಎಳದುಕೊಂಡು ಇರುವದು, ಅದರಲ್ಲಿ ಹಳದೀ, ಜಮ್ಮುಗಳಲ್ಲಿ ಗೂದಿಗಳಲ್ಲಿ ಶೀತಳದ ಬಂಕೆ [illegible], ಈ ಪ್ರಕಾರದ ಬಾಧ್ಯಗ್ರಸ್ತನಾಕ್ರ ಮಿಸೀಳಾವದು, ನಿತ್ರಾಣದ ವಿಶೇಷ ಬಿಸಾಸವು. ಆ ಕಾಲಕ್ಕೆ ಬಾಧ್ಯಗ್ರಸ್ತನಿಗೆ [illegible] ಕಲ್ಲಿ ಮೊದಲ್ಲ, ಮನಸ್ಸಿನಲ್ಲಿ ಭಯಂಕರವಾದ ಕಷ್ಟ ಪೀಡೆಗಳು ತೋರುವವು. ಪಕ್ಕೆಯ ಆಕೆಸಾಗಿತ್ತಾಗಿಸುವ ಕಾಲದ್ಲ [illegible], ಕೆಳಗೆ ಬೀಳದ ಹಾಗೆ ಊರೆ [illegible], ಇಲ್ಲದೆಕಂಪನವಾಗಿ [illegible]. ಗರ್ಭದಲ್ಲಿ ಮುತ್ತುತ್ತಿ [illegible] ಬಂಧಿಸಿ ಮಲವನ್ನು ಒಂದನವಾಗಿ, ಆ [illegible], ಶರೀರ ಚರ್ಮವು [illegible] ಮಂದವಾದಿ, ಶರೀರದಲ್ಲಿ ರಕ್ತವು ಸಹ್ಯಗೆ ಪ್ರವಹಿಸದೆ, ಆ ಕಡೆ ನೂತನವು, ಬಾಧ್ಯಗ್ರಸ್ತನು ಅನ್ನವು ಜ ಜಸಿದ ಕಾಲದಲ್ಲಿ ಬಾಯಿನಲ್ಲಿ [illegible], ಬಾಯಿಸಿದ ಅನ್ನವು ಗರ್ಭದಲ್ಲಿ ಜೀರ್ಣವಾಗದೆ, ಅದು ಕುಳಿತು, ಬಾಯಿನಲ್ಲಿ [illegible], ರುಚಿಯು, ಎದೆಯಲ್ಲಿ ಜಿಡವಾದ ಅದರು, ಆಕಾರದಿಂದ ಬಾಧ್ಯಗ್ರಸ್ತನು ತಲೆ [illegible], ಎದೇ ಕ್ಷೇತ್ರದ ರೋಗವು ಇದ್ದಂತಾಗಿ ತೋರುವದು. ಆ ತದಾರಭ್ಯವು, ಬಾಧ್ಯಗ್ರಸ್ತನಿಗೆ ಅನ್ನದ ಆಸೆಯು ಕಡಿಮೆಯಾಗಿ ಅನ್ನವನ್ನು ಗರ್ಭದಲ್ಲಿ ದಕ್ಕಿಸದಹಾಗೆ ಊರೋದು, ಜೀರ್ಣದ ದ್ವಾರಗಳು, ಗರ್ಭದಲ್ಲಿ ಕೆಲವು ಮುಚ್ಚಿಕೊಂಡು [illegible] ಗರ್ಭದಲ್ಲಿ ರಣದಿಂದ ಉತ್ಪತ್ತಿ ಆಗದಲ್ಲ. ಆದರೆ ಆಪರೇಷನ್ ಕಾಲದಿಂದ ಮೊದಲು [illegible] ಈ ರ ಗುಣಗಳು ಉತ್ಪತ್ತಿ ಆಗುತ್ತಿ. [illegible] ಸಾವಿರದಲ್ಲಿ ಒಬ್ಬನಿಗೆ ಮಾತ್ರ ಗರ್ಭದಿಂದ ಈ ದುರ್ಗುಣಗಳು ಕಾಣುವದೆ ಆಗಲಿ ಇತರವು ಅಲ್ಲ. ಈ ಬಾಧ್ಯಗಳ ನಿವಾರಣೆ ನಿಮಿತ್ತವು ತಾಯಿಕೋಲು ಕಷಾಯವನ್ನು ಉಪಯೋಗಿಸುವದರಿಂದ ಈ ಬಾಧ್ಯಗಳು [illegible] ದೇಹಕ್ಕೆ ಆರೋಗ್ಯವನ್ನು ಮಾಡುತ್ತವೆ. ಈ ಕಷಾಯವು ಔಷಧ ಅಂಗಡಿಗಳಲ್ಲಿ ಮಾತಿ ಸಪ್ಪ ದೇಶಗಳಲ್ಲಿ ಕೆಮಿಸ್ಟ್ ಆಸ್ಪತ್ರೆ ಬಜಾರುಗಳಲ್ಲಿ ಕ್ರಯಕ್ಕೆ ಮಾರುತ್ತಿದೆ. ಈ ಕಷಾಯವನ್ನು ಪಾನಮಾಡುವದರಿಂದ ಬಾಧ್ಯಗಳ ಅಸ್ತಿವಾರಗಳನ್ನು ನಿರ್ಮೂಲ ಮಾಡಿ ಶರೀರಕ್ಕೆ ಬಲವನ್ನು ಉತ್ಪತ್ತಿ ಮಾಡುತ್ತದೆ.

S. O.

SUMMARY OF NEWS.
ವೃತ್ತಾಂತ ಸಂಗ್ರಹವು.

ಕಳೆದವಾರದಲ್ಲಿ ಅಹಮ್ಮದ ನಗರದಲ್ಲಿ ಹಾವರೋಗವು ಬಂದಿತ್ತು. ಕೂಡಲೇ ಅದು ಹೊರಟುಹೋಯಿತು. ಯಾವ ಯಾವ ಬಡಿಗೆ ಗಡಾಸನಾಯಿತೆಂತ ಗೊತ್ತಿಲ್ಲ—ಕ ಸು.

ಚೀನಾದೇಶದಲ್ಲಿ ತಂದೆಯನ್ನು ಕೊಂದು ಹಾಕಿದ್ದಕ್ಕಾಗಿ ಮಗನನ್ನೂ ಈ ಮಗನಿಗೆ ಸರಿಯಾಗಿ ಬುದ್ಧಿ ಕಲಿಸದೆಹೋದದ್ದಕ್ಕಾಗಿ ಅವನ ಉಪಾಧ್ಯನನ್ನೂ ಗಲ್ಲಿಗೆ ಹಾಕಿಬಿಟ್ಟರು.

ಈಚೆಗೆ ಕೆಲವು ದಿನಗಳ ಹಿಂದೆ ಕಲ್ಕತ್ತೆಯಲ್ಲಿ ಒಬ್ಬ ಟಾಂಗಾ ಗಾಡಿಯವನನ್ನು ಒಬ್ಬ ಸೋಲ್ಜರನು ನಿಷ್ಕಾರಣವಾಗಿ ಗುಂಡುಹಾಕಿ ಕೊಂದನು. ಮುಂದಿನ ಪರಿಣಾಮವನ್ನು ಹೇಳುವದರಲ್ಲಿ ಪ್ರಯೋಜನವಿಲ್ಲ—ಸ ವೃ

ನಾಗಪುರ ಪ್ರಾಂತದಲ್ಲಿ ಈವರ್ಷ ಬರಗಾಲದ ಲಕ್ಷಣಗಳು ತೋರಬರುತಿದೆ. ಸರ್ಕಾರೀ ರಿಲೀಫ್ ಕಾಮಾಗಾರಿಯು ಪ್ರಾರಂಭವಾಗಿ ೫,೦೦೦ ಜನರು ಹೊಟ್ಟೆಗಾಗಿ ದುಡಿಯುತಲಿದ್ದಾರೆ—ಕ. ಪತ್ರ

ಕಳೆದ ತಿಂಗಳ ೧೦ನೇ ತಾರೀಖ್ ಗುರುವಾರ ರಾತ್ರಿ ಘಂಟೆ ೭ಕ್ಕೆ ಕಾಶೀ ಕ್ಷೇತ್ರದಲ್ಲಿ ಶ್ರೀ ವಿಶ್ವನಾಥದೇವರ ಆರತಿಯಾಗುವಾಗ್ಯೆ ಒಳಿಯಾಲ್ಲಿದ್ದ ಪಾರ್ವತಿದೇವಾಲಯದೊಳಗಿಂದ ಸಣ್ಣ ಹುಡುಗನ ರೋದನವು ಕೇಳಬಂತು. ಜನರು ಅಲ್ಲಿ ಹೋಗಿ ನೋಡಿದಲ್ಲಿ ಒಂದು ತಿಂಗಳ ಪ್ರಾಯದ ಸಣ್ಣ ಗಂಡು ಮಗು ದೇವಿಯ ಕಾಲುಮೇಲೆ ಬಿದ್ದದ್ದು ದೃಷ್ಟಿಗೆಬಿತ್ತು. ಇದನ್ನು ಕುರಿತು ಪೋಲೀಸ ಚೌಕಸಿಯು ಶುರು ಆಗಿದೆ—ಕ .ಸು.

ಸಿಂಧಿಯಾ ಮಹಾರಾಜರು ರೈಲಗಾಡಿಗಳನ್ನು ನಡೆಸುವದಕ್ಕೆ ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಇವರು ತಮ್ಮ ಸಂಸ್ಥಾನದಲ್ಲಿ ಅಂದರೆ, ಗ್ವಾಲಿಯರ್‌ನಲ್ಲಿ ಬೇನಾ ಎಂಬ ಸ್ಥಳದಿಂದ ಮೊನಾ ಎಂಬ ಸ್ಥಳದ ವರೆಗೆ ೭೫ ಮೈಲುಗಳ ರೈಲ್ವೆ ರಸ್ತೆಯನ್ನು ಮಾಡಿಸಿದ್ದಾರೆ. ಈ ರಸ್ತೆಯಲ್ಲಿ ಮೊದಲಿನಸಲ ಟ್ರೈನನ್ನು ತಾವೇ ಬಹು ಸುಲಭವಾಗಿ ನಡೆಸುತ ಎಂಜಿನನ್ನು ಬಹಳ ಸಮರ್ಪಕವಾಗಿ ಇಟ್ಟುಕೊಂಡಿದ್ದರು.

ಸಿಂಲಾ ಹತ್ತರ ೪೦ ಜನರನ್ನು ಹೊತ್ತುಕೊಂಡುಹೋಗುತಿದ್ದ ಒಂದು ದೋಣಿಯು ನದಿಯ ಸುಳಿಯಲ್ಲಿ ತಲೆಕೆಳಗಾಗಿ ಎಲ್ಲರೂ ನೀರಿನಲ್ಲಿ ಮುಳುಗಿಹೋದರು. ಅಲ್ಲಿನ ಟೆಲಿಗ್ರಾಫ್ ಇಲಾಖೆಯಲ್ಲಿ ನೌಕರನಾಗಿದ್ದ ಮುಕರ್ಜಿ ಯೆಂಬುವನು ಆ ಕೂಡಲೆ ತನ್ನ ಸಾಹಸವನ್ನೆಲ್ಲ ಖರ್ಚುಮಾಡಿ ಮುಳುಗಿ ಹೋಗಿದ್ದವರನ್ನೆಲ್ಲ ಅಂದರೆ ೩೯ ಜನರನ್ನು ಬದುಕಿಸಿದನು. ಒಬ್ಬನು ಮಾತ್ರ ಸಿಕ್ಕದೆ ಸತ್ತುಹೋದನು. ಈ ಯುವನನ ಸಾಮರ್ಥ್ಯವನ್ನು ಸರ್ಕಾರದವರು ಕೊಂಡಾಡಿ ಅವನಿಗೆ ಒಂದು ಶ್ರೇಷ್ಠವಾದ ಬಹುಮಾನವನ್ನು ಕೊಡಿಸಬೇಕೆಂದು ಮೇಲಕ್ಕೆ ಬರೆದಿದ್ದಾರೆ—ವೃ ಪ

ಹರಿದ್ವಾರದಲ್ಲಿ ಹೋದವರ್ಷ ಪೊಲೀಸ ಅಧಿಕಾರಿಗಳ ಉನ್ಮತ್ತತೆಯಿಂದ ಬಡ ಯಾತ್ರಿಕರನ್ನು ಬಹಳ ಕಷ್ಟಪಡಿಸಿದರು. ಅವರಲ್ಲಿ ಕೆಲಕೆಲವರಿಗೆ ಮರಣ ಸಹ ಆಯಿತು. ಆದರೆ ಪೊಲೀಸಿನವರ ದುರ್ನಡತೆಗೆ ಸರ್ಕಾರದವರು ಕೊಡತಕ್ಕಷ್ಟು ಲಕ್ಷ್ಯಕೊಡಲಿಲ್ಲವು. ಅಲ್ಪಸ್ವಲ್ಪ ವಿಚಾರಣೆ ಮಾಡಿದಹಾಗೆ ಮಾಡಿ ಪೊಲೀಸ ಅಧಿಕಾರಿಗಳನ್ನು ಬಿಟ್ಟುಬಿಟ್ಟರು. ಅದ್ದರಿಂದ ಈ ವರ್ಷ ಯಾತ್ರಿಕರು ಹರಿದ್ವಾರಕ್ಕೆ ಹೋಗದೆ ನೇಪಾಳದ ರಾಜ್ಯಕ್ಕೆ ಸೇರಿದ ಜನಕಪುರವೆಂಬ ಕ್ಷೇತ್ರಕ್ಕೆ ಹೋಗುವ ಆಲೋಚನೆ ಮಾಡಿದ್ದಾರೆ. ಹರಿದ್ವಾರವು ಇನ್ನುಮುಂದೆ ಹಾಳಾಗುವದೆಂದು ಹೇಳಿಕೊಳ್ಳುತ್ತಾರೆ—ಕ. ಪತ್ರ

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ವಿಲ್ಕೆಸ್‌ಬರ ಎಂಬ ಊರಿನಲ್ಲಿ ಜನರು ಗಣಿಗಳಲ್ಲಿ ಕೆಲಸ ಮಾಡುತಲಿದ್ದಾಗ್ಯೆ ಒಂದು ಇಲಿಯು ಆ ಗಣಿಯಲ್ಲಿ ಕಾಣಿಸಿಕೊಂಡು ಇಬ್ಬರ ಕಾಲನ್ನು ಕೆರದು ದೂರ ಓಡಿಹೋಯಿತು. ಹೀಗೆ ಎರಡುಮೂರಾವರ್ತಿ ಮಾಡಿದಾಗ ಅವರಿಬ್ಬರೂ ಇದ್ಯಾಕೆ ಹೀಗೆ ನಮ್ಮ ಕಾಲನ್ನು ಕೆರದು ಓಡಿಹೋಗುತದೆಂದು ಅದನ್ನು ಹಿಡಿಯುವದಕ್ಕಾಗಿ ಓಡಿಹೋದರು. ಆ ಕೂಡಲೆ ಅವರು ಮೊದಲು ನಿಂತಿದ್ದ ಸ್ಥಳದಲ್ಲಿ ಮೇಲ್ಗಡೆಯಿಂದ ಒಂದು ಭಾರೀ ಬಂಡೆ ಉರುಳಿಬಿತ್ತು, ಅದರ ಕೆಳಗೆ ಕೆಲಸ ಮಾಡುತಲಿದ್ದ ಇನ್ನೂ ನಾಲ್ಕಾರುಮಂದಿ ಸತ್ತುಹೋದರು. ಅವರಿಬ್ಬರು ಮಾತ್ರ ಉಳುಕೊಂಡರು. ಅನಂತರ ಅವರಿಬ್ಬರೂ ಆ ಇಲಿ ತಮ್ಮ ಪ್ರಾಣವನ್ನು ಉಳಿಸಿತೆಂದು ಕೊಂಡಾಡಿದರು—ವೃ ಪ.

ಮುಂಬೈಯಲ್ಲಿ ಕಳೆದ ಆಗಸ್ಟು ತಿಂಗಳಲ್ಲಿ ಆದ ದಂಗೆಯಲ್ಲಿ ಘಾತಪಟ್ಟು ನಿರಾಧಾರಿಯಾದ ಹಿಂದೂ ಮುಸಲ್ಮಾನರಿಗೆ ಸಹಾಯ ಮಾಡುವದಕ್ಕೆ ವಂತಿಗೆಯು ಒಟ್ಟುಮಾಡಿ ಅದರ ವ್ಯವಸ್ಥೆ ಮಾಡಲಿಕ್ಕೆ ಒಂದು ಸಭೆಯು ಸ್ಥಾಪಿಸಲ್ಪಟ್ಟಿತ್ತು. ಈವರೆಗೆ ಮಾಡಿದ ಕೆಲಸದ ವಿವರ ತಿಳಿಸಲಿಕ್ಕೆ ಮತ್ತು ಬಾಕೀ ಉಳಿದ ಹಣದ ವ್ಯವಸ್ಥೆ ಯೇನು ಮಾಡಬೇಕೆಂಬುದು ವಿಚಾರ ಮಾಡುವದಕ್ಕೆ ಅವರ ಒಂದು ಸಭೆಯು ಮೊನ್ನೆ ಕೂಡಿತ್ತು. ಸುಮಾರು ೧,೨೦೦ ಜನರು ತಮಗೆ ಸಹಾಯ ಸಿಕ್ಕಬೇಕೆಂತ ಬರಕೊಂಡದ್ದರಲ್ಲಿ ಅವರಿಗೆ ಯೋಗ್ಯ ಕಂಡಂತೆ ಹಣ ಹಂಚಿಕೊಟ್ಟು ಇಪ್ಪತ್ತು ಸಾವಿರ ಚಿಲ್ಲರೆ ಬಾಕೀ ಉಳಿದಿರುತಿದೆಯಂತೆ. ಇಂತ ಹಣ ಯಾವದಾದರೊಂದು ಸತ್ಕೃತ್ಯಕ್ಕೆ ಹಾಕಬೇಕೆಂತ ನಿಶ್ಚಯಿಸಿರುತ್ತಾರೆ. ಯಾವ ಕೆಲಸವೆಂತ ನಿಶ್ಚಯವಾಗುವ ವರೆಗೂ ಸಭೆಯ ಹೆಸರಿನಲ್ಲಿ ದಿಮುಂಬೈ ಬ್ಯಾಂಕಿನಲ್ಲಿಡಬೇಕೆಂತ ನಿಶ್ಚಯಿಸಿರುತ್ತಾರೆ.ಕ, ಸು,

EXTRACTS.

ಕೆಲವುಜನ ಕಳ್ಳರು ಪೋಲೀಸ ಇನಸ್ಪೆಕ್ಟರ ವೇಷವನ್ನೂ, ಕೆಲವರು ಫೌಜದಾರನ ವೇಷವನ್ನೂ, ಕೆಲವರು ಜಮಾದಾರನ ವೇಷವನ್ನೂ ಇನ್ನು ಕೆಲವರು ಹವಾಲ್‌ದಾರ ಶಿಪಾಯಿಗಳ ವೇಷಗಳನ್ನೂ ಧರಿಸಿಕೊಂಡು ಫರೀದ್‌ಪುರ ಜಿಲ್ಲೆಗೊಳಪಟ್ಟ ಬಹುನುಟಿ ಎಂಬ ಗ್ರಾಮದಲ್ಲಿರುವ ಒಬ್ಬ ಶ್ರೀಮಂತ ಸದ್ಗೃಹಸ್ಥನ ಮನೆಗೆ ಹೋಗಿ, ಹೇಳಿದ್ದೇನಂದರೆ,—ನೀನು ಕಳವಿನ ಕೆಲವು ಒಡವೆಗಳನ್ನು ಕೊಂಡುಕೊಂಡಿರುತ್ತೀ ಎಂದು, ಇಗೋ! ಈಗ ನಾವು ನಮ್ಮೊಡನೆ ತಂದಿರುವ ಬೈರಾಗಿಯು ಹೇಳುತ್ತಾನೆ. ಆದದರಿಂದ ಆ ಒಡವೆಗಳೆಲ್ಲ ಎಲ್ಲಿರುವವು? ಶೀಘ್ರವಾಗಿ ತಂದುಕೊಡು? ಎಂದು ಆ ನಿರಪರಾಧಿಯಾದ ಶ್ರೀಮಂತನನ್ನು ಕೃತ್ರಿಮ ಪೋಲೀಸರು ಒಳಿತಾಗಿ ಬೆದರಿಸಿದ್ದರಿಂದ ಅವನು—ಇವರೆಲ್ಲರೂ ಕೃತ್ರಿಮ ಪೋಲೀಸರೆಂತ ತಿಳಿಯದೆ ತನು ಬಹುಮಟ್ಟಿಗೆ ತನ್ನ ಬಳಿಯಲ್ಲಿರುವ ಚಿನ್ನ ಬೆಳ್ಳಿಗಳ ಯಾವತ್ತು ಸಾಮಾನುಗಳನ್ನು ತೆಗೆದು ಅವರೆದುರಿನಲ್ಲಿ ತಂದಿಟ್ಟು, ಸ್ವಾಮಿ! ಇವುಗಳು ಸ್ವಾರ್ಜಿತ ಒಡವೆಗಳೇ ಹೊರತು, ನಾನು ಕಳವಿನಿಂದ ಕೊಂಡ ಒಡವೆಗಳಲ್ಲ; ಎಂದು ದೈನ್ಯ ಭಾವದಿಂದ ನುಡಿಯಲು,—ಪೋಲೀಸಿನವರೊಳಗೊಬ್ಬನು ಆ ಬೈರಾಗಿಯ ಕಿವಿಯಲ್ಲಿ ಒಬ್ಬನನ್ನು ಕುರಿತು ಎಲೈ ವೈದಿಕನೇ, ನೀನು ಹೇಳಿದ ಒಡವೆಗಳು ಯಾವವು? ತೋರಿಸು, ಎಂದು ಚಿಂತಿಗೆ ಕೈಕೊಡಲು,—ಆ ಬೈರಾಗಿಯು ಇವುಗಳೇ ನಾನುಹೇಳಿದ ಒಡವೆಗಳು, ಎಂದು ಖಂಡಿತವಾಗಿ ಹೇಳಿಬಿಟ್ಟನು. ತತ್‍ಕ್ಷಣವೇ ಆ ಪೋಲೀಸರು ಅವನ ಎಲ್ಲಒಡವೆಗಳನ್ನು ಜಪ್ತು ಮಾಡುವ ಭಾವವನ್ನು ತೋರಿಸಿ, ಚಾವಡಿಯ ಕಡೆಗೆ ಹೊರಡಲುದ್ಯುಕ್ತರಾದರು. ಧಣಿಕಳು ಕೊಂಡಿ ಏ ಸಾಹುಕಾರನು ಪಾದ ಅವರ ಬೆಂಬಳಿ ನಿಂತು ಹೋದನು. ಅವರೆಲ್ಲರು ಕೂಡಿ ಮಾರ್ಗದಲ್ಲಿ ಅವನಿಗೆ ಒಳಿತಾಗಿ ತಿಳಸಿ, ಸುಮಾರು ಎಂ ಸಾವಿರ ರೂಪಾಯಿ ಬೆಲೆ ಬಾಳುವಷ್ಟು ಒಡವೆಗಳನ್ನು ಎಬ್ಬಿಸಿಕೊಂಡು ಕಾಲಿಗೆ ಬುದ್ಧಿಹೇಳಿಸಿದರು. ಆ ಪೋಲೀಸ ವೇಷಧಾರಿಗಳಾದವರಲ್ಲಿ ೫ ಜನರುಮಾತ್ರ ಸಿಕ್ಕಿದರೆಂದು ತಿಳಿಯಬರುತಿದೆ

ರಷಿಯಾ ದೇಶದಲ್ಲಿ ಖಟಕಬಟಿ ಎಂಬ ಜನರಿರುತ್ತಾರೆ. ಆಜನರಲ್ಲಿ ಮನುಷ್ಯನವಧೆ ಮಾಡುವ ಸಂಪ್ರದಾಯವಿದೆ. ಆದರೆ ಬಲುಮೆಯಿಂದ ಅವರು ವಧೆಯನ್ನು ಮಾಡುವದಿಲ್ಲ. ಸಮ್ಮತಿಯಿಂದ ವಧೆ ಮಾಡುತ್ತಾರೆ. ಅದು ಹ್ಯಾಗೆಂದರೆ, ಯಾವನಾದರು ವಯೋವೃದ್ಧನಾಗಿ, ಅಥವಾ ಬೇನೆಯಿಂದ, ಅಥವಾ ಪ್ರಪಂಚಕ್ಕೆ ಬೇಸತ್ತು ಮರಣವನ್ನು ಇಚ್ಛಿಸುತ್ತಿದ್ದರೆ ಅವನವಧೆ ಮಾಡುತ್ತಾರೆ. ಮರಣ ಬೇಕಾದವನು ಪ್ರಥಮತಃ ತನ್ನ ಇಚ್ಛೆಯನ್ನು ತನ್ನ ಆಪ್ತ ಇಷ್ಟರಿಗೆ ತಿಳಿಸುತ್ತಾನೆ. ಅವರು ಅವನಿಗೆ ಹಾಗೆ ಮಾಡಬೇಡವೆಂದು ಮೊದಲು ಅನೇಕ ತರಹದಿಂದ ತಿಳಿಸುತ್ತಾರೆ. ಅದಕ್ಕೆ ಅವನು ಕೇಳಿದರೆ ಒಳ್ಳೇದು, ಇಲ್ಲದಿದ್ದರೆ ಮರಣದ ದಿವಸ ನಿಶ್ಚಯಿಸಿ ಆದಿವಸ ಎಲ್ಲರು ಅವನಮನೆಯಲ್ಲಿ ಕೂಡುತ್ತಾರೆ. ಸಾಯುವವನನ್ನು ಒಂದು ಮೂಲೆಯಲ್ಲಿ ಕೂಡ್ರಿಸಿ ಅವನ ಯೆಡಬಲಕ್ಕೆ ಇಬ್ಬರು ಮಿತ್ರರು ಕೈಯಲ್ಲಿ ಈಟಿಯನ್ನೂ ಹಗ್ಗವನ್ನೂ ಹಿಡಿದುಕೊಂಡು ನಿಂತಿರುತ್ತಾರೆ. ಆಮೇಲೆ ಅವನಿಗೆ ಈಟಿಯಿಂದ ಕೊಲ್ಲಬೇಕೇ ಹಗ್ಗದಿಂದ ಕೊಲ್ಲಬೇಕೇ ಎಂದು ಕೇಳುತ್ತಾರೆ. ಹಗ್ಗದಿಂದ ಸಾಯುತ್ತೇನೆಂದು ಹೇಳಿದರೆ ಅವನ ಕುತ್ತಿಗೆಗೆ ಉರ್ಲು ಹಾಕಿ ಜೀವಹೋಗುವವರೆಗೂ ಎಳೆಯುತ್ತಾರೆ. ಈಟಿಯಿಂದ ಸಾಯುವದಕ್ಕೆ ಒಪ್ಪಿದರೆ ಅದರಂತೆ ಮಾಡುತ್ತಾರೆ. ಪ್ರಾಣಹೋದನಂತರ ಅವನ ಎದೆಯಲ್ಲಿ ಚೂರಿ ಚುಚ್ಚಿ ರಕ್ತ ತೆಗೆದು ಅದರಿಂದ ಆಪ್ತೇಷ್ಟಜನರು ಮೋರೆ ತೊಳೆಯುತ್ತಾರೆ. ಆಮೇಲೆ ಪ್ರೇತವನ್ನು ಚಿಗರಿಗಳಗಾಡಿಯಲ್ಲಿ ಹಾಕಿ ಸ್ಮಶಾನಕ್ಕೆ ವೈದು ಹುಗಿಯುತ್ತಾರೆ. ಮತ್ತು ಗಾಡಿಗೆ ಹೂಡಿದ ಚಿಗರಿಗಳ ತಲೆಯನ್ನು ಕೊಯ್ಯುತ್ತಾರೆ. ಶವದ ಮೈಮೇಲಿನ ಅರಿವೆಗಳನ್ನೆಲ್ಲ ಬೆಂಕಿಹಚ್ಚಿ ಮನೆಗೆಬರುತ್ತಾರೆ.

THE MONEY MARKET.

Stocks, Shares and Exchange.

ಮದರಾಸ್, ಶನಿವಾರ, ತಾರೀಖ್ 1 ನೇ ಜೂನ್ 1894.

ಸೇಕಡ 4ರೂ. ಬಾಬತು ಇಂಡ್ಯಗವರ್ನಮೆಂಟ್ ಪತ್ರಗಳು 103–8–0 ರೂ ಗಳಿಂದ 104–8–0 ರೂ. ವರೆಗೆ

ಸೇಕಡ ಮೂರುವರೆ ರೂ, ಬಾಬತ್ತು, ಗವರ್ನಮೆಂಟ್ ಸಾಲಗಳು, 100–2–0 ರೂ.ಗಳಿಂದ 101–0–0 ವರೆಗೆ.

ಮದರಾಸ್ ಬ್ಯಾಂಕ್ ಷೇರಿಗಳು, (500) ರೂಪಾಯಿಗಳ ಬಾಬತು, 990–0–0ರೂ.ಗಳಿಂದ 1,000–0–0 ವರೆಗೆ

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರಗಳು, (100ರೂ) ಬಾಬತು 150–0–0ರೂ ಗಳಿಂದ 155–0–0 ರೂ ವರೆಗೆ.

ಸವರನ್‌ಗಳು, ಒಂದು 1 ಕ್ಕೆ 18–8–0 ರೂಪಾಯಿಗಳಿಂದ 18–14–0 ರೂ ವರೆಗೆ.

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಯೂನಿ ಏರ್ಪಡಿಸುವ ಹುಂಡಿಗಳು :—

6 ತಿಂಗಳ ವಾಯಿದೆಗೆ.	.1 s. 1 .32d.
4 „	...1 s. 1 d.
ಕೇಳಿದಾಗಕೊಡಲ್ಪಡುವದಕ್ಕೆ	.1 s. 0 15 16d

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಸ್ಥಳದವರಿಗೆ. ಸಾಲ್ ಒಕ್ಕೆ	...	3—0—0
ಪರಸ್ಥಳದವರಿಗೆ ಸಾಲ್ ಒಕ್ಕೆ	...	4—0—0

ಮುಂಗಡವಾಗಿ ಚಂದಾಹಣವನ್ನು ಕಳುಹಿಸುವಂತವರಿಗೆಮಾತ್ರವೇ ಈ ಪತ್ರಿಕೆ ಕಳುಹಿಸಲ್ಪಡುವದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಹಣವನ್ನು ಅಂಗೀಕರಿಸಲ್ಪಡುವದಿಲ್ಲ.

ಪ್ರಕಟನೆಯ ರಿವಾಜ್.

ಮೊದಲನೆಯಸಾರಿ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯಸಾರಿ ಪಂಕ್ತಿ ಒಂದಕ್ಕೆ	೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಪ್ರಕಟಿಸತಕ್ಕ ಜಾಹಿರಾತುಗಳಿಗೆ ಪಂಕ್ತಿ ಒಂದಕ್ಕೆ ೧ ಆಣೆಯಂತೆ ತೆಗೆದುಕೊಳ್ಳಲಾಗುವದು

MUNICIPAL NOTICE.
ಮ್ಯೂನಿಸಿಪಲ್ ನೋಟೀಸ್.

ತಾರೀಖ್ ೨೧ನೇ ಮೇ ೧೮೯೪

ಇದರಡಿ ತಿಳಿಸಲ್ಪಡುವ ರಸ್ತೆಗಳು ರಿಪೇರಿ ಬಗ್ಗೆ, ಜೂನ್ ಗುರ್ಲ್ರೆ ತಾರೀಖು ಮೊದಲು ಮುಂದೆ ತಿಳಿಸಲ್ಪಡುವವರೆಗೆ ಗಾಡಿಗಳ ಸಂಚಾರಕ್ಕೆ ಅವಕಾಶವಿಲ್ಲದಂತೆ ಬಂದು ಮಾಡಲ್ಪಡುವದಾಗಿ ಆಯಾ ಸ್ಥಳಗಳ ನಿವಾಸಿಗಳು, ತಮ್ಮ ಸ್ವಂತ ಜವಾಬ್ದಾರಿಯ ಮೇಲೆ, ಎಚ್ಚರದಿಂದ ರಸ್ತೆಗಳ ಪಕ್ಕಗಳಲ್ಲಿ ಗಾಡಿಗಳನ್ನು ಹೊಡಿಸಿಕೊಂಡು ಹೋಗಬಹುದು. ಜನಗಳ ಎಚ್ಚರಿಕೆಯ ಬಗ್ಗೆ ರಿಪೇರಿಗೆ ಗುರಿಯಾಗಿರುವ ರಸ್ತೆಗಳ ಕೊನೆಯಲ್ಲಿ, ಹಗಲು ಹೊತ್ತು ಕೆಂಪು ನಿಶಾನಿಯೂ ರಾತ್ರಿ ಕಾಲದಲ್ಲಿ ಕೆಂಪು ಬೆಳಕೂ ತೋರಿಸಲ್ಪಡುವವು.—

(1) ಅರಮನೆ ಅಡ್ಡರಸ್ತೆ—ಅರಮನೆ ಗೇಟಿನಿಂದ ಗುಟ್ಟಹಳ್ಳಿಯಬಳಿ ಇರುವ ಬಳ್ಳಾರಿಯ ರಸ್ತೆಯ ವರೆಗೆ

(2) ಅರಮನೆ-ಉಪ್ಪಾರಹಳ್ಳಿಯ ರಸ್ತೆ—ಅರಮನೆಯ ಗೇಟಿನಿಂದ ನ್ಯೂ ಟೌನ್ ರೋಡು ಸೇರುವ ವರೆಗೆ.

(3) ಲಾಲ್‌ಬಾಗ್ ರಸ್ತೆ—ಸಿದ್ದಿ ಕಟ್ಟೆಯಿಂದ ಮಿಷನ್‌ರಸ್ತೆ ವರೆಗೆ.

(4) ಲಾಲ್‌ಬಾಗ್‌ರಸ್ತೆ—ಮಿಷನ್‌ರೋಡು ಕೂಡುವ ಮೊದಲು ಲಾಲ್‌ಬಾಗ್‌ಗೇಟಿನವರೆಗೆ.

(5) ಕುದುರೆ ಹಾಜರ ದಿನ್ನೆ ಮಾರ್ಗದಲ್ಲಿ ವ್ಯಾಪಾರ ರಸ್ತೆ—ಎನಿಗ್ಯ ರೋಡ್ ಸೇರುವದು ಮೊದಲು, ಸಿಲ್ವರ್ ಲೈನ್ ಬಳಿ ಸುಬೇದಾರ್ ಸತ್ರದ ರಸ್ತೆ ಕೂಡುವತನಕ.

(6) ಕುದುರೆ ಹಾಜರದಿನ್ನೆ ಮಾರ್ಗದಲ್ಲಿ ಸಿಟಿ ರೈಲ್ವೆ ಸ್ಟೇಷನಿಗೆ ಹೋಗುವ ರಸ್ತೆ.

(7) ನಗರ್ತರಪೇಟೆ ರಸ್ತೆ—ದೊಡ್ಡಪೇಟೆ ಚಾವಡಿ ಪೋಲೀಸ್ ಸ್ಟೇಷನ್ ಮೊದಲು ದೊಡ್ಡಪೇಟೆ ಚೌಕದ ವರೆಗೆ

(8) ತಾಲ್ಲೂಕು ಕಚೇರಿ ರಸ್ತೆ—ದೊಡ್ಡಪೇಟೆ ಚೌಕದ ಮೊದಲು ಸಿಟಿ ರೈಲ್ವೆ ಗುಡ್ಸ್‌ಷೆಡ್‌ವರೆಗೆ.

(9) ಮೈಸೂರು ರಸ್ತೆ—ಜಾರ್ಜ್ ಮೊದಲು ಜಲಕಂಠ ಉಕ್ಕಡದಬಳಿಯ ಸರಹದ್ದಿನ ವರೆಗೆ.

K. SRINIVASA RAO,
Vice President
Municipal Commission,
Bangalore City

ದಕ್ಷಿಣ ಮಹಾರಾಷ್ಟ್ರ ರೈಲ್ವೆ.

ಸಾ ೧೮೯೪ ನೇ ಇಸವಿ ಜುಲೈ ೧ನೇ ತಾರೀಖು ಮೊದಲು ಈ ರೈಲ್ವೆ ಕಂಪೆನಿಯವರಿಗೆ ಬೇಕಾಗಿರುವ ಇದರಡಿ ತಿಳಿಸಲ್ಪಡುವ ಸಾಮಾನುಗಳ ಸರಬರಾಯಿಗಾಗಿ ದರಖಾಸ್ತುಗಳು ಆಪೇಕ್ಷಿಸಲ್ಪಟ್ಟು ೧೮೯೪ ನೇ ಇಸವಿ ಜೂನ್ ೧೧ ನೇ ತಾರೀಖ್ ವರೆಗೆ ಅಂಗೀಕರಿಸಿಕೊಳ್ಳಲ್ಪಡುವವು, ಅವು ಯಾವುವೆಂದರೆ,—

೧. ಸ್ವದೇಶದಲ್ಲಿ ತಯಾರಾಗುವ ನಾನಾ ವಿಧವಾದ ಚಿಲ್ಲರೆ ಸಾಮಾನುಗಳು

೨. ಎಣ್ಣೆಗಳು, ಕೊಬ್ಬು ಮತ್ತು ಚಿಂದಿ ಬಟ್ಟೆಗಳು.

೩. ಉಡುಪುಗಳು.

೪. ಕಾಗದ, ಕೇನಾ ವಸ್ತ್ರ

ದರಖಾಸ್ತುಗಳನ್ನು ಟೆಂಡರ್ಸ್ ಷೆಡ್ಯೂಲ್ ಎಂಬ ನಮೂನೆ ಹಾಕಲ್ಪಟ್ಟ ನಮೂನೆಯಲ್ಲಿ ಬರೆದು ಕಳುಹಿಸತಕ್ಕದ್ದು. ೧, ೨ ಮತ್ತು ೩ನೇ ಬಾಬುಗಳ ವಿಷಯದಲ್ಲಿ ಸೀಲ್ ಕೇವ ನಮೂನೆಯನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ್‌ಕೀಪರಿಂದಲೂ, ೪ನೇ ಬಾಬ್ ವಿಷಯದಲ್ಲಿ ಸದರೀ ನಮೂನೆಯನ್ನು ಧಾರ್ವಾಡದಲ್ಲಿರುವ ಏಜೆಂಟರಿಂದಲೂ, ಕಾಪಿ ಒಂದಕ್ಕೆ ೪ ಆಣೆ ಕೊಟ್ಟು ಪಡೆಯಬಹುದು.

ಕಂಪೆನಿಯವರು ಯಾವ ವಿವರಣೆ ಮತ್ತು ಷರತ್ತುಗಳ ಮೇಲೆ ಕಂಟ್ರಾಕ್ಟುಗಳನ್ನು ಕೊಡುವರೋ ಅವು ಟೆಂಡರ್ಸ್ ಷೆಡ್ಯೂಲ್ ಎಂಬ ನಮೂನೆಗಳಲ್ಲಿ ಸೇರಿಸಲ್ಪಟ್ಟಿವೆ. ಚಿಲ್ಲರೆ ಸಾಮಾನುಗಳು, ಎಣ್ಣೆಗಳು ಅಥವಾ ಉಡುಪುಗಳನ್ನು ಕೊಡಲು ಇನ್ನು ಯೋಚಿಸುವವರು ತಪ್ಸೀಲ್ ತಿಳಿದುಕೊಳ್ಳಬೇಕಾಗಿದ್ದರೆ ನಮೂನೆಗಳನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ್‌ಕೀಪರಿಂದಲೂ, ಕಾಗದ ಕೇನಾ ವಸ್ತ್ರದ ವಿಷಯದಲ್ಲಿ ಧಾರ್ವಾಡದಲ್ಲಿರುವ ಏಜೆಂಟರಿಂದಲೂ ತಿಳಿದುಕೊಳ್ಳಬಹುದು.

ದರಖಾಸ್ತುಗಳನ್ನು ಲಕೋಟೆಯಲ್ಲಿಟ್ಟು ಸೀಲುಮಾಡಿ, ಧಾರ್ವಾಡದಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿ ಏಜೆಂಟರವರ ಹೆಸರಿಗೆ ವಿಲಾಸ ಬರೆದು ಕಳುಹಿಸತಕ್ಕದ್ದಲ್ಲದೆ,

ಸ್ವದೇಶದ ತಯಾರಿ ಸಾಮಾನುಗಳಿಗೆ ದರಖಾಸ್ತು,

ಎಣ್ಣೆ, ಕೊಬ್ಬು, ಚಿಂದಿ ಬಟ್ಟೆಗಳಿಗೆ ದರಖಾಸ್ತು,

ಉಡುಪುಗಳ ಬಗ್ಗೆ ದರಖಾಸ್ತು,

ಕಾಗದ, ಕೇನಾ ವಸ್ತ್ರದ ಬಗ್ಗೆ ದರಖಾಸ್ತು,

ಎಂಬವಾಗಿ ಆಯಾ ಬಾಬುಗಳನ್ನು ಲಕೋಟೆಯ ಮೇಲೆ ಬರೆದಿರತಕ್ಕದ್ದು.

ಈ ದರಖಾಸ್ತುಗಳಲ್ಲಿ, ಯಾವ ದರಖಾಸ್ತನ್ನಾದರೂ ಅಂಗೀಕರಿಸುವದಕ್ಕೆ ಏಜಂಟರವರು ಬದ್ಧರಾಗಿರುವದಿಲ್ಲವು.

ಏಜಂಟರ ಆಫೀಸ್,
ಧಾರ್ವಾಡ, ೧೧ ನೇ ಮೇ, ೧೮೯೪ನೇ ಇಸವಿ.

BANGALORE :—Printed and Published at the KARNATAKA PRESS, No. 40 HOSPITAL Road, CITY.—1894

THE

Karnataka Prakasika.

ಕರ್ನಾಟಕ ಪ್ರಕಾಶಿಕಾ.

Published Every Monday Morning.

[illegible]

VOL. XXI BANGALORE.—MONDAY JUNE 11, 1894. No. 23.

Select Telegrams

Lahore 8th June.—[illegible] Khan of Thor and his followers have sw[illegible] allegiance to the British Government. The Political Officer [illegible] Colonel with him at [illegible] [illegible]. [illegible] ceremony was [illegible] another, though he sea[illegible] [illegible] to our force [illegible] on the frontier.

Allahabad 7th June.—The *Pioneer* publishes the f[illegible] — [illegible] authorities at Santi [illegible] the inhabitants of [illegible]. [illegible] has p[illegible]ed that the daily [illegible]. [illegible] [illegible] with the Janakpur [illegible] Nepal [illegible] [illegible] have been found connected with the same [illegible] of the [illegible] undoubtedly [illegible]. There [illegible] in [illegible] fresh tree daubing seen [illegible] the Calcutta *maidan*. The Police are on the alert.

Simla 7th June.—The following are the Commander-in-Chief's full orders in connection with the recent trials in the 17th Bengal Infantry. Nine men are sentenced to seven years' transportation. The other sentences are commuted by His Excellency to two years' imprisonment. One man was sentenced to five years' imprisonment, of which four years have been remitted by the Commander-in-Chief. Three men sentenced to one year's imprisonment have their sentences confirmed. One man sentenced to fourteen years' transportation has his sentence commuted to four years' imprisonment. One man sentenced to ten years' transportation has his sentence commuted to imprisonment for three years. One trial is returned for revision. All the sentences are with hard labour.

THE

Karnataka Prakasika.

MONDAY JUNE 11 1894

UNNECESSARY INTERFERENCE

THERE is no doubt that debt exists in India to a great extent. It is not confined to one state or condition of men, but from the highest to the lowest there is to be found Government servants borrowing money by millions in the same way as private individuals borrow to [illegible] their means. The sums [illegible] be found to prevail in all ages. In recent times, when men did not pay up their dues they were hardly dealt with. As a rule they and their families were sold as slaves in order to satisfy their creditors. Though the laws against debt are not known in the present age, they are [illegible] as they were formerly. The worst that can befall a victim of debt is a few months or years in prison, and there is something else abolishing imprisonment where only money is concerned. A witty English writer has divided mankind into two classes—borrowers and lenders—and he is of opinion that the former have the best of it. His chapter on the subject is well worth reading. Among those who owe money may be included a good many Government servants. It is true that stringent orders have been made on the subject, but to no effect. Money must be forthcoming, and it is forthcoming when required, and from the money lender. The Madras Government some years ago made a very objectionable rule. It laid down that when a man owed money a portion of his pay might be attached and given to the creditor. He might have other creditors to whom he had to pay money, but the court or the Government cared nothing about them [illegible] must be carried out, perhaps half of the debtor's pay had to be given to one and there was nothing left to be given to the rest. The result is that a servant of Government so treated is a ruined man, he has to take his pension, if he is entitled to one, and retire from the service for good. Had the Government not interfered he might in a short time have made matters right, he might have spread the amount attached by the court among all his creditors, and thus satisfied them all. But when half of his salary was given to one creditor it was impossible for him to satisfy the rest. We are sorry to find that the Mysore Government has followed the lead of that of Madras. The Chief Justice of Madras lately spoke in very strong terms of the way the present system worked. He stated that it was the cause of bringing many men before him and his fellow judges in the Court of Bankruptcy, and he strongly recommended that the permission to attach salaries should be given up. Nobody was better able than he was to judge of the evil, he saw the wrong done whenever he sat in the Insolvency Court, and he wished that the Government of Madras should cease to ruin so many, for he was assured that they were ruined. But it refused to listen, and the attachment business is still going on. The fact is Government has no right to interfere with a man's private affairs, and most certainly debt belongs to this class. So long as a man performs his duty conscientiously he should not be interfered with whether he owes money or not. If he fails to perform his on account of the money he has to pay, then some notice should be taken of it. He should be told that his debts cannot be allowed to interfere with his duties. But so long as they do not interfere the servant of Government who owes much ought to be looked upon in the same light as the man who owes little or nothing at all. It is this prying into a man's private affairs that must in the end make Government service disliked to [illegible]. Those in power seem to think debt is a crime which ought to be punished very severely. The contrary may be the case. A man may have to borrow money for the very best ends. It may be to give his son a good education, to set him up in business, which may in time give good returns, but which has not done so yet. Sickness may have laid its hand upon a servant of Government and his family; he may have to incur heavy expenses, and as soon as he gets well the sowcar has to be called in. There is no help for it, and it is very hard the Government should punish him for what he would not help. In the next place, many debts are contracted in order to provide money for marriages and other festivals, expenses which cannot be avoided. These, when incurred, must be liquidated, and it is no use bringing pressure to bear upon a man so situated. More especially is it incumbent upon the Maharaja's Government to be tender with such men. It is a Hindu Government, and it should bear in mind that many of the customs of the people require much money to be carried out successfully, and when debt is incurred—as must often be the case—the debtor should not be worried as if he was a criminal. It is this worry that causes a great amount of injury not only to the men themselves, but also to the Government itself. Men do not work with a will when they feel that they are unnecessarily interfered with, but only do just as much as they are compelled to do.

News and Notes.

THE highest [illegible] in the world are on the Himalayas in Thibet, where there are some bodies of water as high as 20,000 feet above the level of the sea.

Mr Gladstone's present to Miss Margot Tennant consisted of the seven volumes of his 'Gleanings.' This also was the form his present took to the other Miss Tennant, who is now Mrs Stanley.

THE Khedive has decided to start on his European tour in the third week of June. His Highness will first visit Paris, and after making a short stay there, will proceed to London. The subsequent arrangements have not yet been fixed.

THE *Englishman* says a case is pending at the Sealdah Police Court in which Mr B Thomas charges three young Bengalis with having assaulted him at Cossipur, as "a lesson to Sahibs" for their want of courtesy to Indian gentlemen.

THE German Emperor has now posed as a fireman. At a recent fire near Potsdam he took a most active part in the endeavour to extinguish the flames, working most energetically among the people, carrying buckets of water and wielding an axe.

DR. Simpson, Health Officer of Calcutta, in the course of a lengthy Note, considers sufficient direct success has been achieved by Professor Haffkine's treatment of cholera by inoculation to justify the Municipality in giving the system a more extended trial.

GOVERNMENT HAS SANCTIONED the recommendation of the Board of Revenue to levy a commission on estates under the charge of the Court of Wards at the rate of 2½ per cent on the gross income of each estate. The commission is to be levied with effect from the 1st November, 1892.

IT is stated that if the rupee continues to depreciate [illegible] likely that a Council Meeting will as last year be held during the Simla Season to discuss the policy which it will be necessary to adopt. If the Cotton Duties are not [illegible] additional taxation must be levied before the close of the current year. The Bill necessary to adopt the latter measure however would not be drafted till the Calcutta Session.

HUNDREDS of Afghans with numerous camels have arrived in Kashmir from the Punjab and Kabul to buy and export grain and fruit for sale in the Punjab. Fearing that this drain would produce scarcity in the country, the Maharajah has given orders to expel all of them from Kashmir and stop their coming again, with the exception of 100 men and 800 camels, who are specially wanted by Government for the Gilgit transport.

SIR John Lubbock, in the course of a brief speech which he made at the London University the other day, cited the Queen as an example of a very hard worker. The spirit in which she had worked was indicated in a remark to Lord Monteagle. In reply to some expressions of regret on his part that he was obliged to trouble her on business, she said: 'Never mention to me the word 'trouble.' Only tell me how the thing is to be done rightly, and I will do it if I can.'

FOR accurate information on the subject of the aristocracy one must go to a "democratic" weekly. *Reynolds's Newspaper*, which describes the House of Lords as "hereditary thieves and sweaters," prints the following interesting, and we should say exclusive, piece of news.—It is well known that in spite of the small attendances at church in country districts, in order to keep up the authority of their special policemen—the parsons—with the benighted peasantry, the great majority of the aristocracy are Pagans and Agnostics."

THE profits of literature as exemplified in the case of Mrs Humphry Ward are thus discussed in the New York *Critic*:—"For the American and English markets alone she was paid for 'David Grieve' £16,000. She got from the British Colonies—Australia, India, &c.—no mean sum, I fancy, for they are big countries, and their people are great readers of popular literature. Say that she gets £16,000 more for 'Marcella,' and that she got £8,000 for 'Robert Elsmere.' That is £40,000 for three books written during a period of about six years. Not bad pay when one considers it is all profit.

MR J M BARRIE tells an interesting story of the Premier. Lord Rosebery's brougham met him at the Waverly Station in Edinburgh to take him to Dalmeny. He opened the door of the brougham to put in his papers, and then turned away. Hearing the door shut, the coachman thought that his master was inside, and whipped off. Pursuit was vain because the horses were fleet and a well-bred coachman never thinks of looking round. But he did look round when he arrived at Dalmeny, and his amazement was immense. He whipped back as the horses could go and met the future Prime Minister getting home in great good humour on the top of the luggage omnibus.

AN extraordinary incident occurred recently in the United States House of Representatives. A stoutly built negro named Matthew Cherry, a resident in Washington, who was seated in the gallery opposite to Mr Crisp, the Speaker, suddenly shouted, "Mr Speaker, unless the Coxey bills are passed by the 22nd, the Capitol, the White House, and the Treasury will be struck by lightning. The Almighty told me so." Mr Crisp ordered the doorkeeper to remove the negro, who made a serious resistance, declaring that God had commanded him to make one more speech at the White House, after which he would be ready to die.

ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಬನ್ನೂರು ಗ್ರಾಮದಲ್ಲಿ ಶಿಥಿಲವಾಗಿದ್ದ ಒಂದು ರಾಮದೇವರ ದೇವಸ್ಥಾನಕ್ಕೂ, ಸೋಮನಾಥಪುರದಲ್ಲಿರ ವೇಣುಗೋಪಾಲಸ್ವಾಮಿ ದೇವಸ್ಥಾನಕ್ಕೂ ಶ್ರೀಮನ್ಮಹಾರಾಜಾ ಸರ್ಕಾರದವರು ಒಂದು ಬಂಡಿ ಜಮೀನನ್ನು ಇನಾಮಾಗಿ ದಯಪಾಲಿಸಿದ ವಿಷಯದಲ್ಲಿ ಮಾರ್ಚಿ ೧೪ನೇ ತಾರೀಖಿನ ಮೈಸೂರ್ ವೃತ್ತಾಂತಪತ್ರಿಕೆಯು ತನ್ನ ಸ್ವಭಾವಸಿದ್ಧವಾದ ವಿದ್ವೇಷವನ್ನೂ ಅಸಹಿಷ್ಣುತೆಯನ್ನೂ ಪ್ರಕಟಪಡಿಸಿ ತತ್ಸೂಚಕಗಳಾದ ಕೆಲವು ಅತಿ ವಿಚಾರವಂ ಮಾಡಿರುತ್ತದೆ. ಸದರೀ ಪತ್ರಿಕೆಯು ಆದಿಯಿಂದಲೂ ಪರಮತದೂಷಣಾರ್ಥ ಪ್ರವರ್ತಿಸಿ ಇದೇ ತನ್ನ ಮುಖ್ಯೋದ್ದೇಶವೆಂದು ಭಾವಿಸಿರುವುದರಿಂದ ಅದರ ಮಾತುಗಳು ಅನಾದರಣೀಯಗಳೆಂದೆಣಿಸಿ ಅನೇಕ ವಿಷಯಗಳಿಗೆ ನಾವು ಪ್ರತ್ಯುತ್ತರವನ್ನೀಯದೆ ಮೌನವಾಗಿರುತ್ತಿದ್ದೆವು. ಪರಂತು ಪ್ರಸಕ್ತ ವಿಷಯದಲ್ಲಿ ಸದರೀ ಪತ್ರಿಕೆಯು ಪಟ್ಟಿರುವ ಅಭಿಪ್ರಾಯವು ಅಸಂಗತವಾಗಿಯೂ, ಭ್ರಾಂತಿಯುಕ್ತವಾಗಿಯೂ, ಅಜ್ಞಾನಪ್ರೇರಿತವಾಗಿಯೂ ಇದ್ದುದರಿಂದ ಒಂದೆರಡು ವಿಷಯಗಳಿಗೆ ಮಾತ್ರ ನಮ್ಮ ಅವಕಾಶಾನುಗುಣವಾಗಿ ಇಲ್ಲಿ ಉತ್ತರಗಳನ್ನೀಯುವೆವು. ವಿಗ್ರಹವು ದೊಡ್ಡದೋ ಅದನ್ನು ಮಾಡಿದವನು ದೊಡ್ಡವನೋ ಎಂದು ಸದರೀ ಪತ್ರಿಕೆಯು ಪ್ರಶ್ನೆಮಾಡುತ್ತಿದೆ. ಇಬ್ಬರೂ ದೊಡ್ಡವರೆಂದು ಸದರೀಪತ್ರಿಕೆಯು ಅರಿಯಬೇಕು, ಹ್ಯಾಗೆಂದರೆ—ಭಗವಂತನು ಸರ್ವಾಂತರ್ಯಾಮಿಯಾಗಿಯೂ, ನಿತ್ಯಾಲಾಧ್ಯನಬ್ಬನ್ನನಾಗಿಯೂ, ಸರ್ವಭೂತಕವರ್ತಿಯಾಗಿಯೂ, ಸರ್ವಸ್ವರೂಪಿಯಾಗಿಯೂ, ಸಕಲವೂ ತಾನೇ ಆಗಿಯೂ ಇರುವುದರಿಂದ ಯಾವುದಂ ನಾವು ಭಕ್ತಿಯೊಡನೆ ಪೂಜಿಸಿ ನಮ್ಮ ಧ್ಯಾನಾರ್ಹವಾಗಿ ಮಾಡಿಕೊಳ್ಳುವೆವೋ ಅವುಗಳೆಲ್ಲವು ನಮಗೆ ಪೂಜಾರ್ಹಗಳೆಂದು ತಿಳಿಯತಕ್ಕದ್ದು. ಇದೇ ಭಾವನೆಯಿಂದಲೇ ಮೇರಿ ಮತ್ತು ಕ್ರಿಸ್ತು ವಿಗ್ರಹಗಳು ಸಹ ಕ್ರಿಶ್ಚಿಯನ್ನರ ಆರಾಧನೆಗೆ ವಿಷಯಗಳಾಗಿವೆ. ಇವಲ್ಲದೆ "ದೈವಾಧೀನಂ ಜಗತ್ಸರ್ವಂ ಮಂತ್ರಾಧೀನಂತು ದೈವತಂ" ಎಂಬದಾಗಿ ಭಗವಂತನು ಕೇವಲ ಮಂತ್ರ ಯಂತ್ರಾತ್ಮಕನಾಗಿಯೂ, ತನ್ಮಂತ್ರಗಳು ಸಿದ್ಧಿ ಮಾಡಿಕೊಳ್ಳತಕ್ಕವರ ಮನೋನಿಷ್ಕರ್ಷೆಯನ್ನನುಸರಿಸಿಯೂ ಇರುವುವು. ಮಂತ್ರಗಳೇ ಅಸಿದ್ಧಗಳೆಂದು ಒಂದುವೇಳೆ ವೃತ್ತಾಂತಪತ್ರಿಕೆಯು ತಾತ್ಪರ್ಯಪಡುವ ಪಕ್ಷಕ್ಕೆ ಕೇವಲ ಶಬ್ದರೂಪವಾಗಿ ಮಾತ್ರ ಇರುವ ಸ್ತೋತ್ರಗಳು ಸಹ ನಿಷ್ಪ್ರಯೋಜಕಗಳಾಗಬೇಕಲ್ಲದೆ ಅಭೀಷ್ಟಾರ್ಥಗಳನ್ನು ಕೊಡತಕ್ಕ ಕಾರಣಭೂತವನ್ನು ಸಹ ನಿರಾಕರಿಸಬೇಕಾಗುತ್ತದೆ. ತದ್ವತ್ ಜಗತ್ತಿನಲ್ಲಿ ಭಗವದಂಶವೂ ಒಬ್ಬನಲ್ಲಿ ಉಂಟಾಗದಿದ್ದರೆ ಅತನಿಗೆ ಅಸಾಧಾರಣಗಳಾದ ಮಹಾಶಕ್ತಿಗಳುಂಟಾಗಲಾರದು. ಇತರಾಪೇಕ್ಷೆಯಿಲ್ಲದಂತವನು ವಂದ್ಯನೆನಿಸದೆ ಹೋಗಿರನು. ಹಾಗಿಲ್ಲದಿದ್ದರೆ ಕುರಿ ಮೇಯಿಸುತಲಿದ್ದವನ ಮಗನಿಗೆ ದೈವತ್ವವೂ, ಪೂಜ್ಯತೆಯೂ, ಜನಗಳ ಅಪರಾಧಕ್ಷಮಾಪಣ ಸಾಮರ್ಥ್ಯವೂ ಕೇವಲ ಭ್ರಾಂತಿ ಕಲ್ಪಿತವೆಂದು ನುಡಿಯಬೇಕಾಗುವುದು. ಇವು ಭ್ರಾಂತಿಕಲ್ಪಿತಗಳಾಗುವ ಪಕ್ಷಕ್ಕೆ ಯೆಲ್ಲವೂ ಭ್ರಾಂತಿರೂಪಗಳಾದರೆ ಬಾಧಕವಿಲ್ಲವು. ವಿಗ್ರಹಕ್ಕೆ ಬದಲು ಅದಂ ಮಾಡಿದ ಶಿಲ್ಪಿಯನ್ನು ಪೂಜಿಸುವದೇ ಯೋಗ್ಯವಾಗಿರುವಂತೆ ಸದರೀ ಪತ್ರಿಕೆಯು ಅಭಿಪ್ರಾಯಪಡುತ್ತದೆ. ನಾವೂ ಹಾಗೆಯೇ ಭಾವಿಸುವೆವು, ಹ್ಯಾಗೆಂದರೆ—ಅಜಪಾಲಕರಂ ಮದಿಸುವದಕ್ಕಿಂತಲೂ ಅಜವರ್ಗವ ಪೂಜಿಸುವುದು ಯೋಗ್ಯವಾಗಿರುತ್ತದೆ, ಹ್ಯಾಗೆಂದರೆ—ಕ್ಷೀರರೂಪವಾಗಿಯೂ, ತನ್ನ ತುಪ್ಪಟಗಳಿಂದ ಕಂಬಳರೂಪವಾಗಿಯೂ, ತನ್ನ ಶರೀರವನ್ನಿತ್ತು ಆಹಾರರೂಪವಾಗಿಯೂ, ತನ್ನನ್ನಾಕ್ರಮಿಸಿದವರಂ ರಕ್ಷಿಸುತಿದೆಯಾದುದರಿಂದ ಅದೇ ಪರಮಕಾರುಣಿಕನಾದ ಭಗವತ್ಸ್ವರೂಪಿಯೆಂದು ಭಜಿಸುವುದು ಶ್ಲಾಘ್ಯವಾಗಿರುವುದು. ವಿಗ್ರಹಾರಾಧನ ವಿಷಯದಲ್ಲಿ ಅನೇಕರು ಸ್ತ್ರೀಪುರುಷರು ನಷ್ಟ ಬಡಲಾರದವರಾಗಿದಾರೆಂತಲೂ, ಅದು ನಿಷ್ಪ್ರಯೋಜಕವಾದುದೆಂದು ವಿದ್ಯಾವಂತರು ನಿಶ್ಚಯಿಸಿ ದೇವಸ್ಥಾನಗಳಿಗೆ ಹೋಗುವದಿಲ್ಲವೆಂತಲೂ ಸದರೀ ಪತ್ರಿಕೆಯು ತಾತ್ಪರ್ಯಪಡುತ್ತದೆ, ಇದು ನಿಜವೆ. ಇದಕ್ಕೆ ಕ್ರಿಶ್ಚಿಯನ್ ಮತಪ್ರಚಾರವೆ ಕಾರಣವೆಂದು ಹೇಳುವೆವು, ಹ್ಯಾಗೆಂದರೆ—ಕ್ರಿಶ್ಚಿಯನ್ನರ ಬೋಧನೆಗಳಿಂದಾಗಲು ಇತರತ್ರ ಗುಣಗಳಂ ನಾಶಗೊಳಿಸತಕ್ಕವೇ ಹೊರತು ನೂತನವಾದ ಗುಣವಂ ಹುಟ್ಟಿಸಲಿಕ್ಕೆ ಶಕ್ತವಾದವಲ್ಲವು. ಪೂರ್ವಮತದಲ್ಲಿದ್ದ ಪ್ರತಿಪತ್ತಿಯನ್ನು ಹೋಗಲಾಡಿಸುತಿದೆಯೇ ಹೊರತು ಕ್ರಿಶ್ಚಿಯನ್ ಮತದಲ್ಲಿ ಭಕ್ತಿಯನ್ನುಂಟುಮಾಡುವದಿಲ್ಲವು. ಅತಎವ ಸ್ವಮತದಲ್ಲಿ ಅಶ್ರದ್ಧೆಯೂ, ಪರಮತದಲ್ಲಿ ಅವಿಶ್ವಾಸವೂ ಹೆಚ್ಚುತಬರುವದರಿಂದಲೇ ಜನರಿಗೆ ದೇವಸ್ಥಾನಗಳಿಗೆ ಹೋಗಬೇಕಾದ ಪದ್ಧತಿ ಕಡಮೆಯಾಗಲಿಕ್ಕೆ ಕಾರಣವಾಯಿತು. ಆದಕಾರಣ ಇದಕ್ಕಾಗಿ ಆಶ್ಚರ್ಯಪಡಬೇಕಾದುದಿಲ್ಲವು. ಈಗಲು ಇಂಗ್ಲಿಷ್ ಷ್ಟೇಟುಗಳಲ್ಲಿ ಎಷ್ಟು ಜನ ಭಕ್ತಿಯಿಲ್ಲದೆ ಚರ್ಚುಗಳಿಗೆ ಪ್ರತಿದಿನವೂ ಹೋಗುತಬರುತ್ತಾರೆಯೋ ಅಷ್ಟಕ್ಕಿಂತಲೂ ಅಧಿಕವಾಗಿಯೇ ಹಿಂದೂಗಳು ಸ್ತ್ರೀಪುರುಷರು ಸಾಮಾನ್ಯೇನ ದೇವಾಲಯಗಳಿಗೆ ಹೋಗಿ ಬರುತ್ತಾರೆ. ನಿರಾಲಂಬ ಧ್ಯಾನದಲ್ಲಿ ಧ್ಯಾತೃವಾದವನಿಗೆ ಎಷ್ಟರ ಚಿತ್ತಸ್ಥೈರ್ಯವು ನೆಲಗೊಂಡಿದೆಯೋ ಅದಕ್ಕಿಂತಲು ಅಧಿಕವಾಗಿಯೆ ಸಗುಣೋಪಾಸಕರಿಗೂ ವಿಗ್ರಹಾರಾಧಕರಿಗೂ ಇರುತಲಿವೆ. ನಿರಾಧಾರಗಳಾದ ಶಬ್ದಗಳಲ್ಲಿ ಎಷ್ಟರ ಶ್ರದ್ಧಾಭಕ್ತಿಗಳು ಕ್ರಿಶ್ಚಿಯನ್ನರಿಗಳಿವೆಯೋ ಅವುಗಳಿಗಿಂತಲೂ ಹಿಂದೂಗಳಿಗೆ ಬಿಂಬಾರಾಧನೆಯಲ್ಲಿ ಕಡಮೆಯಾ

ಗಿರುವದಿಲ್ಲವು ಪ್ರಜಾರಿಗಳು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವದಕ್ಕಾಗಿ ತಮ್ಮ ಈ ದುಷ್ಟ ವ್ರತಿಯನ್ನು ಜರಿಗಿಸುತಲಿದಾರೆಂದು ತಿಳಿಸು ತಲಿದೆ. ಜೀವನೋಪಾಯವಿಲ್ಲದೆ ಮಿಷನರಿಗ ಳಿಂದ ಜೆನರಿಟ್ಟುಕೊಳ್ಳಂಡು ಬರತಕ್ಕವರಿಗೆ ಮಿಷನ್ ಫಂಡು ಹಪಿಯಿಸಿ, ಗವರ್ನಮೆಂಟಿನವರ ಸಹಾಯವು ಕೂನ್ಯವಾಗಿ, ಅವರ ದಾಕ್ಷಿಣ್ಯಕ್ಕಾಗಿ ನೇಟಿವ್ ಅರಸರು ಮಾಡುವ ಸಹಾಯವು ಕಡಮೆಯಾಗಿ, ಅವರವರ ಸಂಬಳಗಳು ನಿಲ್ಲಿಸ ಲ್ಪಟ್ಟರೆ ಆಗ್ಗ ಎಷ್ಟು ಜನ ಮಿಷನರಿಗಳು ಜ ಗದುದ್ಧಾರಣಾರ್ಥ ಪ್ರವರ್ತಿಸಿ ಸ್ವಮತಪ್ರಚಾ ರಕರಾಗಿ ನಿಲ್ಲುವರೋ ಅದನ್ನು ಪರೀಕ್ಷಿಸಿ ನೋಡಬೇಕಾದ ಕಾಲವು ಅತಿಕರದೊಡನೆ ನಿರೀಕ್ಷಿ ಸುತಲಿದೆ ಈ ದೇಶದಲ್ಲಿ ವಿಗ್ರಹಾರಾಧನೆಯ ನ್ನು ವಿಸರ್ಜಿಸುವದಕ್ಕಾಗಿ ಒಂದು ಸಂಘವನ್ನು ಸ್ಥಾಪಿಸಬೇಕೆಂದು ತಾನು ಕೋರುವಂತೆ ಸದರೀ ಪತ್ರಿಕೆಯು ತಿಳಿಸುತಿದೆ ಹಾಗೆಯೇ ಕ್ರಿಶ್ಚಿಯನ್ ಮತಪಂಡಿತರು ತಪ್ಪುಪ್ರಚಾರಕರಿಂದಲೂ ಇತರ ಮತಗಳಿಗೆ ಉಂಟುಮಾಡಲ್ಪಡುತಲಿರುವ ಒಹು ವಿಧ ಹಾನಿಗಳನ್ನು ಉಪಪಾದಿಸಿ, ಅಜ್ಞಾನದಿಂ ಭ್ರಷ್ಟರಾಗತಕ್ಕವರಂತಿದ್ದ ಅವರುಸನ್ಮಾರ್ಗದಲ್ಲಿ ನಡೆಗೊಳಿಸಲಿಕ್ಕೆ ಶಕ್ತರಾದ ಮಹಾನುಭಾವರು ಕೆಲವರು ಪ್ರವರ್ತಿಸಿ, ಸ್ವಮತರಕ್ಷಣೆಯ ಪ್ರ ತಿಷ್ಠೆಯಿಂ ವಹಿಸಬೇಕೆಂದು ಕೋರುವ ನಮ್ಮ ಉದ್ದೇಶವು ಸಫಲವಾಗುವ ಕಾಲವು ಸನ್ನಿಹಿತ ವಾಗುತಬರುತಲಿದೆ ಯೆಂಬದಕ್ಕೆ ಈಚಗ ಅನೇ ಕನಿದರ್ಶನಗಳು ಕಂಡ ಬರುತಲಿವೆ. ಮಹಾ ರಾಜಾ ಸರ್ಕಾರದವರು ಇಂತಾ ವಿಷಯಗಳಲ್ಲಿ ಸಹಾಯ ಮಾಡುವದಕ್ಕಾಗಿ ವೃತ್ತಾಂತಪತ್ರಿಕೆ ಯು ಅನುಸರಿಸಿ ಮುಂದೆ ಈರೀತಿ ಮಾಡತಕ ದೆಂದು ನಲಹೆ ಕೊಡುತಿದೆ ಶ್ರೀಮನ್ಮಹಾ ರಾಜರವರು ಹಿಂದೂ ರಾಜವಂಶಜರೆಂಬದನ್ನೂ, ಪೂರ್ವ ಸಂಪ್ರದಾಯೈಕ ಶರಣ್ಯರೆಂಬವನ್ನೂ, ಸ ನಾತನ ಧರ್ಮರಕ್ಷಕರೆಂಬದನ್ನೂ, ಸ್ವಯಂ ಶ್ರ ದ್ಧಾಭಕ್ತಿಯುಕ್ತರೆಂಬದನ್ನೂ ತಿಳಿಯದೆಯೂ, ಸದರೀ ಪತ್ರಿಕೆಯು ತಾನು ಇರುವ ರಾಜ್ಯ ನೇ ಟಿವ್ ಅರಸರದೆಂಬದನ್ನು ಸ್ಮರಿಸಿಕೊಳ್ಳದೆಯೂ, ತನ್ನ ಉಜ್ಜೀವನಕ್ಕೆ ಹಿಂದುಗಳೇ ಆಧಾರಭೂ ತರೆಂಬದನ್ನು ಚಿಂತಿಸದೆಯೂ ಮಾಡಿದ ಸಲಹೆ ಯು ಸದರೀ ಪತ್ರಿಕೆಯ ಅವಿನೀತತೆಯಿಂ ಗೋಚರಪಡಿಸದಿರುವದಿಲ್ಲವು.

"ಸರ್ಕಾರದವರು ಇಂತಾ ದುಷ್ಟಪದ್ಧತಿಗೆ ಸಹಾಯ ಮಾಡುತ್ತಾರಲ್ಲಾ ಇದ್ಯಾಕೆ ಎಂಬ ದಾಗಿ ಕೆಲವರು ಕೇಳುತ್ತಾರೆ ಅವರು ಕೇಳ ಧ್ವಕ್ಕೆ ನಾವು ವಿಷಾದಿಸುತ್ತೇವೆ ಆದರೆ ಸರ್ಕಾ ರದವರು ಪ್ರಜೆಗಳ ಧರ್ಮವನ್ನು ವೆಚ್ಚಮಾಡತ ಕ್ಕವರಾಗಿರುವದರಿಂದ ಅವರು ನಿಷ್ಪಕ್ಷಪಾತವಾಗಿ ಪ್ರಜೆಗಳ ಇಷ್ಟಾನುಸಾರ ಸಹಾಯ ಮಾಡುವ ದಕ್ಕೆ ಪ್ರಯತ್ನಿಸುತ್ತಾರೆ ಪ್ರಜೆಗಳೇ ಈ ವಿಗ್ರಹಾರಾಧನೆಯನು ಕೆಟ್ಟದ್ದೆಂದು ಒಪ್ಪಿಕೊಂ ಡರೆ, ಸರ್ಕಾರದವರು ಬಹು ಸಂತೋಷದಿಂದ ಹೀಗೆ ಸಹಾಯ ಮಾಡುವದನ್ನು ನಿಲ್ಲಿಸಿಬಿಡು ವರೆಂಬದರಲ್ಲಿ ಯಾವಸಂದೇಹವೂ ಇಲ್ಲ." ಎಂದು ಅದೇ ಪತ್ರಿಕೆಯು ತಿಳಿಸುತಿದೆ

ಸರ್ಕಾರದವರು ಪ್ರಜೆಗಳ ಧನವನ್ನು ಅವ ರ ಇಷ್ಟಾನುಸಾರ ವ್ಯಯ ಮಾಡುತಲಿರುವದು ವು ನ್ಯಾಯಬದ್ಧವಾದ ಪ್ರಭುತ್ವಲಕ್ಷಣವಾಗಿರು ತಿದೆ. ಆದರೆ ವಿ ಷಯಗಳ ಪ್ರಯತ್ನೋದ್ದೇ ಶಗಳು ಅಂತಃಸ್ಥಾಗಿದ್ದರೂ ಬಹಿಃ ಸದುದ್ದೇಶ ವೆಂಬ ತಾತ್ಪರ್ಯವೊದಗೆ ಪ್ರಜಾಬಿಮತದಮೇಲೆ ಮಹಾರಾಜಾ ಸರ್ಕಾರದವರು ಅವುಗಳಿಗೆ ಧನ ಸಹಾಯ ಮಾಡುತ್ತಾರೆ ಹೀಗಿದ್ದರೂ ಸ್ವ ಮತ ವಿಷಯದಲ್ಲಿ ಅವರು ಈಗ ಮಾಡುತಲಿರು ವ ಸಹಾಯಗಳು ನೋಡಿ ಸಹಿಸಲಾರದೆ ಆಗಿಂ ದಾಗ್ಗೆ ಮಾತುತಬರುವ ದುರಾಕ್ಷೇಪಣೆಗಳು ಆದರಣೀಯಗಳಾಗಲಾರವು.

ಶ್ರೀ ಶೃಂಗೇರಿ ಸ್ವಾಮಿಗಳವರ ಜ್ಞಾನೋಪದೇಶವು.

ಗತವಾರದ ಶೇಷವು.

ಯಾವನು ತನ್ನ ಆತ್ಮಸ್ವರೂಪವನು ತಿಳಿದು ಕೊಳ್ಳುತ್ತಾನೆಯೋ ಅವನು ಬಳಿಕ ತನ್ನ ಶರೀರ ವಂ ಗೌರವಿಸುವನು. ಹೀಗೆ ಆತ್ಮಸ್ವರೂಪ ವಂ ತಿಳಿದುಕೊಂಡು ಸಾಧಿಸಬೇಕಾದ ಫಲವ್ಯಾವ ದೆಂದರೆ, ಮೋಕ್ಷವು ಮೋಕ್ಷವೆಂದರೆ ಅಜ್ಞಾನ ಮತ್ತು ಆತಾನಿವೃತ್ತಿಯೆಂದರಿಯುವುದು. "ನಿ ಸ್ಪೃಹಸ್ಯತೃಣಂಜಗತ್" ಅಂದರೆ ಆಶಾರಹಿತನಾ ದ ಪುರುಷನಿಗೆ ಈ ಪ್ರಪಂಚವು ತೃಣಪ್ರಾಯ ವಾಗಿರುವುದು. ಆಶಾವಿ ಹಿತನಾದ ಪುರುಷನು ಕೇವಲ ಪರತಂತ್ರನು. ಆಶೆಯಿಂ ತೊರೆದವನಿಗೆ ಈ ಪ್ರಪಂಚವು ಸ್ವಾಧೀನ ವಾಗಿರುವುದು. ಆ ಕಾನಿವೃತ್ತ್ಯರ್ಥ ತದಂಗಗಳಾದ ಕೆಲವು ಕರ್ಮಗಳು ಆಚರಣೀಯಗಳಾಗಿರುತಿವೆ ಅವು ಕಾಮ್ಯಗ ಳೆಂತಲೂ ನಿಷ್ಕಾಮ್ಯಗಳೆಂತಲೂ ದ್ವಿವಿಧವಾಗಿ ರುತಿವೆ ಕಾಮ್ಯಕರ್ಮಗಳಲ್ಲಿ ಪ್ರವೃತ್ತಿ ಸುಕ್ಕ ಸ್ಥಿಗಳುಂಟಾಗವೆ, ನಿಷ್ಕಾಮ್ಯ ಕರ್ಮಗಳಲ್ಲಿ ನಿ ರ್ವ್ಯಲ್ಕ್ಷಣವಾದ ಆಸಕ್ತಿಯುಂಟಾಗ ಲರಿಯದು. ದ್ವಿವಿಧ ಕರ್ಮಾಚರಣೆಗಳಿಗೆ ಅರ್ಹರಾದ ನಾಲ್ಕು ವರ್ಣದವರಂ ಶಾಸ್ತ್ರಗಳ್ವೀರ್ಪಡಿಸಿವೆ ಇವರು ಬ್ರಾಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬವರು, ಇವ ರು ತಮ್ಮ ತಮ್ಮ ಅಧಿಕಾರಗಳಿಗೆ ಅನುಗುಣಗ ಳಾದ ಕರ್ಮಗಳನ್ನು ಆಚರಿಸತಕ್ಕದ್ದು. ಇಂತ ಕರ್ಮಾಚರಣೆಯಿಂದ ಅದಂ ಆಚರಿಸುವಂತವನ ಮನೋವೃತ್ತಿಯು ಹೊರಗಾಗುತಿದೆ. ಜ್ಞಾ ನಾಜ್ಞಾನಗಳು ಜ್ಯೋತಿಸ್ತಿಮಿರ ಸದೃಶಗಳಾಗಿ ರುತಿವೆ. ನಿಮ್ಮ ಹೃದಯವು ಥಳಥಳಿಸುವ ಮಗ್ಗ ವಾದ ದರ್ಪಣದಂತಿರುತಿದೆ ಕನ್ನಡಿಯು ಸ್ವಚ್ಛ ವಲನ ಶಕ್ತಿಯುಳ್ಳದ್ದಾಗಿದ್ದರೂ ಆವರಣವೋ ದವು ನಿವೃತ್ತಿಯಾಗದ ತನಕ ಸವಿಶೋಪದರ್ಶಿ ಯಾದ ಪದಾರ್ಥಗಳು ಸ್ಪಷ್ಟವಾಗಿ ತೋರಿ ಸುವ ಶಕ್ತಿಯು ಅದಕ್ಕೆ ಇಲ್ಲವದು, ಅದರಲು ಸರಿ ಭಾಗದೋಳಗಿರುವ ಪದಾರ್ಥವು ಹೊಂದದೆ ಎಲ್ಲವೂ ಶುದ್ಧವಾಗಿ ಕಾಣಸುವುದು. ಒಲೆ ಣಿಯಲ್ಲಿ ಅಗ್ನಿಯಿದೆ ಎಂಬದು ನಮಗೆ ತಿಳಿಯದ ವಿಷಯವಲ್ಲವು ಎರಡು ಪದಾರ್ಥಗಳ ಸಂಘ ರ್ಷಣದಿಂ ಅಗ್ನಿ ಯುಂಟಾಗುತದೆಂಬದು ಶೂವ ಪ್ರಸಿದ್ಧವಿಷಯವೆ. ಆದಾಗ್ಯೂ ಅಗ್ನಿಯುಂಟಾ ಗಲಿಕ್ಕೆ ಮಥನವು ಹ್ಯಾಗೆ ಅಪೇಕ್ಷಿತವೋ ಹಾಗೆ ಶಿವ ತತ್ವತ ಕರ್ಮವು ಉಚ್ಛಿಷ್ಟ ಫಲ ಸಾಧನ ಕ್ಕೆ ಅತ್ಯಂತಾಪೇಕ್ಷಿತವಾಗಿರುತಿದೆ. ನಿಷಿದ್ಧಕ ರ್ಮಗಳು ಯಾವಾಗಲು ಸರ್ವ ತ್ಯಾಜ್ಯಗಳು, ಸತ್ಕರ್ಮಗಳು ಗ್ರಾಹ್ಯಗಳು ಮತ್ತು ಅವಶ್ಯಾ ಚರಣೀಯಗಳು. ಇಂತಿರೆ ಕರ್ಮಗಳಲ್ಲಿ ಅಭೀ ಷ್ಟಫಲ ಪ್ರಾಪ್ತಿಗಾಗಿ ಆಚರಿಸ ಬೇಕಾಗಿರತಕ್ಕ ವು ಕೆಲವು. ಒಟ್ಟು ನಿಷ್ಕಾಮ್ಯಾರ್ಥ ಮಾತವೆ ಕಾಗಿರುವನು ಕೆಲವು ಸದ್ವರ್ಣರಾದ ಶಾಸ್ತ್ರ ಜ್ಞರು ಈ ಕಲಿಯುಗದಲ್ಲಿ ಸಂಚರಿಸತಕ್ಕ ಬಹು ಜನಗಳನ್ನು ಪ್ರಾಪ್ಯವ ವಿಚಾರಿಸಿ ಜ್ಞಾನದೃ ಷ್ಟಿಯಿಂದ ತಿಳಿದು ತಗಳಗೆ ಸುವ್ಯವಾದಮಟ್ಟಿ ಗೆ ಪ್ರತಿಕ್ರಿಯೆಗಳನ್ನು ನಿಸಿ ಒಪ್ಪಣಿಯಾದವನು ಅದನು ವಕ್ಷ ಪ್ರತಿನಿಸ್ವತ ಹಸ್ತ ಗಾಯತ್ರಿಯ ನ್ನಾದರು ಪುನಶ್ಚರಣ ಗಾತವರಕೂಡದೆಂದು ವಿಧಿಸಿರುತ್ತಾರೆ ನೀವು ನಿಮ್ಮ ಆಚ ರಗಳಂ ಕೊರಯುಬೇಡಿರಿ ದುರ್ಮಾರ್ಗ ಪ್ರವೃತ್ತನಾದ ವನಿಗಂದಿಗೂ ಆತ್ಮಜ್ಞಾನವುಂಟಾಗಲಾರದು ಆ ತ್ಮಜ್ಞಾನಿಯಾದವನು ಅ ನ ಅವಿವೇಕ ನಾತಿ ಮಾಡುವದುಷ್ಕರ್ಮಗಳನ್ನೆಲ್ಲ ಪ್ರಿಯರುಪ್ಪಕರ್ಮ ದಿಂದು ನುಡಿಯುತ ಅದಂ ಭೋಜಿಸಲಿತ್ತಿಸು ವನು. ಜನ್ಮಾಂತರಗಳಲ್ಲಿ ಮಾಡಲ್ಪಟ್ಟ ಸತ್ಕ ರ್ಮವಾಸನಾ ಬಲದಿಂದಲೇ ಇಹ ಜನ್ಮದಲ್ಲಿ ಶುದ್ಧ ಸತ್ವಜ್ಞಾನವು ಪುರ ಪನಿಗಂಟಾಗ ಬೇಕಾಗಿ ರುತಿದೆ. ಅವನು ದಾವ ಸನ್ಮತಿಯುಳ್ಳವನಾಗಿ ದ್ದರೆ ಆತ್ಮಜ್ಞಾನವೆಂದಿಗೂ ಉಂಟಾಗಲಾರದು. ವರ್ಣಭೇದಗಳು, ಮುಕ್ತಿಮಾರ್ಗದಲ್ಲಿ ತಸ್ಸ್ವಾ ಪಾದನಾರ್ಥ ಅವರವರು ಮಾಡುವ ಪ್ರಯತ್ನಗ ಳನ್ನೂ, ಅವುಗಳಿಗೆ ಬಳಿಸತಕ್ಕ ಪ್ರವೇಶನವು ಪ್ರಯೋಜನಗಳನ್ನೂ ಅನುಸರಿಸಿ ಏರ್ಪಟ್ಟವಾ ಗಿರುತಿವೆ ಈ ಮುಕ್ತಿಗಳು ಮೂರು ವಿಧವು, ಸಾ ಲೋಕ್ಯ, ಸಾರೂಪ್ಯ, ಸಾಯುಜ್ಯಗಳೆಂಬವು. ಇದಕ್ಕಾಗಿ ಒಂದು ಗುತ್ತವರು ಮತ್ತೊಂದು ಮ ತದವರಂ ಕಂಡರೆ ಅಸೂಯ ಪಡಲೇಕೆ, ಪರಸ್ಪ ರಕಲಹಿಸಲೇಕೆ, ಆದುದರಿಂದ ಅವರವರು ತಮ್ಮ ಮಟ್ಟಿಗೆ ಮುಕ್ತಿಮಾರ್ಗದಲ್ಲಿ ಪ್ರವೇಶಿಸಿ ಕೃಷಿ ಮಾಡಬೇಕಾದುದು ಧರ್ಮವಾಗಿರುತಿದೆ ಜಗದ್ಗು ರುಗಳಾದ ಶ್ರೀಶಂಕರಾಚಾರ್ಯ ಸ್ವಾಮಿಗಳವರು ನ ಮ್ಮ ಉತ್ತಾರಾರ್ಥ ಬಹಳವಾಗಿ ಶ್ರಮಿಸಿದ ರಲಿ. ಮಂದರನಿವಿರುವನ್ನು ಬಯಸಿ, ಅವರ ಪತ್ನಿ ಯಾದ ಉಭಯಭಾರತಿಯಿಂ ಸಹ ಸ್ವೀಕರಿಸದನಿ ಕೊಂಡರೆಂದು ಅಳಿಸಲ್ಪಟ್ಟದೆ, ಅಂದರೆ ಸಾಕ್ಷಾತ್ ಸರಸ್ವತಿಯೇ ಪ್ರಕಾರಾಂತರದಿಂದ ನರನವಾತಿ ಯಾಗಿ ಅವತರಿಸಿ ಬಂದು ಹೋಡಿಸಿದರೂ ಆಕೆ ಯು ಖಂಡನಕ್ಕೆ ಚಲಿಸದೆ ನಿಗೂಢವಾಗಿ ನಿಲ್ಲುವಂ ತಾ ಸಿದ್ಧಾಂತವು ಶ್ರೀಶಂಕರಾಚಾರ್ಯಸ್ವಾಮಿಗಳ ದೆಂಬದು ಎಲ್ಲ ಜಾತಿಯವರುಕೂಡಅಂಗೀಕರಿಸಿ ರುತ್ತಾರೆ. ಆದಕಾರಣ ಈ ಪಶ್ನಿಯಿಂದ ಅವರಿಂ ದ ವ್ಯವಸ್ಥಿತವಾದ ಸಿದ್ಧಾಂತಾನುಬಂಧಿಗಳಾದ ನಾವೆಲ್ಲರು ಅದರ ಸ್ವರೂಪವಂ ತಿಳಿದು ತದನು ಸಾರ ನಡೆಯಬೇಕಾದುದು ನಮ್ಮೆಲ್ಲರಿಗೂ ಪರ ಮ ಧರ್ಮವಾಗಿರುತಿದೆ. ಹಾಗೆ ನಾವು ಆಚರಿಸ ದೆ ಉದಾಸೀನರಾಗಿರುವದಕ್ಕೆ ಹೆತ್ತವರ ಅಜ್ಞಾನಾ ಭಿವೃದ್ಧಿಯಲ್ಲದೆ ಹೋಗುವದು ಮಾತ್ರವಲ್ಲದೆ, ನಮ್ಮ ಗುರುಗಳ ಪರಿಶ್ರಮವನ್ನು ನಾವೇ ನಿರ ರ್ಥಕ ಪಡಿಸಿದವರಾಗುವೆವೆಂಬದರಲ್ಲೇನೂ ಸಂ ದೇಹವಿಲ್ಲವು. ನಾವು ನಮ್ಮ ಕರ್ತವ್ಯಗಳನ್ನು ನೆರವೇರಿಸದೆ ಈಶ್ವರನನ್ನು ಪಕ್ಷಪಾತಿಯೆಂದು ನ ವು ಪಳಿಯಲಾಗದು. ಈ ಪ್ರಪಂಚದಲ್ಲಿ ಪ್ರಾಣಿ ಸಮುದಾಯದೊಳು, ರತ್ನಾಸಿ ಪ್ರತಿಮ ನ ಪ್ರಾಣಿಗೂ ಸುಖ ದುಃಖಗಳಲ್ಲಿಯೂ ಸಂಪ ತ್ತು ಆಪತ್ತು ವೈಷಮ್ಯಗಳಲ್ಲಿಯೂ ನಡೆಗೊಂಡಿ ರುವ ಪರಸ್ಪರ ತಾರತಮ್ಯಗಳು ಅಪರಿಹಾರ್ಯವಾ ದ ಕರ್ಮ ಫಲವೆಂದು ತಿಳಿಯಬೇಕು ಕರ್ಮದಿಂ ದಲೇ ಶರೀರವು ನಿವೃತ್ತಿಯಾಗ ಜೀವಿಸುತಿದೆ ಕರ್ಮವೇ ಕರ್ಮವನ್ನು ವೃದ್ಧಿಗೊಳಿಸುತಿದೆ ಪ ರಿಶುದ್ಧ ಇವುಗಳ ಸ್ವರೂಪವು ಮೊದಲಗಳನ್ನು ತಿಳಿಯಬೇಕಿಸಬೇಕು. ಈಶ್ವರನಿಗೆ ಮಾತನ ದಿಡಪ ದೀಪ ನೈವೇದ್ಯ ಪುಷ್ಪಾರ್ಚನೆಗಳಿಂದ ಆತನು ಸಂತೃಪ್ತನಾಗಲಾರನು, ನಾವು ಅತನಿಗೆ ನಮ್ಮ ಸತ್ಕರ್ಮಾರ್ಚನೆಗಳಂ, ಸದ್ಭಕ್ತಿಯೊಡನೆ, ಸದ್ವಿಜ್ಞಾನದಿಂ, ವಿನಯವಾಗಿ, ಸದುದ್ದೇಶ ಪೂರ್ವಕ ಮಾಡುವೆವಾದರೆ, ಆತನು ನಮಗೆ ಪ್ರ ಸನ್ನನಾಗಿ ಅಭೀಷ್ಟಗಳಾದ ಸನ್ಮಾರ್ಗಗಳನಿತ್ತು ತನ್ನ ಅನುಗ್ರಹ ಪಾತ್ರರನ್ನಾಗಿ ಗ್ರಹಿಸಿ, ಪ ಸ್ತ್ಯಾ ಮುಷ್ಕರಗಳಂ ಹೋಗಲಾಡಿಸಿ, ಅನಾ ದ್ಯ ವಿಜ್ಞಾನ ಪ್ರವಾಹಕಾರಣವೆನಿಸಿರ್ಪ ಜನನ ಮರಣಾತ್ಮಕವಾದ ಭವಚಕ್ರಗತಿಯಿಂದ ತಪ್ಪಿ ಸಿ ಕಾಪಾಡುವನೆಂಬದರಲ್ಲೇನು ಮಾತ್ರವೂ ಅನುಮಾನಿಸ ಬೇಕಾದುದಿಲ್ಲವೆ ಬದು ನಿಮಗೆ ತಿಳಿಸುವವಕ್ಕಿಂತಲೂ ಬೋಧಿಸಬೇಕಾದ ವಿಷ ಯವ್ಯಾವದೂ ಇರುವದಿಲ್ಲವು, ಎಂದು ತಿಳಿಸಿ ಶ್ರೀ ಸ್ವಾಮಿಗಳವರು ತಮ್ಮ ಉಪನ್ಯಾಸವ ಪೂರ್ತಿಗೈದರು.

Occasional Notes
ನೈಮಿತ್ತಿಕ ವಿಷಯನ್ಯಾಸ.

ಫ್ರಾನ್ಸದೇಶದೊಳು ರೋಗಚಿಕಿತ್ಸೆಗಾಗಿ ನ್ಯಾಯವಾದುವಿರುವ ಜೆಡಿಗ್ ಪಡವಾಳವೆ ಫ್ ಯಾ ಸದರೀ ಮನೆಯನಿಗೆ ಚಿಕಿತ್ಸೆ ಮಾಡಿದ ಡಾಕ್ಟ ರನಿಗೆ ಅಟಿಕಬಾಧ್ಯತೆ ಯುಂಟಾಗಿರುತಿದೆ.

"ಇಂದ್ಯದೇಶದಲ್ಲಿ ಪ್ರೊಟೆಕ್ಷಿತರಾದ ಅರಸರು" ಎಂಬ ಅಭಿದಾನದಿಂ ಮೆ|| ಲೀ ವಾರ್ನರೆಂಬವರು ಬರೆದಿರುವ ಗ್ರಂಥದಲ್ಲಿ, ಇಂಡಿಯಾ ಗವರ್ನಮೆಂ ಟಿನ ಅಧಿಕಾರಕ್ಕೆ ಒಳಪಟ್ಟ ನೇಟಿವ್ ಸಂಸ್ಥಾ ನಗಳು ೭೦೦ ಐರುವಂತೆ ವ್ಯಕ್ತವಾಗುತಿದೆ.

ಸರ್ ಲೆಪೆಲ್—ಗ್ರಿಫಿನ್ ರವರು ಇಂಡಿಯಾ ದೇಶದ ರಯಿಲ್ವೆಗಳ ರಿಪೋರ್ಟನ್ನು ನೋಡಲಾಗಿ ಸದರೀ ರಸ್ತೆಗಳ ನಿರ್ವಾಹಕಾರ್ಯಕ್ಕಾಗಿ ವ್ಯಯ ವಾದಲ್ಪಟ್ಟಿರುವ ಮೂಲಧನಕ್ಕೆ ಸಾಲಿಯಾ ನಾ ಸರಾಸರಿ ಸೇಕಡ ಮೂರು ಅರೆಯೊಷರೆ ರೂಪಾಯಿಗಳಪ್ರಕಾರ ಹುಟ್ಟುವಳಿಯಾಗುವ ದೆ ತಿಳಿಯುತ್ತದೆ.

ಅಮೆರಿಕಾಖಂಡದ ಸಂಯುಕ್ತ ಸಂಸ್ಥಾನದ ಎಂಬ ಪ್ರದೇಶದ ಕೆಲವು ಜನರಿಗೆ ಇನ್ನೂ ತಿಳಿಯದಿರುವ ಈ ಪತ್ರಿಕೆಯ... ಮಗಳ ದಾರಿಯಲ್ಲಿ ಹೋದ ಒಂದು ಸ್ಟ್ರಾ ನೇಟೀವ್ ಸುಪ್ರಿನ್ನದಲ್ಲಿ, ರಜಪುತ್ರಜಾತಿಯ ಬಾ ಲಕನೊಬ್ಬನು ಜವಿರ್ ಮೊಕದ್ದಮೆಯೊಂದರ ಲ್ಲಿ ತನಗೆ ಉಂಟುಮಾಡಲ್ಪಟ್ಟ ಅವಮಾನದ ಗ್ಗೆ ಕೋಪಾವಿಷ್ಟನಾಗಿ ಸದರೀ ಸಂಸ್ಥಾನದ ಮಂತ್ರಿಯವರ ಮೂಗನ್ನು ಕೊಯಿದುಬಿಟ್ಟನೆಂ ದು ಒಂದಾನೊಂದು ಪತ್ರಿಕೆಯ ಲೇಖಕನು ತಿಳಿ ಸಿರುತ್ತಾನೆ.

THE MONEY MARKET.

Stocks, Shares and Exchange

ಮದರಾಸು, ಶನಿವಾರ, ತಾರೀಖ್ ನೇ 23 ಜೂನ್ 1894.

ನೇಕಡ 4 ರ ೦ ಬಾಬತು ಇಂಡ್ಯಗವರ್ನಮೆಂಟು ಪತ್ರಗಳು 104-6-0 ರೂ. ಗಳಿಂದ 105-6-0 ರೂ ವರೆಗೆ

ಸೇಕಡ ಮೂರುವರೆ ರೂ ಬಾಬತು, ಗವರ್ನಮೆಂಟು ಪತ್ರ ಗಳು, 100-12-0ರೂ ಗಳಿಂದ 101-12-0ವರೆಗೆ.

ಮದರಾಸು ಬ್ಯಾಂಕ್ ಷೇರಗಳು, (500) ರೂಪಾಯಿಗಳ ಬಾಬತು, 1000-0-0ರೂ ಗಳಿಂದ 1,010-0-0ವರೆಗೆ

ಅರ್ಬಥ್ನಾಟ್ ವ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಷೇರ ಗಳು, (100ರೂ) ಬಾಬತು 150-0-0ರೂ ಗಳಿಂ ದ 155-0-0 ರೂ ವರೆಗೆ,

ಸವರ್ನಗಳು, ಪತಿ 1 ಕ್ಕೆ 18-2-0 ರೂಪಾಯಿಗಳಿಂದ 18-3-0 ರೂ ವರೆಗೆ,

ಲಂಡನ್ ಬ್ಯಾಂಕಿನ ಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಮಾನೆ ದರ್ಶನ ಹುಂಡಿಗಳು ....

6 ತಿಂಗಳ ವಾಯಿದೆಗೆ	.1 s 1 3/32d
4 „	...1 s 1 1/16 d
ಕೇಳಿದಾಗ ಕೊಡಲ್ಪಡುವದಕ್ಕೆ	.1 s. 1 d.

LOCAL AND PROVINCIAL NEWS.
ಒಳದೇಶವು ಮತ್ತು ಪ್ರಾಂತ ವೃತ್ತಾಂತಗಳು.

ಈ ಸಂಸ್ಥಾನದ ದಿವಾನರವರು ಬರುವತಿಂಗ ಳ ಆದಿಭಾಗದಲ್ಲಿ ತಮ್ಮ ಇಲಾಖಾ ತಾಪೇದಾರಿ ಉದ್ಯೋಗಸ್ಥರೊಡನೆ ಇಲ್ಲಿಗೆ ದಯಮಾಡುವ ರೆಂದು ಕೇಳುತ್ತೇವೆ.

ಈಸಲದ ಮೈಸೂರ್ ಸಿವಿಲ್ ಸರ್ವಿಸ್ ಪರೀ ಕ್ಷೆಯು ಬರುವ ಜುಲೈತಿಂಗಳ ಎರಡನೇ ತಾರೀಖು ಸೋಮವಾರದದಿನ ಇಲ್ಲಿನ ಪಬ್ಲಿಕ್ ಆಫೀಸ್ ದರ್ಬಾರ್ ಹಾಲಿನಲ್ಲಿ ನಡೆಯುವದು.

ಮೈಸೂರಲ್ಲಿ ನಡೆದ ಕುದುರೆ ಪಂದ್ಯಗಳಿಗೆ ಕಳೆದ ಸೋಮವಾರ ಮತ್ತು ಬುಧವಾರಗಳಲ್ಲಿ ದಿನಗಳಲ್ಲೂ ಎರಡು ಸ್ಪೆಷಲ್ ಗಳು ಬಿಡಲ್ಪಟ್ಟು ಎರಡು ದಿನವೂ ಗಾಡಿಗಳಲ್ಲಿ ಜನಗಳು ತುಂಬಿ ದ್ದರು.

ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ಅಧಿಕಾರ ಗಳು, ಹೈದರದಲ್ಲಿ ಬೆಂಗಳೂರಿಂದ ನಂಜನಗೂ ಡು ವರೆಗೆ ರಾತ್ರಿಗಾಡಿ ನಡೆಸಬೇಕೆಂದು ನಿಶ್ಚ ಯಿಸಿರುವಂತೆ ಒಳದೇಶದ ಪತ್ರಿಕೆಯೊಂದು ತಿಳಿ ಸುತಿದೆ.

ಮೈಸೂರು ಲೋಕಲ್ ಸರ್ವಿಸ್ ಮುತ್ತು ಪ್ಲೀ ಡರಗಳ ಪರೀಕ್ಷೆಯು ಬರುವ ಆಗಸ್ಟು ತಿಂಗಳಲ್ಲಿ ನಡೆಯುವುದು ಮುಂದಿನ ಸಂವತ್ಸರದ ಮೊ ದಲು ಪ್ರತಿ ಸಂವತ್ಸರದ ಡಿಸೆಂಬರ್ ತಿಂಗಳಲ್ಲಿ ನಡೆಸಲ್ಪಡತಕ್ಕದ್ದೆಂದು ನಿಶ್ಚಯ ಆಗಿದೆ.

ಈ ಕೆಳಗೆ ಹತ್ತು ದಿವಸಗಳ ಮೊದಲು ವರ್ಷ ವೆಂಬುವದು ಸುಕರಾಂ ಇಲ್ಲವು ಯಾವಾಗಲು ಮೋಡವಾಗುತಲೆ ವರ್ಷ ಚಿನ್ನೆಗಳು ಕಾಣ ಬರುತಿವೆ, ವರವು ಪನಿವಾರ್ಯ ಬೀಳುವದಿಲ್ಲ ವು ವರ್ಷ ಜೋರಿನಿಂದ ಕೂಗಿಲಿಕ್ಕೆ ಪ್ರಾ ರಂಭವಾಯಿತು ಇತರ ವಿಷಯಗಳಲ್ಲಿ ಅಧಿಕಾಂ ತವೇನೂ ಇಲ್ಲವು

ಇಲ್ಲಿನ ಶಾಸನಗಳ ಇಲಾಖಾ ಡೈರೆಕ್ಟರವರ ಆಫೀಸ್ ಪ್ಯೂನ್ ವೆಂಕೋಜಿ ಯೆಂಬುವನು ಮಿ|| ರೈಸ್ ಸಾಹೆಬರವರ ಹೆಸರಿನಲ್ಲಿ ಕೆಲವು ಬಿಲ್ಲುಗಳ ನ್ನು ಬನಾವಣೆ ಮಾಡಿ ಹಣ ಪಡೆಕೊಂಡನೆಂಬ ದಾಗಿ ಅವನಮೇಲೆ ತರಲ್ಪಟ್ಟ ಮೊಕದ್ದಮೆಯ ಲ್ಲಿ ಅಪರಾಧಿಗೆ ಈ ತಿಂಗಳ ಎಂಟನೇ ತಾರೀಖಿನ ದಿನ ಈ ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜಿಯವರಿಂದ ಮೂರು ವರ್ಷಗಳಕಠಿಣಶಿಕ್ಷೆ ವಿಧಿಸಲ್ಪಟ್ಟಿತು.

ಈ ಸಂಸ್ಥಾನದ ಫಾರೆಸ್ಟ್ ಇನ್ಸ್ಪೆಕ್ಟರ್ ಜನ ರಲ್ ವರಾದ ಮಿ ಎಸ್. ರಿಕೆಟ್ಸ್ ಸಾಹೆಬರವರ ಕುಮಾರ್ತೆಯಾದವರಿಗೆ ಕಳೆದ ಶುಕ್ರವಾರದ ದಿನ ವಿ ವಾಹ ನಡೆದುದರಿಂದ, ಆವಿವಾಹ ಶುಭಸಮಯ ದೊಳು ಇಲ್ಲಿನ ನೇಟಿವ್ ಅಧಿಕಾರಿಗಳು ಕೆಲವರು ವಧೂವರಗಳಿಗೆ ಸನ್ಮಾನಪೂರ್ವಕವಾಗಿ ನಾನಾವಿಧ ಸ ದಾರ್ಥಗಳಂ ಕೊಟ್ಟಂತೆಯೂ ಈ ತಿಂಗಳ ಎರಡನೇ ತಾರೀಖಿನ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯ ಮೂಲಕ ತಿಳಿದು ಸಂತೋಷಿಸುತ್ತೇವೆ ಈ ವ ಧೂವರಗಳಿಗೆಲ್ಲರೂ ಅನುರೂಪರಾದ ಪತಿ ನಿರೀಕ್ಷೆ ಯಿಂ ಎಷ್ಟುಕಾಲ ಕನ್ಯಾವಸ್ಥೆಯಿಂ ಕಳೆದರು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಹೊರಡಿಸಿದ ಇಸ್ತಿಹಾರನಾಮೆಗಳು.

ಗುರುವಾರ, ತಾ|| ೨೧ನೇ ಜೂನ್ ೧೮೯೪.

ಜನರಲ್ ಇಲಾಖಾ.

ನಂ|| ೨೧೪೬೭—G. F ೯೯—೯೩, ತಾ|| ೧೭ನೇ ಜೂನ್, ೧೮೯೪ — ೧೮೯೧ನೇ ಇಸವಿ ಮೇ ೧೭ನೇ ತಾರೀಖು ೩೩ ನೇ ನಂಬರ್ ಇಸ್ತಿಹಾರನಾಮೆಯಲ್ಲಿ ಅಡಗಿರುವ ನಿಬಂಧನೆಗಳನ್ನು ರದ್ದುಪಡಿಸಿ ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟಿರುವ ಈ ಕೆಳಗಿನ ನಿಬಂಧನೆಗಳು ಸಮಸ್ತಜನರ ತಿಳುವಳಿಕೆ ಮತ್ತು ನಡವಳಿಕೆಯ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತವೆ :—

ಮೈಸೂರ್ ಪ್ರಜಾ ಪ್ರತಿನಿಧಿ ಸಭೆಯ ಏರ್ಪಾಡು ಮತ್ತು ಆ ಸಭೆಯಲ್ಲಿ ಕೆಲಸ ನಡೆಯತಕ್ಕ ಕ್ರಮವನ್ನು ಕುರಿತು ತಯಾರಾದ ನಿಬಂಧನೆಗಳು.

೧. ಒಂದು ತಾಲ್ಲೂಕಿಗಾಗಿ ಈ ಸಭೆಗೆ ಮೆಂಬರುಗಳನ್ನು ಚುನಾಯಿಸುವದಕ್ಕೆ ಈ ಕೆಳಗೆ ವಿವರಿಸಿರುವ ಜನಗಳು ಅರ್ಹರಾಗಿರುತ್ತಾರೆ.

(a) ತನ್ನ ಸ್ವಂತಕ್ಕಾಗಿ ಸರಕಾರಕ್ಕೆ ಸಾಲಿಯಾನಾ ೩[illegible]ಕ್ಕೆ ಲಗ್ಗೆಶ್ ಮಾಡಿರುವ A ಗುರುತಿನ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಗ್ಗೆ ಕಮ್ಮಿ ಇಲ್ಲದೆ ಜಮೀನು ಕಂದಾಯವನ್ನಾಗಲಿ ಅಥವಾ ಮೊಹತರ್ಫಾ (ಸರಕಾರಕ್ಕೆ ಆಗಲಿ ಮ್ಯುನಿಸಿಪಾಲಿಟಿಗೆ ಆಗಲಿ ಕೊಡತಕ್ಕ ಮನೆಮತ್ತು ಅಂಗಡಿತೆರಿಗೆ) ಆಗಲಿ ತಾಲ್ಲೂಕಿಗೆ ಕೊಡತಕ್ಕ ಪ್ರತಿ ಒಬ್ಬ ಮನುಷ್ಯ.

(b) ವಾಡಿಕೆಯಾಗಿ ಅದೇ ತಾಲ್ಲೂಕಿನಲ್ಲಿ ವಾಸಮಾಡಿಕೊಂಡಿದ್ದು ಸಾಲಿಯಾನಾ ೬೦೦ ರೂಪಾಯಿ ಬಟ್ಟು ಒಬ್ಬ [illegible] ಒಂದು ಅಥವಾ ಪಟ್ಟಾದ ಫಲಾ ಇನಾಂ ಗ್ರಾಮಗಳ ಸ್ವಂತಕರ್ತನಾಗಿರತಕ್ಕ ಪ್ರತಿಒಬ್ಬ ಮನುಷ್ಯ.

(c) ಯಾವದಾದರೂ ಒಂದು ಇಂಡ್ಯನ್ ಯೂನಿವರ್ಸಿಟಿಯಲ್ಲಿ ಡಿಗ್ರಿಯನ್ನು ಹೊಂದಿ ವಾಡಿಕೆಯಾಗಿ ಅದೇ ತಾಲ್ಲೂಕಿನಲ್ಲಿ ವಾಸಮಾಡಿಕೊಂಡಿರತಕ್ಕ ಪ್ರತಿಒಬ್ಬ "ಗ್ರಾಜ್ಯುಏಟ್".

೨. ಮೇಲೆ ವಿವರಿಸಿದಂತೆ ಅರ್ಹತೆಯುಳ್ಳ ಜನಗಳು ಆಷಾಢಮಾಸದಲ್ಲಿ ಯಾವದಾದರೂ ಒಂದು ಗೊತ್ತಾದ ದಿನದಲ್ಲಿ ಆಯಾಯ ತಾಲ್ಲೂಕು ಕಸಬಾ ಸ್ಥಳದಲ್ಲಿ ಮೂರುವರ್ಷಕ್ಕೆ ಒಂದಾವರ್ತಿ ಸೇರತಕ್ಕದ್ದು. ಸೇರುವದಕ್ಕೆ ಗೊತ್ತಾದ ದಿವಸ ಇಂಥದೆಂದು ಒಂದು ತಿಂಗಳಿಗೆ ಕಮ್ಮಿ ಇಲ್ಲದಂತೆ ಮೊದಲೇ ನೋಟೀಸು ಕೊಡಲ್ಪಡುತ್ತೆ. ಅಂಥಾ ಮೀಟಿಂಗಿನಲ್ಲಿ ಸದರೀ ಜನಗಳು ಮುಂದೆ ಮೂರು ವರುಷಗಳಲ್ಲಿ ಮೈಸೂರಲ್ಲಿ ಜರುಗತಕ್ಕ ಪ್ರಜಾಪ್ರತಿನಿಧಿ ಸಭೆಗೆ ಆ ತಾಲ್ಲೂಕಿನಿಂದ ಬರಬೇಕಾದ ಮೆಂಬರುಗಳನ್ನು ಚುನಾಯಿಸಬೇಕು.

೩. ಎರಡನೇ ನಿಬಂಧನೆ ಪ್ರಕಾರ ತಾಲ್ಲೂಕು ಮೆಂಬರಾಗಿ ಚುನಾಯಿಸಲ್ಪಟ್ಟ ಪ್ರತಿಒಬ್ಬ ಮೆಂಬರು

(a) ತನ್ನ ಸ್ವಂತಕ್ಕಾಗಿ ಸರಕಾರಕ್ಕೆ ಸಾಲಿಯಾನಾ ೩[illegible]ದಕ್ಕೆ ಲಗ್ಗಮ್ಮಾಡಿರುವ B ಷೆಡ್ಯೂಲಿನಲ್ಲಿ ನಮೂದಿಸಿರುವ ಮೊಬಲಗ್ಗೆ ಕಮ್ಮಿ ಇಲ್ಲದ ಜಮೀನ್ ಕಂದಾಯವನ್ನಾಗಲಿ ಅಥವಾ ಮೊಹತರ್ಫಾ (ಸರ್ಕಾರಕ್ಕೆ ಆಗಲಿ ಮ್ಯುನಿಸಿಪಾಲಿಟಿಗೆ ಆಗಲಿ ಕೊಡತಕ್ಕ ಮನೆ ಮತ್ತು ಅಂಗಡಿ ತೆರಿಗೆಗಳು) ಆಗಲಿ ಆ ತಾಲ್ಲೂಕಿಗೆ ಕೊಡತಕ್ಕ ಮನುಷ್ಯನಾಗಿರಬೇಕು ಅಥವಾ

(b) ಅದೇ ತಾಲ್ಲೂಕಿನಲ್ಲಿ ವಾಡಿಕೆಯಾಗಿ ವಾಸಮಾಡಿಕೊಂಡಿದ್ದು ಸಾಲಿಯಾನಾ ೫೦೦ ರೂಪಾಯಿ ಬಟ್ಟು ಜೇರಿಜಾಕ್ಕೆ ಒಂದು ಅಥವಾ ಇನ್ನೂ ಜಾಸ್ತಿಯಾದ ಫಲಾ ಇನಾಂ ಗ್ರಾಮಗಳ ಸ್ವಂತಕರ್ತನಾಗಿರಬೇಕು.

೪. ಮೇಲ್ಕಂಡ B ಷೆಡ್ಯೂಲಿನ ಕೊನೆ ಕಲಮಿನಲ್ಲಿ ಗೊತ್ತು ಮಾಡಿರುವ ಸಂಖ್ಯೆಗಿಂತ ಜಾಸ್ತಿಯಾಗಿ ಮೆಂಬರುಗಳನ್ನ ಚುನಾಯಿಸಕೂಡದು.

೫. ಎರಡನೇ ನಿಬಂಧನೆ ಪ್ರಕಾರ ಪ್ರಥಮ ಚುನಾವಣೆಯು ನಾಳೆ ಆಷಾಢಮಾಸದಲ್ಲಿ ಆಗತಕ್ಕದ್ದು. ಆಗ ಚುನಾಯಿಸಲ್ಪಡುವ ಜನಗಳೇ, ೧೮೯೬ನೇ ಇಸವಿ ಆಷಾಢಮಾಸದಲ್ಲಿ ಆಗಬೇಕಾದ ಮತ್ತೊಂದು ಚುನಾವಣೆವರಿಗೂ ಪ್ರಜಾಪ್ರತಿನಿಧಿ ಸಭೆ ಮೆಂಬರುಗಳಾಗಿರತಕ್ಕದ್ದು.

೬. ಎರಡನೇ ನಿಬಂಧನೆಪ್ರಕಾರ ಚುನಾಯಿಸಲ್ಪಡುವ ತಾಲ್ಲೂಕು ಮೆಂಬರುಗಳಲ್ಲದೆ,

(a) ಪ್ರತಿ ಒಂದು ಲೋಕಲ್‌ಫಂಡ್ ಬೋರ್ಡಿನವರು ಈ ಸಭೆಗೆ ಇಬ್ಬರು ಮೆಂಬರುಗಳನ್ನ ಕಳುಹಿಸಬಹುದು.

(b) C ಷೆಡ್ಯೂಲಿನಲ್ಲಿ ನಮೂದಾಗುವ ಟೌನ್‌ಗಳ ಮ್ಯುನಿಸಿಪಲ್ ಬೋರ್ಡಿನವರು ಆಯಾ ಟೌನಿಗೆ ಸದರೀ ಷೆಡ್ಯೂಲಿನಲ್ಲಿ ಗೊತ್ತಾಗಿರುವಷ್ಟು ಮೆಂಬರುಗಳನ್ನ ಕಳುಹಿಸಬಹುದು.

(c) ಸಮ್ಮತವಾದ ಲೋಕೋಪಯುಕ್ತ ವಿಷಯಗಳಲ್ಲಿ ಪ್ರವರ್ತಿಸಿರುವ ಅಸೋಸಿಯೇಷನ್ ಎಂದರೆ ಸಮಾಜಗಳು ಈಸಭೆಗೆ ಒಬ್ಬ ಮೆಂಬರನ್ನ ಕಳುಹಿಸಬಹುದು. ಆದರೆ ಅಂಥಾ ಪ್ರತಿಒಂದು ಸಮಾಜವು ಸರ್ಕಾರ ನೌಕರರು ಅಲ್ಲದೆ ಇರುವಂಥಾ ೧೦೦ ಮಂದಿಗೆ ಕಮ್ಮಿ ಇಲ್ಲದಷ್ಟು ಮೆಂಬರುಗಳನ್ನು ಉಳ್ಳದಾಗಿರಬೇಕಲ್ಲದೆ, ಮೆಂಬರನ್ನ ಚುನಾಯಿಸುವ ಮೀಟಿಂಗಿನಲ್ಲಿ ಸದರೀ ೧೦೦ ಮಂದಿ ಪೈಕಿ ೭೫ ಮಂದಿ ಹಾಜರಾಗಿರಬೇಕು.

ನೋಟ್—ಒಂದುವೇಳೆ ಒಂದು ಅಸೋಸಿಯೇಷನ್‌ದೇಲಿ ಗೊತ್ತುಮಾಡಿರುವ ಸಂಖ್ಯೆಗಿಂತ ಕಮ್ಮಿ ಮೆಂಬರುಗಳಿದ್ದಾಗ್ಯೂ, ಸರ್ಕಾರದವರಿಗೆ ವಿಶೇಷ ಕಾರಣಗಳಿಂದ ರೂಪುಗೊಂಡಿರುವ ಸಂದರ್ಭದಲ್ಲಿ, ಅಂಥಾ ಅಸೋಸಿಯೇಷನ್ ಕೂಡ ಒಬ್ಬ ಮೆಂಬರನ್ನು ಕಳುಹಿಸಬಹುದು.

೭. ಆರನೇ ನಿಬಂಧನೆ ಪ್ರಕಾರ ನೇಮಿಸಲ್ಪಡುವ ಜನಗಳು ಒಂದು ವರ್ಷಕ್ಕೆ ಮಾತ್ರ ಮೆಂಬರುಗಳಾಗಿರತಕ್ಕದ್ದು. ಪ್ರತಿ ವರ್ಷವೂ ಸಭೆ ಸೇರುವದಕ್ಕೆ ಪೂರ್ವ ಶ್ರಾವಣಮಾಸದ ಆಖೈರೊಳಗಾಗಿ ಮೇಲ್ಕಂಡಂತೆ ಮೆಂಬರುಗಳು ನೇಮಿಸಲ್ಪಟ್ಟದ್ದು ಕ್ರಮವಾಗಿ ಗೊತ್ತು ಆಗಬೇಕು.

೮. ಇಪ್ಪತ್ತೊಂದು ವರುಷ ವಯಸ್ಸು ತುಂಬದೆ ಇರತಕ್ಕೆ ಯಾವ ಒಬ್ಬ ಮನುಷ್ಯನೂ, ಜ್ಞಾನ ಸರಿಯಾಗಿಲ್ಲದೆ ಇರತಕ್ಕ ಅಥವಾ ದುಷ್ಕೃತ್ಯ ಅಥವಾ ದುರ್ನಡತೆಯನ್ನು ವ್ಯಕ್ತಪಡಿಸತಕ್ಕ ಕ್ರಿಮಿನಲ್ ತಪ್ಪಿತಕ್ಕಾಗಿ ಸಜಾ ಹೊಂದಿದ ಯಾವ ಒಬ್ಬ ಮನುಷ್ಯನೂ ಮತ್ತು ಸರ್ಕಾರ ನೌಕರಿಯಿಂದ ಬರತರ್ಫ ಆಗಿರತಕ್ಕ ಯಾವ ಒಬ್ಬ ಮನುಷ್ಯನೂ ಈ ಸಭೆಗೆ ಮೆಂಬರಾಗಿ ಚುನಾಯಿಸಲ್ಪಡಲು ಅರ್ಹನಾಗಿರುವದಿಲ್ಲ.

೯. ಸರ್ಕಾರದ ನೌಕರರಲ್ಲದ ಇತರ ಪ್ರಜೆಗಳ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂಬುವದೇ ಈಸಭೆಯ ಉದ್ದೇಶವಾದ್ದರಿಂದ ಸರ್ಕಾರ್ ಸಂಬಳ ತೆಗೆದುಕೊಂಡು ನೌಕರಿ ಮಾಡುವ ಯಾವ ಒಬ್ಬನೇ ಆಗಲಿ ಈ ಸಭೆಗೆ ಮೆಂಬರುಗಳನ್ನು ಚುನಾಯಿಸುವದಕ್ಕೂ ಅಥವಾ ಮೆಂಬರಾಗಿ ಚುನಾಯಿಸಲ್ಪಡುವದಕ್ಕೂ ಅರ್ಹನಾಗಿರುವದಿಲ್ಲ.

೧೦. ಆರು ಮತ್ತು ೯ನೇ ನಿಬಂಧನೆಗಳಲ್ಲಿ ಹೇಳಿರುವ ಹಕೀಕತ್ ಉದ್ಯೋಗಸ್ಥರಲ್ಲಿ ಶಾನುಭೋಗರು, ಪಟೇಲರು, ಅಥವಾ ಇತರೆ [illegible] ಉದ್ಯೋಗಸ್ಥರು ಸೇರುವದಿಲ್ಲ.

೧೧. ಮೇಲ್ಕಂಡ ೨ನೇ ನಿಬಂಧನೆಯಲ್ಲಿ ನಮೂದಿಸಿರುವ ಮೀಟಿಂಗಾಗುವ ಕಾಲದಲ್ಲಿ ಅಥವಾ ಆ ಮೀಟಿಂಗ್ ಆದನಂತರ [illegible] ಅಥವಾ ಆನ[illegible] ಮೆಂಬರುಗಳಾಗಿ ಚುನಾಯಿಸಲ್ಪಟ್ಟ ಜನಗಳು ತಮ್ಮಲ್ಲಿ ತಾವು ಚರ್ಚಿಸಿಕೊಂಡತರುವಾಯ ಮೈಸೂರಲ್ಲಿ ಮುಂದೆ ನಡೆಯತಕ್ಕ ದಸರಾ ಮೀಟಿಂಗಿನಲ್ಲಿ ತಾವು ಚರ್ಚಿಸಬೇಕೆಂದು ಉದ್ದೇಶಿಸಿರುವ ಅಂಶಗಳನ್ನು ಮತ್ತು ತಮ್ಮ ಸಲಹೆಗಳನ್ನು [illegible] ನಮೂದಿಸಿ ಒಂದು ಮೆಮೋರಾಂಡಮನ್ನು ತಯಾರುಮಾಡಬೇಕು. ಅಂಥಾ ಮೆಮೋರಾಂಡಮನ್ನು ಅವರು ತಮ್ಮ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್‌ಗಳಿಗೆ ಸಭೆ ಸೇರುವದಕ್ಕೆ ಪೂರ್ವ ಶ್ರಾವಣಮಾಸದ ಆಖೈರೊಳಗಾಗಿ ತಲುಪುವಂತೆ ಕಳುಹಿಸಿ ರವಾನೆ ಮಾಡಬೇಕು.

೧೨. ಆರನೇ ನಿಬಂಧನೆಯಲ್ಲಿ ನಮೂದಿಸಿರುವ ಬೋರ್ಡಿನವರು ಮತ್ತು ಸಮಾಜದವರು ಮೈಸೂರಲ್ಲಿ ಮುಂದೆ ನಡೆಯತಕ್ಕ [illegible] ಚರ್ಚಿಸತಕ್ಕ ಅಂಶಗಳನ್ನು [illegible] [illegible] ಮೆಮೋರಾಂಡಾ ತಯಾರ್ಮಾಡಿ ಅದನ್ನು ಆರನೇ ನಿಬಂಧನೆಪ್ರಕಾರ ನೇಮಿಸಲ್ಪಟ್ಟ ಪ್ರಕಾರ ಮೆಂಬರುಗಳ ಪಟ್ಟಿ ಸಹ ಶ್ರಾವಣಮಾಸದ ಆಖೈರೊಳಗೆ ತಲುಪುವಂತೆ ಡೆಪ್ಯುಟಿ ಕಮಿಷನರ್‌ಗಳಿಗೆ ಕಳುಹಿಸಬೇಕು.

೧೩. ೧೧—೧೨ನೇ ನಿಬಂಧನೆಗಳ ಮೇರೆಗೆ ರವಾನಿಸಲ್ಪಟ್ಟ ಮೆಮೋರಾಂಡಾಗಳು ಡೆಪ್ಯುಟಿ ಕಮಿಷನರ [illegible] [illegible] ಜನರಲ್ ಸೆಕ್ರೆಟರಿಯವರಿಗೆ [illegible] ನಮೂದಾಗುವ ಪ್ರತಿ ಒಂದು ಸಂಗತಿಯಲ್ಲಿ ಡೆಪ್ಯುಟಿ ಕಮಿಷನರು ತಮ್ಮ ಅಭಿಪ್ರಾಯಗಳನ್ನು ನಮೂದಿಸಿ ಆದರೆ ಜನರಲ್ ಸೆಕ್ರೆಟರಿ ಅವರ D ಗುರುತಿನ ನಮೂನೆ ಮೇರೆಗೆ ತಯಾರ್ ಮಾಡಿ, ಭಾದ್ರಪದಮಾಸದ ಪ್ರಥಮ ವಾರದೊಳಗಾಗಿ ಬಂದು ತಲುಪುವಂತೆ ಚೀಫ್ ಸೆಕ್ರೆಟರಿ ಅವರಲ್ಲಿಗೆ ರವಾನಿಸಬೇಕು.

೧೪. ಪ್ರತಿ ಡಿಸ್ಟ್ರಿಕ್ಟಿನಿಂದ ಬರತಕ್ಕ ಮೆಂಬರುಗಳು ಪ್ರತಿವರುಷ ೧೨ನೇ ಮುಂಚೆಯವಾಗಿ ಮೈಸೂರಲ್ಲಿ ಸೇರುವ ದಸರಾ ಮೀಟಿಂಗ್ ಅಂಥಾ ಮೀಟಿಂಗ್‌ನಲ್ಲಿ ೧೧—೧೨ನೇ ನಿಬಂಧನೆಗಳ ಮೇರೆಗೆ ಕಳುಹಿಸಿಕೊಟ್ಟ ಮೆಮೋರಾಂಡಾದಲ್ಲಿ ನಮೂದಿಸಿಲ್ಲದ ಯಾವದಾದರೂ ವಿಷಯಗಳನ್ನು ಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಇಚ್ಛೆಪಡುವ ಪಕ್ಷದಲ್ಲಿ ಅಂಥಾ ಹೆಚ್ಚು ವಿಷಯಗಳ ಒಂದು ಸಪ್ಲಿಮೆಂಟಲ್ ಪಟ್ಟಿಯನ್ನು ಚೀಫ್ ಸೆಕ್ರೆಟರಿಯವರ ಬಳಿಗೆ ಅಪ್ಪೀಲುಶುದ್ಧ ೧೦ ನೇ ತಾರೀಖಿಗೆ ಮುಂಚೆ ಕಳುಹಿಸಬೇಕು.

೧೫. ಪ್ರಜಾ ಪ್ರತಿನಿಧಿ ಸಭೆಯವರು ತಮ್ಮ ಮೀಟಿಂಗನ್ನು ಮೈಸೂರೊಳಗೆ ಸಾಧಾರಣವಾಗಿ ಅಪ್ಪೀಲುಶುದ್ಧ ೧೨ ದಿವಸ ಆರಂಭಿಸಬೇಕು. ಒಂದುವೇಳೆ ಅದಿನವು ಅಡಿತ್ಯವಾರವಾಗಿದ್ದರೆ ಆ ಮಾರನೇ ಸೋಮವಾರ ಮೀಟಿಂಗ್ ಆರಂಭವಾಗತಕ್ಕದ್ದು.

೧೬. ಮೇಲಿನ ನಿಬಂಧನೆಗಳ ಮೇರೆಗೆ ಈ ಸಭೆಯ ಮೆಂಬರುಗಳ ಸಂಖ್ಯೆ ಈ ಕೆಳಗೆ ವಿವರಿಸಿರುವ ಸಂಖ್ಯೆಗಿಂತ ಜಾಸ್ತಿಯಾಗಕೂಡದು.

೧ B ಷೆಡ್ಯೂಲ್ ಪ್ರಕಾರ ೬೬ ತಾಲ್ಲೂಕುಗಳಿಗೆ ಚುನಾಯಿಸಲ್ಪಟ್ಟ ಮೆಂಬರುಗಳು ೨೦೩; ೨. ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ೮, ಮ್ಯುನಿಸಿಪಾಲಿಟಿಗಳಿಂದ ನೇಮಿಸಲ್ಪಟ್ಟ ಮೆಂಬರುಗಳು ೨೩; ೩. ೫೦೦೦ ಅಥವಾ ಅದಕ್ಕೆ ಜಾಸ್ತೀ ಜನಸಂಖ್ಯೆಯುಳ್ಳ ಇತರ ೧೨ ಮ್ಯುನಿಸಿಪಾಲಿಟಿಗಳಿಂದ ನೇಮಿಸಲ್ಪಟ್ಟ ಮೆಂಬರುಗಳು ೧೫; ೪. ಒಂಭತ್ತು ಲೋಕಲ್ ಫಂಡ್ ಬೋರ್ಡುಗಳಿಂದ ನೇಮಿಸಲ್ಪಟ್ಟ ಮೆಂಬರುಗಳು ೧೮, ೫. ಲೋಕೋಪಯುಕ್ತವಾದ ವಿಷಯಗಳಲ್ಲಿ ಪ್ರವರ್ತಿಸಿರುವ ಸಮಾಜಗಳಿಂದ ನೇಮಿಸಲ್ಪಟ್ಟ ಮೆಂಬರುಗಳು ಸುಮಾರು ೬. ಜುಮ್ಲಾ ೨೬೫.

೧೭. ಮೇಲಿನ ನಿಬಂಧನೆಗಳು ಕೂಡಲೇ ಜಾರಿಗೆ ಬರತಕ್ಕದ್ದು.

ನಂ|| ೨೯೭೨೯—G. F. ೩೦—೯೩, ತಾ|| ೧೫ನೇ ಜೂನ್ ೧೮೯೪—ಮೈಸೂರ್ ಸ್ಟಾಸ್ ರಗ್ಯುಲೇಷನ್‌ಗಳ ೧೭೨ ನೇ ಆರ್ಟಿಕಲ್ ಅನುಸರಿಸಿ ಅಂಕೋಲಗೋಡು ತಾಲ್ಲೂಕು ಅಮಲ್‌ದಾರ್ ಎನ್. ಕೃಷ್ಣಪ್ಪನವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಹತ್ತುದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ. ಅರಕಲಗೋಡು ತಾಲ್ಲೂಕು ಶಿರಸ್ತೇದಾರರು, ಎನ್. ಕೃಷ್ಣಪ್ಪನವರು ರಜಾಮೇಲೆ ಗೈರ್ಹಾಜರಾಗಿರುವಕಾಲದಲ್ಲಿ ಅಥವಾ ಮತ್ತೊಂದುಹುಕುಂ ಹೊರಡುವ ವರೆಗೆ ಅರಕಲಗೋಡುತಾಲ್ಲೂಕು ಅಮಲ್ದಾರ್ ಕೆಲಸವನ್ನು ನೋಡುವರು.

ನಂ|| ೨೯೯೩೦—G. ೪೯೪—ಹಾಸನಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರ್ಜನ್ ಮೆ|| ಇ. ಎಸ್ ಕೃಷ್ಣಸ್ವಾಮಿ ಅಯ್ಯರವರಿಗೆ ೯೯ ೧೮೯೦ ನೇ ಇಸವಿ ಜೂನ್ ೧೧ ನೇ ತಾರೀಖು ೨೦೫೭೦—೩—೮೯೭೪ ನೇ ನಂಬರುಳ್ಳ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಮೂಲಕ ಕೊಡಲ್ಪಟ್ಟಿದ್ದ ೫ ದಿನಗಳ ಕ್ಯಾಜುಯಲ್‌ರಜಾ ಇದರಿಂದ ಮತ್ತೊಂದು ೫ದಿನಗಳವರೆಗೆ ಜಾಸ್ತೀ ಮಾಡಲ್ಪಟ್ಟಿರುತ್ತದೆ.

ಹುಕುಂ ನಂ|| ೩೧೪೬, ತಾ|| ೧೬ನೇ ಜೂನ್ ೧೮೯೪—ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡ್ ೨೨ನೇ ಸೆಕ್ಷನ್ ಅನುಸರಿಸಿ ಎಡತೊರೆ ತಾಲ್ಲೂಕ್ ಶಿರಸ್ತೇದಾರ್ ನಂಜುಂಡಯ್ಯನವರು ಸದರೀ ತಾಲ್ಲೂಕಿಗೆ ನೇಮಿಸಲ್ಪಟ್ಟಿರುವ ಅಮಲ್‌ದಾರರು ಹೋಗಿ ಕೆಲಸವಹಿಸಿ ಹಾಜರಾಗುವತನಕ ಜಂಗಮಿ ತರ್ಫ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ನಂ|| ೨೬೧೯೬—G. ೩೯೯೦, ತಾ||೧೬ನೇ ಜೂನ್ ೯೪—ಕಳೆದ ಮೇ ತಿಂಗಳ ೧೭ನೇ ತಾರೀಖುಳ್ಳ ೧೫೫೩೩—೩೯೭೪ ನೇ ನಂಬರುಳ್ಳ ಇಸ್ತಿಹಾರನಾಮೆಯನ್ನನುಸರಿಸಿ ಮೈಸೂರ್ ಡಿಸ್ಟ್ರಿಕ್ಟ್‌ಗೆ ವರ್ಗವಾದ ಇವರ ಅಮಲ್ದಾರರುಗಳ ವರ್ಗಾವರ್ಗಿಗಳು ಮತ್ತು ಸ್ಥಳವ್ಯವಸ್ಥೆಗಳು ಹುಕುಂ ಮಾಡಲ್ಪಟ್ಟಿರುತ್ತವೆ. ಟಿ. ಎನ್. ಮಿಜಾರ್ ನೀಜಾಮುದ್ದೀನ್ ಅಲ್ಲೀಖಾನರು ತಿರುಮಕೂಡ್ಲು ನರಸೀಪುರದಿಂದ ಹುಣಸೂರಿಗೆ, ಎಂ. ತಿರುಮಲಾಚಾರ್ಯರು, ಎಡತೊರೆಯಿಂದ ತಿರುಮಕೂಡ್ಲು ನರಸೀಪುರಕ್ಕೆ. ವೆಂಕಟಾಚಲಯ್ಯನವರು ಎಡತೊರೆಗೆ. ಹಸೇನ್ ಅಲ್ಲೀಖಾನರವರು ಮುಡಿಗೆರೆಗೆ, ೧೮೯೪ನೇ ಜುಲೈ ಗುರುವಾರ ತಾರೀಖಿನಲ್ಲಿ ಕೆಲಸವಹಿಸಿ ಹೋಗಿ ಹಾಜರಾಗತಕ್ಕದ್ದು.

ನಂ||೨೦೧೩೩—I ೬೫೨೧, ತಾ||೧೬ನೇ ಜೂನ್೧೮೯೪—ಕ್ರಿಮಿನಲ್ ಪ್ರೊಸೀಜ್ಯೂರ್‌ಕೋಡ್ ೧೨ನೇ ಸೆಕ್ಷನ್ ಅನುಸರಿಸಿ ಕೋಲಾರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ|| ಕೆ. ದೊರೆಸ್ವಾಮಿ ಅಯ್ಯರವರು, ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟು, ೩೭ ನೇ ಸೆಕ್ಷನ್ ಅನುಸರಿಸಿ ಸದರೀ ಕ್ಲಾಸ್ ಮ್ಯಾಜಿಸ್ಟ್ರೇಟರಿಗೆ ಜಾಸ್ತೀ ಅಧಿಕಾರಗಳೊಡನೆ ಸದರೀ ಕೋಡಿನ ಕೊನೆಯಲ್ಲಿ ನಾಲ್ಕನೇ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಅವರಿಗೆ ಕೊಡಲ್ಪಡುವ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ :— ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೧೧೦, ೧೧೩, ೧೨೪, ೧೨೬, ೧೩೩, ೧೪೩, ೧೪೭, ೫೬೨, ಈ ಸೆಕ್ಷನ್‌ಗಳಲ್ಲಿ ವಿಧಿಸಲ್ಪಟ್ಟಿರುವವು.

ನಂ||೨೦೧೯೩—G F. ೬೩೦—೯೩—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೯ ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರ್ ಡಿಸ್ಟ್ರಿಕ್ಟ್ ಫಸ್ಟ್ ಅಸಿಸ್ಟೆಂಟ್ ಕಮಿಷನರ್ ಮೆ|| ಜಿ. ರಘುನಾಥರಾಯರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ||೨೦೮೯೮—G. ೯೪೬೦, ತಾ. ೧೮ನೇ ಜೂನ್೧೮೯೪—ಮೈಸೂರ್ ಸರ್ವೀಸ್ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ ಕನ್ಸರ್ವೇಟರ್ ಆಫೀಸಿನ ಸಬ್‌ಡಿವಿಜನ್ ಆಫೀಸರ್ ಮೆ||ಸಿ. ವಿ. ರಾಘವಾಚಾರ್ಯರವರಿಗೆ, ೧೮೯೪ ನೇ ಇಸವಿ ಜೂನ್ ಗುರುವಾರ ತಾರೀಖ್ ಲಾಗಾಯಿತು ಮೂರುವರೆ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಬಾಗೇಪಲ್ಲಿ ಜನಗರ ತಾಲ್ಲೂಕು ಅಮಲ್ದಾರ್ ಮೆ|| ಎಂ. ಕೃಷ್ಣಯ್ಯಂಗಾರ್ಯರು ತತ್ಕಾಲದಲ್ಲಿ ಅಡ್ಮಿನಿಸ್ಟ್ರೇಟಿವ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರಾಗಿ ಲಕ್ಟಿಂಗ್ ತರ್ಫ ಮೊಕರರ್ಮಾಡಲ್ಪಟ್ಟು ಮೆ|| ಸಿ. ವಿ. ರಾಘವಾಚಾರ್ಯರವರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಹೊರಡುವ ತನಕ ನೌಕರಿಯ ಬಗ್ಗೆ ಬೆಂಗಳೂರ್ ಡಿಸ್ಟ್ರಿಕ್ಟಿಗೆ ನಿಯಮಿಸಲಾಗಿರುವದರಿಂದ ಕೂಡಲೆ ಹೋಗಿ ಕೆಲಸದಮೇಲೆ ಹಾಜರಾಗತಕ್ಕದ್ದು.

ನಂ|| ೨೦೭೪೦—I ೧೪೯೯—ಮೂಡಗೆರೆ ತಾಲ್ಲೂಕು ಅಮಲ್ದಾರ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಎನ್. ಸುಬ್ಬರಾಯರವರಿಗೆ ೧೮೯೪ ನೇ ಇಸವಿಯ ೩ನೇ ನಂಬರ ಆಕ್ಟನುಸರಿಸಿ ಪೊಲೀಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ಹುಕುಂ ನಂ||೪೮೦—ಅರಕಲಗೋಡ್ ತಾಲ್ಲೂಕು ಅಮಲ್ದಾರ್ ಎನ್. ಕೃಷ್ಣಪ್ಪನವರು ಮೈಸೂರುಡಿಸ್ಟ್ರಿಕ್ಟು ಬಾಗೇಪಲ್ಲಿ ಜನಗರ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುವದರಿಂದ ಅವರು ಕೂಡಲೆ ಹೋಗಿ ಕೆಲಸದಮೇಲೆ ಹಾಜರಾಗತಕ್ಕದ್ದು.

ಮುಜರಾಯಿ ಇಲಾಖಾ.

ನಂ|| ೧೪೮೯, ತಾ|| ೧೮ನೇ ಜೂನ್ ೧೮೯೪—ಹೊಳೆ[illegible] ಕೆರೆ ತಾಲ್ಲೂಕು ಅರೆಹಳ್ಳಿ ಪಟ್ಟಿಯಲ್ಲಿರುವ ಸರ್ಕಾರ್ ಅನ್ನಛತ್ರದವಿಚಾರಣೆಯಬಗ್ಗೆ ಮೆ|| ರಾ|| ರಾ|| ಚೆನ್ನೇಗೌಡರೂ, ಹಿರೇಗೌಡರೂ, ದೊರೇ ಗೌಡರೂ ಧರ್ಮದರ್ಶಿಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಪಬ್ಲಿಕ್ ವರ್ಕ್ಸ್ ಇಲಾಖಾ.

ನಂ|| ೨೯೩೩—೧೪೯, ತಾ|| ೧೫ನೇ ಜೂನ್ ೧೮೯೪—ಮೈಸೂರ್ ಪಬ್ಲಿಕ್‌ವರ್ಕ್ಸ್ ಇಲಾಖಾ ಇಂಜನಿಯರ್ ಶಿಬ್ಬಂದಿಯಲ್ಲಿ ಇದರಡಿ ತಿಳಿಸಲ್ಪಟ್ಟ ಭರ್ತಿಗಳು ಮಾಡಲ್ಪಟ್ಟಿರುತ್ತವೆ.

ಶಿವಮೊಗ್ಗಾ ಡಿವಿಜನ್ ಮೆ|| ಬಿ. ಎಸ್. ವೆಂಕಟಾಚಾರ್ಯರವರು ೬ನೇ ಗ್ರೇಡ್ ಯಗ್ಜಿಕ್ಯೂಟಿವ್ ಇಂಜನಿಯರ್ ಗ್ರೇಡಿನಿಂದ ಅದೇ ಗ್ರೇಡಿನಲ್ಲಿ ೧೮೯೪ನೇ ಇಸವಿ ಮಾರ್ಚಿ ೧೩ನೇ ತಾರೀಖ್‌ಮೊದಲು ಕಾಯಂ ಮಾಡಲ್ಪಟ್ಟಿರುತ್ತಾರೆ.

ಕಡೂರ್ ಡಿವಿಜನ್ ಮೆ||ಡಿ. ರಂಗರಾಯರವರು ೧ನೇ ಅಸಿಸ್ಟೆಂಟ್ ಇಂಜನಿಯರ್ ಗ್ರೇಡಿನಿಂದ ಅದೇ ಗ್ರೇಡಿನಲ್ಲಿ ಮೇಲೆ ತಿಳಿಸಲ್ಪಟ್ಟ ತಾರೀಖ್ ಲಾಗಾಯಿತು ಕಾಯಂ ಮಾಡಲ್ಪಟ್ಟಿರುತ್ತಾರೆ.

ಶಿವಮೊಗ್ಗಾ ಡಿವಿಜನ್ ಮೆ|| ಸಿ. ಪಲಗಯ್ಯಗೌಡರವರು ೨ನೇ ಅಸಿಸ್ಟೆಂಟ್ ಇಂಜನಿಯರ್ ಗ್ರೇಡಿನಲ್ಲಿ ಮೇಲೆ ಕಂಡ ತಾರೀಖ್ ಮೊದಲು ಕಾಯಂ ಮಾಡಲ್ಪಟ್ಟಿರುತ್ತಾರೆ.

ಮಿಲಿಟರಿ ಇಲಾಖಾ.

ತಾರೀಖ್ ೧೧ನೇ ಜೂನ್ ೧೮೯೪.

ಲೋಕಲ್ ಸ್ಟಾಸ್ ರಜಿಮೆಂಟಿನಲ್ಲಿ ಇದರಡಿ ತಿಳಿಸಲ್ಪಡುವ ಭರ್ತಿಗಳು ಮಾಡಲ್ಪಟ್ಟಿರುತ್ತವೆ :—೧೮೯೪ನೇ ಇಸವಿ ಜೂನ್ ಗುರುವಾರ ತಾರೀಖ್ ಲಾಗಾಯಿತು, ಹನುಮಂತರಾವ್ ದಪೇದಾರ್‌ಯವರು ಜಮೇದಾರ್ ರ್ಯಾಂಕಿನಿಂದ ಸರ್ ಜಫೇದಾರ್ ರ್ಯಾಂಕಿಗೆ ಭಡ್ತಿ ಮಾಡಲ್ಪಟ್ಟಿರುವರು, ದಫೇದಾರಿಯಿಂದ ಜಮೇದಾರಿಗೆ.

ಎಡ್ಯುಕೇಷನ್ ಇಲಾಖಾ.

ನಂ||೩೪, ತಾರೀಖ್ ೧೮ನೇ ಜೂನ್ ೧೮೯೪—ಮುಂದಿನ ಮೈಸೂರ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಹೋಗಲಿರುವ ಉಮೇದುವಾರರನ್ನು ಪರೀಕ್ಷಿಸುವದಕ್ಕಾಗಿ ಏರ್ಪಾಟಾಗಿರುವ ಮೆಡಿಕಲ್ ಬೋರ್ಡಿನವರು ಬರುವ ಜುಲೈ ೩೦ ನೇ ತಾರೀಖು ಬೆಳಿಗ್ಗೆ ೩ ಘಂಟೆಗೆ ಬೆಂಗಳೂರ್ ಸಿಟಿ ಆಸ್ಪತ್ರೆಯಲ್ಲಿ ಏತದರ್ಥ ಸೇರುವರು.

SUMMARY OF NEWS.
ವೃತ್ತಾಂತ ಸಂಗ್ರಹವು.

ಸರ್ಕಾರ್ ನೌಕರಿಗೆ ಸೇರಬೇಕೆಂದಿರುವವರು ಮುಖನ್ನು [illegible] ಸ್ವಲ್ಪ ವಿದ್ಯಾವಂತರಾಗಿದ್ದರೆ ಸಾಕೆಂತಲೂ, ಹಿಂಬಗಳಾದ ಸ್ವಲ್ಪ ಸಂಬಳಕ್ಕೆ ಭಾರೀ ಪರೀಕ್ಷೆಯನ್ನು ಕೊಟ್ಟಿರುವವರಾಗಬೇಕೆಂತಲೂ ಸಿಂಧ್ ದೇಶದ ಸರ್ಕಾರದವರು ತೀರ್ಮಾನ ಮಾಡಿರುವದಾಗಿ ತಿಳಿಯಬರುತ್ತದೆ.

ವಿಜಾಪುರಜಿಲ್ಲಾ ಹಿಂಗಣಿ ತಾಲ್ಲೂಕು ಮೊರಟಗಿ ಗ್ರಾಮದ ಸ್ಥಳದ ಕುಲಕರ್ಣಿ ರಾ|| ನಾರಾಜಿ ಯಂಬುವನು ಅದೇ ತಾಲ್ಲೂಕು ಏಳೋರು ಗ್ರಾಮದ ಕುಲಕರ್ಣಿಯ ಮಗಳನ್ನು ಪ್ರಸನ್ನ ಮಾಡಿ ಅಂದರೆ ಲಗ್ನ ಈಗ [illegible] ದಿವಸಗಳ ಹಿಂದೆ ಮಾಡಿಕೊಂಡನು. ವರನ ವಯಸ್ಸು ೬೮ ಮತ್ತು ವಧುವಿನ ವಯಸ್ಸು ೧೮, ಉಭಯತ್ರರೂ ನಿಃಸಂತಾನ ಸ್ಥಿತರು—ಸ.

ಸೂರತ್‌ನಲ್ಲಿ ಪಿನಿ ಪಾಚ ಎಂಬ ವಾಣಿಜ್ಯರಲ್ಲಿ ಗಂಗಾ ಎಂಬ ಒಂಭತ್ತು ವರ್ಷದ ಹುಡುಗಿಯು ದುರ್ದೈವದಿಂದ ವಿಧವೆಯಾಗಲು, ಆ ಜಾತಿ ಜನರವರಿಗೆ ಅಂತಃಕರಣ ಉತ್ಪನ್ನವಾಗಿ ಕಳೆದ ತಿಂಗಳ ೧೦ ನೇ ತಾರೀಖಿಗೆ ಬೆಳ್ಳಿಂಜಾತಿಯವರು ಕೂಡಿ ಸಭೆಮಾಡಿ ಧನುರಾಶಿಯಾಗುವದಕ್ಕಿಂತಲೂ ಪೂರ್ವ ವಿಧವೆಯಾದವರು ಪುನರ್ವಿವಾಹ ಮಾಡುವದಕ್ಕೆ ಅಡ್ಡಿ ಇಲ್ಲವೆಂದು ಗೊತ್ತು ಮಾಡಿರುತ್ತಾರಂತೆ—ಸ. ವೈ.

ಇತ್ತಲಾಗಿ ಜನರು ವಿಧುರತ್ವ ಬಂದಕೂಡಲೆ ಇನ್ನು ಮೇಲೆ ಪುನರ್ವಿವಾಹ ಮಾಡಿಕೊಳ್ಳುವದು ನಿಷ್ಫಲ, ಸುಮ್ಮನೆ ಸನ್ಯಾಸಾಶ್ರಮವನ್ನು ಅಭ್ಯಾಸಮಾಡಿಕೊಂಡು ಯಾರು ಹೇಳಿ ಮತ್ತೊಂದು ಪ್ರಸೂತ ವೈರಾಗ್ಯದಂತೆ ಮಾತಾಡಲಾರಂಭಿಸಿ ಕಡೆಗೆ ಚಿಕ್ಕ ಚಿಕ್ಕ ಹುಡುಗಿಯರನ್ನೇ ಲಗ್ನ ಮಾಡಿಕೊಳ್ಳುತ್ತಾರೆ. ಮತ್ತು ಕೆಲವರು ಎಲ್ಲಕಡೆಗೂಹೋಗಿ ಹುಡುಕಿ ಕನ್ಯೆ ದೊರೆಯದಪಕ್ಷದಲ್ಲಿ ಪುನರ್ವಿವಾಹಮಾಡಿಕೊಳ್ಳುತ್ತೇವೆಂದು ಇಂಥದ ಮಾತುಗಳನ್ನಾಡಿ ಕಡೆಗೆ ಸುಮ್ಮನಾಗುತ್ತಾರೆ. ದುಃಖಾರ್ಣವದಲ್ಲಿ ಹೊರಳಾಡುವ ವಿಧವೆಯರನ್ನು ದಡಕ್ಕೆ ತರಲಾಗಲಿಲ್ಲ. ಆದರೆ ತ್ರಿಕರಣಪೂರ್ವಕವಾಗಿ ಅವರನ್ನು ದುಃಖದಿಂದ ಹೊರತೆಗೆಯುವ ಅಭಿಮಾನಿಗಳು ವಿರಳರು. ಆದರೂ ಮೇಲಿನ ಗೃಹಸ್ಥರಂತವರು ಸಮ್ಮನೆ ಪುನರ್ವಿವಾಹವೆಂದು ಕೂಗಾಡಿದರೆ ಯಾವಾಗಲೂ ಸಿದ್ಧಿಯಾಗಲಾರದು—ಲೊ. ಬ

ನೋಟೀಸ್.

ನಮ್ಮ ಚಂದಾದಾರರಿಗೆ ವಿಜ್ಞಾಪನೆ.

ಈವರೆಗೆ ಒಂದರಡು ತಿಂಗಳ ಮೊದಲು ಚಂದಾದಾರರಾಗಿ ಪತ್ರಿಕೆಯುಂತರಿಸಿಕೊಳ್ಳತಕ್ಕವರು ಈತಿಂಗಳೊಳಗಾಗಿ ತಮ್ಮ ಚಂದಾ ಹಣವನ್ನು ಕಳುಹಿಸದ ಪಕ್ಷದಲ್ಲಿ ಮುಂದಿನ ತಿಂಗಳ ಮೊದಲು ಅವರಿಗೆ ಪತ್ರಿಕೆ ರವಾನಿಸಲ್ಪಡಲಾರದು. ಈಸಾಲ್‌ನಲ್ಲಿ ೬ನೇ ತಿಂಗಳು ಪೂರ್ತಿಯಾಗುತ ಬರುತದರಿಂದ ನಮ್ಮ ಚಂದಾದಾರರೆಲ್ಲರು ಖಂಡಿತವಾಗಿ ಕೂಡಲೇ ಚಂದಾ ಹಣವನ್ನು ರವಾನಿಸಬೇಕೆಂದು ಕೋರುವೆವು.

☞ BANGALORE :—Printed and Published at the KARNATAKA PRESS, No. 40 HOSPITAL Road, CITY.—1894.

THE

Karnataka Prakasika.

ಕರ್ನಾಟಕ ಪ್ರಕಾಶಿಕಾ.

Published Every Monday Morning.

[illegible]

VOL. XXI BANGALORE:—MONDAY JULY 2, 1894. No. 26.

Select Telegrams

London 23rd June, Midnight—Her Royal Highness, the Duchess of York was safely delivered of a son tonight. Mother and child are both doing well.

Paris, 24th June Midnight—President Carnot, while proceeding to the theatre at Lyons tonight, was stabbed to the heart and his condition is hopeless. The assassin has been arrested.

The assassin of President Carnot is an Italian named Santo, a resident of the south of France. He declines to state his motive for the crime. The wound the President was in the region of the liver, and at the time it was not at first supposed [illegible]. The assassin narrowly escaped being lynched by the mob. The Prefect of Lyons announced to the theatre that an attack had been made on the President and the audience received the news with the most profound emotion.

Paris 25th June—President Carnot expired at 12 45 this morning.

London, 25th June—Universal consternation and abhorrence are felt throughout France at M Carnot's assassination and sympathetic articles have appeared in most of the English papers.

London, 25th June—The British, Italian Spanish and American Parliaments have passed votes of condolence with France. Italy is deeply concerned that the assassin is an Italian, King Humbert and Signor Crispi in telegraphing their sympathies to Paris declare that the Anarchists have no country and are the enemies of humanity.

London 26th June—In the House of Lords and in the House of Commons tonight, whilst all the Members remained with heads uncovered, votes of condolence and sympathy with the French Government were unanimously passed. Impressive speeches were made by the leaders of each party dwelling on the long friendship which had existed between France and Great Britain.

Lord Rosebery and Lord Kimberley testify the Sovereigns and Ministers of all States have telegraphed their sympathies to France. There is a marked desire throughout Italy to repudiate the murderer, Santo, and testify to the friendship Italy feels towards France.

Allahabad 26th June—News is just received at Agra of great disaffection at Bhurtpur. The Rajas have telegraphed to the Viceroy complaining against the present regime. Their memorial is to follow.

Paris 27th June—The Congress met at Versailles today and resulted in M Casimir Perier being elected President of the French Republic.

At the Presidential election today M Casimir Perier obtained 451 votes, M Brisson 191 and M Dupuy 99 votes.

Allahabad 27th June—Very heavy rain fell at Gohna on Sunday and Monday making a daily rise in the water of four feet. The lake is now four miles long. The dam has been slightly scoured by the deluge but as yet shows no signs of giving.

London, 28th June—Mr Gladstone's retirement from Parliament at the end of the Session has been officially announced.

London 29th June—The Maharajah of Cooch Behar dined with the Queen last night.

Bombay, 30th June—Twenty four and a half lakhs of gold was taken away by the Mail steamer yesterday which brought up the total exports of the yellow metal for the month of June to one crore and forty lakhs.

THE

Karnataka Prakasika.

MONDAY, JULY 2, 1894

EDUCATION IN MYSORE

A copy of the Annual Report on Public Instruction in Mysore for 1892 93 has been sent us, and we are glad to find that matters in this department are going on very well. This province compares well with any other part of Southern India. There are many pupils in the schools, and every year shows an increase, and the Education Secretary is to be congratulated on the account he is able to send forth of his department to the public. The Report before us says that the year 1892 93 was one of steady progress. The inspecting staff had been re-organised in the preceding year, the result being improved attendance of all Primary schools. These schools were better supervised, hence the better results. During the year the village schools were placed under the supervision of local committees, and the duties of these committees were clearly defined. The English colleges, High schools and Middle schools continued to be in a satisfactory condition. We are told that considerable improvements were made in the teaching staff and organisation of the important Vernacular schools. Several proposals were under the consideration of Government, but we are not told whether these are likely to be carried out. We are glad to see that the number of girls schools increased from 105 to 122, and the percentage of female scholars to female population of school going age increased from 3 14 to 3 22. Nine girls passed the Lower Secondary Examination in Canarese. There were during the year forty four girls above the age of twelve in the Maharani's Girls'-School, Mysore, which continued to make steady progress. Now as regards the number of schools and scholars during the year under review. At the end of the official year 1893, the number of Public institutions was 1 698 against 1 663 on the 31st of March 1892, and the number of scholars was 76,963 against 76 288. This shows that progress was made during the year, and we may say, good progress. The number of Private institutions was 2,112 at the same time against 2 060 of the year before while the pupils increased from 25,041 to 26,586. The total number of schools, both public and private, increased from 3723 in 1891 92 to 3810 in 1892 93 or by 2 3 per cent, and the total number of scholars increased from 101,329 to 103,549 or by 2 1 per cent. The increase in the number on the rolls of the public institutions would have been larger at the end of the official year but for causes that tended to its diminution. We are told that in the months of April and May as many as 500 Vernacular masters, most of whom were either Head masters or sole masters of their Schools, were withdrawn from their work for the purpose of receiving instruction in the Normal classes which were held at the head quarters of each district. Most of the masters who were withdrawn returned to work in the middle of June. The attendance of the Village schools suffered considerably by the absence of the masters, and the commencement of the ploughing season in June induced many of the boys to stay away longer than was necessary. We next come to the percentage of scholars to population of school going age. In accordance with the orders of the Government of India, the population of school going age is estimated at 15 per cent of the total population. As this percentage is adopted in British India it is useful to retain the same in Mysore for the purposes of comparison, although, as was shown in a former report, the percentage of boys and girls of ages varying from five to fourteen is according to the last census 22 5 per cent of the total population in Mysore. The total male population of School going age in Mysore taken at 15 per cent is 364,989, of whom 91,904 or 25 18 per cent are at school. The total female population of school going age is 361,542, of whom 11 615 or 3 22 per cent were at school. On the 31st of March 1893 the percentages of male and female scholars to the population of school going age in Madras were respectively 23 82 and 3 89. In Bombay the corresponding percentages on the 31st of March were 27 5 and 3 87. From a table which is given in the report we find that the number of public Institutions increased during the year by 35 and the number of scholars by 675. The total increase of both public and private institutions together was 87, and the total increase in the number of scholars was 2 220. We find from the report that the number attending the English colleges fell from 416 to 376 owing to the unprecedented severity of the Matriculation Examination in the preceding December, but the loss of 70 undergraduates was more than made up by an increase of 85 scholars in the High Schools. There was an increase of 140 students in the English Middle Schools for boys. The loss of 1886 boys in the Vernacular Middle Schools is only apparent as it was caused by the re-classification of scholars in accordance with the new curriculum of studies. The apparent loss was more than made up by an increase of 2,500 boys in the Vernacular Primary Schools. A considerable number of schools which used to be classed as Middle under the old rules were, from January 1893, classed as Primary. In the same way, the decrease of 506 girls in the Vernacular Middle schools was more than made up by an increase of 839 girls in the Vernacular Primary schools. The decrease of 504 scholars under the head of other schools is accounted for by the closing of five aided Sanskrit schools and three unaided schools of the same class. The average monthly number on the rolls during the year was 73,992, or 96 14 per cent of the number on the rolls against 95 18 in the previous year. The average daily attendance was 60,267 or 81 52 per cent of the average monthly number on the rolls. The percentage of the average daily attendance is highly satisfactory, and shows that even in the lowest village schools the pupils have greatly improved in regularity of attendance under the present system of supervision and control exercised by the Deputy Inspectors. We shall give some more facts from this Report in our next issue.

News and Notes.

THERE are over eleven thousand steamers traversing the four great ocean routes.

THE census of pauperism in London for the last three years exhibits a steady increase year by year. In 1891, the total was 93 328, which has risen to 101,144 this year.

His Excellency the Governor in Council Bombay has sanctioned certain rules framed by Mr Vincent, Acting Commissioner of Police, prohibiting low class Hindus from taking part in processions on the occasion of the forthcoming Moharrum festival.

IT is not usual to find a Christian Minister refusing to be sworn on the Bible. A London Missionary, however, who prosecuted a man for theft at the Egmore Presidency Magistrates' Court the other day, refused to take the usual Christian oath. He was accordingly affirmed by the Brahmin Interpreter.

THIRTY years ago, Japan was in a more backward condition than India was at the time. But compared to India, Japan has made immense strides in many respects during this short period. She has now one of the best engineering schools in the world, and is beginning to manufacture creditable electrical machinery.

The defamation case in which Mr Venkatram Iyengar of the *Evening Mail*, Bangalore, is charged will be heard by the First Assistant Resident, Mr Tucker, by order of the Resident. This was done at the instance of an application from Mr Venkteram Iyengar for a transfer from Mr [illegible] Court to some other Court. This was granted.

THE Madras Government has issued an Order considering that, in making selections for the post of Tahsildar, preference should be given to a candidate who can ride, over one who cannot, and the Board of Revenue has been requested to direct Collectors, when submitting nominations for said posts, to state whether their nominees are in the habit of riding on horseback or not.

THE Government of Madras has directed that the list of graves of Europeans situated in the Native States in this Presidency be forwarded to the Government of India, and has requested the Political Officers to maintain a register of interments in the States to which they are attached and to submit to Government by the 1st February in each year a return of the entries made in the register.

THE marriage of Florence Maharani to the Maharaja of Patiala appears to have made the practice of converting women of other castes to Sikhism for the purposes of marriage very popular. The other day the Sikh priest at Lahore again baptized four Mahomedan women, who adopted Hindu names according to the rites established by Guru Nanak, and were given in marriage to four Singhs. Such marriages are now considered valid.

Special Trains for Government Officials—Mr Caine asked the Secretary of State for India if any despatch has been received from the Viceroy recommending the stoppage of the use of special trains to convey the Viceroy, Commander in Chief, and other members of the Government between Simla and Calcutta on the ground of needless expense.

Mr H Fowler said No communication has been received from the Government of India on this subject. I am informed that members of Council other than the Viceroy and the Commander-in Chief are not entitled to special trains.

IN the Laangdwin Chaung, a lateral valley falling from the west into the Chindwin river, near Mingin in the Upper Chindwin District of Burma, one evening in the month of May three girls, aged from 18 to 20 years each, Minnway ben, Mi Mintha, sisters, and Mi Shwaya, a friend, were returning with firewood from the jungle, in single file, to their village, Soikiba.

Mi Shwaya who was in front, carried an ordinary *dha*, large knife or chopper, and the others were unarmed. *Suddenly with a loud roar a tiger sprang on the* younger sister, who was last in the line. The two others ran forward a few steps, then Minnway ben, seeing her sister being mauled by the tiger, ran forward, snatched the *dha* from Mi Shwaya, and returning struck the tiger a terrible blow on the head. *In a moment he had her down and* began mauling her also, but striking again Minnway ben killed the brute on the spot.

Local and Provincial.

DACOITS.—A report has come in that there are dacoits at work only a few miles from Bangalore. It is to be hoped the police will soon give a good account of them.

RETURN FROM MYSORE.—Those who went to the races at the capital have returned to the Station. They thoroughly enjoyed themselves while they were away. The racing and the Maharajah's hospitality was thoroughly appreciated.

THE WEATHER.—The weather is nice and cool though very little rain has fallen lately. There were a few light showers last week, but very little. The wind at times is high and rather unpleasant, and it also keeps off the rain. We ought to have more soon.

A PRECAUTIONARY MEASURE.—As a large number of pilgrims from Udupi are passing through Bangalore, and as these pilgrims are said to be the cause of bringing in Cholera and other epidemics, the City authorities, as a precautionary measure, have not allowed them to enter the limits of the Town, but made arrangements for them to stay in a chuttram beyond the boundary.—D. P.

A LIBERAL DONATION.—We are glad to hear that Mr. *A. Srinivasa Charlu*, Rai Bahadur, Muzrai Secretary to the Government of Mysore, has deposited a sum of Rs. 3600, with the Government of Mysore, for the purpose of founding 3 Scholarships and a prize, in connection with the Maharani's Girls' School, Mysore. Here is an instance of genuine munificence, which the local magnates might do well to copy.—E. M.

PROFESSOR OF MATHEMATICS, CENTRAL COLLEGE, BANGALORE.—Mr. T. R. Venkataswamy Naidu, Professor of Mathematics, of the Central College, Bangalore, who came down to Madras about six weeks ago, to spend his summer vacation here, was attacked with erysipelas soon after his arrival. His condition being considered critical at one time, he was admitted a patient in the Native Officers' Quarters of the General Hospital, where under the skilful treatment of Dr. Maitland, he improved, and has now been pronounced to be out of danger.—*M. S.*

EMBEZZLEMENT.—A paid stamp vendor in the Tumkur Deputy Commissioner's office, embezzled stamp papers, amounting to nearly 500 rupees, a few days ago, which was found by the Treasury Department of the Deputy *Commissioner's office, while examining the* stamp accounts. The vendor, on enquiry said that he had kept the amount obtained from the sale of the said papers at home, and that he would pay the same, the following day. The person absconded the very night, and he was arrested on a warrant being issued forth with. The case is now on trial.—F. M.

POST CARDS FOR OFFICIAL CORRESPONDENCE IN MYSORE.—The Government of His Highness the Maharajah having decided upon the introduction of local service post cards into the State, the Superintendent of the Government Press has been requested to print eight thousand cards of the kind, and also as nearly as possible of the British Postal card, and to forward them to the Superintendent of Stationery for distribution to the various offices in Mysore on indents like European stationery. These cards are to be used by all officers of the State for reminders and short communications of no permanent importance, but solely on the public service.—B. S.

THE SUMPUNGHY TANK.—Brickmaking which *has been carried on vigorously in the bed of* the Sumpunghy tank will soon make the reservoir one of the deepest about Bangalore, and if only its feeders could be somewhat improved, in another twelve months' time it is possible that the storage of water will be very large and lasting. The Sumpunghy is altogether a pretty sheet of water—or rather was until about four or five years ago. We remember that in 1889 it was so full from band to band of its *graceful triangle with that most* beautiful of *kongas* avenues to the east, that very pleasant aquatic sports might have been introduced, to break the monotony of life in Bangalore, when the station is "out of season."—B. S.

The Mysore Gazette.

Bangalore, Thursday June 21 1894

NOTIFICATIONS BY THE GOVERNMENT OF HIS HIGHNESS THE MAHARAJAH OF MYSORE.

S. Venkat Rao, Amildar, Sorab Taluk, now transferred to Krishnarajpete Taluk, Mysore District, is granted forty five days' privilege leave from such date as he may have availed himself of the same.

Under Article 183 of the Mysore Service Regulations, Mr. V. N. Narasimmaiengar on Special duty, Dewan's Office, is granted privilege leave for three months, from the 1st July 1894, or such subsequent date as he may avail himself of the same.

The forty days' privilege leave granted to Mr. A. Krishnaswamiengar, Sub-Division Officer, Chikballapur, in Notification Camp No. 43, dated 10th April 1894, is hereby extended up to and inclusive of the 6th June 1894.

Under Section 12 of the Code of Criminal Procedure, B. Krishna Singh, Deputy Amildar, now temporarily doing duty as Amildar in the Sirumandrum Jahgir, is hereby invested with the powers of a Magistrate of the Third Class, to be exercised within such local *limits as the District Magistrate of Mysore* may prescribe.

Kesavaiengar, Sheristadar of the Magadi Taluk, is appointed to act as Amildar of the Nelamangala Taluk during the absence of Amildar C. Rangagopalachari on privilege leave. He is invested with the powers of a Third Class Magistrate.

EDUCATION.

It is hereby notified that Mr. D. Subbaiya, Deputy Inspector of Schools, Kolar District, is granted ten days' casual leave with effect from the 4th June 1894. He returned to duty on the 14th idem.

Extracts.

A TALK WITH MRS. BESANT.

(From *India*.)

* * *

"But I thought that in India caste divides classes pretty sharply. For instance, a Brahmin won't eat with a lower caste."

"The whole question of eating is on a different footing in India. Here it is largely social; there, it is based on the question of magnetism. Frequently a Brahmin of one sub-division will not eat with a Brahmin of another sub-division. Magnetism means the force of vital energy in connection with astral matter; on its purity a man's power for good may depend. He must not impair it by unnecessary promiscuous intercourse with others."

* * *

"And how did the Hindu character strike you, Mrs. Besant?"

"The Hindus are gentle, courteous, hospitable people, not enterprising, fond of argument on abstract questions. My past incarnations having been in the East, I have much sympathy with the Hindus. My teachers found that I acquired certain kind of knowledge."

* * *

"Could not we in England warn young Englishwomen who are taking up the mission ary career not to press their faith unduly on Hindus, seeing that it closes many a door to them?"

"The Theosophical Society intends to take up the work of instructing suitable women. The future missionary must respect Hinduism. The outlines of the plan are in preparation, we shall consult men of standing as to how they shall be filled in. We are hoping to establish homes for widows, with a Brahmin lady at the head, to educate them as doctors, nurses, teachers."

"One word, before I go, about caste. I imagine you must, like several thoughtful people I know, believe in it."

"Thoroughly. Caste is based on Re-incarnation. The four great castes form four great schools, in which the soul must go to learn, as it were, to build itself up. Its progress is not uninterrupted. If a Brahmin, a spiritual teacher, became desirous of wealth, he might be thrust back to a lower caste. Even in the limits of one earth life, a man might, in the old days, pass from one caste to another; he might rise from a Sûdra to a Brahmin. But caste needs reformation. It has become highly artificial. There is no need for all the sub divisions that have crept in. It must be restored to its original naturalness."—T. T.

ಕರ್ಣಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ಜುಲೈ ೨ ನೇ ತಾ॥ ಸೋಮವಾರ

ಪೋಲೀಸ್ ಸ್ಟೇಷನ್‌ಗಳಮುಂದೆ ಬಾಜಾ ಬಜಂತ್ರಿಗಳಂ ನಿಲ್ಲಿಸುವಿಕೆ.

ಪ್ರಜೆಗಳು ತಮ್ಮ ಮನೆಗಳೊಳು ನಡೆಯುವ ಶುಭಾಶುಭ ಕಾಲಗಳಲ್ಲಿ ಬಾಜಾ ಬಜಂತ್ರಿಗಳೊಡನೆ ರಾಜಬೀದಿಗಳಲ್ಲಿ ಮೆರವಣಿಗೆ ಹೋಗುವಣವು ಅನಾದಿ ಸಂಪ್ರದಾಯವಾಗಿರುತ್ತದೆ. ಮುಖ್ಯವಾಗಿ ಹಿಂದೂ ಮುಸಲ್ಮಾನರು ತಮ್ಮ ತಮ್ಮ ಮತಸ್ಥಾನಗಳ ಎದುರಾಗಿ ಅನ್ಯಮತಸ್ಥರು ಹೋಗುವಾಗ ತಮಗೆ ಅಗೌರವವೆಂಬ ಬ್ರಾಂತಿಯುಳ್ಳವರಾಗಿರುತ್ತಾರೆ. ಇದಕ್ಕೆ ಕಾರಣವೇನೆಂದು ವಿಚಾರಿಸಲಾಗಿ, ತಾವು ದೇವತಾ ಪ್ರಾರ್ಥನೆಯಲ್ಲಿರುವಾಗ ತಮ್ಮ ಬುದ್ಧಿಯನ್ನು ಕಪ್ಪಿಸತಕ್ಕ ಗದ್ದಲವು ಯಾವವೂ ಇರಕೂಡದೆಂಬ ಅಭಿಪ್ರಾಯವಾಗಿ ಕಾಣಬರುತ್ತದೆ. ಅಂತ ಗದ್ದಲವು ಸ್ವಮತಸ್ಥರು ಮಾಡಿದರೂ ಅನ್ಯಮತಸ್ಥರು ಮಾಡಿದರೂ ಅವರ ಫಲನಷ್ಟತ್ವ ಏಕರೂಪವಾಗಿಯೇ ಇರುವುದರಿಂದ ಇದಕ್ಕೆ ಮತವೈಷಮ್ಯವೇ ಮುಖ್ಯಕಾರಣವೆಂದು ಧಾರಾಳವಾಗಿ ಹೇಳಬಹುದು. ಆದರೆ, ಬಲಿಷ್ಠರಾದವರು ಕೆಲವರು ತಮ್ಮ ಪವಿತ್ರತೆಯಂ ಯಾರೂ ಅಪ್ರಯೋಜಕ ಪಡಿಸಲಾರರೆಂದು ಹೇಳುವರು. ಅದಕ್ಕೆ ಅನುಗುಣವಾಗಿ ಸನ್ನಿವೇಶಗಳಂ ಪ್ರವೇಶ ರೋಕಣವೂ ಪ್ರಸಿದ್ಧ ವಿಷಯವಾಗಿದೆ. ಶ್ರೀ ಶೃಂಗೇರಿ ಸ್ವಾಮಿಗಳವರು ಸನ್ ೧೮೯೨—೯೩ನೇ ಇಸವಿಯಲ್ಲಿ ಈ ಪ್ರಾಂತಕ್ಕೆ ದಯಮಾಡಿದ್ದರು. ಅವರ ಮಾನ ಮರ್ಯಾದೆಗಳಂ ಕಾಪಾಡುವ ವಿಷಯದಲ್ಲಿ ಗತಿಸಿದ ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರವರೂ, ಆಗ ಇಲ್ಲಿನ ಚೀಫ್ ಕಮಿಷನರವರಂ ಆಗಿದ್ದ ಮಿ॥ ಸಾಂಡರ್ಸ್, ಮೆಸ್ಟರ್ ಬವರಿಂಗ್ ಸಾಹೇಬರುಗಳು ಬಹಳ ಜಾಗರೂಕರಾಗಿದ್ದರು. ಒಂದಾನೊಂದು ದಿನ ರಾತ್ರಿ ೭ ಘಂಟೆಯ ಸಮಯದಲ್ಲಿ ಶ್ರೀ ಸ್ವಾಮಿಗಳವರ ಸವಾರಿಯು ದಂಡಿಗೆ ಚತ್ರ ಸಹಿತ ಅಲ್ಲಿನ ಮಸ್ಜಿದ್ ಎದುರಿಗೆ ಹೋಗುವಲ್ಲ ಮುಸಲ್ಮಾನರು ಎದುರಾಗಿ ತಡೆಹಾಕಿದ್ದರಿಂದ ಗದ್ದಲ ಉಂಟಾಯಿತು. ಮುಸಲ್ಮಾನರಿಗೆ ಸ್ವಭಾವಸಿದ್ಧವಾಗಿ ಹಿಂದುಗಳ ಮೇಲಿನ ಅಸೂಯೆಯಿಂದ, ಸ್ವಾಮಿಗಳವರಿಗೆ ಸರ್ಕಾರದವರು ಸವಾರಿ ಬಾಬ್ ಫೌಜ್ ಕೊಟ್ಟು ಕಳುಹಿಸುವದರಿಂದ, ಅವರು ತಮ್ಮ ಮೇಲೆ ಜುಲುಂ ನಡೆಸುವದಕ್ಕೆ ಅವಕಾಶ ದೊರೆಯುತ್ತದೆಂದು ಮುಸಲ್ಮಾನರು ಇಂಡಿಯಾ ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡರು. ಅವರ ಪರ್ಯವಸಾನವು ಶ್ರೀಸ್ವಾಮಿಗಳವರಿಗೆ ಅನುಕೂಲವಾಗಿಯೇ ಪರಿಣಮಿಸಿತು. ಆದರೆ ಒಂದು ಮತದವರ ಆಲಯಗಳ ಮುಂದೆ ಅದಕ್ಕೆ ವಿರೋಧಿಗಳಾದ ಬೇರೆಯೊಂದು ಮತದವರು ವಾದ್ಯಘೋಷಗಳೊಡನೆ ಹೋಗಕೂಡದೆಂದು ಹುಕುಂ ಕೊಡಲ್ಪಟ್ಟಿತು. ಇಂತಹ ಹುಕುಮನ್ನು ಪೋಲೀಸಿನವರು ಜಾರಿಯೊಳು ತರುವಕಾಲದಲ್ಲಿ ದ್ವೇಷಯುಕ್ತನಾಗಿರುವ ಕ್ರಿಶ್ಚಿಯನ್ ಮತಸ್ಥರ ದೇವಾಲಯಗಳ ಮುಂದೆಯೂ ಹೋಗಕೂಡದೆಂದು ಏರ್ಪಡಿಸಲ್ಪಟ್ಟಿತು. ಇಷ್ಟುಮಾತ್ರವೇ ಅಲ್ಲ, ಈ ಹುಕುಮನ್ನು ಜಾರಿಯೊಳು ತರುವದಕ್ಕೆ ಅಧಿಕಾರವೊಂದಿದ ಪೋಲೀಸಿನವರು ಈ ಸಂದರ್ಭದೊಳು ತಮಗೂ ಒಂದು ಪ್ರಾಶಸ್ತ್ಯವನ್ನುಂಟುಮಾಡಿಕೊಳ್ಳಬೇಕೆಂಬ ಕುತೂಹಲದೊಡನೆ ತಮ್ಮ ಸ್ಟೇಷನ್‌ಗಳ ಮುಂದೆಯೂ ಯಾರೂ ಬಾಜಾ ಬಜಂತ್ರಿಗಳೊಡನೆ ಹೋಗಕೂಡದೆಂದು ಅಪ್ಪಣೆಯನ್ನು ಹೊರಡಿಸಲು ಪ್ರಾರಂಭಿಸಿ ಅದರಂತೆ ತನಕ ನಡೆದು ಬರುತ್ತಿದೆ. ಮುಖ್ಯವಾಗಿ ಅವಿಚಾರ ರಮಣೀಯ್ಯವಾದ ಕೃತ್ಯಗಳಿಗೆ ಅತ್ಯಂತ ಮಂ ಕಾಣುವುದು ಅಸಾಧ್ಯವಾದುದು. ಈಗ ಈ ಪತ್ರಿಕೆಯಲ್ಲಿ ನಮ್ಮ ವಿಚಾರಕ್ಕೆ ಗುರಿಯಾಗಿರುವ ಶ್ವೇತಛತ್ರದ ಉಪಯೋಗದಂತೆ ಇದೂ ಒಂದಾಗಿರುವದರಿಂದ ಗವರ್ನಮೆಂಟಿನವರು ಈ ವ್ಯವಸ್ಥೆ ಮಾಡುವ ಕಾಲದಲ್ಲಿ ಇದನ್ನೂ ತಮ್ಮ ಆಲೋಚನೆಗೆ ಗಮನಕ್ಕೊಳ್ಳುವರೆಂದು ನಂಬುತ್ತೇವೆ.

ಶ್ವೇತಛತ್ರದ ಉಪಯೋಗಾವರ್ತಿ.

ಈಚೆಗೆ ಈ ಊರೊಳು ಕೆಲವರು ತಮ್ಮ ಮನೆಗಳಲ್ಲಿ ನಡೆದ ವಿವಾಹಗಳ ಕಡೇದಿನ ಮಾಡಿದ ಮೆರವಣಿಗೆಗಳಲ್ಲಿ ಶ್ವೇತಛತ್ರವನ್ನು ಉಪಯೋಗಿಸಿದ್ದು, ದೇಶ ಸಮ್ಮತಗಳ, ರಾಜಾಜ್ಞೆಗೂ ವಿರುದ್ಧವಾದ ಕಾರ್ಯವೆಂದು ಕೆಲವರು ಆಕ್ಷೇಪಿಸಿದ ವಿಷಯದಲ್ಲಿ ಶ್ರೀಮನ್ಮಹಾರಾಜ ರಾಜೇಶ್ರೀ ಸಾಹೇಬ್ ಬಹದೂರವರ ಸನ್ನಿಧಿಗೂ, ಸಂಸ್ಥಾನದ ನಿರ್ವಾಹಕ ಮಂತ್ರಿಗಳ ಬರೆದುಕೊಂಡ ಅರ್ಜಿಯನ್ನು ಇವರಡಿ ಪ್ರಕಟಿಸುತ್ತೇವೆ. ಇದಕ್ಕಾಗಿ ಬಂದವರ ಹುಕುಂ ಅನುಸರಿಸಿ ಈ ಮೊಕದ್ದಮೆಯು ಪಿಂಗಳೂರ್ ತಾಲ್ಲೂಕ್ ಅಮಲ್ದಾರರ ಕಚ್ಚೇರಿಯಲ್ಲಿ ವಿಚಾರಣೆಯಾಗುತ್ತಿದೆ, ಅದರ ಫಲಿತಾಂಶವನ್ನು ಮುಂದೆ ಪ್ರಕಟಿಸುವೆವು.

ಶ್ರೀಮನ್ಮಹಿಶೂರ್ ಸಂಸ್ಥಾನದ ಮಹಾರಾಜ ರಾಜಾ ಸಾಹೇಬ್ ಒಡೆಯರವರ ಸಮ್ಮುಖ ಚರಣ ಸನ್ನಿಧಾನಕ್ಕೆ.

"ಬೆಂಗಳೂರು ನಿವಾಸಿಗಳಾದ ಈ ಕೆಳಗೆ ರುಜುಮಾಡಿರುವ ದೇಶಾಯಿಶೆಟ್ಟಿ ಯಜಮಾನರು ಮುಂತಾದ ವರ್ತಕರು ವಿನಯ ಪೂರ್ವಕವಾಗಿ ಶ್ರುತಪಡಿಸಿಕೊಳ್ಳುವದೇನೆಂದರೆ—ಮಹಾಸ್ವಾಮಿ!

೧. ಬಹುಕಾಲದಿಂದ ಶ್ವೇತಛತ್ರವೆಂಬ ಬಿರುದು ಶ್ರೀ ಆದಿ ಮಹಾಸ್ವಾಮಿ ವರು ಸನ್ನಿಧಾನಕ್ಕೂ ಮತ್ತು ಪೀಠಾಧಿಪತಿಗಳಾದ ಸನ್ನಿಧಾನದ ಮುದ್ರಾದಿ ಕೇಂದ್ರ ಶೃಂಗೇರಿ ಸ್ವಾಮಿ ಮಹಾ ಮಠಾಧಿಪತಿಗಳಿಗೆ ಕೊಡಲ್ಪಟ್ಟಿದ್ದು ದನ್ನು ಸಹ ಬಿರುದನ್ನು ಈ ದೇಶದಲ್ಲಿ ದವರು ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದೆಂದು ಆಚರಣೆಯಲ್ಲಿ ಇರುತ್ತೆ."

೨. ಈ ಮೇರೆಗೆ ಬೆಂಗಳೂರಿನಿಂದ ಗೌರವ ಚಿಹ್ನೆಯಾಗಿರತಕ್ಕ ಬಿರುದುಗಳನ್ನು ಸಾಧಾರಣವಾಗಿ ಇತರರು ಉಪಯೋಗಿಸಿದಲ್ಲಿ ಅಂಥಾ ಬಿರುದಗಳ ಅವಿಶ್ವಾಸ ತಪ್ಪುವದಲ್ಲದೆ ಬಹುಕಾಲದಿಂದ ಬಿರುದುಗಳನ್ನು ಮರ್ಯಾದೆಯಿಂದ ಉಪಯೋಗಿಸುತ್ತಿರುವ ಸನ್ನಿಧಾನದ ಪ್ರತಿಷ್ಠೆಗೆ ಹಾನಿಯನ್ನುಂಟುಮಾಡುತ್ತದೆ.

ಮ್ಯೂನಿಸಿಪಾಲಿಟಿ ಯೆಂಬುದು ಪ್ರಜೆಗಳ ಸುಖಸಾಧನಾರ್ಥ ವ್ಯವಸ್ಥಿತವಾದ ಒಂದು ಸಂಘವಾಗಿರುತಿದೆ. ಈ ಸಮಾಜ ರಕ್ಷಣಾರ್ಥವಾಗಿಯೂ, ಪ್ರಜೆಗಳಿಗೆ ಉಪಯುಕ್ತಗಳಾದ ರಸ್ತೆಗಳು, ಜಲಮಾರ್ಗಗಳು, ದೀಪಸ್ತಂಭಗಳು, ನಗರ ಶೋಧ್ಯ ಮುಂತಾದ ಖರ್ಚುಗಳಿಗಾಗಿಯೂ, ಜನರಿಂದ ತೆರಿಗೆ ರೂಪವಾಗಿ ದ್ರವ್ಯ ಸಹಾಯಮಾಡಲ್ಪಡುವದು ಪ್ರಸಿದ್ಧವಾಗಿಯೇ ಇದೆ. ಇಂತ ತೆರಿಗೆಗಳನ್ನು ಅವು ಕೊಡತಕ್ಕವರ ಶಕ್ತಿ ವಿಚಾರಿಸಿ ವಸೂಲ್ಮಾಡುವವರಿಂದ ಅವರು ಸುಖವೆಂದು ಭಾವಿಸಿರುವವೆಲ್ಲವು ದಂಡನಾರೂಪವಾಗಿ ಪರಿಣಮಿಸದೆ ಹೋಗುವದಿಲ್ಲವು ಹೀಗೆ ವಸೂಲಾಗತಕ್ಕ ಹಣವು ಸರಿಯಾದ ಮಾರ್ಗಗಳಲ್ಲಿ ವಿನಿಯೋಗಿಸಲ್ಪಡುತ್ತವೆಯೆ, ಆಯಾ ಕಾರ್ಯಗಳಲ್ಲಿ ನಿಯುಕ್ತರಾದವರು ಅನ್ಯ ತಮ್ಮ ಕರ್ತವ್ಯಗಳು ನಿಶ್ಚಿಂತನೆಯಾಗಿ ನೆರವೇರಿಸುತ್ತಾರೆಯೆ ಎಂಬುದಂ ವಿಚಾರಿಸಿಕೊಳ್ಳಲಿಕ್ಕೂ, ಮನೆಗಳು ಅಂಗಡಿಗಳು ವಗೈರೆಗಳಿಗೆ ಹಾಕಲ್ಪಡುವ ತೆರಿಗೆಗಳು ಅಧಿಕವೆಂದು ತಿಳಿಸಿ ಕಂದಾಯದಾರರು ಕೊಡುವ ಅರ್ಜಿಗಳನ್ನು ನೋಡಿ ವಿಚಾರಿಸಿ, ನ್ಯಾಯವಾದ ತೆರಿಗೆಯನ್ನು ಠರಾಯಿಸಲಿಕ್ಕೂ, ಉತ್ಪತ್ತಿ ದ್ರವ್ಯವು ಅವರವರ ಇಷ್ಟಾನುಸಾರ ವ್ಯಯವಾಗದೆ ತತ್ತದ್ವಿಷಯ ಸ್ವರೂಪಾನುರೂಪವಾಗಿ ಆವಶ್ಯಕತಾನಾವಶ್ಯಕತೆಯಂ ಪರ್ಯಾಲೋಚಿಸಿ ವಿನಿಯೋಗಿಸಲಿಕ್ಕೂ, ಮ್ಯೂನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ಜನರಿಗೆ ಅಪೇಕ್ಷಿತಗಳಾದ ಸುಖಗಳನ್ನುಂಟುಮಾಡಲಿಕ್ಕೂ, ಕರ್ತರಾದ ಕೆಲವರು ದೊಡ್ಡಮನುಷ್ಯರನ್ನು ಕಾರ್ಯನಿರ್ವಾಹಕರಾಗಿ ನಿಯಮಿಸುವ ಪದ್ಧತಿಯು ಆದಿಯಿಂದಲೂ ಅನುಸರಿಸಲ್ಪಡುತ್ತಲಿದೆ. ಈ ಸಿದ್ಧಾಂತದಮೇಲೆಯೇ ರಾಜ್ಯಗಳು ಸಹ ಪರಿಪಾಲಿಸಲ್ಪಡುತ್ತ ಬರುತಲಿವೆ ಪ್ರಜೆಗಳೇ ತಮಗೆ ಯೋಗ್ಯರೆನಿಸಿರುವವರಂ ಚುನಾಯಿಸಿ ಮ್ಯೂನಿಸಿಪಲ್ ಕಮ್ಮಿಷನರ್‌ಗಳು ಮುಕರರ್ಮಾಡಿಕೊಳ್ಳಬಹುದೆಂಬ ಒಂದು ಸ್ವಾತಂತ್ರ್ಯವಂ ಮಹಾರಾಜ ಸರ್ಕಾರದವರು ಈಚೆಗೆ ಪ್ರಜೆಗಳಿಗೆ ಉಂಟುಮಾಡಿಕೊಟ್ಟರು. ಇದಕ್ಕೆ ಪೂರ್ವದಲ್ಲಿ ಸದರೀ ಅಧಿಕಾರಿಗಳನ್ನು ನಿಯಮಿಸುವಕಾರ್ಯವಂ ತಾವೇ ಬಹುಕಾಲವಾಗಿ ಉಳಿಸಿಕೊಂಡಿದ್ದರು. ಈಗ ಅದರಲ್ಲಿ ಕೆಲವುಮಟ್ಟಿಗೆ ಅವರು ಉಳಿಸಿಕೊಂಡಿರುತ್ತಾರೆ. ಮೇಲೆ ಕಂಡಂತೆ ಕೊಡಲ್ಪಟ್ಟ ಒಂದು ಅಪೂರ್ವ ಸ್ವಾತಂತ್ರ್ಯವನ್ನನುಸರಿಸಿ ಹಿಂದಿನ ಸಂವತ್ಸರದೊಳು ಕೆಲವರು ದೊಡ್ಡಮನುಷ್ಯರು ಮ್ಯೂನಿಸಿಪಲ್ ಕಮ್ಮಿಷನರ್‌ಗಳಾಗಿ ನಿಯಮಿಸಲ್ಪಟ್ಟರು ಮೊದಲಿನವಾಯಿದೆ ತಪ್ಪಿ ಮರಳಿ ಚುನಾಯಿಸಬೇಕಾದ ಸಮಯವು ಈಗ ಸಂಭವಿಸಿದೆ. ಈ ಸಂದರ್ಭದಲ್ಲಿ ಹಿಂದೆ ಪ್ರಜೆಗಳಿಂದ ನಿಯಮಿತರಾಗಿರತಕ್ಕ ಮ್ಯೂನಿಸಿಪಲ್ ಕಮ್ಮಿಷನರ್‌ಗಳು ಅವರ ಅಧಿಕಾರಗಳಿಗೊಳಪಟ್ಟ ವಿಷಯಗಳಲ್ಲಿ ಪ್ರಜಾಭಿಮಾನಿಗಳಾಗಿ ಅವರಿಗೆ ಯೆಷ್ಟರಮಟ್ಟಿಗೆ ಸುಖ ಸಂತೋಷಗಳನ್ನೂ ಲಾಭನಷ್ಟಗಳನ್ನೂ ಉಂಟುಮಾಡಿದರೆಂಬ ಅಂಶವು ಈಗ ಕಂದಾಯದಾರರಿಂದ ಆಲೋಚಿಸಲ್ಪಡಬೇಕಾದುದಾಗಿದೆ. ಇದಲ್ಲದೆ ಇಂತ ಕಮ್ಮಿಷನರ್‌ಗಳನ್ನು ಜನಗಳು ಚುನಾಯಿಸಿದಕಾಲದಲ್ಲಿ ಅವರಿಗುಂಟಾಗಿದ್ದ ಉದ್ದೇಶವೇನೆಂದರೆ—ಅವರು ಬೋರ್ಡ್ ಮೀಟಿಂಗ್ ಕಾಲಗಳಲ್ಲಿ ಹಾಜರಾಗಿ ಪಕ್ಷಪಾತವಿಲ್ಲದೆ, ನ್ಯಾಯ್ಯಾಭಿಮಾನಂ ತೋರಿದು, ನಿರ್ಭೀತಿಯಿಂದ ಆಯಾ ವಿಷಯಗಳಂ ಕುರಿತು ಚರ್ಚಿಸಿ ನಿರ್ಣಯಿಸಬೇಕೆಂಬುದು ವಿನಾ ಮತ್ತೊಂದೂ ಇರುವದಿಲ್ಲವು. ಪ್ರಜಾ ಹಿತಂಕರಣಾರ್ಥ ಯಾವ ಕಮ್ಮಿಷನರು ಏನೇನು ಮಾಡಿದರೋ, ಅದರಿಂದ ಯಾವಕಾರ್ಯಗಳು ಕ್ರಮಗೊಳಿಸಲ್ಪಟ್ಟವೋ, ಯಾವ ವಿಷಯಗಳಲ್ಲಿ ಅವರ ಸಹಾಯವು ಅಧಿಕವಾಗಿತ್ತೋ, ಇವನ್ನೆಲ್ಲ ಅನ್ಯರೊಬ್ಬರು ಚುನಾಯಿಸುವದರೊಳಗಾಗಿ ತಿಳಿದುಕೊಳ್ಳಬೇಕಾದುದು ಪ್ರಜೆಗಳಿಗೆ ಆವಶ್ಯಕವೆಂದೆಣಿಸುವೆವು. ಈ ವಿಷಯವು ವ್ಯವಸ್ಥೆಯಾದಮೇಲೆ ಚುನಾಯಿಸುವವರಂ ಕುರಿತು ಆಲೋಚಿಸಬೇಕಾದ ಅಂಶಗಳು ಅನೇಕವಾಗಿರುವುವು ಈಗ ಪ್ರಜೆಗಳಿಗೆ ಮಹತ್ತರಗಳಾದ ಎರಡು ಕಾರ್ಯಗಳೂ, ತತ್ಪ್ರಯುಕ್ತಗಳಾದ ವಿಶೇಷ ಉತ್ತರವಾದವೂ ಸಂಘಟನವಾಗಿವೆ ಸ್ವದೇಶ ಪರಿಪಾಲನಾಧಿಕಾರ ನಿರ್ವಹಣ ಧುರೀಣರಾದವರಂ ಚುನಾಯಿಸಿ ಅವರು ಮ್ಯೂನಿಸಿಪಲ್ ಕಮ್ಮಿಷನರ್‌ಗಳಾಗಿ ನಿಯಮಿಸಿಕೊಳ್ಳಬೇಕಾದುದು ಒಂದು. ದಸರಾ ಪ್ರಜಾ ಪ್ರತಿನಿಧಿಸಭೆಯು ಈಗಿನ ಹೊಸನಿಬಂಧನೆಗಳ ನಿಯಮಗಳನ್ನನುಸರಿಸಿ, ಏಕ ಷಾರ್ಜರಲ್ಲದೆಯೂ, ಶುದ್ಧ ಅನರ್ಹರಲ್ಲದೆಯೂ ಇರುವಂತವರು ಚುನಾಯಿಸಲ್ಪಡಬೇಕಾದುದಲ್ಲದೆ, ತಮ್ಮ ಚುನಾವಣೆಯಲ್ಲಿ ದೋಷವುಂಟಾಗದಂತೆ, ವಿಚಾರಣೀಯಗಳಾದ ವಿಷಯಗಳಂ ಉಭಯಾಭಿಮತಾನುಸಾರ ನಿರ್ಣಯಿಸಿ ಕೊಳ್ಳಬೇಕಾದುದು ಎರಡನೆಯದು. ಮೇಲ್ಕಂಡ ಎರಡು ಕಾರ್ಯಗಳೂ ಸ್ವಲ್ಪ ಡಿಚ್ಛಕತಮೆಯಾಗಿ ಕ್ಷಿಪ್ರದೊಳು ನಡೆಯಬೇಕಾದವಾಗಿರುತಿದೆ.

Occasional Notes.

ನೈಮಿತ್ತಿಕ ವಿಷಯನ್ಯಾಸ.

ಚೀನಾ ದೇಶದೊಳು ಪ್ರಜೆಗಳಿಗೆ ಮಾನವ ವಿದ್ಯೆಗಳನ್ನು ಕಲಿಸುವದಕ್ಕಾಗಿ ಒಂದು ಶಾಲೆಯನ್ನೇರ್ಪಡಿಸಿರುತ್ತಾರೆ.

ಅಲಹಾಬಾದ್ ಬಳಿ ಕಮಿಸೆರಿಯಾಟ್ ಇಲಾಖೆಗೆ ಸೇರಿದ ಒಂದು ಆನೆಯು ಗಂಗಾನದಿಯಂದಾಟಿಕೊಂಡು ಹೋಗುವಲ್ಲಿ ನೀರಿನಲ್ಲಿ ಮುಣಗಿ ಹೋಯಿತು.

ಹೈದರಾಬಾದ್‌ನಲ್ಲಿ, ಹೊಸನಾ ಸ್ಟೇಷನ ಇಲಾಖೆಯೊಂದನ್ನೇರ್ಪಡಿಸುವ ಉದ್ದೇಶದೊಡನೆ ಮಾಡಲ್ಪಟ್ಟ ಏರ್ಪಾಡುಗಳಂ ಅಲ್ಲಿನ ಪ್ರಧಾನ ಮಂತ್ರಿಯವರು ಮಂಜೂರ್ಮಾಡಿರುತ್ತಾರೆ.

ಹಿಂದೂ ದೇವಾಲಯಗಳಲ್ಲಿ ನಡೆಯುವ ಉತ್ಸವಗಳಿಗೆ ಗವರ್ನ್‌ಮೆಂಟಿಗೆ ಸೇರಿದ ಆನೆ ಮೊದಲಾದವುಗಳನ್ನು ಕೊಡಕೂಡದೆಂದು ಇಂಡ್ಯಾ ಗವರ್ನ್‌ಮೆಂಟಿನವರು ಹುಕುಂ ಮಾಡಿರುತ್ತಾರೆ.

ಕಲ್ಕತ್ತೆಯಲ್ಲಿನ ಬ್ರಹ್ಮ ಸಮಾಜಕ್ಕೆ ಸೇರಿದವರೆಲ್ಲರು ಕೂಡಿ, ಸದರೀ ಷಹರಿನಲ್ಲಿ ಸ್ತ್ರೀ ಮೂಲಕವಾದ ದುರ್ವ್ಯಾಪಾರಗಳು ನಡೆಯುತ ಬರುವದನ್ನು ನಿಲ್ಲಿಸಬೇಕಾದ ವಿಷಯದಲ್ಲಿ ಪ್ರಯತ್ನಪಡಬೇಕೆಂದು ಅಲ್ಲಿನ ಲೆಫ್ಟಿನೆಂಟ್ ಗವರ್ನರವರಿಗೆ ಒಂದು ಅರ್ಜಿಯಂ ಕೊಟ್ಟಿರುತ್ತಾರೆ.

ಜಗದ್ಗುರುಗಳಾದ ಶೃಂಗೇರಿ ಶ್ರೀ ಸ್ವಾಮಿಗಳವರು ಈಚೆಗೆ ದಕ್ಷಿಣ ಮಧುರೆಗೆ ದಯಮಾಡಿದ್ದ ಸಂದರ್ಭದಲ್ಲಿ, ಹಿಂದೂ ಬಾಲಕರ ಪ್ರಯೋಜನಾರ್ಥ, ಶ್ರೀ ಸ್ವಾಮಿಗಳವರು ನಿಯಮಿಸಿದ ಮಾರ್ಗವನ್ನನುಸರಿಸಿ, ಅಲ್ಲಿನ ನೇಟಿವ ಕಾಲೇಜಿನಲ್ಲಿ, ಮತಗ್ರಂಥ ಪಠನಕ್ಕೆ ಪ್ರಾರಂಭವಾಯಿತೆಂದು ಮಧುರೆ ಮೆಯಿಲ್ ಪತ್ರಿಕೆ ತಿಳಿಸುತಿದೆ.

ಈಚೆಗೆ ಒಬ್ಬ ವೈದ್ಯಶಾಸ್ತ್ರಜ್ಞನು ಶರೀರ ಶ್ರಮದಿಂದುಂಟಾಗುವ ಪ್ರಯೋಜನವಂ ಕುರಿತು ಉಪನ್ಯಾಸ ಮಾಡಿದ ಸಂದರ್ಭದಲ್ಲಿ, ಮಾನಸಿಕವ್ಯಾಪಾರವಾದ ವಿದ್ಯಾಭ್ಯಾಸದೊಡನೆ ಪ್ರತಿದಿನವೂ ಶಾರೀರಕ ಶ್ರಮದಲ್ಲಿ ಇಪ್ಪತ್ತು ನಿಮಿಷಗಳ ಕಾಲವು ಉಪಯೋಗಿಸಲ್ಪಡುವದಾದರೆ, ಅನೇಕರು ಒಂದು ದಿನವಾದರು ದೇಹಾಲಸ್ಯವಿಲ್ಲದೆ ಎಪ್ಪತ್ತು ವರ್ಷಗಳಕಾಲ, ಕದಾಚಿತ್ ನೂರುವರ್ಷಗಳಕಾಲ ಜೀವಿಸಿರಬಹುದೆಂದು ತಿಳಿಸಿದರು.

ಕಳೆದ ವಾರದ ಆದಿಭಾಗದಲ್ಲಿ ದಕ್ಷಿಣ ಮಹ ರಾಷ್ಟ್ರ ರೆಯಿಲ್ವೇಗೆ ಸೇರಿದ ನಂದಿಯಾಲ್ ಸ್ಟೇಷನ್‌ಬಳಿ ರೆಯಿಲ್‌ಗಾಡಿ ಬರುತಿರುವಲ್ಲಿ, ನೋಡು ವದಕ್ಕೆ ಗೌರವ್ಯನಾಗಿ ಕಂಡುಬಂದ ಹಿಂದೂಜಾತಿಯವನೊಬ್ಬನು ದುಸ್ಸಹವಾದ ಯಾವದೋ ಒಂದು ರೋಗದ ಬಾಧೆಯು ತಡೆಯಲಾರದೆ ರಸ್ತೆಯಲ್ಲಿ ಅಡ್ಡವಾಗಿ ಬಿದ್ದುಬಿಡಲು ಗಾಡಿಯು ಅವನಮೇಲೆ ಹೊರಟುಹೋಗಿ ಅವನ ದೇಹವು ತುಂಡು ತುಂಡಾಗಿ ಕತ್ತರಿಸಲ್ಪಟ್ಟು ಹೋಯಿತೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ

ಮದರಾಸ್ ರೆವಿನ್ಯೂ ಬೋರ್ಡಿನವರು, ಈಗ ಹಸ್ತ ಸಂಸ್ಥಾನದ ಗತಿಸಿದ ಜಮೀನ್ದಾರರು ತಮ್ಮ ಮರಣಾಪೂರ್ವ ಬರೆದಿಟ್ಟ ಉಯಿಲನ್ನು ಸ್ಥಿರಪಡಿಸಿ, ಸದರೀ ಜಮೀನ್ದಾರಿಯನ್ನು ಈಗ ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವ ಬಾಲಕನು ಅದಕ್ಕೆ ಹಕ್ಕುದಾರನಾಗಿ ಅಂಗೀಕರಿಸಲ್ಪಡಬೇಕಾದುದಲ್ಲದೆ, ಸದರಿ ಜಮೀನ್ದಾರಿಗೆ ಪ್ರತಿಪಕ್ಷ ಜಮೀನ್ದಾರರ ವಾಕ್ಯೆಯವರ ಬಾಧ್ಯತೆಯೂ ಇಲ್ಲವೆಂದು ತೀರ್ಮಾನಮಾಡಿ ಅದರ ಪ್ರತಿಯನ್ನು ಗವರ್ನ್‌ಮೆಂಟ್‌ಗೆ ಕಳುಹಿಸಿರುವುದಾಗಿ ಹೇಳುತ್ತಾರೆ.

ಈಗ ಸರ್ವತ್ರವ್ಯಾಪಿಸಿ ತಲೆದೋರುವ ನಾಸ್ತಿಕತಾ ಬುದ್ಧಿ ಮತ್ತು ಅನಾಚಾರಗಳಂ ತೊಲಗಿಸುವ ಉದ್ದೇಶದಿಂದ ವಿಲಾಯತಿ ಪ್ರಾಂತದಲ್ಲಿ ಪ್ರಮುಖರಾದ ದೊಡ್ಡಮನುಷ್ಯರು ಕೆಲವರುಸೇರಿ, ಸನಾತನಧರ್ಮರಕ್ಷಕ ಸಂಸ್ಕೃತ ಪಾಠಶಾಲೆ ಎಂಬ ಅಂಕಿತದಿಂದ ಒಂದು ನಾಸ್ತಿ ಪಾಠಶಾಲೆಯು ಸ್ಥಾಪಿಸಲ್ಪಡಿಸಿರುತ್ತಾರೆ ಸದರೀ ವಿದ್ಯಾಲಯದಲ್ಲಿ ದೇಶಭಾಷೆ ಮತ್ತು ಸಂಸ್ಕೃತ ಭಾಷೆಯು ಕಲಿಸಲ್ಪಡುತಿವೆ. ಹಿಂದೂಬಾಲಕರುಗಳೆಲ್ಲ ಜಾಗ ದಲ್ಲಿ ನಿಜವಾದ ಹಿಂದೂಗಳನ್ನಿಸಿಕೊಳ್ಳುವ ಕ್ರಮಕ್ಕೆ ತಂದು ದೇಶಾಭಿಮಾನಕ್ಕೆ ನೆರವಾಗಬೇಕೆಂಬುದೇ ಸದರಿ ಪಾಠಶಾಲಾಸ್ಥಾಪಕರುಗಳ ಉದ್ದೇಶವಾಗಿರುತಿದೆ

ಮಹಾರಾಜ್ಞೀಯವರ ಪಾರ್ಲಿಯಮೆಂಟ ಸಭಾಸದರ ಮೆಂಬರಾದ ಮಿ ಕೇರ್ನ್‌ಯವರು, ಇಂಡ್ಯಾದೇಶದ ಸಾಮಾನ್ಯಜನರ ಬಡತನವನ್ನೂ, ಅದಕ್ಕೆ ಉಂಟಾದ ಕಾರಣವನ್ನೂ, ತತ್ಪರಿಹಾರವನ್ನು ಕುರಿತು ಹೌಸ್‌ಆಫ್ ಕಾಮನ್ಸ್ ಸಭೆಯಲ್ಲಿ ಅವಧಾನಕ್ಕೆ ತಂದು ಆ ವಿಷಯದಲ್ಲಿ ಒಂದು ನಿರ್ಣಯವು ಮಾಡಿಸಬೇಕೆಂಬ ಅಭಿಪ್ರಾಯವು ತಮಗೆ ಇರುವುದಾಗಿ ತಿಳಿಸಿರುತ್ತಾರೆ. ಮೇಲಿನ ವಿಷಯದಲ್ಲಿ ಅನುಕೂಲವಾದ ನಿರ್ಣಯವು ಲಭಿಸಿದಾಗ್ಯೂ ಅದು ಕ್ರಿಯಾರೂಪವಾಗಿ ಇಲ್ಲಿ ಜಾರೀಯಾಗಲು ತಕ್ಕೊಂಡಿರುವದಕ್ಕೆ ಪ್ರತಿಬಂಧಕ ಸಾಮಗ್ರಿಗಳು ಅನೇಕವಾಗಿರುವದರಿಂದ ನಿರೀಕ್ಷಿತ ಫಲವು ಲಭಿಸುವದಕ್ಕೆ ಅವಕಾಶವಿಲ್ಲದೆ ಇದೆ

ರಾವಲ್‌ಪಿಂಡಿ ಪ್ರಾಂತದಲ್ಲಿ ರೆಯಿಲ್ವೆ ಪ್ರಯಾಣಿಕನೊಬ್ಬನು ಒಂದು ಪೆಟ್ಟಿಗೆಯನ್ನು ರೂಕ್ ಮಾಡಿಸಿ, ಅದಕ್ಕೆ ರಸೀದಿ ಪಡೆಯುವ ಕಾಲದಲ್ಲಿ ಅದರೊಳಗೆ ಉಡುಪುಗಳಿರುತಿವೆಯೆಂದು ಹೇಳಿದನು. ರೆಯಿಲ್‌ಗಾಡಿಯು ಪೇಷವರ ಎಂಬ ಸ್ಟೇಷನಿಗೆ ಬಂದು ಸದರೀ ಪೆಟ್ಟಿಗೆಯನ್ನು ಗಾಡಿಯಿಂದ ಇಳಿಸುವಲ್ಲಿ ಅದು ಬಹಳ ಭಾರವಾಗಿದ್ದುದರಿಂದ ರೆಯಿಲ್ವೆ ಅಧಿಕಾರಿಗಳಿಗೆ ಸಂಶಯವುಂಟಾಗಿ ಪೆಟ್ಟಿಗೆಯನ್ನು ತೆರೆದು ನೋಡಬೇಕೆಂದು ಮುದ್ದೆಯ ಹಿಡಿಯಲು ಪ್ರಾರಂಭಿಸಲು ಕಣ್ಮರೆಯಾದನು. ರೆಯಿಲ್ವೆ ಅಧಿಕಾರಿಗಳು ಸದರೀ ಪೆಟ್ಟಿಗೆಯನ್ನು ತೆರದು ನೋಡುವಲ್ಲಿ ಅದರೊಳು ಬಂಗಾರದ ಗಟ್ಟಿಗಳೂ ಇನ್ನೂ ಕೆಲವು ಭಾರೀ ಕ್ರಯವುಳ್ಳ ಪದಾರ್ಥಗಳೂ ಇದ್ದವು. ಅವೆಲ್ಲವು ಪೊಲೀಸ್ ಅಧಿಕಾರಿಗಳವಶ ಮಾಡಲ್ಪಟ್ಟವು. ಅವೆಲ್ಲವು ಯಲ್ಲಿ ಚೋರೀ ಮಾಲುಕ ಸಿಕ್ಕಿರಬೇಕೆಂಬ ಅನುಮಾನ ಹುಟ್ಟಾಗಿದೆಯೆಂದು ಉತ್ತರದೇಶದ ಪತ್ರಿಕೆಯೊಂದು ತಿಳಿಸುತಿದೆ.

ಮಹಾರಾಜ್ಞೀಯವರು ರೆಯಿಲ್ ಮಾರ್ಗದಲ್ಲಿ ಪರಸ್ಥಳಗಳಿಗೆ ದಯಮಾಡುವ ಸಂದರ್ಭಗಳಲ್ಲಿ, ಎಂಜಿನ್ ಗಾಡಿಗಳ ಇಲಾಖಾ ಸೂಪರಿಂಟೆಂಡೆಂಟರು ಎಂಜಿನ್‌ಗಾಡಿಯನ್ನು ತಾವೇ ಚಾಲು ಮಾಡಿ, ಅನುಭವಶಾಲಿಯಾದ ಡ್ರೈವರ್ ಅಂದರೆ ಗಾಡಿ ನಡೆಸುವವನನ್ನು ಅದಕ್ಕೆ ನಿಯಮಿಸುತ್ತಾರೆ ಜಾಗರೂಕನಾಗಿಯೂ ರಸ್ತೆಗಳ ಸ್ಥಿತಿಯಂ ಚೆನ್ನಾಗಿ ತಿಳಿದವನಾಗಿಯೂ ಇರುವವನೊಬ್ಬನು, ಬೇರೆಯೊಂದು ಎಂಜಿನ್ ಗಾಡಿಯಲ್ಲಿ ಕುಳಿತು ರಾಜ್ಞೀಯವರ ಗಾಡಿಗೆ ಮುಂದೆ ಹೋಗುತ್ತಾನೆ. ರಾಜ್ಞೀಯವರು ಪಶ್ಚಿಮ ಸಮುದ್ರತೀರ ಕ್ರಮವಾಗಿ ಸಂಚರಿಸುವಲ್ಲಿ, ಅವರ ಆಗಮನ ಸೂಚಕವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಂತಿ ವರ್ತಮಾನಗಳು ಕಳುಹಿಸಲ್ಪಡುತ್ತವೆ ರಾಜ್ಞೀಯವರ ಸವಾರಿಯು ಬರುವದಕ್ಕೆ ಮುಂಚೆ ಅರ್ಧಘಂಟೆಯಕಾಲ ಪ್ರಧಾನ ಮಾರ್ಗದಲ್ಲಿ ಬೇರೆ ರೆಯಿಲ್ ಗಾಡಿಯು ಸಂಚರಿಸುವದಕ್ಕೆ ಅವಕಾಶ ಕೊಡಲ್ಪಡುವದಿಲ್ಲವು ಅಡ್ಡ ರಸ್ತೆಗಳ ಗೇಟು ಬಾಗಿಲುಗಳು ಬಂದು ಮಾಡಲ್ಪಡುತವೆ. ಬ್ರೈಟ ಗಾಡಿಗಳು ಇತ್ತ ಅತ್ತ ತಿರುಗಕೂಡದು, ಮಾರ್ಗದಲ್ಲಿ ಯಾವದಾದರು ಆತಂಕ ಸಂಭವಿಸಿದರೆ ತನ್ನಿವೃತ್ತಿಯಬಗ್ಗೆ ಸಾವಿರಾರುಮಂದಿ ಕೂಲಿಯವರು ರಸ್ತೆಯಲ್ಲಿ ಹಾಜರಿರುತ್ತಾರೆ. ರಾಜ್ಞೀಯವರು ರಾತ್ರಿ ಸಂಚರಿಸುವ ಕಾಲದಲ್ಲಿ ಘಂಟೆಯೊಂದಕ್ಕೆ ೨೦ ಮೈಲಿಗಳಿಗೆ ಜಾಸ್ತಿಯಾಗಿ ಗಾಡಿಯಂ ನಡೆಸುವದಕ್ಕೆ ಸಮ್ಮತಿಸುವದಿಲ್ಲವು

ಈಚೆಗೆ ಉದಕಮಂಡಲದೊಳು ಎರಡು ಹಿಂದೂ ದೇವಸ್ಥಾನಗಳಲ್ಲಿ ಕನ್ನ ಚೋರಿ ನಡೆದು ಎರಡರ ಪೈಕಿ ಒಂದರಲ್ಲಿ ಲೇಶಿಲು ಲಕ್ಷ ರೂಪಾಯಿಗಳ ಕ್ರಯ ಬಾಳುವ ಒಡವೆಗಳೂ, ಮತ್ತೊಂದರಲ್ಲಿ ಒಂದು ಲಕ್ಷ ರೂಪಾಯಿಗಳ ಕ್ರಯ ಬಾಳುವಷ್ಟು ಒಡವೆಗಳೂ ಕಳವಾಗಿರುವುದೆಯೂ, ಕಾಬೂಲ್‌ದೇಶೀಯರು ಸದರೀ ಕಳವನ್ನು ನಡೆಸಿರುತ್ತಾರೆಂಬ ಸಂಶಯ ಹುಟ್ಟಾಗಿರುವದಾಗಿಯೂ ಉದಕಮಂಡಲದ ಡಿಸ್ಟ್ರಿಕ್ಟು ಪೊಲೀಸ್ ಸೂಪರಿಂಟೆಂಡೆಂಟರು ಮುಂಬೈ ಪೊಲೀಸ್ ಕಮೀಷನರವರಿಗೆ ತಂತಿ ವೃತ್ತಾಂತ ಕಳುಹಿಸಲು ಮುಂಬೈ ಪೊಲೀಸಿನವರು ಅಲ್ಲಿ ಕಾಬೂಲ್ ದೇಶದವನೊಬ್ಬನನ್ನು ದಸ್ತಗಿರಿಯಿಂದ ಝಡ್ತಿಮಾಡಲು ಅವನಲ್ಲಿ ಕಳವು ಮಾಲಿಗಳ ಪೈಕಿ ಇಪ್ಪತ್ತೈದು ಸಾವಿರ ರೂಪಾಯಿಗಳ ಕ್ರಯ ಬಾಳುವಷ್ಟು ಒಡವೆಗಳು ಸಿಕ್ಕಿದುದೆಯೂ, ಮುಂಬೈ ಟೈಮ್ಸ್ ಪತ್ರಿಕೆ ತಿಳಿಸುತಿದೆ. ಕನ್ಯಾ ಕುಮಾರಿ ದೇವಸ್ಥಾನದಲ್ಲಿ ಈಚೆಗೆ ಮದರಾಸು ಯೆರಡು ತಿಂಗಳ ಹಿಂದೆ ನಡೆದ ಕಳವು ಸದರೀ ದೇವಸ್ಥಾನದಲ್ಲಿ ಕೆಲಸ ಮಾಡುತಲಿದ್ದವರ ಸಹಾಯದಿಂದ ಕಾಬೂಲಿ ಜನರಿಂದಲೇ ನಡೆಸಲ್ಪಟ್ಟದ್ದಾಗಿ ಪರ್ಯವಸಿದ್ದಲ್ಲದೆ ಕಳವುಮಾಲಿಗಳ ಪೈಕಿ ಕೆಲವು ಪತ್ತೆ ಆಗಿರುವಂತೆ ತಿಳಿಯಬರುತಿದೆ. ದಕ್ಷಿಣ ದೇಶದೊಳು ಯೆರಡು ಕಡೆಯೆರಡು ದೇವಸ್ಥಾನಗಳಲ್ಲಿ ನಡೆದ ಕಳವನ್ನೇ ಉದಕಮಂಡಲದಲ್ಲಿ ನಡೆಯಿತೆಂದು ಮುಂಬೈ ಟೈಂಸ್ ಪತ್ರಿಕೆಯು ಭ್ರಾಂತಿಪಟ್ಟಂತೆ ಕಾಣುತಿದೆ.

ಆಫ್ರಿಕಾ ಖಂಡದ ಉತ್ತರ ಭಾಗದಲ್ಲಿರುವ ಮೊರಾಕೊ ಎಂಬ ಸಂಸ್ಥಾನದ ಸುಲ್ತಾನನವರು ತಮ್ಮ ಮಂತ್ರಿಯು ಕೇವಲ ದುರಹಂಕಾರ ಪ್ರಕೃತಿಕನಾಗಿ ಹೋದನೆಂದು ತಿಳಿದು, ಒಂದು ದಿನ ಆತನಂ ಓಲಗಕ್ಕೆ ಕರೆದು, ಪ್ರಸ್ತಾಪವಶಾತ್ ಮಂತ್ರಿಯು ಸ್ವವಿಷಯವಂ ಕುರಿತು ಮಾತನಾಡುವಂತೆ ಮಾಡಲಾಗಿ, ಮಂತ್ರಿಯು ತನ್ನ ಐಶ್ವರ್ಯವಂ ಕುರಿತು ವಿಶೇಷ ಉತ್ಸಾಹದೊಡನೆ ಪ್ರಸ್ತಾಪಿಸಿದನು. ಅದರಮೇಲೆ ಸುಲ್ತಾನರವರು, ಮಂತ್ರಿಯನ್ನುದ್ದೇಶಿಸಿ, ನಿನಗೆ ಅತ್ಯೈಶ್ವರ್ಯವುಂಟಾಗಿ ತನ್ಮೂಲಕ ಅತ್ಯಹಂಕಾರಿಯಾಗಿರುವ ಗುರುತ್ತಿನಿಯೊಂದು ಹೇಳಿ, ಪಹರೇಯವರನ್ನು ಕರೆದು, ಮಂತ್ರಿಯಮೇಲಿರುವ ಆಭರಣಗಳು ಬಟ್ಟೆಗಳನ್ನೆಲ್ಲ ಕಿತ್ತುಕೊಂಡು ಅವನನ್ನು ಅಂಗಿಬಿಟ್ಟಗೆ ಕರೆದುಕೊಂಡು ಹೋಗಿ ಹರಾಜ್ ನಾಕಿಬಿಡುವಂತೆ ಹುಕುಂ ಮಾಡಿದರು. ಅದೇ ಪ್ರಕಾರ ಮಾಡಲಾಗಿ, ಯಾರೂ ಸವಾಲ್ ಮಾಡಲಿಲ್ಲವು. ಯಾವನೋ ಒಬ್ಬನು ಮಾತ್ರ ಮಂತ್ರಿಯವರನ್ನು ಐದು ಆಣೆಗೆ ಸವಾಲ್ ಮಾಡಿದನು ಮರಳಿ ಮಂತ್ರಿಯವರನ್ನು ಸುಲ್ತಾನರ ಬಳಿಗೆ ಕರೆದುಕೊಂಡು ಹೋಗಿ, ಹರಾಜಿನಲ್ಲಿ ಐದಾಣೆಗೆ ಜಾಸ್ತಿಯಾಗಿ ಯಾರೂ ಸವಾಲ್ ಮಾಡಲಿಲ್ಲವೆಂದು ತಿಳಿಸಲಾಗಿ, ಸುಲ್ತಾನರವರು ಮಂತ್ರಿಯನ್ನು ನೋಡಿ, ನಿನ್ನ ಯೋಗ್ಯತೆಯು ಇಷ್ಟೆಂದು ಈಗ ತಿಳಿಯಬಂತು ಎಂದು ಹೇಳಿದರು. ಭಗ್ನಮನಸ್ಕನಾದ ಮಂತ್ರಿಯು ಮನೆಗೆ ಹೋಗಿ ನೋಡುವಲ್ಲಿ, ಒಂದು ಕುದುರೆ, ಒಬ್ಬ ಹೆಂಡತಿ, ಒಬ್ಬ ಪರಿಚಾರಕನು ವಿನಾ ಬೇರೆ ಯಾವದೂ ಮನೆಯಲ್ಲಿಲ್ಲವು.

LOCAL AND PROVINCIAL NEWS.

ಪಳದೇಶವರ್ತ್ತಮಾನ, ಸಂಸ್ಥಾನವೃತ್ತಾಂತಗಳು

ಈ ಸಂಸ್ಥಾನದ ಬ್ರಿಟಿಷ ರೆಸಿಡೆಂಟರಾದ ಮಿ ಪಿ. ಡಿ. ಹೆಂಡರ್‌ಸನ್ ಸಾಹೇಬರವರು ಈ ತಿಂಗಳ ೪ನೇ ತಾರೀಖ್ ಬುಧವಾರದ ದಿವಸ ಸಾಯಂಕಾಲ ೭ ಘಂಟೆಗೆ ತಮ್ಮ ಕೊಡಗಿನ ಪ್ರಯಾಣದಿಂದ ಮೈಸೂರಿಗೆ ಇಲ್ಲಿಗೆ ಬಂದರು.

ಈ ಸಂಸ್ಥಾನದ ಮಂತ್ರಾಲೋಚಕ ಸಭಾಸದರಾದ ಮೆಂಬರಾದ ರಾಜಶ್ರೀ ಪಿ. ಚೆಂಚಲರಾವ್, ಸಿ ಐ ಇ. ಯವರು ನಮಗೆ ಪ್ರಮುಖವಾದ ಅಶಕ್ತತೆಯಿಂದ ಶೀಘ್ರದಲ್ಲಿ ತಮ್ಮ ಕೆಲಸದ ಬಿಸ್ತ ನಿರ್ವ ತಿಪಟಿಸುವ ಪಡೆಯುವರೆಂದು ನಂಬಿಕೆಗೆ ಅರ್ಹವಾದ ಮಾರ್ಗದಿಂ ತಿಳಿಯಬರುವದಾಗಿ, ಈ ತಿಂಗಳ ೩ನೇ ತಾರೀಖಿನ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ ಇದು ಯಷ್ಟರಮಟ್ಟಿಗೆ ನಿಜವೋ ನಾವರಿಯೆವು

ಕಳೆದ ಶನಿವಾರ ಜೂನ್ ೩೦ನೇ ತಾರೀಖಿನ ದಿನ ನಡೆದ ಮೈಸೂರು ಮುನಿಸಿಪಲ್ ಬೋರ್ಡಿನ ಮೆಂಬರುಗಳ ಸಭೆಯಲ್ಲಿ, ಮಿ ಎಂ ಕೃಷ್ಣಸ್ವಾಮಿಮುದಲಿಯಾರ್ ರವರು ಇನ್ನು ಒಂದು ವರ್ಷ ಕಾಲ ಈ ಪಟ್ಟಣದ ಮುನಿಸಿಪಲ್ ಪ್ರೆಸಿಡೆಂಟರಾಗಿರಬೇಕೆಂಬ ತಮ್ಮ ಅಭಿಪ್ರಾಯವನ್ನು ಒಂದು ರೆಜಲ್ಯೂಷನ್ ಮೂಲಕ ಗವರ್ನ್‌ಮೆಂಟಿಗೆ ತಿಳಿಸತಕ್ಕದ್ದೆಂದು ನಿಶ್ಚಯಿಸಿದರು.—ವೃ ಬಿ

ಕಳೆದ ವಾರದಲ್ಲಿ ತಿಳಿಸಿದಂತೆ ಶ್ರೀನಿವಾಸ್ಯರಾಜ ರಾಜಾಸಾಹೇಬ್ ಒಡೆಯರವರು ಕಳೆದ ಬೃಹಸ್ಪತಿವಾರದ ದಿನ ಸಾಯಂಕಾಲ ನಾಲ್ಕು ಘಂಟೆಗೆ ತಮ್ಮ ಕುಟುಂಬ ಪರಿವಾರ ಸಮೇತರಾಗಿ ಊಟಿಗೆ ದಯಮಾಡಿದರು. ಮಹಾರಾಜರವರ ಪಿತಾಮಹರೊಡನೆ ದಿವಾನರವರೂ ಬಂದರು. ಮೆರವಣಿಗೆ ಮರ್ಯಾದೆಗಳೆಲ್ಲವು ಕ್ರಮವಾಗಿ ನಡೆದವು. ಮಹಾರಾಜರು ಗೌರೀ ಗಣೇಶನ ಹಬ್ಬದ ವರೆಗೆ ಇಲ್ಲಿರು ಕೇಳುತ್ತೇವೆ

ಈಚೀ ಮೂರು ತಿಂಗಳಕಾಲದ ಮೊದಲು ಸನ್ಸ್ಪೆಂಡ್ ಮಾಡಲ್ಪಟ್ಟಿದ್ದ ಕಡೂರು ಡಿವಿಜನ್ ಎಗ್ಜಿಕ್ಯುಟಿವ್ ಇಂಜನಿಯರಾದ ಮಿ| ಎ. ಗೋವಿಂದಾಚಾರ್ ಯವರಮೇಲೆ ತರಲ್ಪಟ್ಟದ್ದ ಒಹುವಿಧ ಅಭಿಯೋಗವು ಮೈಸೂರ್ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಲ್ಲ ವಿಚಾರಣೆಯಾಗುತ್ತಿತ್ತಷ್ಟೆ ಅದರ ಫಲಿತಾಂಶವಾಗಿ ಸದರೀಯವರು ಕೆಲಸದಿಂದ ಡಿಸ್‌ಮಿಸ್ ಮಾಡಲ್ಪಟ್ಟದ್ದಾಗಿ ಈ ತಿಂಗಳ ೩ನೇ ತಾರೀಖಿನ ಬೆಳದಿಂಡ ಈವನಿಂಗ್ ಮೆಯಿಲ್ ಪತ್ರಿಕೆಯು ತಿಳಿಸುತಿದೆ

ಶ್ರೀ ವ್ಯಾಸರಾಯ ಸ್ವಾಮಿಗಳವರು ಬಡವರ ಸಂರಕ್ಷಣಾರ್ಥವಾಗಿಯೂ ಇತರ ಖರ್ಚುಗಳ ಬಗ್ಗೆಯೂ ಆಗುವಂತ್ಯ ಮಾಡುತ್ತಿರುವ ೧,೫೦೦ ರೂಪಾಯಿ ಗಳ ಸಾಲದ ಪೈಕಿ, ಅನುಪಯುಕ್ತಗಳಾದ ಮಠದ ಒಡವೆಗಳನ್ನು ಮಾರಿಬಿಟ್ಟು ತನ್ಮೂಲಕ ೫,೦೦೦ ರೂಪಾಯಿ ಗಳೂ, ಶ್ರೀಮಠದ ಗ್ರಾಮಗಳನ್ನು ಗುತ್ತಿಗೆಗೆ ಕೊಟ್ಟು ಅದರಲ್ಲಿ ಬಂದ ಮೊಬಲಗಿನಿಂದ ೫,೦೦೦ ರೂಪಾಯಿಗಳನ್ನೂ ಸಾಲಗಾರರಿಗೆ ಕೊಟ್ಟು ಮಠದ ಋಣವನ್ನು ನಿವೃತ್ತಿಸುತ ಬರುತಿರಾರೆಂದು ಕೇಳುವದಕ್ಕೆ ಸಂತೋಷಿಸುತ್ತೇವೆ.

ಕಳೆದ ಮಂಗಳವಾರದ ದಿನ ದ ದ್ವಾದಶ ಪರ ಮಧ್ಯಾಹ್ನ ನಾಲ್ಕುಘಂಟೆಗೆ ವೇಳೆ ಮುಸರಿ ಶುರುವಾಗಿ ಪತ್ತು ನಿಮಿಷಗಳ ಕಾಲದ ಳ ಸುರಿಯಿತು. ಸ್ವಲ್ಪ ಜೆಳ್ಳೆಯ ಹದದ ಒಂದು ಸದ ವಿರಬಹುದೆಂದು ತೋರುತಿದೆ. ಆದರೆ ಈಚೆಗೆ ಪ್ರತಿದಿನದಲ್ಲಿ ಮೋಡ ಮುಸುಕಿ ತಿಂಗಳ ತುಂತುರು ಮಳೆ ಬೀಳುತಿದೆಯೆಂದೂ ರತು ಬಲವಾಗಿ ಬೀಳುವದಿಲ್ಲ. ಆದಾಗ್ಯೂ ಸದರಿ ಧರ್ಮಗಳ ದಾರಣೆಗಳೂ ಜನಾರೋಗ್ಯ ಮೊದಲಾದ ಇತರ ವಿಷಯಗಳೂ ಕಳೆದವಾರದಲ್ಲಿ ತಿಳಿಸಲ್ಪಟ್ಟಂತೆಯೇ ಇವೆ.

ಮೈಸೂರು ಶೀಮೆಯ ಎಲ್ಲಾ ಸರ್ಕಾರೀ ಸ್ಕೂಲುಗಳವರೂ ಕ್ರಿಕೆಟ್ ಎಂಬ ಚೆಂಡಾಟವನ್ನು ಆಡತಕ್ಕ ಹುಡುಗರು ನವರಾತ್ರಿಯಲ್ಲಿ ರಾಜಧಾನಿಗೆ ಬರುವಂತೆ ಇಲ್ಲಿನ ಮದನವಿಲಾಸದ ತೋಟ್ಟ ನಂಜರಾಜಬಹದ್ದೂರವರು ಒಂದು ಏರ್ಪಾಡು ಮಾಡಿದ್ದಾರೆ ಅದೇನಂದರೆ—ಅವರು ಒಂದು ಬೆಳ್ಳಿಯ ಗಟ್ಟನ್ನು ಮಾಡಿಸಿಟ್ಟು ಚೆಂಡಾಟವಾಡಿ ಯಾವ ಕಕ್ಷಿಯವರು ಅನಿಜ್ಞನ್ನವಾಗಿ ಮೂರುಸರುಷೆ ಗೆಲ್ಲುತ್ತಾ ಬರುವರೋ ಅಂತಾ ಕಕ್ಷಿಯವರಿಗೆ ಅದನ್ನು ಇನಾಮಾಗಿ ಕೊಡಲ್ಪಡುತ್ತೆಂದು ಗೊತ್ತುಮಾಡಿದಾರೆ. ಕ್ರಿಕೆಟ್ಟಾಗಿ ಇಲ್ಲಿನ ಕೆಲವು ದೊಡ್ಡ ಮನುಷ್ಯರು ಒಂದು ಸಂಘ ಮಾಡಿಕೊಂಡು ಇನ್ನು ಕೆಲವು ದಿನಗಳೊಳಗಾಗಿ ಎಲ್ಲಾ ಸ್ಕೂಲ್ ಹೆಡ್‌ಮಾಸ್ಟರುಗಳಿಗೂ ಮೇಲ್ಕಂಡ ವಿಷಯಗಳನ್ನು ತಿಳಿಯಪಡಿಸುವವರಾಗಿದಾರೆ. ಇದಲ್ಲದೆ ಫುಟಬಾಲ್ ಎಂಬ ಚೆಂಡಾಟಕ್ಕಾಗಿ ಮೇಲ್ಕಂಡಂತೆಯೇ ಒಂದು ಬಹುಮಾನವನ್ನು ಇಟ್ಟದಾರೆಂಬದಾಗಿಯೂ ಅದು ನವರಾತ್ರಿಯಲ್ಲೇ ಆಗುವದೆಂದೂ ಹಿಂದೆಯೇ ತಿಳಿಸಿದ್ದೇವಷ್ಟೆ. ಹೀಗೆ ಈ ಸಂಸ್ಥಾನದಲ್ಲಿಯೂ ವಿದ್ಯಾರ್ಥಿಗಳಿಗೆ ಅಂಗಸಾಧನೆ ಮಾಡಿ ದೃಢಾಂಗಿಗಳಾಗುವ ದಕ್ಕೆ ಇಂಥಾ ಏರ್ಪಾಡುಗಳನ್ನು ಮಾಡಿದ್ದಕ್ಕಾಗಿ ನಾವು ಆದೊಡ್ಡಮನುಷ್ಯರನ್ನು ಕೊಂಡಾಡುವೆವು.—ವೃ. ಬ

THE MONEY MARKET.

Stocks, Shares and Exchange.

ಮದರಾಸ್ ಶನಿವಾರ, ತಾರೀಖ್ 7ನೇ ಜುಲೈ 1894.

ಸೇಕಡ ೪ರೂ ಬಾಬತು ಇಂಡ್ಯಗವರ್ನ್‌ಮೆಂಟ್ ಪತ್ರಗಳು 103-4-0 ರೂ. ಗಳಿಂದ 1·1-0-0 ರೂ. ವರಗೆ

ಸೇಕಡ ಮೂರುವರ ೩ ಬಾ ಬತ್ತು ಗವರ್ನ್‌ಮೆಂಟ್ ಪತ್ರಗಳು, 102-12-0 ರೂ ಗಳಿಂದ 106-4-0 ರವರೆಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 995-0-0 ರೂ. ಗಳಿಂದ 1,005-0-0 ರವರೆಗೆ

ಕಮರ್ಷಿಯಲ್ ಬ್ಯಾಂಕ್ ವಾಟ್ಚ ಗಳ ಬ್ಯಾಂಕ್ ಷೇರಗಳು, (100 ರೂ) ಬಾಬತು 150-0-0 ರೂ. ಗಳಿಂದ 155-0-0 ರೂ ವರೆಗೆ,

ಸವರಿನ್‌ಗಳು, ಪರ 1 ಕ್ಕೆ 18-4-0 ರೂಪಾಯಿಗಳಿಂದ 18-10-0 ರೂ. ವರೆಗೆ,

ಲಂಡನ್ ಬ್ಯಾಂಕಿನ ಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಬಾಬತ್ ದರಗಳು —

6 ತಿಂಗಳ ಮಾ ೩ದೆ	.1 s 0 31/32d.
4 "	.1 s 0 15/16d.
ಕೇಳಿದಾಗ ಕೊಡಲ್ಪಡುವದಕ್ಕೆ	.1 s. 0 7/8d.

THE MYSORE GAZETTE.

ಮೈಸೂರು ಗೆಜೆಟ.

ಶ್ರೀಮನ್ಮಹಾರಾಜರ ಬುಜೂರಿನ ಚೀಪ್‌ಕಮಿಷನರವರ ಸಹ್ರಿ ದಯಿಂದ ಕೊರ್ತಿಯಾದ ಪ್ರಕಟನೆಗಳು, ಗುರುವಾರ, ತಾ|| ೫ ನೇ ಜುಲೈ ೧೮೯೪.

ನಂ||೬೫—ಜ. ಹೌಸ್ಸ್‌ ತಾ||೩೦ನೇ ಜೂನ್ ೧೮೯೪— ಶಿಂಗಳಾವಲ್ಲಿ ಸ್ಪೆಷಲ್ ಡ್ಯೂಟಿಯಮೇಲಿರುವ ಅಸಿಸ್ಟೆಂಟ ಸರ್ಜನ್ ಮಿ ಜಿ ಜೆ ಸಹಾಯ ಮುದಲಿಯಾರ್ ಕೋಲಾರಕ್ಕೆ ವರ್ಗ ಮಾಡಲ್ಪಟ್ಟಿರುತ್ತಾರೆ.

೨ ನೆ ಅಸಿಸ್ಟೆಂಟ ಸರ್ಜನ್ ಮೈ|| ಟಿ. ವಿ. ಕುಪ್ಪುಸ್ವಾಮಿ ಮುದಲಿಯಾರ್‌ರವರು ಹೊಳೆನರಸೀಪುರದಿಂದ ಮೈಸೂರ್ ಜನರಲ್ ಆಸ್ಪತ್ರೆಗೆ ವರ್ಗಮಾಡಲ್ಪಟ್ಟಿರುತ್ತಾರೆ.

ನಂ||೩೯೪, ತಾ|| ೨೭ನೇ ಜೂನ್—ಮೈಸೂರ್ ಸ್ಟಾಂಪ ರೆಗ್ಯುಲೇಷನ್‌ಗಳ ೧ನೇ ಅಧಿಕಾರ ಅನುಸಾರ, ಗುಂಡ್ಲುಪೇಟೆ ತಾಲ್ಲೂಕ ಅನುವಾರ ಎಸ್. ಆರ್. ಶ್ರೀನಿವಾಸಾಚಾರ್ಯರು, ೧ನೇ ಜುಲೈ ಜುಲೈ ೧೮೯೪ನೇ ತಾರೀಖ್ ಮೊದಲು ಎರಡುತಿಂಗಳು ಪ್ರಿವಿಲೇಜ್ ರಜ ಕೊಡಲ್ಪಟ್ಟಿರುತ್ತಾರೆ.

ನಂ||೫೩೪ ೪-೬ ಹೌಸ್—ಮೈಸೂರ್ ಸ್ಟಾಂಪ ರೆಗ್ಯುಲೇಷನ್‌ಗಳ ೧೬ನೇ ಅಧಿಕಾರ ಅನುಸಾರ, ಹೊನ್ನಾಳಿ ತಾಲ್ಲೂಕ ಶಾನುಭೋಗ ಎಸ್. ಗುಂಡಪ್ಪನವರು, ೧೮೯೪ನೇ ಜುಲೈ ೧ನೇ ತಾ|| ಮೊದಲು ಅಥವಾ ಅವರು ಹೊರಟುಹೋಗುವ ತಾರೀಖು ಮೊದಲು ಎರಡುತಿಂಗಳ ಪ್ರಿವಿಲೇಜ್ ರಜ ಕೊಡಲ್ಪಟ್ಟಿರುತ್ತಾರೆ.

೩ ತುಮಕೂರು ತಾಲ್ಲೂಕ ಶೆರಸ್ತೆದಾರ ವ ೪ ನೆ ಅಸಿಸ್ಟೆಂಟ ಶೆ. ಸಬ್ಬರಾಯರವರು, ಎಫ್ ಗ ತಪ್ಪನವರು ರಜಾದಲ್ಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ, ಹೊನ್ನಾಳಿ ತಾಲ್ಲೂಕ ಶಾನುಭೋಗ ವ ೪ ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಕೆಲಸ ಮಾಡುವಂತೆ ನೇಮಕಮಾಡಲ್ಪಟ್ಟಿರುತ್ತಾರೆ. ಇದಲ್ಲದೆ ತಾಲ್ಲೂಕ ಅಡಳಿತಾರ ತಮ್ಮ ಸ್ವಂತಕೆಲಸಗಳಿಂದಿಗೆ ಕುರಿ ಸಡೆಸತಕ್ಕ ಅಧಿಕಾರವನ್ನೂ ಕೊಟ್ಟಿವ

ನೋಕಾಂ ಸಂ|| ೫೫—೧—ಮೈಸೂರ್ ದೇಶದಲ್ಲಿ ಅಫೀಂ ಬಿಕರೀ ಮಾಡಲ್ಪಡಬೇಕಾದ ಸರದ ನಿಷ್ಕರ್ಷೆಯಿಂದ ೧೮೯೪ನೇ ಇಸವಿ ಮಾರ್ಚಿ ೧೯ನೇ ತಾರೀಖಿನಲ್ಲಿ ಕೊಡಲ್ಪಟ್ಟ ೨೫ನೇ ನಂಬರ್ ಇಷ್ತಿಹಾರನಾಮೆಯ ೪ನೇ ಪ್ಯಾರಾ ೧೮೯೪ನೇ ಇಸವಿ ಜೂಲೈ ಗುರ್ತ್ರೇ ತಾರೀಖ್ ಮೊದಲು ರದ್ದು ಮಾಡಲ್ಪಟ್ಟಂತೆಯೂ, ಅದಕ್ಕೆ ಬದಲು ಇದರಡಿ ಬರುವ ಪ್ಯಾರಾ ಸೇರಿಸಲ್ಪಟ್ಟದ್ದಾಗಿಯೂ ಯೋಚಿಸತಕ್ಕದು.—

೪ನೇ ಪ್ಯಾರಾ. ವೈದ್ಯ ಚಿಕಿತ್ಸೆ ಮಾಡುವಂತವರಿಗೆ ಕೊಡುವ ಲೈಸೆನ್ಸಿಗೆ ರುಸುಂ ವಸೂಲ್ಮಾಡತಕ್ಕದ್ದಿಲ್ಲವು. ಆಗಿಂದಾಗ್ಯೆ ಗವರ್ನಮೆಂಟಿನವರಿಂದ ಕೊಡಲ್ಪಡುವ ಹುಕುಂಗಳಿಗೆ ಒಳಪಟ್ಟು ಎಕ್ಸೈಸ್ ಕಮಿಷನರು ಅಂಗಡಿಗಳನ್ನು ತರಗತಿವಾರ್ ವಿಂಗಡಿಸಿ ಇದರಡಿ ಬರುವ ದರಗಳ ಪ್ರಕಾರ ಲೈಸೆನ್ಸ್ ರುಸುಂ ವಸೂಲ್ಮಾಡತಕ್ಕದ್ದು :—

ಅವ್ವಲ್ ತರಗತಿ ಷಾಪಿಗೆ	ತಿಂಗಳಿಗೆ	ರೂ||	೧೦	೦ ೦
ದುಯ್ಯಂ	,,	,,	,,	೩ ೦ ೧
ಸಿಯ್ಯಂ	,,	,,	,,	೦ ೮ ೦
ಚಹರಂ	,,	,,	,,	೨ ೦ ೦

ಆಯಾ ಸಂವತ್ಸರದ ಜೂಲೈ, ಅಕ್ಟೋಬರ್, ಜನವರಿ, ಮತ್ತು ಏಪ್ರಿಲ್ ಈ ತಿಂಗಳ ಗುರ್ತ್ರೇ ತಾರೀಖುಗಳಲ್ಲಿ ಮೂರು ತಿಂಗಳಿಗೊಂದಾವರ್ತಿ ಮುಂಗಡವಾಗಿ ಪ್ರತಿ ಒಂದು ಲೈಸೆನ್ಸಿಗೂ ಫೀ ವಸೂಲ್ಮಾಡಬೇಕಾದ್ದಲ್ಲದೆ, ತಿಂಗಳೊಂದಕ್ಕೆ ಹದಿನಾರು ಸೇರಿಗೆ ಅಧಿಕವಾಗಿ ಮಾರಲ್ಪಡುವ ಅಫೀಮಿನಮೇಲೆ ಪ್ರತಿ ಒಂದು ಸೇರಿಗೂ ನಾಲ್ಕಾಣೆ ಮೇರೆ ಜಾಸ್ತೀ ರುಸುಂ ವಸೂಲ್ಮಾಡತಕ್ಕದ್ದು.

ನಂ|| ... — ..., ತಾ|| ...ನೇ ಜೂನ್—ಮೆ|| ಪದಾರ್ಥಯಾಪದ ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಸಿಸ್ಟೆಂಟ್ ಕಮಿಷನರ್ ಮೆ|| ಎಂ. ವೆಂಕಟಸ್ವಾಮಿಯ್ಯರವರು ಮೈಸೂರ ಡಿಸ್ಟ್ರಿಕ್ಟು ಪೊಲೀಸ್ ಸೂಪರಿಂಟೆಂಡೆಂಟಾಗಿ ಕೆಲಸ ನೋಡುವಂತೆ ನೇಮಕರಾಗಿ ಮಾಡಲ್ಪಟ್ಟಿರುತ್ತಾರೆ.

ನೋಕಾಂ ನಂ|| ..., ತಾ|| ...ನೇ ಜೂನ್—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ...ನೇ ಸೆಕ್ಷನ್ ಅನುಸರಿಸಿ, ಚೆನ್ನಗಿರಿ? ದೇವನಕೋಟೆ ತಾಲ್ಲೂಕು ತಹಸೀಲ್ದಾರ್ ಸುಬ್ಬಯ್ಯನವರು, ರಜಾಮೇಲಿರುವ ಚೆನ್ನಪಟ್ಟಣ? ದೇವನಕೋಟೆ ತಾಲ್ಲೂಕು ಅಮಲ್ದಾರ್ ಡಿ. ಆರ್. ರಾಮಚಂದ್ರರಾಯರವರ ಗೈರ್ಹಾಜರೀ ಕಾಲದಲ್ಲಿ ಚಲಾಯಿಸತಕ್ಕಬಗ್ಗೆ, ಹಂಗಾಮಿ ತರೀಖ್ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನೋಕಾಂ ನಂ|| ...—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ...ನೇ ಸೆಕ್ಷನ್ ಅನುಸರಿಸಿ, ಗುಂಡ್ಲುಪೇಟೆ ತಾಲ್ಲೂಕು ಶಿರಸ್ತೇದಾರ್ ಕರಿಗಿರಿರಾಯರು, ರಜಾಮೇಲಿರುವ ಅಮಲ್ದಾರ್ ಎಸ್. ಆರ್. ಶ್ರೀನಿವಾಸರಾಯರವರ ಗೈರ್ಹಾಜರೀ ಕಾಲದಲ್ಲಿ ಚಲಾಯಿಸತಕ್ಕಬಗ್ಗೆ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನೋಕಾಂ ನಂ|| ...—ಮೈಸೂರ್ ಶ್ರೀಮನ್ಮಹಾರಾಜಾ ಸರ್ಕಾರದವರು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ೧೮೯೪ನೇ ಇಸವಿ ಆಗಸ್ಟ್ ಗುರ್ತ್ರೇ ತಾರೀಖ್ ಮೊದಲು, ಮತ್ತು ಆ ತರುವಾಯ "ಶಿವಮೊಗ್ಗ ಸಬ್ ಆರ್ಡಿನೇಟ್ ಕೋರ್ಟ್" ಎಂಬ ಹೆಸರಿನಿಂದ, ಆರು ತಿಂಗಳ ಕಾಲ ಅಜಮಾಯಿಷಿ ತರೀಖ್, ಶಿವಮೊಗ್ಗದಲ್ಲಿ ಒಂದು ಸಬ್ ಆರ್ಡಿನೇಟ್ ಕೋರ್ಟ್ ಸ್ಥಾಪಿಸಲ್ಪಟ್ಟಿತು, ಸದರೀ ಕೋರ್ಟಿಗೆ ನೇಮಕರ ಮಾಡಲ್ಪಡುವ ಸಬ್ ಆರ್ಡಿನೇಟ್ ಜಡ್ಜಿಯು, ೧೮೯೩ನೇ ಇಸವಿಯ ಮೈಸೂರ್ ಸಿವಿಲ್ ಕೋರ್ಟ್ ರೆಗ್ಯುಲೇಷನಿನ ...ನೇ ಸೆಕ್ಷನ್ ಅನುಸರಿಸಿ, ಶಿವಮೊಗ್ಗ, ಕಡೂರ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಸ್ಥಳೀಕ ಸರಹದ್ದಿನೊಳಗೆ, ಸಬ್ ಆರ್ಡಿನೇಟ್ ಜಡ್ಜಿಯ ಅಧಿಕಾರವನ್ನು ಚಲಾಯಿಸತಕ್ಕದ್ದು.

ನಂ|| ...—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ...ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಮೆ|| ಎ. ... ಫೋರ್ಬ್ಸ್? ... ನವರು ಈ ತಿಂಗಳ ... ಮತ್ತು ...ನೇ ತಾರೀಖಿನಲ್ಲಿ ಎರಡು ದಿನಗಳ ಕ್ಯಾಷುಯಲ್ ರಜಾ ಕೊಡಲ್ಪಟ್ಟಿದ್ದರು.

ನಮ್ಮಗಳಿಗೆ ಬರತಕ್ಕ ಜಾಡ್ಯಗಳು ಎಂತಾವು

ರಾತ್ರಿಯಲ್ಲಿ ಕಣ್ಣನಿದ್ರೆ ನಮ್ಮಗಳಿಗೆ ಬಿಡುವುದರಿಂದಾಗಿ ಜಾಡ್ಯಗಳು ನಮ್ಮಲ್ಲಿ ಪ್ರವೇಶ ಮಾಡುತ್ತವೆ. ಸಾಧಾರಣವಾಗಿ ಮನುಷ್ಯರೊಳಗೆ ಎದೆಯಲ್ಲಿ ಪಕ್ಕೆಗಳಲ್ಲಿ ಶೂಲೆಗಳು ಕಾಣುತವೆ, ಆ ಕಾಲಗಳಲ್ಲಿ ಜನರು ಸಾಧಾರಣವಾಗಿ ಮಂದವಾಗಿ ವಿಶ್ರಾಂತವಾಗಿ ಬಾಯಲ್ಲಿ ಒಂದು ವಿಧ ಪೈಯಿ, ಇವುಗಳು ಪ್ರಾಯಶಃ ಉಪಯುಕ್ತವಾಗಿರುತ್ತವೆ, ಲಗ್ನ, ದಂತಗಳಲ್ಲಿ ನೋವು ಅಂಟು ಸುತ್ತಲು ಕಟ್ಟಿಕೊಂಡು ಊರುತದೆ ಆ ಸಮಯಗಳಲ್ಲಿ ಆಹಾರವು ಕೆಮ್ಮು, ಗರ್ಭದಲ್ಲಿ ಒಂದು ಬಗೆ ಚಳಿರನ್ನ, ಕೆಲವು ವೇಳೆಗಳಲ್ಲಿ ವ್ಯಸನ, ನಗ್ನದ ಅಸ್ಥಿಭಾರದಲ್ಲಿ ನೋವು ಭೋಜನದಲ್ಲಿ ಅತೃಪ್ತಿಯು, ಕಣ್ಣುಗಳು ಆಳಕ್ಕೆ ಎಳೆಕೊಂಡು ಇರೋದು, ಕೈಕಾಲುಗಳು ತಂಡಿಗಳು ಶೀತಳವು. ಆ ಮೇಲೆ ಕೆಮ್ಮು ಆರಂಭಿಸಿ ಸ್ವಲ್ಪ ತಿಂಗಳಾದ ತರುವಾಯ ಆ ಕೆಮ್ಮಿನಿಂದ ಬಾಯಲ್ಲಿ ಕಫ ಉರುಳೆಗಳನ್ನು ಕೆಕರಿಸೋದು. ಇತ್ಯಾದಿ ಕಾರಣಗಳಿಂದ ಜಾಡ್ಯನ ಸ್ತನಾಹರೇಷ ಆಯಾಸವನ್ನು ಬೀಳೋದು, ನಿದ್ರಾಭಂಗವು, ಆ ಕಾರಣದಿಂದ ಜಾಡ್ಯಗ್ರಸ್ತನಿಗೆ ಒಂದು ಬಗೆ ಪಿತ್ಥದ ಕೋಪವು, ಮಬ್ಬಿನ ಮನೋವ್ಯಥೆ, ಕಷ್ಟ ವ್ಯಸನವನ್ನೂ ಚಿಂತ್ರೆ ಉಂಟು ಮಾಡುತವೆ. ಇದಲ್ಲದಲ್ಲಾಗಿ ತಲೆಯಲ್ಲಿ ವಿಶೇಷ ವ್ಯಸನವಾದ ತಿರುಗುವು, ಆಕಸ್ಮಾತ್ತಾಗಿ ಬೀಳುವ ಕಾಲವನ್ನು ಕಾಣುತವೆ. ಆ ತರುವಾಯ ಗರ್ಭದಲ್ಲಿ ಕೆಮ್ಮುಗಳು ಬಿಗಿಸಿ, ಮಲಬದ್ಧ ನೋವು, ಶರೀರದ ಚರ್ಮವನ್ನು ಬಣಗಿಸಿ, ಬಣ್ಣವಾಡಿ, ರಕ್ತವನ್ನು ಮಂದವಾಡಿ, ಶರೀರದಲ್ಲಿ ಬೆಚ್ಚಗೆ ರಕ್ತವು ಓಡದೆ, ಕಣ್ಣುಗಳಲ್ಲಿರುವ ಸಾಧಾರಣವಾದ ಬಿಳುಪನ್ನು ಕಮ್ಮಿ ಮಾಡಿ, ಕಣ್ಣುಗಳಲ್ಲಿ ಹಸರು ಚುಕ್ಕೆಗಳು, ಅಲ್ಪ ಚಿಹ್ನವು ಕಮ್ಮಿ, ಇಲ್ಲದ ಕಡಿಮೆಯಾಗಿ, ಅದರಲ್ಲಿ ವಿಶೇಷವಾದ ಬಣ್ಣ, ಸಾಧಾರಣವಾಗಿ ಮೂತ್ರವು ಖಾರದ ಕಡೆ ಮಂದ ಅದಗಳು ಸೇರಿ ಮೂತ್ರವನ್ನು ಕಿಲ್ಲನಾಗಿ ಮಂದ ಮಾಡುತವೆ. ಆ ಕಾರಣಗಳಿಂದ ಬುಜಿಸಿದ ಅನ್ನವನ್ನು ಉಗುಳೋದು, ಬುಜಿಸಿದ ಅನ್ನವು ಬಾಯಲ್ಲಿ ಕೆಟ್ಟ ಹುಳಿ ಜಾಗವರುಚಿ, ಮತ್ತು ಎದೆಯಲ್ಲಿ ಅದುರು, ಕಣ್ಣು ದೃಷ್ಟಿ ಕಡಿಮೆ, ಕಣ್ಣುಗಳಲ್ಲಿ ಮಬ್ಬಾಗು, ವಿಶೇಷವಾಗಿ ಶರೀರದಲ್ಲಿ ಎಲವು ಕೆಲಸಾ ಇತ್ಯಾದಿ ಚಿನ್ಹೆಗಳುಂಟಾಗುತ್ತಲೂ ಕ್ರಮೇಣ ಕಾಣುತವೆ. ಈ ಜಾಡ್ಯದ ಚಿನ್ಹೆಗಳು ಅನೇಕವಿಧವಾಗಿ ಸುಕ್ಕಾಲಿನವಾಗ ಜನಕೊಳಗೆ ದಿರಿಸಿದವಾಗಿ ಕಾಣುತವೆ. ಈ ಜಾಡ್ಯಗಳನ್ನು ವೈದ್ಯಶಾಸ್ತ್ರಗಳು ಸೂಕ್ಷ್ಮ ಪರಿಕೊಳ್ಳದೆ ನೋಡುವಿಕ್ಕೆ ತೀರುವ ಒಂದು ವಿಧವಾದ ಜಾಡ್ಯಕ್ಕೆ ಮತ್ತೊಂದು ವಿಧ ಚಿಕಿತ್ಸೆ ನೋಡುವದು, ಇತ್ಯಾದಿ ಕಾರಣಗಳಿಂದ ಈ ಜಾಡ್ಯಗಳು ಸ್ಪಷ್ಟವಾಗದೆ ಹೋಗುತ್ತವೆ. ಇತ್ಯಾದಿ ಜಾಡ್ಯಗಳಿಗೆ ಸಂಬಂಧವಾದ ಔಷಧವು ಗರ್ಭದಲ್ಲಿ ಚಿಕಿತ್ಸೆ ಮಾಡಿದ ಪಕ್ಷದಲ್ಲಿ ಇವುಗಳನ್ನು ಸ್ಪಷ್ಟ ಮಾಡುವದು ವೈದ್ಯರು ಸಾಧಾರಣವಾಗಿ ಅಜೀರ್ಣವ್ಯಾಧಿಗೆ ತಕ್ಕ ಚಿಕಿತ್ಸೆ ಮಾಡುವರಿಂದ ಮತ್ತೊಂದು ವಿಧವಾದ ಚಿಕಿತ್ಸೆಯಾದ ಮಯೂರ ರೀತಿಯಿಂದ ಜಾಡ್ಯಗಳು ಸ್ಪಷ್ಟವಾಗದೆ ಹೋಗುತವೆ.

ಮುಂದೆ ವಿವರಣೆ ಮಾಡಿದ ಜಾಡ್ಯಗಳನ್ನು ನಿರ್ಮೂಲ ಮಾಡಿ ಶಾಂತಿ ಮಾಡತಕ್ಕ ಔಷಧವು ತಾಯಿಗೋಲು ಕಷಾಯವು ಈ ಕಷಾಯವನ್ನು ಕ್ರಮವಾಗಿ ಸೇವನೆ ಮಾಡುವದರಿಂದ ಜ್ಯಾಡ್ಯ ಲೋಪಗಳನ್ನು ದೂರವತ್ತು ಮಂತ್ರದಬಗೆ ಮಾಡುವದು ಮಾಡಿ ಶರೀರಕ್ಕೆ ಬಲವನ್ನು ಕೊಟ್ಟು ಆಲಸ್ಯವಿಲ್ಲದಾಗಿ ಸ್ವಸ್ಥ ಮಾಡುತ್ತವೆ

ರಾಮ ... ಕಷಾಯ ... ಬೆಂಗಳೂರು ... ಬಜಾರುಗಳಲ್ಲಿ ವಿಕ್ರಯಕ್ಕೆ ಸಿಕ್ಕುತದೆ.

W. D

SUMMARY OF NEWS.

ವೃತ್ತಾಂತ ಸಂಗ್ರಹವು.

ಜೇಣಾಯಿನ್ಯಾದಲ್ಲಿ ಇದಾಗೆ ಸರ್ಕಾರದವರು ಕೊಡುವ ಶಿಕ್ಷೆಯು ವಿಚಿತ್ರವಾದದ್ದು ರಾಷ್ಟ್ರಾಧ್ಯಕ್ಷನ ಪದನ ಮೇಲೆ ಬರ್ನೇ ಇಷ್ಟು ಅವನಿಗೆ ನಿದ್ದೆ ಕೊಡದೇನೇ ಸಾಯಿಸುತ್ತಾರಂತೆ! ಇದೆಂಥಾ ಕ್ರೂರ ಶಿಕ್ಷೆ!—ವೃ. ಪ.

ಡಿಲ್ಲಿ ಮುನಿಸಿಪಲ್ಲಿ ಬೈಗಿಗಳು ಒಡೆಯುವದರಲ್ಲಿ ಕೂಲೀ ಮಾಡಿ ಸಂಪಾದಿಸುವ ಹಣವಲ್ಲಿ ಪತ್ತರಲ್ಲಿ ಒಂದು ಭಾಗವನ್ನು ಸ್ಕೂಲಿನವರು ಕೂಡಿಸಿಟ್ಟು ಅವರಿಗೆ ಬಿಡುಗಡೆ ಆದಮೇಲೆ ಆ ಹಣವನ್ನು ಅವರಿಗೆ ಕೊಡುತ್ತಾರಂತೆ!—ವೃ. ಪ.

ಪ್ಯಾಂಡರ್ಬಿಲ್ಟ್ ಎಂಬ ದೊರೆಸಾನಿಯೊಬ್ಬಳು ವಿಲಾಯಿತಿಯಲ್ಲಿ ಇರುತ್ತಾಳೆ. ಆಕೆಯು ಅತ್ಯಂತ ಸೌಂದರ್ಯವಾದ ಒಂದು ಒಡ್ಡನ್ನು ಸಾಕುತ್ತಿದಾಳೆ ಸಾವಿದ್ಯದಲ್ಲಿ ಅದನ್ನು ವಿಕ್ರಯಿಸಿದ್ದು ಪ್ರಪಂಚದಲ್ಲೇ ದುಷ್ಪ್ರಾಪವೂ ಇಲ್ಲವಂತೆ, ಅದರ ಬೆಲೆ—೪,೦೦೦ ರೂಪಾಯಿ—ವೃ. ಪ.

ಅಡೇ ಮಂಗಳವಾರ ದಿವಸ ಬೆಂಗ್ಳೂರಿಯ ಹಿಪಾಸೆಯ ಪೋಲೀಸ್ ಕಾವಲುಗಾರರನ್ನು ಕಳ್ಳರು ಹೊಡೆದು ಪ್ರಷ್ಟಳ ದ್ರವ್ಯ ದೋಚಿಕೊಂಡು ಹೋದರು ಈ ಕಳ್ಳರ ಪತ್ತೆ ಇನ್ನೂ ಆಗಿಲ್ಲವೆಂದು ಡೆಕ್ಕನ ಹೆರಾಲ್ಡ್ ಪತ್ರಿಕೆಯು ತಿಳಿಸುತ್ತದೆ.—ಲೊ.

ದೇಶಪರಶುಷ, ಸಯಾಂ ರಾಜ್ಯದಲ್ಲಿ ಬಹಳ ದಿನ ಪೂಜಿಸಲ್ಪಡುತ್ತಲಿರುವ ನಲ್ಕು ಆನೆಗಳಲ್ಲಿ ಒಂದು ಆನೆ ಸತ್ತು ಹೋಯಿತು ರಾಜ್ಯಾಧಿಕಾರಿಗಳೂ, ಪ್ರಜೆಗಳೂ ಸೇರಿ ಸುಮಾರು ೬೦,೦೦೦ ಜನರವರೆಗೂ ಸೇರಿ ಆ ಆನೆಯನ್ನು ಮರದ ತೊಗಟೆಯಿಂದ ಹೊದಿಸಿಕೊಂಡು ಹೋಗಿ ಹಾಳಿಸಿ ಎಲ್ಲರೂ ನಮಸ್ಕಾರ ಮಾಡಿ ಹೊರಟು ಬಂದರಂತೆ—ವೃ. ಪ.

ವಿಲಾಯಿತಿಯಲ್ಲಿ ೫೦೦ ಸಂಸಾರಿಗಳು ಕೋಟ್ಯಾಧಿಪತಿಗಳೆಂತಲೂ, ೯,೫೪೦ ಸಂಸಾರಿಗಳು ಬಹು ಐಶ್ವರ್ಯವಂತರೆಂತಲೂ, ೧,೫೮,೦೫೦ ಸಂಸಾರದವರು ಐಶ್ವರ್ಯವಂತರೆಂತಲೂ, ೩,೩೦,೫೦೦ ಸಂಸಾರದವರು ಸಾಧಾರಣ ಸ್ಥಿತಿವಂತರೆಂತಲೂ, ೨೦,೧೯,೦೦೦ ಸಂಸಾರಿಗಳು ಕಷ್ಟ ಜೀವಿಗಳೆಂತಲೂ, ೪೯,೧೬,೯೦೦ ಸಂಸಾರದವರು ಬಡವರೆಂತಲೂ ವಿಂಗಡಿಸಿರುತ್ತಾರೆ.—ವೃ. ಪ.

ಬನೋಡೆ ಪಟ್ಟಣದಲ್ಲಿ ದರೋಡೆಯವರು, ನಾಲ್ಕು ಇಂತಿಂತವರ ಮನೆಗಳನ್ನು ಸುಲಿದು ಇಂತಿಂತವರ ಕಿವಿ ಮೂಗುಗಳನ್ನು ಕೊಯ್ಯುವೆವೆಂದು ಇಸ್ತಿಹಾರಿಗಳನ್ನು ಹಚ್ಚಿ, ಪಟ್ಟಣದ ಸುಪ್ರಸಿದ್ಧರು ಮೊದಲಾದ ದೊಡ್ಡ ದೊಡ್ಡ ಅಧಿಕಾರಿಗಳ ಮನೆಗಳನ್ನು ಸುಲಿದು ಬಹಳ ದ್ರವ್ಯವನ್ನು ತೆಗೆದುಕೊಂಡು ಹೋದರು, ಪೋಲೀಸಿನವರು ಆ ಕಳ್ಳರ ಪತ್ತೇ ಮಾಡುತಲಿದ್ದಾರೆಂದು ತಿಳಿಯಬರುತಿದೆ—ಕ. ಪತ್ರ.

ಮಿರ್ಜಾಪುರದಲ್ಲಿರುವ ಮೈ. ವಿ. ಸುಬ್ಬಯ್ಯ ಮೊದಲಿಯಾರ್ಯ ಮನೆಗೆ ಒಬ್ಬ ಯೋಗಿನಿಯು ಬಂದಿರುವದಾಗಿಯೂ, ಆಕೆಯು ಹಿಂದೂಸ್ಥಾನಿ ಭಾಷೆಯನ್ನು ವಿಶದವಾಗಿ ಆಡುವವಳಾಗಿಯೂ, ಮತವಿಷಯದಲ್ಲೂ, ವೇದಾಂತವಿಚಾರದಲ್ಲೂ, ಬಹುಶ್ರದ್ಧೆಯನ್ನು ತೋರಪಡಿಸುತಲಿರುವದಾಗಿಯೂ, ಕಳೆದ ಮೆ ೨೧ನೇ ತಾರೀಖಿನಲ್ಲಿ ರಾಯಬಹದ್ದೂರ್ ಸಭಾಪತಿ ಮೊದಲಿಯಾರ್ಯವರೂ, ಇನ್ನೂ ೧೦ ೧೧ ಜನರೂ ಆಕೆಯ ದರ್ಶನಾರ್ಥಿಗಳಾಗಿ ಹೋಗಿ ಪ್ರಸ್ತಾಪವನಾಡಿದರೆಂತಲೂ, ಜನರ ಪ್ರಶ್ನೆಗಳಿಗೆಲ್ಲಾ ಆಕೆಯು, ಸದುತ್ತರಗಳನ್ನು ಕೊಟ್ಟಿರುವದಾಗಿಯೂ, ಈ ಸಂಭಾಷಣದಲ್ಲಿ ಆಕೆಯು, ವಿಶೇಷವಾಗಿ ಸ್ವರ್ಣ ವಾಹನವನ್ನು ಮಾಡುವದನ್ನೂ, ಪಾಶ್ಚಿಮಾತ್ಯರಂತೆ ಹಿಂದೂಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸುವದರೂ ಬಹಳ ಕೆಟ್ಟದ್ದೆಂದು ಹೇಳಿದ್ದಾಗಿಯೂ, ವಿದ್ಯಾವತಿಯರಾಗಿರದ್ದಾಗ್ಯೂ ಸ್ತ್ರೀಯರು ಆಧ್ಯಾತ್ಮಿಕ ವಿಚಾರಮಾಡುವದಕ್ಕೆ ಶಕ್ತರಾಗಿರುವರೆಂದು ಬತ್ತಿಹೇಳಿದಂತೆಯೂ, ಇಷ್ಟುಹೇಳಿ ತಾನೇ ಒಬ್ಬ ವಿದ್ಯಾವಿಹೀನಳಾದ ವಿಧವೆಯೆಂದು ಬಂದವರಿಗೆ ಸ್ವವಿಷಯ ವಿಮರ್ಶನ ಮಾಡಿಕೊಂಡಳಾಗಿಯೂ, ಮುಂಬೈ ಪ್ರಾಂತದ ಒಂದಾನೊಂದು ಪತ್ರವು ತಿಳಿಸುವದು.—ವೃ. ಪ.

EXTRACTS.

ಮುಂಬೈಯಲ್ಲಿ ಆದ ದಂಗೆಯನ್ನು ಕುರಿತು.

ಕಳೆದ ಮಂಗಳವಾರದ ದಿವಸ ಮುಂಬೈಯಲ್ಲಿ ಹಿಂದೂ ಮುಸಲ್ಮಾನರಲ್ಲಿ ಒಂದು ಚಿಕ್ಕದಂಗೆ ಆಯಿತು, ಇದರ ಕಾರಣವು ಕೇವಲ ಅಲ್ಪವಾಗಿರುವುದು. ಈ ದಂಗೆಯು ಯೋಗಿಂದ ಸನಾಜಗಾಂ ಯೆಂಬ ರಿಕಾಗನೆಯಲ್ಲಿನ ಜನರು ಬಹಳವಾಗಿ ಅಂಜಿಕೊಂಡಿದ್ದರು. ಇದರ ಕಾರಣವೇನಂದರೆ—ಅನ್ಯಜಾತಿಯವರು ಸುಮಾರು ೮೦ ಜನರು ಒಂದು ಸ್ತ್ರೀ ಪ್ರೇತವನ್ನು ಸ್ಮಶಾನಕ್ಕೆ ಆ ಮಾರ್ಗವಾಗಿ ತಾಳ ವಾದ್ಯದಂಗವಾದ ನಡೆಯುತ ತೆಗೆದುಕೊಂಡು ಹೋಗುವಷ್ಟರಲ್ಲಿ ಅಲ್ಲಿ ಸಮೀಪದಲ್ಲಿದ್ದ ಒಂದು ಮಸೀದಿಯ ಮುಂದೆ ಪ್ರೇತವು ಬಂದ ಕೂಡಲೆ ಸುರ್ತಿಯ? ಒಳಗಿನ ಕೆಲವು ಮುಸಲ್ಮಾನರು ... ದು ವಾದ್ಯಗಳನ್ನು ಬಾರಿಸುವದನ್ನು ನಿಲ್ಲಿಸಬೇಕೆಂದು ಹೇಳಲಾಗಿ ಅವರು ... ಆ ... ಪ್ರತಿ ಬಂದಕ್ಕೆ ಲಕ್ಷ್ಯಕೊಡದ ವಾದ್ಯವನ್ನು ... ದಿಂದ ಇನ್ನೂ ಹೆಚ್ಚು ಮುಸಲ್ಮಾನರು ... ಆ ... ದೊಣ್ಣೆಗಳನ್ನು ತೆಗೆದುಕೊಂಡು ಅಲ್ಲಿಗೆ ಪ್ರೇತವನ್ನು ಬಿಟ್ಟು ಓಡಿಹೋದರು ... ... ಪೋಲೀಸಿನವರು ... ... ಮುಸಲ್ಮಾನರು ... ಪೋಲೀಸ್ ... ಹಿಂದೂಜನರ ... ಹಿಂದೂಜನರು ... ... ಅಧಿಕಾರಸ್ಥರೂ ಮತ್ತು ... ... ತತ್ಕಾಲದಲ್ಲಿ ... ... ರಸ್ತೆಯಲ್ಲಿ ಬಿದ್ದಿದ್ದ ಪ್ರೇತವನ್ನು ... ... ಕಳುಹಿಸಿಕೊಟ್ಟರು. ಮತ್ತು ಅವರ ರಕ್ಷಣಾರ್ಥವಾಗಿ ಸಂಗಡ ಪೋಲೀಸಿನವರನ್ನು ಕಳುಹಿಸಿದರು. ಇವರಲ್ಲಿ ೭ ಟ್ಟಿಗೆ ಐದುಜನ ರುಗ್ಣರನ್ನು ಹಿಡಿದಿದ್ದಾರೆ ಆ ... ... ಜನ ಮುಸಲ್ಮಾನರು ... ಜನ ಹಿಂದೂಜನರಿರುತ್ತಾರೆ ಜಮಾಯಿತರ ... ... ತರುವಾಯ ... ನಡೆಯುತಕ್ಕದ್ದಿದೆ. ಸದ್ಯಕ್ಕೆ ಜಾಮೀನಿನಮೇಲೆ ಬಿಟ್ಟಿದಾರೆ—ಸ ಪ್ರ

ಒಬ್ಬಳನ್ನು ಇಬ್ಬರಿಗೆ ವಿವಾಹ ಮಾಡಿದ್ದು.

ಕೆಳಗೆ ಬರೆದ ಸಂಗತಿಯು ಒಂದು ವರ್ತಮಾನಪತ್ರದಲ್ಲಿ ಪ್ರಸಿದ್ಧಪಡಿಸಲ್ಪಟ್ಟಿದೆ ಆದರೆ ಅದರೊಳಗೆಷ್ಟು ಸತ್ಯವಿರುವದೆಂಬದು ನಿಶ್ಚಯವಾಗಿ ಹೇಳಕೂಡದು ಆದರೆ ಅದು ಹಾಸ್ಯಾಸ್ಪದವಾಗಿರುವದರಿಂದ ಅದನ್ನು ನಮ್ಮ ವಾಚಕರಿಗೆ ತಿಳಿಸುತ್ತೇವೆ.

ಒಬ್ಬ ಕಾಲಾ ... ತಾನು ಕಲೀವೆನೆಂದು ... ತಿರುವ ಗ್ರಾಮದಲ್ಲಿರುವವನಾದ ಒಬ್ಬನಿಗೆ ತನ್ನ ಮಗಳನ್ನು ಕೊಟ್ಟು ಲಗ್ನ ಮಾಡಿದನು. ಮುಂದೆ ಕೆಲವು ದಿವಸಗಳಾದ ಬಳಿಕ ಆ ಮಹಾತ್ಮನು ಎರಡನೇ ... ಮಾಡಿದ್ದನು. ಅವನು ಅಲ್ಲಿಗೆ ಹೋಗುವ ಕೆಲವು ದಿನಗಳಾದಮೇಲೆ ಆ ಮಗಳನ್ನು ತಿರಿಗಿ ಮತ್ತೊಬ್ಬನಿಗೆ ಮದುವೆ ಮಾಡಿಕೊಟ್ಟನು ತನ್ನ ಕೃತ್ರಿಮತನವು ಬೈಲಿಗೆ ಬೀಳದಂತೆ ತನ್ನ ಮಗಳನ್ನು ... ಅತ್ತೆ ಮಾವಂದಿರ ಮನೆಗಳಿಗೆ ಕಳುಹಿಸಲಾರಂಭಿಸಿದನು. ಹೀಗಿರುತ ಆ ಕುವರಿಯು ಎರಡನೇ ಅತ್ತೆಯ ಮನೆಯಲ್ಲಿರುವಾಗ ಋತುಮತಿಯಾದಳು, ಮತ್ತು ಅಲ್ಲಿಯೇ ಅವಳಿಗೆ ಗರ್ಭಾದಾನವಾಯಿತು. ಆದದರಿಂದ ಅವಳು ಅಲ್ಲಿಯೇ ಹೆಚ್ಚು ದಿವಸಗಳವರೆಗೆ ಇರಬೇಕಾಯಿತು. ಮೊದಲನೇ ಅತ್ತೆಯ ಮನೆಯವರು ಆ ಹುಡುಗಿಯನ್ನು ಕರೆಯುವಿಕ್ಕೆ ಆ ಮಾಸ್ತರನ ಮನೆಗೆ ಬರಲು ಅವನು—ಹುಡುಗಿಯು ತನ್ನ ಅಜ್ಜಿಯ ಊರಿಗೆ ಹೋಗಿರುತ್ತಾಳೆಂದು ಸುಳ್ಳು ಹೇಳಿ ... ಅವರನ್ನು ಕಳುಹಿಸಿಬಿಟ್ಟನು ಇತ್ತ ಅವಳ ... ನಂತರ ಮಾಡಿಕೊಂಡ ರೋಗಸ್ಥನಾಗಿ ಮಡಿದು ಹೋದನು ಜನರು ಆಡುತ್ತಿರುವ ವಾರ್ತೆಯನ್ನು ಅವರ ತಮ್ಮನು ಕೇಳಿ ತನ್ನ ಅತ್ತಿಗೆಗೆ ಸಮಾಧಾನ ಹೇಳಬೇಕೆಂದು ಬರಲು ಅವಳು—ಎ ಮೈದುನನೇ, ನೀನು ನನಗೆ ಯಾಕೆ ಸಮಾಧಾನ ಮಾಡುತ್ತೀ? ನನಗೆ ವೈಧವ್ಯವು ಪ್ರಾಪ್ತವಾಗಿಲ್ಲವೆಂದು ... ದೈವಬಲದಿಂದಲೇ ನನ್ನ ತಂದೆಯು ಇಬ್ಬರಿಗೆ ಲಗ್ನ ಮಾಡಿಕೊಟ್ಟಿದ್ದಾನೆ ಆ ಇಬ್ಬರಲ್ಲಿ ಒಬ್ಬ ಗಂಡನು ಸತ್ತರೂ ಮತ್ತೊಬ್ಬ ಗಂಡನು ಈಗ ಜೀವಂತನಾಗಿದ್ದಾನೆ, ಎಂದು ಹೇಳಿದ ಆ ಬಾಲೆಯ ನುಡಿಯನ್ನು ಕೇಳಿದ ಅವಳ ಮೈದುನನು ಪರಮ ... ಅವಳನ್ನು ತನ್ನ ಮನೆಯಲ್ಲಿಯೇ ಇರಿಸಿಬಿಟ್ಟನು. ಅತ್ತಕಡೆಗೆ ಮೊದಲನೇ ಅತ್ತೆಯ ಮನೆಯವರು ಅವಳನ್ನು ಕರೆಯುವಿಕ್ಕೆ ಎಡತಾಕ ಹತ್ತಲು ಆ ಮಾಸ್ತರನು—ಅವಳ ಅಜ್ಜಿಯು ಅವಳನ್ನು ಎಲ್ಲಿಯೋ ಓಡಿಸಿಬಿಟ್ಟಿದ್ದಾಳೆಂದು ಹೇಳಿದನು. ಮುಂದೆ ಅದರ ಪರಿಣಾಮವು ಏನಾಗುವದೆಂಬದನ್ನು ನೋಡಬೇಕು—ಸುಬೋಧ ಪತ್ರ.

ADVERTISEMENTS.

ಸದರ್ನ್ ಮರಾಠಾ ರೇಲ್ವೆ ಕಂಪನಿ.

ಪ್ರಕಟನೆ.

ಎಲ್ಲಜನರಿಗೆ ತಿಳಿಸುವದೇನೆಂದರೆ :—ಮೇಜು, ಖುರ್ಚಿ, ಮುಂತಾದ ಕಚೇರೀ ಕೆಲಸದ ಸಾಮಾನು, ರೇಲ್ವೆಯ ಸಂಬಂಧೀ ಕಬ್ಬಿಣದ ಸಾಮಾನು, ಇಂಜನಿಯರಿಂಗ್ ಕೆಲಸಕ್ಕೆ ಬರುವ ಸಾಮಾನು, ಲಾಡಿಸ್‌ಗಳು ಮತ್ತು ಅವುಗಳ ಗಾಲಿಗಳು, ಉಕ್ಕಿನ ಮತ್ತು ಸಾಗವಾನೀ ಸಿಲೀಪರುಗಳು, ಬಾಕಿಲಗಳು, ಕಿಟಕಿಗಳು, ತೆರವಾದ ಟಪ್ಪದ ದಬ್ಬೆಗಳು, ಪಿಂಪಾಯಿಗಳು, ಉಕ್ಕಿನ ಮತ್ತು ಕಬ್ಬಿಣದ ತುಣುಕುಗಳು, ಹಳೇರೇಲಿಗಳು, ಇವುಗಳಲ್ಲದೆ ಇನ್ನೂ ಅನೇಕತರದ ಸಾಮಾನುಗಳು, "ದಿ ಬ್ಬಳ್ಳಿ ಜನರಲ್ ಸ್ಟೋರ್ ಡಿಪೋ" ದ ಸ್ಟೋರುಗಳಲ್ಲಿ ತಾರೀಖು ೧೯ನೇ ಜುಲೈ ೧೮೯೪ನೇ ಇಸ್ವೀ ಗುರುವಾರದಿವಸ ಮುಂಜಾನೆ ೧೦ ಘಂಟೆಗೆ ... ಪ್ರಸಿದ್ಧವಾಗಿ ಲಿಲಾವ ಮಾಡಲ್ಪಡುವವು.

ಸೂಚನೆ.—... ತಿಗಳು ... ರೋಖ ತೆಗೆದುಕೊಳ್ಳುವ ... ಲಿಲಾವಿನಲ್ಲಿ ಕ್ರಯಕ್ಕೆ ತೆಗೆದುಕೊಂಡ ಸಾಮಾನು ಸದರ್ನ್ ಮರಾಠಾ ರೇಲ್ವೆಯಿಂದ ಯಾವ ಸ್ಟೇಶನು ... ... ತಾರೀಖಿನಿಂದ ... ತಿಂಗಳೊಳಗೆ ಒಯ್ಯುವವರಿಗೆ ... ... ದರ ... ... ತಿಗನು ಕೊಡಲಾಗುವದು,

ಸ್ಟೋರ್ಕೀಪರ್ಸ್ ಆಫೀಸ್, ಹುಬ್ಬಳ್ಳಿ, ತಾ|| ೨೭—೬—೯೪,	H. WEIR, ಛೀ|| ಸ್ಟೋರ್‌ಕೀಪರ್, ಎಸ್. ಎಮ್. ರೇಲ್ವೆ.

ನೋಟೀಸ್.

ಹಸುಂ ಘಟ್ಟದಿಂದ ಈ ಪೇಟೆಗೆ ನೀರು ಸರಬರಾಯಿ ಮಾಡಲ್ಪಡುವ ಕಾರ್ಯದಲ್ಲಿ ಯಾವರೀತಿಯಿಂದ ಮತ್ತು ಯಾವರ ಮೂಲಕ ಉಪಪತ್ತಿಯನ್ನು ಕಲ್ಪಿಸಿಕೊಳ್ಳಬೇಕೆಂಬ ಅಂಶವನ್ನು ಕುರಿತು ಆಲೋಚಿಸುವದಕ್ಕಾಗಿ ಈ ತಿಂಗಳ ೧೬ನೇ ತಾರೀಖು ಮಧ್ಯಾಹ್ನ ೩ ಘಂಟೆಗೆ, ಇಲ್ಲಿನ ಕೋಟೆಯಲ್ಲಿರುವ ಮ್ಯುನಿಸಿಪಲ್ ಆಫೀಸಿನಲ್ಲಿ, ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರಗಳು ಒಂದು ವಿಶೇಷ ಸಭೆ ಸೇರುವರು.

ಸಿಟಿ ಮ್ಯುನಿಸಿಪಲ್ ಆಫೀಸ್, ಬೆಂಗಳೂರು ತಾ|| ೩ನೇ ಜೂಲೈ ೧೮೯೪.	K. SRINIVASA RAO, Vice President, City Municipal Commission

NOTICE.

VAIDYASARA SANGRAHA.

A TREATISE ON THE PRINCIPLES OF

HINDU MEDICINE

Price including Postage Rs 5—0—0

ವೈದ್ಯಸಾರ ಸಂಗ್ರಹ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಸಹಿತ, ಪ್ರತಿ ಒಂದಕ್ಕೆ ರೂ 5 0—0

THE KARNATAKA PRAKASIKA.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಸ್ಥಳದವರಿಗೆ. ಸಾಲೊಂದಕ್ಕೆ	...	3—0—0
ಪರಸ್ಥಳದವರಿಗೆ ಸಾಲೊಂದಕ್ಕೆ	...	4—0—0

ಮುಂಗಡವಾಗಿ ಚಂದಾ ಹಣವನ್ನು ಕಳುಹಿಸುವಂತವರಿಗೆ ಮಾತ್ರವೇ ಈ ಪತ್ರಿಕೆ ಕಳುಹಿಸಲ್ಪಡುವದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಹಣವು ಅಂಗೀಕರಿಸಲ್ಪಡಲಾರದು.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಙ್ಕ್ತಿ ಒಂದಕ್ಕೆ	೦—೨—೬	
ಎರಡನೆಯದಫಾ ಪಙ್ಕ್ತಿ ಒಂದಕ್ಕೆ	೦—೧—೦	

ಬೆಲೆ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಪ್ರಕಟನೆ ಮಾಡಿದಾಗ್ಯೂ ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕಮಾಡಲ್ಪಡುವದು.

BANGALORE :—Printed and Published at the KARNATAKA PRESS, No. 40 HOSPITAL Road, CITY.—1894.

THE Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning.

ಗ್ರಾಮಾದಿವಿಧಪ್ರವೃತ್ತ್ಯಾಗಮನಾರ್ಥ ... [illegible]

Vol. XXI — BANGALORE—MONDAY JULY 16, 1894. — No. 28.

Select Telegrams

London 8th July. — [illegible] House of Lords [illegible] exclude [illegible] and to expel [illegible].

Simla 9th July. — S[illegible] [illegible] Majesty [illegible] the Queen [illegible].

London 9th July. — [illegible] Chinese [illegible].

Shanghai 9th July. — The [illegible] Japanese Government [illegible] faithfully [illegible].

The Powers [illegible] calling [illegible] from [illegible] Corea [illegible].

St Petersburg 9th July. — The Novoe Vremya in discussing the situation [illegible] Russia must uphold the autonomy of Corea, but if Japan attempts to assert her supremacy there Russia [illegible] establish a Russo-Chinese protectorate over Corea.

Yokohama, 11th July. — Reuter's office [illegible] Japan refuses to withdraw her troops [illegible] war between Japan and China is [illegible].

London 11th July. — [illegible] British [illegible] Minister and Consul General in Japan.

THE

Karnataka Prakasika.

MONDAY, JULY 16, 1894.

EDUCATION IN MYSORE.

III

We find in the Report before us much interesting matter about the want of education [illegible]. Though, as we said in our last, [illegible] has been [illegible] in this respect there is plenty [illegible] more. We are told that a village with 500 inhabitants may be taken as a village of the smallest size for which a school [illegible] two or more small villages are so close to each other that one school for all of them would suffice. In the latter case the total population of the group of villages served by one school should be more than 500, and the village in which the school is situated should supply from its own population about three fourths the number of pupils. We are told that a distance of one mile from home is considered in villages to be prohibitive, and but few pupils are drawn by the existing schools from the neighbouring villages. If the school-going roughly taken in the case of village schools to last from the fifth year to the end of the fourteenth year, and if the percentage of the population of this school-going age to the total population is taken at 22.5 according to the results of the last census, a village with 300 inhabitants will have sixty eight children of school going age. Of the half may be taken to be boys, and the other half girls. One fifth of the boys may be taken to belong to the low castes not usually admitted into schools which are availed of by the higher castes. It often happens in villages that girls attend school along with the boys. As regards the sparseness of population in Mysore, the Report says that while the average population of a village having over two hundred inhabitants is by far the smallest of all the provinces and states, taken in comparison in point of proximity to one another the Mysore villages are situated much closer than the villages of Hyderabad, and of the Bombay provinces except those of Bengal, which is the most densely populated province of India. This in proportion to the area, the Mysore State has to provide a much larger number of villages with schools than most of the other provinces of India. It is interesting to know that the mean density of population per square mile in Bengal, Bombay, Madras, Baroda and Mysore is respectively 471, 207, 252, 291 and 177. The Report informs us that the number of pupils in the Middle and Lower Primary stages is considerably less and that in the Upper Primary stage considerably greater in 1892-93 than it was the year previous. These fluctuations, it is said are almost entirely due to the revised standards of instruction for Middle and Primary schools brought into force from January 1892, by which many [illegible] Middle [illegible] to be reduced to the grade of Upper Primary schools. The Upper Primary stage [illegible] which extended over [illegible] years, [illegible] old rules, was under the new rules spread over two years. The number of girls in the high schools was reduced from eighteen to fifteen during the year. The only school that imparts High school education to girls is the Maharani's girls' school. We have next the distribution of pupils according to race. There was an increase of 847 Mahomedans, and [illegible] 1147 low caste pupils, and a decrease of 1373 Hindus during the year. The Normal classes held in the months of April and May largely affected the attendance of Canarese schools. Probably [illegible] falling off has been [illegible] before this time. Of the total number of 66,433 boys 8,217 were Mahomedans and 54,703 were Hindus. Of the total number of 10,630 girls, 1,020 were Mahomedans and 8,714 Hindus. As regards the percentages of pupils of the three principal races to the total population of school going age we find that it is usual the percentage of Native Christian pupils is highest, and the percentage of all Hindus taken collectively is much lower than that of Mahomedans. Among the Hindus, the largest number of pupils comes from the Brahmins. We are told that the number of Brahmin pupils reading in school exceeds the Brahmin population of school going age, thus showing clearly that the latter is under-estimated at the usual rate of 15 per cent of the total population. The vast difference between the percentages of Brahmin pupils and those of other Hindu pupils shows how far ahead the Brahmins are of all the rest. We find that the number of girls learning English fell during the year from 632 to 360. The managers of schools are of opinion that during the few years a girl [illegible] remains at school it is hardly any use to her to learn a smattering of English. Probably this opinion is quite correct. The Wesleyan girls' school in the City in 1891-92 showed 279 girls learning English, only eighty are set down in this report. The Government Arya Balika Pathasala which had 37 girls learning English in 1891-92, has none learning it this year, and in 1892-93 Other schools of the kind also show a falling off in the number of girls learning English. The number of girls learning Canarese decreased during the year by 252. This fall is accounted for by the fall in the total number of Hindu girls under instruction, which was 379, and which was caused by the withdrawal of head or school masters of village schools to the Normal classes held as before mentioned. In our next issue we shall probably refer to special instruction.

News and Notes.

The annual loss of vessels to the world is calculated at about 2,200.

About 10,000 lives are lost yearly in the entire ocean commerce of the world.

The Chief Justice of Ceylon while on circuit recently objected to a newspaper being read in Court, observing that Court was not a reading room.

The beans are more nutritious and much less costly than meat. The beans only cost one fourth the price of meat, and are much richer even in nitrogen.

The strongest animals in the world are those that live on a vegetable diet. The lion is ferocious rather than strong. The bull, horse, reindeer, and elephant all conspicuous for strength choose a vegetable diet.

The Lahore paper learns from a trustworthy source that the Rajah of Poonch is reluctant to accept the services of a native official offered by the Imperial Government to fill the post of Prime Minister, and is going to abolish the post altogether.

A [illegible] carpet for Windsor Castle to adorn the Throne room of Her Majesty is ready in the Agra Jail. The making of it took one [illegible]. The cost is six thousand rupees [illegible] is red, the border is olive green. Its size, eighty by forty feet.

Says the *Hindu Patriot*, by pandering to the religious passions and prejudices of our Mahomedan fellow subjects solely for the purpose of creating a breach between them and the Hindus, our Government is raising a Frankenstein which promises to give it perpetual trouble and no rest.

According to rules recently framed by the Judges of the Chief Court regarding the enrolment of legal practitioners in the Punjab, the barristers wishing to be enrolled will have to practise in the lower courts for a period of six months before they can be allowed to conduct cases in the Chief Court.

An important [illegible] in connection with the plague epidemic, says the *Hongkong Daily Telegraph* is that not a single opium smoker has yet died from the disease. Investigations are being made by some of the Firm employees, together with perfectly independent experts, on this remarkable point.

It is intended to organise a movement of religious unity to continue the work of the Parliament of Religions. The name of this organisation will be "The World's Religious Parliament Extension." A meeting is to be held in the spring of this year at Chicago, when the aim and scope of the movement will be discussed and settled.

Seldom, says a Calcutta paper, in the history of Calcutta has there been so large a decrease in the number of offences reported by the police as appears to have taken place last year. In 1891 and 1892 the aggregate of cognizable and non-cognizable offences reported in the town and suburbs amounted to about 60,000; in 1893 the total was something less than 48,000.

At the Congress of Orientalists to be held at Geneva, all the European Universities, ten in America and three in Asia, as well as Melbourne University, will be represented. The delegates who have intimated their intention of being present at the Congress number 382, and include representatives from Damascus, Hanoi, Calcutta, Bombay, Rangoon, Java, Madras, Chittagong, and Darjeeling.

A Saigon engineer is reported to have invented a process for making patent fuel in blocks of compressed rice and paddy husks. He declines to state what it is that he uses to give his stuff cohesion. A contemporary says that on trial the new fuel gives better results than wood briquettes, at least as far as steam-raising power is concerned, but there appears to be no doubt as to the cheapness of the consolidating material.

The virtues of many of our Indian drugs are not, we fear, sufficiently known. A case in point is brought to notice by Dr J Martin [illegible] in the pages of the current number of the *Indian Medical Record*, in which he obtained case of eczema of long standing was cured in a few days by the application of poultices made of the leaves of the common madar (*Calotropis gigantea*), when all other remedies had failed. The *madar* is one of our commonest weeds.

The hearing of the [illegible]apore Suit commenced on the 9th. The plaintiff's Vakil contended that the onus of proving the minor Rajah's [illegible] lay on the defendant. Minor [illegible] was urged on both sides occupying the whole day. The Judge eventually ruled that the burden of establishing conclusively that the minor was not the Rajah's son lay on the plaintiff, and remarked that he had not a shadow of doubt as to that. The Judge directed the plaintiff to adduce evidence on that issue.

A memorial signed by over 5,000 inhabitants of Bengal has been submitted to the Lieutenant Governor protesting against the proposed interference with Hindu Religious Endowments. The memorialists state that it is quite impossible to distinguish between the religious and secular uses of such funds and urge that there is no *bona fide* public demand for legislation. If abuses at present exist they should be corrected by the influence of Hindu public opinion, not by interference from Government.

George Thomas was the only Irishman who ever became a Rajah in India by the right of conquest. His capital was Hansi, in the Hissar District, which he called Georgegarh. In his biography, his own words are quoted, in which he says "I coined rupees in my own name." He died ninety years ago, and as yet no one has found one of his coins. Sir Alexander Cunningham believed himself to be the

possessor of one of those long sought-for coins An engraving of it will be found in Mr. Compton's recent work on the *Military Adventurers of Hindustan*

An up-country paper learns that a big scheme has been proposed and is under consideration according to which all Sub Judges will be made Assistant Sessions Judges in order to prepare them for the posts of District Judges It seems also to be recognised by those who are concerned with the scheme that covenanted civilians require some training before they are made District Judges and, with this view, it appears that an increase in the number of Sub-Judges is recommended so that covenanted civilians may get a chance of being Sub Judges before they are made District Judges

---

According to the London Correspondent of the *Scotsman*, Lord Rosebery tells a story in connection with the winning of the Derby by *Ladas*, that will appeal specially to the believers in omens The day before he ran the first *Ladas*, when he was an undergraduate at Oxford, he was leaving a house in Park lane, when he saw a dead hedgehog Like a true sportsman he thought that portended something Again, on the morning of the recent Derby, he saw another hedgehog, this time particularly lively During the intervening twenty-five years, the Premier says, he had not seen a hedgehog In that case the coincidence is certainly very curious

Local and Provincial

The weather —We had good showers last week At times there is a high wind which blows the clouds away The ryots are busy with their ploughs

---

A promotion —Mr C A Mahadeva Sastri, Assistant Engineer, has been promoted Executive Engineer 4th grade Jas A Govindacharlu, dismissed from the service

---

The Annual Ball —The Maharajah will give his annual ball either on the 8th or 15th of August The ladies are to wear flowers, and the gentlemen court dress

---

A new Sub Judge —Mr S R Subbarya Iyer, Subordinate Judge, doing duty as Registrar, Chief Court, is appointed Subordinate Judge of Shimoga as a temporary measure

---

A new Telegraph Office —The public are informed that a Government Telegraph (Combined Post and Telegraph) office was opened at Mudgere in the Kadur District on the 16th June 1894

The Maharajah —His Highness may be seen driving about Bangalore every evening in his drag drawn by four splendid grey horses On Monday last he joined in a game of polo on the *maidan*, South Parade

---

The season —This has commenced in earnest. Balls and parties are now the order of the day in the Civil and Military Station and the races begin on Thursday next. Gaieties will continue for another month

---

The forthcoming Municipal election — Not a single European, Hindu or Mahomedan rate payer eligible for election as a Municipal Commissioner for the Civil and Military Station has submitted his name to the President There is a fortnight yet from this date, and intending candidates should do so before the expiration of that period —D P

The next Civil Service Appointments.— Our readers will not probably have much difficulty in making out the next two appointments so far as the 'open system' is concerned As regards the other system of " letting in"—viz, " Nomination," there is a strong rumour that Mr. Ambale Subramanyam Iyer, B A, son in law of the Dewan, and Mr M Kantharaj Urs, B A, brother-in law of His Highness the Maharajah, will be the candidates — M. H

Advances for purchase of Horses by Police Officers —The Inspector General of Police having recommended to Government the sanction of an advance, to one of the European Chief Constables of the Kolar Gold Fields Police, for the purchase of a horse to be used in the discharge of his duties, has been informed that such a practice cannot be sanctioned and the Inspector General has been directed to submit a draft rule on the subject for consideration if such advances are made in the Madras Police —B S

His Highness the Maharajah and the City Roads —His Highness the Maharajah drove in the City on Sunday morning, passing through the Balepet tank and Taluq Cutcherry Roads His Highness was found springing from his seat at every pace of the splendid animals which he drove In more than one place His Highness had to stop both in consequence of the disgraceful condition of the roads as also of the conservancy carts obstructing the way here and there From what we hear His Highness was highly displeased with what he personally observed regarding the state of the road and the way in which the servants of the City Municipality have been discharging their duties On several occasions we have had to animadvert on the wretched condition of the roads of the City, but in vain We are glad that the Sovereign himself can now bear testimony to the disgraceful manner in which the City Municipal servants are maintaining their roads—so says the *Bangalore Spectator*, but in justice to the Municipality we should say that the road in question was under repair and the traffic thereon was publicly prohibited

Extracts.

THE JAPANESE ARMY

In view of the present troubles in Corea the following sketch of the Japanese Army and Navy from a Straits paper will prove interesting —

A frenchman named Looven, who has been for a length of time resident in Japan, has, says a contemporary, produced an interesting and exhaustive account of the Military and Civil administration of that country Some time since a slight sketch of the Military organisation was given in the *United Service Magazine* but M Looven's work is much more extended, and includes the Navy as well as the Army He tells us that Japan is divided for military purposes into seven districts, each under the command of a General officer The active army counts 56 561 men, the reserve 95 951, and the territorial army or militia of 97,762 men There are 595 Generals, 3,537 officers, and 10,581 non-commissioned officers, the total Army, officers and all, amounts to 269 620 Of these there are 1 000 military police and 1 500 cavalry only The organisation of the Japanese Army is on Continental models, the company in time of peace consists of 132 men, of whom 5 are officers and 27 non-commissioned officers Four companies make a battalion and 3 battalions a regiment The uniform of the Japanese infantry resembles the German The squadron of Cavalry consists of 150 men Cavalry in Japan are few and almost useless on account of the rice fields, and, where these do not exist, of the mountainous nature of the rest of the country The uniform of the Japanese Cavalry resembles that of French dragoons A battery of Japanese Field Artillery is composed of 118 men, 86 horses and 6 guns, in time of war it is augmented by 10 gunners and 2 guns The uniform is a dark brown The Field guns are of 75 millimetres—3 04 inches, and they are made in the Arsenal at Osaka. There are very few foreign officers now remaining in the Japanese Army, and they get fewer every day Those that still remain are employed in directing courses of technical instruction The Koshikawa Arsenal at Tokio is provided with English and American machinery and can turn out 100 magazine rifles per diem These rifles are of 8 millimetres calibre—3 144 inches, and are similar to the French Lebel rifle M Looven says that though the number of the Japanese Army appears very considerable, yet he doubts that they would be able to turn out more than 150,000 men all told in case of war, and that the major part of their officers, more especially the seniors, are very slightly acquainted with modern tactics The ambition of the Japanese Nation is, however, to become a first class Naval power in the East Their Navy is organised on the English system, and the greater part of their ships have been made in that country, some few, however, have been made in France and Japan The fleet consists of 3? men of war with a total displacement of 61 763 tons, 76,633 horse power, and 324 guns To these must be added 13 torpedo boats with a total of 795 tons and 6 297 horse power The *personnel* of the fleet consists of 252 Admirals and superior officers, 1 106 subaltern officers, 2 041 petty officers, 259 pupils and 9,441 sailors Those with 1,032 employees gives a general total of 14,190 men The Naval arsenal and dockyards of Japan are at Yokosaka near Yokohama, and the expenses of the Navy amount to 30 millions of Francs or £1 200,000 per annum Besides this many extraordinary loans are taken up for the purchase of war vessels

ನೋಟೀಸ್.

ಹೆಸರು ಘಟ್ಟದಿಂದ ಈ ಪೂಂಗೆ ನೀರು ಸರಬರಾಯಿ ಮಾಡಲ್ಪಡುವ ಕಾರ್ಯದಲ್ಲಿ ಯಾವರೀತಿಯಿಂದ ಮತ್ತು ಯಾವದರ ಮೂಲಕ ಉಪಪತ್ತಿಯನ್ನು ಕಲ್ಪಿಸಿಕೊಳ್ಳಬೇಕೆಂಬ ಅಂಶವನ್ನು ಕುರಿತು ಆಲೋಚಿಸುವದಕ್ಕಾಗಿ ಈತಿಂಗಳ ೧೬ ನೇ ತಾರೀಖಿನ ಪ್ರಾತಃಕಾಲ ೭॥ ಘಂಟೆಗೆ, ಅಲ್ಲಿನ ಕೋಟೆಯಲ್ಲಿರುವ ಮ್ಯುನಿಸಿಪಲ್ ಆಫೀಸಿನಲ್ಲಿ, ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರುಗಳು ಒಂದು ವಿಶೇಷ ಸಭೆ ಸೇರುವರು.

ಸಿಟಿ ಮ್ಯುನಿಸಿಪಲ್ ಆಫೀಸ್,
ಬೆಂಗಳೂರು
ತಾ ॥ ೬ನೇ ಜುಲೈ ೧೮೯೪

K Srinivasa Rao
Vice President,
City Municipal Commission

ಕರ್ನಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ಜುಲೈ ೧೬ ನೇ ತಾ॥ ಸೋಮವಾರ

ಹಿಂದೂ ದೇವಾಲಯಗಳ ವಿಷಯದಲ್ಲಿ ಗವರ್ನ್‌ಮೆಂಟಿನವರ ಪ್ರವೃತ್ತಿ.

ಸುಮಾರು ಮೂವತ್ತು ಮೂವತ್ತೈದು ವರ್ಷಗಳ ಹಿಂದಿನವರೆಗೆ ಇಂಡ್ಯಾದೇಶದ ದೇವಾಲಯಗಳ ವಿಚಾರಣಾಧಿಕಾರವು ಗವರ್ನ್‌ಮೆಂಟಿನವರು ಸ್ವಯಂ ವಹಿಸಿಕೊಂಡು ಅವುಗಳ ಕಾರ್ಯಗಳು ಸರ್ವಸಮ್ಮತವಾಗಿ ನೆರವೇರಿಸುತ್ತಿದ್ದರು. ಅನಂತರ, ಯಾವದೋ ಒಂದು ಕಾರಣದ ಮೇಲೆ, ಸದರೀ ಅಧಿಕಾರವನ್ನು ಹಿಂದೂಗಳಿಗೇನೆ ಒಪ್ಪಿಸಿ ತಾವು ನಿರ್ಭಾರರಾದರು. ಅಂದಿನಿಂದಲು ದೇವಸ್ಥಾನಗಳ ಆದಾಯಗಳು ಬಹುಮುಖವಾಗಿ ದುರ್ವಿನಿಯೋಗವಾಗುವದಕ್ಕೆ ಪ್ರಾರಂಭವಾಯಿತೆಂದು ಹೇಳಬೇಕಾಗಿರುತ್ತದೆ. ದೇವಸ್ಥಾನಗಳ ಧರ್ಮಕರ್ತರಾದವರು ನಿರಂಕುಶಾಧಿಕಾರವುಳ್ಳವರಾಗಿ ಮನಸ್ಸಿಗೆ ಬಂದಂತೆ ವರ್ತಿಸಲಾರಂಭಿಸಿ ತನ್ಮೂಲಕ ದೇವಸ್ಥಾನಗಳ ಆಯತಿಗಳು ದುರ್ವಿನಿಯೋಗಪಡಿಸುತ್ತ ಬರುವದಲ್ಲದೆ, ಸದರೀ ಧರ್ಮಕರ್ತರವರೊಳಗೆ ವ್ಯವಹಾರಗಳು ದರ್ಶಕರು ಕೆಲವರು, ಸದರೀ ದುರ್ವಿನಿಯೋಗದಲ್ಲಿ ಭಾಗಬಾಕ್ತುಗಳಾಗಬೇಕೆಂಬ ಆಶಾಪಿಶಾಚಗ್ರಸ್ತರಾಗಿ ವ್ಯಾಜ್ಯಗಳು ತರತಕ್ಕವರು ಬೇರೆ ಕೆಲವರು, ಈ ರೀತಿ ಪರಸ್ಪರ ಸ್ಪರ್ಧೆ ಹುಟ್ಟಿ, ಅನೇಕ ಸಂವತ್ಸರಗಳ ಕಾಲ ಕೋರ್ಟುಗಳಿಗೆ ತಿರುಗಿ ವ್ಯವಹಾರ ನಡೆಸುವದರ ಮೂಲಕ ನಾನಾರೂಪವಾದ ಗುಂಪುಗಳಿಗೆ ಗುರಿಯಾಗಿ, ಅವು ಸ್ವಯಂ ವಹಿಸಿಕೊಳ್ಳುವದಕ್ಕೆ ಶಕ್ತರಲ್ಲದವರಾಗಿ ಆಲಯಗಳ ಆಯತಿಗಳು ವಿನಿಯೋಗಿಸುವದರ ಮೂಲಕ ದೇವಳದ ಸ್ವತ್ತು ದುರ್ವಿನಿಯೋಗವಾಗುತ್ತಿವೆ ಎಂಬುದಕ್ಕೆ ತಿರುಪತಿಯಲ್ಲಿ ಈಚೆಗೆ ಎರಡು ಮೂರು ವರ್ಷಗಳ ಹಿಂದೆ ನಡೆದ ವಿಷಯಗಳೇ ಸಂಪೂರ್ಣ ನಿದರ್ಶನಗಳಾಗಿರುತ್ತವೆ. ಇದರಂತೆಯೇ ಬಂಗಾಳೇ ದೇಶದಲ್ಲಿರುವ ತಾರಕೇಶ್ವರಸ್ವಾಮಿಯವರ ಆಲಯದ ಮಹಂತರು ನಡೆಸಿದ ಕಾರ್ಯಗಳೂ ಪ್ರಸಿದ್ಧವಾಗಿಯೇ ಇರುತ್ತವೆ. ದಕ್ಷಿಣದೇಶದ ಸಿವಿಲ್ ಕೋರ್ಟುಗಳಲ್ಲಿ ದಾಖಲಾಗುವ ಮೊಕದ್ದಮೆಗಳಲ್ಲಿ ನೂರಕ್ಕೆ ಹತ್ತಕ್ಕೆ ಕಡಮೆ ಯಿಲ್ಲದೆ, ಆಯಾ ದೇವಸ್ಥಾನಗಳಿಗೆ ಸಂಬಂಧಪಟ್ಟ "ತೆಂಗಲೈ" "ವಡಗಲೈ" ಎಂಬ ಕಕ್ಷಿಸ್ಪರ್ಧೆಯಿಂದ ತರಲ್ಪಡುವ ವ್ಯಾಜ್ಯಗಳಾಗಿರುತ್ತವೆ. ಈ ಜನರ ದುಷ್ಕೃತ್ಯಗಳು ಇದರೇ ಸುಮಾರು ಆರು ತಿಂಗಳ ಹಿಂದೆ ಶ್ರೀರಂಗದಲ್ಲಿ ಶ್ರೀ ರಂಗನಾಥ ದೇವರಿಗೆ ಹದಿನೈದು ಹದಿನಾರು ದಿನಗಳ ಕಾಲ ಪೂಜೆ ಸಹ ನಿಂತುಹೋಗಿದ್ದದ್ದು, ಇದೇ ಮೊಕದ್ದಮೆಯಲ್ಲಿ ಅಪರಾಧಿಗಳನೇಕರಿಗೆ ಕಠಿಣ ದಂಡನೆಗಳಾದದ್ದೂ ಪ್ರಸಿದ್ಧ ವಿಷಯಗಳಾಗಿರುತ್ತವೆ ಕೆಲವು ಕಾಲದಹಿಂದೆ ತಿರುಪತಿಯಲ್ಲಿ ಸಹ ಕೆಲವು ದಿನಗಳವರೆಗೆ ದೇವರಿಗೆ ಪೂಜೆ ನಿಂತುಹೋಗಿದ್ದ ವಿಷಯವು ಪ್ರಜೆಗಳ ಜ್ಞಾಪಕದಲ್ಲಿರಬಹುದು. ಇದೂ ಅಲ್ಲದೆ ಭಕ್ತಾದಿಗಳು ದೇವರಿಗೆ ಸಮರ್ಪಿಸುವ ಆಭರಣಾದಿಗಳು ನಷ್ಟವಾಗುವ ಮಾರ್ಗಗಳು ಮತ್ತು ಶೋಚನೀಯಗಳಾಗಿರುತ್ತವೆ, ಅಂದರೆ, ಕೆಲವು ದೇವಸ್ಥಾನಗಳಲ್ಲಿ ನಿತ್ಯವಿಧ್ಯುಕ್ತರಾದ ಅರ್ಚಕರಿಂದಲೂ, ಬೇರೆ ಕೆಲವು ಆಲಯಗಳಲ್ಲಿ ಧರ್ಮಕರ್ತರಿಂದಲೂ ಅಪಹರಿಸಲ್ಪಡುತ್ತಿವೆ ಈ ಜನರ ಅಜಾಗರೂಕತೆಯಿಂದ ಸ್ವತ್ತುಗಳು ಕಳ್ಳರಪಾಲಾಗುತ್ತಿದೆಂಬದಕ್ಕೆ ಈಚೆಗೆ ಕನ್ಯಾಕುಮಾರಿ ದೇವಸ್ಥಾನದಲ್ಲಿ ನಡೆದ ಪ್ರಬಲ ಚೌರ್ಯವೊಂದು, ತಿರುಮಾಲರಿಂಕೋರ್ಟ್ಯಲ್ಲಿ ನಡೆದದೊಂದು, ಈದೇಶದೊಳು ಮೇಲುಕೋಟೆಯಲ್ಲಿ ನಡೆದದೊಂದು, ದಕ್ಷಿಣ ಕನ್ನಡಾಜಿಲ್ಲಾ ಕೊಲ್ಲೂರು ಶ್ರೀಮೂಕಾಂಬಿಕಾ ದೇವಸ್ಥಾನದಲ್ಲಿ ನಡೆದದೊಂದು, ಇದೇರೀತಿ ಇನ್ನು ಅನೇಕ ಸ್ಥಳಗಳೊಳು ನಡೆದಿರುವ ಅತಿ ವಿಚಿತ್ರಗಳಂಥ ಕಳವುಗಳು ಸಂಪೂರ್ಣ ನಿದರ್ಶನಗಳಾಗಿರುತ್ತವೆ ದೇವಸ್ಥಾನಗಳ ಮೇಲಿನ ಅಧಿಕಾರವನ್ನು ಗವರ್ನ್‌ಮೆಂಟಿನವರು ದ್ವೈತಭಾವ ತೋರಿಸಬಾರದೆಂಬ ಬಿಡದ ಪರಿಣಾಮ ತಾವು ನಿರ್ಬಂಧರಾದದ್ದೇ ಮೇಲೆ ತಿಳಿಸಲ್ಪಟ್ಟಿರುವ ಬಹುವಿಧ ಅನರ್ಥಗಳಿಗೆ ಮುಖ್ಯ ಕಾರಣವೆಂದು ಧಾರಾಳವಾಗಿ ಹೇಳಬಹುದಾಗಿದೆ ಕೆಲವು ಕಡೆ ಆಲಯಗಳ ವಿಚಾರಣೆಯ ಬಗ್ಗೆ ಒಂದು ಕಮಿಟಿಯವರನ್ನೇರ್ಪಡಿಸಿಕೊಳ್ಳುವ ಸ್ವಾತಂತ್ರ್ಯವು ಗವರ್ನ್‌ಮೆಂಟಿನವರು ಆಯಾ ಸ್ಥಳ ನಿವಾಸಿಗಳಿಗೆ ಕೊಟ್ಟಿರುತ್ತಾರೆ ಸದರೀ ಕಮಿಟಿಯ ಮೆಂಬರುಗಳಲ್ಲಿ ಪರಸ್ಪರ ಅಸೂಯೆಯಿಂದ ವ್ಯಾಜ್ಯಗಳುಂಟಾಗಿ ತನ್ಮೂಲಕವಾಗಿ ಸಹ ಆಲಯಗಳ ದ್ರವ್ಯವೂ ಕಾರ್ಯಗಳೂ ನಷ್ಟರೂಪವಾಗಿ ಪರಿಣಮಿಸುತ್ತವೆ ಸಾಮಾನ್ಯವಾಗಿ ಹಿಂದೂ ದೇವಾಲಯಗಳಿಗೆ ಪ್ರಾಪ್ತವಾಗಿರುವ ಈಗಿನ ದುರ್ದಶೆಯು ಪರಿಹಾರವಾಗುವಂತೆ ಒಂದು ಕಾನೂನನ್ನು ರಚಿಸಿ ಅದನ್ನು ಜಾರಿಯೊಳು ತರಬೇಕಾದುದು ಕೇವಲ ಅವಶ್ಯಕವೆಂದು ಬಹುಜನರು ಸೇರಿ ಗವರ್ನ್‌ಮೆಂಟಿಗೆ ತಿಳಿಸಿದ ಅಭಿಪ್ರಾಯವು ಅವರು ಲಾಲಿಸಿ ಆ ವಿಷಯದಲ್ಲಿ ಒಂದು ಮಸೂದಾ ಕಾನೂನನ್ನು ತಯಾರಿಸಬೇಕೆಂದು ಯೋಚಿಸುತ್ತಿರುವಲ್ಲಿ, ಮತಸ್ಥಾನಗಳ ವಿಷಯದಲ್ಲಿ ಗವರ್ನ್‌ಮೆಂಟಿನವರು ಪ್ರವರ್ತಿಸಕೂಡದೆಂತಲೂ, ಅಂಥಗಳ ಕಾರ್ಯಗಳಲ್ಲಿ ಲೋಪವೇನಾದರಿರುವ ಪಕ್ಷಕ್ಕೆ ಅದನ್ನು ಹಿಂದೂಜನರೇ ಕ್ರಮಪಡಿಸಿಕೊಳ್ಳಬೇಕೆಂತಲೂ ನಮೂದಿಸಿ, ಬಂಗಾಳೇದೇಶೀಯರು ಅಯಿದುಸಾವಿರ ಜನರು ರುಜು ಮಾಡಿ ಒಂದು ಅರ್ಜಿಯನ್ನು ಅಲ್ಲಿನ ಲೆಫ್ಟಿನೆಂಟ ಗವರ್ನರವರಿಗೆ ಕಳುಹಿಸಿರುವತೆ ಆ ದೇಶದ ಒಂದು ಪತ್ರಿಕೆಯ ಮೂಲಕ ತಿಳಿದು ಅವರ ಬುದ್ಧಿದೋಷಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ

ಹಿಂದೂದೇವಸ್ಥಾನಗಳ ಕಾರ್ಯಗಳಲ್ಲಿ ಗವರ್ನ್‌ಮೆಂಟಿನವರು ಪ್ರವರ್ತಿಸಿ, ಅದರ ಲೋಪಗಳು ಕ್ರಮಪಡಿಸುವದಕ್ಕಾಗಿ ಒಂದು ಕಾನೂನು ರಚಿಸಿ ಜಾರೀಯೊಳು ತರುವದರ ಮೂಲಕ ಗವರ್ನ್‌ಮೆಂಟಿನವರು ಹಿಂದೂಗಳ ಮತ ಬಾಬುಗಳಲ್ಲಿ ಪ್ರವೇಶಕರಾದರೆಂದು ಯೋಚಿಸುವದಕ್ಕೆ ಸುತರಾಂ ಅವಕಾಶವಿರಲಾರದು, ಏತಕ್ಕೆಂದರೆ, ದೇವಸ್ಥಾನಗಳ ಸಕಲ ಆಯತಿಗಳೂ ವೃತ್ತಿಗಳಿಂದ ಉಂಟಾಗತಕ್ಕದ್ದಾದುದರಿಂದ ಅವು ದುರುಪಯೋಗವಾಗದಂತೆ ಬಂದೋಬಸ್ತು ಮಾಡತಕ್ಕದ್ದು ಗವರ್ನ್‌ಮೆಂಟಿನವರ ಕರ್ತವ್ಯವಾಗಿರುತ್ತದೆ ಇದರಂತೆಯೇ ಭಕ್ತಾದಿಗಳಿಂದ ಬಹುಕಾಲದ ಹಿಂದೆ ಸಮರ್ಪಿಸಲ್ಪಟ್ಟು, ಈಗ ದೇವತಾಲಂಕಾರಕ್ಕೆ ಅನುಪಯುಕ್ತವಾಗಿ ಬಿದ್ದಿರುವ ಜವಾಹಿರನಗಗಳನ್ನು ಧರ್ಮಕರ್ತರ ವಶವಾಗಿರುವದರಿಂದಲೇ ಆಗಿಂದಾಗ್ಗೆ ಕಳವು ಮೊದಲಾದವುಗಳಿಂದ ಅವು ನಷ್ಟವಾಗುತ್ತಿವೆಯಾಗಿ ಅವನ್ನೆಲ್ಲ ಗವರ್ನ್‌ಮೆಂಟ ಖಜಾನೆಯಲ್ಲಿಟ್ಟಿರುವಣವು ಉಚಿತವಾಗಿರುವುದು. ಈದೇಶದೊಳು ದೇವಾದಾಯ ಮೊದಲಾದ ಧರ್ಮಕಾರ್ಯಗಳ ವಿಚಾರಣೆಯು ಗವರ್ನ್‌ಮೆಂಟಿನವರು ವಹಿಸಿಕೊಂಡಿರುವದರಿಂದ ದೇವಾಲಯಗಳ ಒಡವೆಗಳನ್ನು ಸರ್ಕಾರದವರು ತಮ್ಮ ಸುಪರ್ದಿನಲ್ಲಿಟ್ಟುಕೊಳ್ಳುವಂತೆಯೇ ಬಂದೋಬಸ್ತಾಗುತ್ತ ಬರುವದಲ್ಲದೆ, ಇತರ ದೇಶಗಳಲ್ಲಿ ನಡೆಯುತಲಿರುವಂತೆ ಕೆಲವು ಸಂದರ್ಭಗಳಲ್ಲಿ ದೇವರಪೂಜೆ ಸಹ ನಿಂತುಹೋಗುವ ಅಕ್ರಮಗಳಿಗೆ ಇಲ್ಲಿ ಸುತರಾಂ ಅವಕಾಶವಿಲ್ಲದೆ, ಬಹುಕಾಲದ ಹಿಂದೆ ಯಾವಕಾರಣಗಳಿಂದಲೋ ಪೂಜೆ ನಿಂತುಹೋಗಿದ್ದ ದೇವಸ್ಥಾನಗಳಲ್ಲಿ ಸಹ ಪುನಃ ಕ್ರಮವಾಗಿ ಪೂಜೆ ನಡೆಯುವದಕ್ಕೆ ತಕ್ಕ ಏರ್ಪಾಡುಗಳು ನಡೆಸಲ್ಪಡುತ್ತಿವೆ. ಇದೂ ಅಲ್ಲದೆ ದೇವಸ್ಥಾನಗಳಲ್ಲಿ ಅನುಪಯುಕ್ತಗಳಾಗಿ ಬಿದ್ದಿದ್ದ ಒಡವೆಗಳನ್ನು ಹರಾಜ್ ಹಾಕಿಸಿ ಅದರಲ್ಲಿ ಹುಟ್ಟುವಳಿಯಾಗುವ ಹಣದ ಮೂಲಕ ಬರುವ ಬಡ್ಡಿಯು ದೇವಸ್ಥಾನಗಳ ಕಾರ್ಯದಲ್ಲೇ ವಿನಿಯೋಗಿಸಲ್ಪಡುತ್ತಿವೆ. ಇವನ್ನೆಲ್ಲ ಯೋಚಿಸಲಾಗಿ,

ದೇವಸ್ಥಾನಗಳ ವಿಚಾರಣೆಯಂ ಗವರ್ನಮೆಂಟಿನವರು ವಹಿಸಿಕೊಂಡ ಹೊರತು ಅವುಗಳ ಆಡಳಿತಗಳು ಕ್ರಮಪಡಲಾರವೆಂದು ಧಾರಾಳವಾಗಿ ಹೇಳುವೆವು

ವಿವೇಕಾನಂದ ಸ್ವಾಮಿ.

ವಿವೇಕಾನಂದ ಸ್ವಾಮಿ ಎಂಬ ಯೋಗಿಯವರು ಇದುವರೆಗೆ ಅಮೆರಿಕಾದೇಶದ ಚಿಕಾಗೊ ಎಂಬ ಪಟ್ಟಣದಲ್ಲಿದ್ದು, ಅಲ್ಲಿನ ಜನರಿಗೆ ಹಿಂದೂಮತಸಂಬಂಧವಾದ ವಿಷಯಗಳಂ ಕುರಿತು ಉಪನ್ಯಾಸ ಮಾಡುತಲಿದ್ದಾರೆ. ಈಚೆಗೆ ಒಂದು ಸಂದರ್ಭದಲ್ಲಿ ಸಭೆಯ ದೇಶೀಯರನ್ನುದ್ದೇಶಿಸಿ "ಕ್ಷಾಮಕಾಲದಲ್ಲಿ ಆಹಾರವಿಲ್ಲದೆ ಸಂಕಟಪಡುವವರಿಗೆ, ಅವರು ಕ್ರಿಸ್ಟಿಯನ್ ಮತಕ್ಕೆ ಸೇರುವ ಕರಾರಿನಮೇಲೆ, ಅವರಿಗೆ ಆಹಾರವನ್ನೊದಗಿಸುವ ಮಿಷನರಿಗಳ ಮತವನ್ನಾನೇನೆಂದು ತಿಳಿಯಬೇಕು" ಎಂಬದಾಗಿ ಸಭೆಯ ಸ್ವಾಮಿಗಳವರು ತಿಳಿಸಲಾಗಿ, ಕ್ರಿಸ್ಟಿಯನ್ ಮಿಷನರಿಗಳು ಇಂಡ್ಯಾದೇಶದಲ್ಲಿ ಜನರು ತಮ್ಮ ಮತಕ್ಕೆ ಸೇರಿಸಿಕೊಳ್ಳುವ ವಿಷಯದೊಳು ಅವಲಂಬಿಸುವ ಮಾರ್ಗವು ಕೇವಲ ನೀಚವಾದುದೆಂಬುದನ್ನು ಅಮೆರಿಕಾದೇಶದ ಕ್ರಿಸ್ಟಿಯನ್ ರಹಸ್ಯಗಳಲ್ಲಿ ನಾಯಕರೆವರೆಂಡ್ ಕೆ. ಜೆ. ಹ್ಯಾಂ ಎಂಬ ಪಾದರಿಯವರು, ಸ್ವಾಮಿಯವರು ಹೊರಪಡಿಸಿದ ವಿಷಯವನ್ನನುಮೋದಿಸಿ, ತಿಳಿಸಿದ ಅಭಿಪ್ರಾಯವೇನೆಂದರೆ 'ಸ್ನೇಹಾನುರಕ್ತರಾದ ಬೌದ್ಧರ ಮೂಲಕವಾಗಿಯೂ ಬ್ರಾಹ್ಮಣರ ಮೂಲಕವಾಗಿಯೂ ಉಚಿತ ಮಾರ್ಗವನ್ನರಿತುಕೊಳ್ಳಲಿಕ್ಕೆ ನಾವು ಇಷ್ಟಪಟ್ಟವರಾಗಿದ್ದೇವೆ. ನಾವು ಶಾಂತರು ಮತ್ತು ವಿವೇಕಿಗಳಾಗುವ ವಿಷಯದಲ್ಲಿ ಯಾರು ನಮಗೆ ಸಹಾಯಕರಾಗುತ್ತಾರೆಯೋ ಅಂತವರು ನಮ್ಮ ಹಿತಚಿಂತಕರಾಗುವರು. ಅಂತವರು ಯಾರೇ ಆಗಿರಲಿ ಅವರಿಂದ ಪಡೆಯುವುದರಲ್ಲಿ ನಾವು ಕೃತಜ್ಞರಾಗಿರುವೆವು' ಎಂಬದು. ವಿವೇಕಾನಂದ ಸ್ವಾಮಿಯವರಿಗಿರುವಷ್ಟು ವಿದ್ಯಾಬಲವೂ, ಮನೋದಾರ್ಢ್ಯವೂ, ಸಹನೆಯೂ ಉಳ್ಳ ಜನರು ಕೆಲವರು ಯೂರೋಪ್ ಮೊದಲಾದ ಕ್ರಿಸ್ಟಿಯನ್ ರಾಜ್ಯಗಳಿಗೆ ಹೋಗಿ ಹಿಂದೂಮತ ತತ್ವಗಳಂ ಅಲ್ಲಿನವರಿಗೆ ಉಚಿತರೀತಿಯಿಂದ ಉಪದೇಶಿಸುವದಾದರೆ ಅಲ್ಲಿನವರು ತಮ್ಮ ಮತಪ್ರಚಾರಾರ್ಥ ತಮ್ಮ ಮಿಷನರಿಗಳನ್ನು ಈ ದೇಶಕ್ಕೆ ಕಳುಹಿಸುವ ವಾಡಿಕೆಯು ಮೂಲೋತ್ಪಾಟನವಾಗುವದರಲ್ಲಿ ಸ್ವಲ್ಪವೂ ಸಂಶಯವಿರಲಾರದು. ಇದೂ ಅಲ್ಲದೆ ಇಲ್ಲಿನ ಮಿಷನರಿಗಳು, ಜ್ಞಾನಹೀನರಾದ ಸಾಮಾನ್ಯ ಜನರಂ ಸುರುಳು ಮಾತುಗಳಿಂದ ಒಲಿಸಿ ತಮ್ಮ ಮತಕ್ಕೆ ಸೇರಿಸಿಕೊಳ್ಳುತ್ತಾರೆ. ಅಂತವರಲ್ಲಿ ಯಾರೇ ಆಗಲಿ, ಅಜ್ಞಾನದಿಂ ದೇವರಿಗೆ ಉಂಟಾದ ದುಃಸ್ಥಿತಿಯಂ ಪರಿಷ್ಕರಿಸಬೇಕೆಂದು ವಿಶೇಷವಾಗಿ ಪ್ರಾರ್ಥಿಸುವ ಪಕ್ಷದಲ್ಲಿ ವಿದ್ಯಾಪ್ರಾಯಶ್ಚಿತ್ತಾರ್ಥವಾಗಿ ಅವರಂ ಪೂರ್ವಸ್ಥಿತಿಗೆ [illegible]ಕಾದ ವಿಷಯದಲ್ಲಿ ಹಿಂದೂಮತಸ್ಥರು ಪ್ರಯತ್ನಪಡಬೇಕಾದುದು ಅವಶ್ಯಕರ್ತವ್ಯವಾಗಿರುತ್ತದೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

ಕಳೆದ ಸಂವತ್ಸರದಲ್ಲಿ ೭೨,೦೦,೦೦೦ ಪತ್ರಿಗಳು ವಿಲಾಯತಿಯಿಂದ ಕಲ್ಕತ್ತೆಗೆ ಆಮದ್ ಮಾಡಲ್ಪಟ್ಟು ಅಲ್ಲಿ ಖರ್ಚು ಆಗಿರುತ್ತವೆ.

ಈ ಪ್ರಪಂಚದಲ್ಲಿ ಜಹಜುಗಳುಂಟಾದಂದಿರುವಂತವರೆಲ್ಲರವರೆಗೆ ಸುಮಾರು ೨,೦೦೦ ಜಹಜುಗಳು ನಷ್ಟವಾಗುವದಾಗಿ [illegible]ಲ್ಪಟ್ಟಿದೆ.

ಈ ಪ್ರಪಂಚದಲ್ಲಿ ಸಮುದ್ರಮಾರ್ಗವಾಗಿ ನಡೆಯುವ ವ್ಯಾಪಾರದಲ್ಲಿ ಸಾಲಿಯಾನಾ ಸುಮಾರು ೧೨,೦೦೦ ಪ್ರಾಣಿಗಳು ನಷ್ಟವಾಗುವದಾಗಿ ಲೆಕ್ಕ ಮಾಡಲ್ಪಟ್ಟಿದೆ.

ಕಳೆದ ಹನ್ನೆರಡು ತಿಂಗಳ ಕಾಲದೊಳು ಇಂಡ್ಯಾದೇಶದಿಂದ ಅನ್ಯ ದೇಶಗಳಿಗೆ ಕಳುಹಿಸಲ್ಪಟ್ಟ ಸರಕುಗಳಲ್ಲಿ ಇಂಗ್ಲೆಂಡ್ ರಾಜ್ಯಕ್ಕೆ ಅಧಿಕವಾಗಿ ಹರಳೆಣ್ಣೆ ರಫ್ತು ಮಾಡಲ್ಪಟ್ಟಿತು.

ದೇವಸ್ಥಾನಗಳು, ಸತ್ರಗಳು, ಮತ್ತು ಮತಸಂಬಂಧವಾದ ಇತರ ಸ್ಥಾಪನೆಗಳಿಂದ ಇನ್ಕಂಟ್ಯಾಕ್ಸ್ ಎಂಬ ಆದಾಯದ ತೆರಿಗೆಯು ವಸೂಲ್ಮಾಡಕೂಡದೆಂದು ಇಂಡ್ಯಾಗವರ್ನಮೆಂಟಿನವರು ಈಚೆಗೆ ನಿಬಂಧನೆ ಮಾಡಿರುವಂತೆ ಕೇಳುತ್ತೇವೆ.

ಕಲ್ಕತ್ತೆಯ ಮ್ಯುನಿಸಿಪಲ್ ಸಂಘದವರು, ಇದುಮೊದಲು ಮುಂದೆ, ತಮ್ಮ ಆಫೀಸಿನಲ್ಲಿ ಖಾಲಿಯಾಗುವ ನೌಕರಿಗಳನ್ನು ಪ್ರೋಬಾ ಪ್ರೋಟ ಪರೀಕ್ಷೆಯಲ್ಲಿ ತೇರ್ಗಡೆಯಾಗುವವರ ಮೂಲಕ ಬರ್ತಿಮಾಡುವರೆಂದು ಅಲ್ಲಿನಪತ್ರಿಕೆ ಒಂದು ತಿಳಿಸುತ್ತದೆ.

ಅವರೆ, ಬೆಂಡೆ ಮೊದಲಾದ ಕೆಲವು ಶಾಕಗಳ [illegible]ದ ಕ್ರಿಯೆಯನ್ನು ಪರೀಕ್ಷಿಸಿ ಅದರೊಳು ನಾಲ್ಕರೊಳೊಂದು ಭಾಗವಿಷ್ಟವಾಗಿಯೂ, ಅವು ಮಾಂಸಕ್ಕೆ ಕೂಡ ಶಕ್ತಿವರ್ಧಕವಾದವೆಂತಲೂ, ನೈಟ್ರೋಜನ್ ಎಂಬ ಉಪ್ಪಿನ ಭಾಗವು ಅಧಿಕವಾಗಿ ಉಳ್ಳವೆಂತಲೂ ವೈದ್ಯಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

ಈ ಪ್ರಪಂಚದಲ್ಲಿನ ಪ್ರಾಣಿಕೋಟಿಯಲ್ಲಿ ಮಾಂಸಾಹಾರದ ವ [illegible] ಜೀವಿಗಳಿಗೆ ಪ್ರಬಲತ್ವ ಮಾಡವು. ಸಿಂಹ ಮೊದಲಾದವು ಕ್ರೂರತ್ವವುಳ್ಳವಾದ್ದೇ ಹೊರತು ದೇಹ ಶಕ್ತಿಯಲ್ಲಿ ಕಡಮೆಯಾದುದು. ದೇಹದಾರ್ಢ್ಯದಲ್ಲಿ ಪ್ರಸಿದ್ಧಗಳಾದ ಎತ್ತು, ಕುದುರೆ, ಸಾರಂಗ, ಆನೆ, ಜಿಂಕೆ, ಇವೆಲ್ಲವು ಶಾಕಾಹಾರದಿಂದಲೇ ಜೀವಿಸುತ್ತವೆ.

ರಷಿಯಾ ಸಂಸ್ಥಾನದಲ್ಲಿ ಚಕ್ರವರ್ತಿಯವರ ಕುಟುಂಬಕ್ಕೆ ಸೇರಿದವರು ಯಾರಾದರು ಒಂದು ಸಂವತ್ಸರದಲ್ಲಿ ನಾಲ್ಕು ತಿಂಗಳಿಗಿಂತಲು ಅಧಿಕವಾಗಿ ಸ್ವದೇಶವಂಬಿಟ್ಟು ಪರಸ್ಥಳಗಳಲ್ಲಿರುವದಾದರೆ ಅಂತವರಿಗೆ ಅರಮನೆಯಿಂದ ಕೊಡಲ್ಪಡುವ ಸಂಬಳವು ಬಹಳ ಕಡಮೆಮಾಡಲ್ಪಡುವುದು ಅಲ್ಲಿನ ವಾಡಿಕೆಯಾಗಿರುತ್ತದೆ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಆಫೀಸಿನವರು ಇಂಡ್ಯಾದೇಶದ ಉತ್ಪತ್ತಿಯನ್ನು ಅಳೆಯಲು ತಲೆದಾರೆಯೆಂದು ಅಲಹಾಬಾದ್ ಮಾರ್ನಿಂಗ್‌ಪೋಸ್ಟೆಂಬ ಪತ್ರಿಕೆಯು ತಿಳಿಸುತ್ತದೆ. ಇಂಡ್ಯಾದೇಶದ ಕಂದಾಯ ದಾರರು ಕೊಡುವ ಹಣವನ್ನು ಅಧಿಕಪಡಿಸುವದಕ್ಕಾಗಿ ಕಲ್ಪಿಸಲ್ಪಟ್ಟಿರುವ ಬಹುವಿಧ ಉಪಾಯಗಳಲ್ಲಿದೂ ಒಂದಾಗಿರುತ್ತದೆ.

ಚೀನಾದೇಶದೊಳು ಒಂದುಬಗೆ ಅಂಟುರೋಗದ ದೆಸೆಯಿಂದ ಅನೇಕರು ಮೃತಪಟ್ಟಿರುವರು, ಅಫೀಂ ತಿನ್ನುವಂತವರು, ಮತ್ತು ಗಾಂಜಾ ಸೇದುವಂತವರ ಪೈಕಿ ಒಬ್ಬರಿಗಾದರು ಸದರೀರೋಗವು ತಗಲಿ ವ್ಯಸನಪಡಲಿಲ್ಲವೆಂಬ ಪ್ರಸ್ತಾಪವಂ ಬೇಗಲು ಪಂಡಿತರಾದವರ ಸಹಾಯದೊಡನೆ ಕೆಲವರು ಸೇರಿ ಅದರ ನಿಜಸ್ಥಿತಿಯಂ ಪರಿಶೋಧಿಸುತಲಿರುವದಾಗಿ ಆ ದೇಶದ ಪತ್ರಿಕೆಯೊಂದು ತಿಳಿಸುತ್ತದೆ.

ಪಂಜಾಬ್ ದೇಶದ ಚೀಫ್‌ಕೋರ್ಟಿನ ಜಡ್ಜಿಗಳು ತಮ್ಮ ಕೋರ್ಟಿನಲ್ಲಿ ವಕೀಲರುಗಳನ್ನು ದಾಖಲುಮಾಡಿಕೊಳ್ಳುವವಿಷಯದಲ್ಲಿ, ಈಚೆಗೆ ಒಂದು ನಿಬಂಧನೆಯಂ ಮಾಡಿರುತ್ತಾರೆ. ಅಲ್ಲಿನ ಚೀಫ್ ಕೋರ್ಟಿನಲ್ಲಿ ಮೊಕದ್ದಮೆಗಳಂ ನಡೆಸುವದಕ್ಕೆ ಇಷ್ಟಪಡುವ ಬ್ಯಾರಿಸ್ಟರುಗಳು ಕೆಳಕೋರ್ಟುಗಳಲ್ಲಿ ಆರು ತಿಂಗಳ ಕಾಲ ವಕೀಲರಾಗಿದ್ದ ಹೊರತು ಚೀಫ್ ಕೋರ್ಟಿನಲ್ಲಿ ಅಂಗೀಕರಿಸಲ್ಪಡಲಾರರೆಂಬ ನಿಬಂಧನೆ ಕ್ರಮಮಾಡಲ್ಪಟ್ಟಿದೆ.

ಸಿಲೋನ್‌ದ್ವೀಪದ ಸುಪ್ರೀಂಕೋರ್ಟ್ ಚೀಫ್ ಜಸ್ಟಿಸರವರು ಈಚೆಗೆ ಅಲ್ಲಿನ ಕೋರ್ಟುಗಳ ಮೇಲ್ವಿಚಾರಣೆಯಬಗ್ಗೆ ಸರಕ್ಯೂಟ್ ಹೋಗಿದ್ದ ಸಂದರ್ಭದೊಳು ಯಾವದೊ ಒಂದು ಕೋರ್ಟಿನಲ್ಲಿ ಯಾವನೊ ಒಬ್ಬ ಅಧಿಕಾರಿಯು ನ್ಯೂಸ್‌ಪೇಪರ್ ಓದುತಲಿದ್ದದುಕಂಡು, ಕೋರ್ಟನ್ನು ರೀಡಿಂಗ್‌ರೂಮಿನಂತೆ ಎಣಿಸಿ ಅಲ್ಲಿ ನ್ಯೂಸ್‌ಪೇಪರ್ ಓದುತ ಕುಳಿತುಕೊಳ್ಳುವದು ಅಕ್ರಮವೆಂದು ಹೇಳಿ ಹೊರಟು ಹೋದರಂತೆ.

ಇಂಡ್ಯಾದೇಶದ ಅನೇಕ ಔಷಧಿಗಳಲ್ಲಿರುವ ಸುಗುಣಗಳು ಪೂರ್ಣವಾಗಿ ಯಾರಿಗೂ ತಿಳಿದಿರುವದಿಲ್ಲವು. ದೀರ್ಘಕಾಲಿಕವಾದ ಒಂದು ಚರ್ಮಗತ ರೋಗದ ವಿಷಯದಲ್ಲಿ ಮಾಡಲ್ಪಟ್ಟ ಬಹುವಿಧ ಚಿಕಿತ್ಸೆಗಳು ಫಲಕಾರಿಗಳಲ್ಲದೆ ಹೋಗಿ, ಕಡೆಗೆ, ಸಾಮಾನ್ಯವಾಗಿ ಸಿಕ್ಕತಕ್ಕ ಮದಾರ ಎಂಬ ಗಿಡದ ಸೊಪ್ಪನ್ನು ಅರೆದು ಪೌಲ್ಟಿಸ್ ಕಟ್ಟುವದರ ಮೂಲಕ ಕೆಲವು ದಿವಸಗಳಲ್ಲೇ ಸದರೀರೋಗವು ನಿಶ್ಶೇಷವಾಗಿ ಪರಿಹಾರವಾಯಿತೆಂದು ಇಂಗ್ಲಿಷಡಾಕ್ಟರೊಬ್ಬರು ಒಂದುಪತ್ರಿಕೆಗೆ ಬರೆದಿರುತ್ತಾರೆ.

ಮಹಾರಾಜ್ಞೀಯವರ ವಿಂಡಸರ್ ಕ್ಯಾಸಲ್ ಎಂಬ ಅರಮನೆಯಲ್ಲಿ ಸಿಂಹಾಸನವನ್ನಿಟ್ಟಿರುವ ಕೊಠಡಿಯ ಅಲಂಕಾರಾರ್ಥ ಆಗ್ರಾ ಜೈಲಿನ ಖೈದಿಗಳು ಅತಿ ಶ್ರೇಷ್ಠವಾದ ಒಂದು ರತ್ನಕಂಬಳಿಯನ್ನು ತಯಾರುಮಾಡುವದಕ್ಕೆ ಪ್ರಾರಂಭಿಸಿ, ಅದರ ಕೆಲಸ ಈಚೆಗೆ ಪೂರ್ತಿಯಾಗಿದೆ. ಅದರ ಕ್ರಯ ೬,೦೦೦ ರೂಪಾಯಿಗಳು. ಅದರ ಮಧ್ಯಭಾಗವು ಕೆಂಪುಬಣ್ಣವುಳ್ಳದ್ದಾಗಿಯೂ, ಅಂಚುಗಳು ಎಲೆ ಹಸರುಬಣ್ಣವುಳ್ಳದ್ದಾಗಿಯೂ ಇದೆ. ಅದರ ಅಳತೆ ನಾಲ್ವತ್ತಡಿ ಅಗಲವೂ ಎಂಬತ್ತಡಿ ಉದ್ದವೂ ಇದೆ.

ಈಚೆಗೆ ಮದರಾಸ್ ಸ್ಮಾಲ್‌ಕಾಸ್ ಕೋರ್ಟ್ ಚೀಫ್ ಜಡ್ಜಿಯಾಗಿ ಮೊಕರರ್ಮಾಡಲ್ಪಟ್ಟ ಬ್ಯಾರಿಸ್ಟರ್ ಮಿ. ಆರ್. ಬಿ. ಮಿಚೇಲಿಯವರು ಈ ತಿಂಗಳ ೯ ನೇ ತಾರೀಖ್ ಸೋಮವಾರದ ದಿನ ಚೀಫ್ ಜಡ್ಜಿ ಕೆಲಸದ ಚಾರ್ಜನ್ನು ಆಕ್ಟಿಂಗ್ ಚೀಫ್ ಜಡ್ಜಿಯಾದ ಬ್ಯಾರಿಸ್ಟರ್ ಮೆ|| ಎನ್. ಸುಬ್ರಹ್ಮಣ್ಯಂ ಯವರಿಂದ ತೆಗೆದುಕೊಂಡರು. ಪ್ರಸಕ್ತ ಅಧಿಕಾರಕ್ಕೆ ಮೆ|| ಸುಬ್ರಹ್ಮಣ್ಯಂಯವರಿಗುಂಟಾಗಿದ್ದ ಬಾಧ್ಯತೆಯನ್ನುಪೇಕ್ಷಿಸಿ ಮೆ|| ಮಿಚೇಲಿ ಯವರನ್ನು ಮೊಕರರ್ಮಾಡಿದ ವಿಷಯದಲ್ಲಿ ಪ್ರಕಟಿಸಲ್ಪಟ್ಟ ಆಕ್ಷೇಪಣೆಗಳೆಲ್ಲವು ಇದರೊಡನೆ ಪರಿಸಮಾಪ್ತಿಯಂ ಹೊಂದಿದವೆಂದು ಭಾವಿಸಬೇಕಾಗಿದೆ.

ತಿರುವಾಂಕೂರಲ್ಲಿ ಪ್ರಕಟಿಸಲ್ಪಡುತಲಿರುವ ವೆಸ್ಟರ್ನ್ ಸ್ಟಾರ್ ಎಂಬ ಪತ್ರಿಕೆಗೆ ವರ್ತಮಾನ ಬಂದಿರುವದಾಗಿ ಅದು ತಿಳಿಸುವದೇನೆಂದರೆ :— ಒಂದು ವಾರದ ಹಿಂದೆ, ಇಲ್ಲಿಗೆ ಸಮೀಪದಲ್ಲಿರುವ ಒಂದು ಊರೊಳು ಒಂದು ಶೂದ್ರನ ಮನೆಯಲ್ಲಿ ಒಂದು ಆಶ್ಚರ್ಯಕರವಾದ ಕಾರ್ಯ ನಡೆದಿರುತ್ತದೆ. ಸದರೀ ಮನೆಯ ಅಂಗಳದಲ್ಲೂ ಛಾವಣಿಯಮೇಲೂ ನಾಲ್ಕುದಿಕ್ಕುಗಳಿಂದಲೂ ಕಲ್ಲುಗಳು ಬಂದು ಬೀಳುತಿವೆ. ಅದಕ್ಕುಂಟಾದ ಕಾರಣವನ್ನು ಕಂಡುಹಿಡಿಯಬೇಕೆಂದು ಎಷ್ಟು ಜಾಗರೂಕತೆಯೊಡನೆ ತಾವು ನೋಡಿದಾಗ್ಯೂ ತಿಳಿಯಬರಲಿಲ್ಲವು. ಒಲೆಯಮೇಲಿಟ್ಟಿರುವ ಪಾತ್ರೆಗಳಲ್ಲಿ ಅಮೇಧ್ಯ ಬಂದು ಬಿದ್ದಿರುತ್ತದೆ. ದೊಡ್ಡಿಯಲ್ಲಿ ಕಟ್ಟಲ್ಪಟ್ಟಿರುವ ದನಗಳು ಬಿಚ್ಚಿ ಬಿಡಲ್ಪಟ್ಟಿರುತ್ತವೆ. ಕೆಲವು ದನಗಳ ಕಾಲ್ಗಳಿಗೆ ಹಗ್ಗಹಾಕಿ ಬಿಗಿದು ತಲೆಕೆಳಗಾಗಿ ಮೇಲ್ಗಡೆ ದಂಬಲಗಳಿಗೆ ಕಟ್ಟಲ್ಪಟ್ಟಿರುತ್ತವೆ. ಇದಕ್ಕೆ ಕಾರಣವನ್ನು ತಿಳಿಸುವದಕ್ಕೆ ಒಬ್ಬರೂ ಶಕ್ತರಾಗಿರಲಿಲ್ಲವು, ಎಂಬದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತವೃತ್ತಾಂತಗಳು.

ಕಡೂರು ಡಿಸ್ಟ್ರಿಕ್ಟ್ ಮೂಡಿಗೆರೆಯಲ್ಲಿ ಕಳೆದ ಜೂನ್ ತಿಂಗಳ ೧೬ನೇ ತಾರೀಖಿನಲ್ಲಿ ಪೋಸ್ಟಾಫೀಸ್ ಮತ್ತು ಟೆಲಿಗ್ರಾಫ್ ಆಫೀಸ್ ಯೋಜನ ಡಿಸಲ್ಪಟ್ಟಿತು.

ಇಲ್ಲಿನ ಚೀಫ್‌ಕೋರ್ಟಿನ ರಿಜಿಸ್ಟ್ರಾರಾಗಿ ಕೆಲಸನೋಡುತಲಿರುವ ಮೆ|| ಎಸ್. ಆರ್. ಸುಬ್ಬರಾಯ ಅಯ್ಯರವರು ಮುಗಾಮಿಷ ತರೀಖ್ ಶಿವಮೊಗ್ಗಾ ಸಬಾರ್ಡಿನೇಟ್ ಜಡ್ಜಿಯವರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಪ್ರಾಯಶಃ ಕಳೆದ ವಾರದಲ್ಲೆಲ್ಲ ಯಾವಾಗಲೂ ಮೋಡ ಮುಚ್ಚಿಕೊಂಡು ಆಗಿಂದಾಗ್ಗೆ ತುಂತುರು ಮಳೆ ಬೀಳುತಲಿತ್ತು. ಶನಿವಾರದದಿನ ಮಾತ್ರ ಸುಮಾರು ಒಂದು ಹದ ಮಳೆ ಬಿತ್ತು. ಆಹಾರ ಪದಾರ್ಥಗಳ ಧಾರಣೆಗಳ ವಿಷಯದಲ್ಲಿ ಅಧಿಕಾಂತರವೇನೂ ಇಲ್ಲವು. ಎಲ್ಲವೂ ಒಂದೇ ವಿಧವಾಗಿವೆ. ರೋಗ ಬಾಧೆಗಳ್ಯಾವವೂ ಇಲ್ಲವು. ನೀರು ಸಿಕ್ಕುತಿವೆ, ಪರಂತು ಅದರ ಸಮೃದ್ಧಿ ಇಲ್ಲವು.

ಕಡೂರ್ ಡಿಸ್ಟ್ರಿಕ್ಟ್ ಎಗ್ಜಿಕ್ಯೂಟಿವ್ ಇಂಜನಿಯರಾಗಿದ್ದ ಮೆ|| ಎ. ಗೋವಿಂದಾಚಾರ್ಲು ಎಂಬವರಮೇಲೆ ತರಲ್ಪಟ್ಟ ಮೊಕದ್ದಮೆಯಲ್ಲಿ ಅವರಮೇಲೆ ಪೂರಾ ತಪ್ಪು ಸ್ಥಾಪಿತವಾಗಿ ಸರ್ಕಾರ್ ನೌಕರಿಯಿಂದ ಡಿಸ್ಮಿಸ್ ಮಾಡಲ್ಪಟ್ಟದ್ದರಿಂದ ಅವರ ಕೆಲಸಕ್ಕೆ ಮೆ|| ಸಿ. ಎ. ಮಹದೇವಶಾಸ್ತ್ರಿಯವರು ಬರ್ತಿ ಮಾಡಲ್ಪಟ್ಟಿರುವದಾಗಿ ಕಳೆದವಾರದ ಮೈಸೂರು ಗಜೆಟಿನಲ್ಲಿ ಫಾಯಿಷ್ ಮಾಡಲ್ಪಟ್ಟಿದೆ. ಮೆ|| ಗೋವಿಂದಾಚಾರ್ಲು ಯವರ ಮೇಲೆ ತರಲ್ಪಟ್ಟ ಮೊಕದ್ದಮೆಯ ಸ್ವರೂಪವು ಅವರ ವಿಷಯದಲ್ಲಿ ಗವರ್ನಮೆಂಟಿನವರು ಮಾಡಿದ ಪ್ರೊಸೀಡಿಂಗ್ಸಿನ ಮೂಲಕ ಹೊರಗಾಗಿರುವ ಪಕ್ಷಕ್ಕೆ, ಅದು, ಅವರಂತೆ ವರ್ತಿಸುತಲಿರುವ ಅಧಿಕಾರಿಗಳು ಇನ್ನು ಅನೇಕರು ನೌಕರಿಯಲ್ಲಿ ಇರಬಹುದಾಗಿ ಅಂತವರಿಗೆಲ್ಲ ಒಂದು ನಿದರ್ಶನ ರೂಪವಾಗಿರುವುದು.

ಈ ಸಂಸ್ಥಾನದ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಇದರಡಿ ತಿಳಿಸಲ್ಪಟ್ಟಿರುವ ಬಡ್ತಿಗಳು ಮಾಡಲ್ಪಟ್ಟಿರುತ್ತವೆ :—

ಮೈಸೂರ್ ಡಿವಿಜನ್ ಅಪ್ರೆಂಟಿಸ್ ಇಂಜನಿಯರಾದ ಮೆ|| ವಿ. ಅಯ್ಯಾಸ್ವಾಮಿ ಅಯ್ಯರವರು ೧೫೦ ರೂಪಾಯಿಗಳ ತಲಬಿನಿಂದ ೨೦೦ ರೂ|| ತಲಬಿನಮೇಲೆ ಕಾಯಮಾಗಿ ೩ ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ ಕೆಲಸಕ್ಕೆ.

ಮೈಸೂರ ಮ್ಯುನಿಸಿಪಾಲಿಟಿಯ ಅಪ್ರೆಂಟಿಸ್ ಇಂಜನಿಯರಾದ ಮೆ|| ಆರ್. ವಿ. ಸುಂದರಂ ಅಯ್ಯರವರು ೧೫೦ ರೂ|| ತಲಬಿನಿಂದ ೨೦೦ ರೂ|| ತಲಬಿನಮೇಲೆ ಕಾಯಮಾಗಿ ೩ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ ಕೆಲಸಕ್ಕೆ.

ಹಾಸನಡಿವಿಜನ್ ಅಪ್ರೆಂಟಿಸ ಇಂಜನಿಯರ್ ಮೆ|| ಟಿ. ಎಸ್. ಶೇಷಯ್ಯಂಗಾರ್ಯರವರು ೧೫೦ ರೂಪಾಯಿಗಳ ತಲಬಿನಿಂದ ಅದೇ ತಲಬಿನಮೇಲೆ ಕಾಯಮಾಗಿ ೧ ನೇ ಗ್ರೇಡ್ ಸಬ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ.

ಕೋಲಾರ್ ಡಿವಿಜನ್ ಫಸ್ಟ್‌ಗ್ರೇಡ್ ಓವರ್ಸೀಯರ್ ಮೆ|| ಟಿ. ಬಿ. ಗರುಡಾಚಾರ್ಯ ೧೦೦ರೂ|| ತಲಬಿನಲ್ಲೇ ೨ನೇ ಗ್ರೇಡ್ ಸಬ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ.

ಮೈಸೂರ್‌ಡಿವಿಜನ್ ಫಸ್ಟ್‌ಗ್ರೇಡ್ ಓವರ್ಸೀಯರ್ ಮೆ|| ಬಿ. ಆರ್. ಶ್ರೀನಿವಾಸಯ್ಯಂಗಾರ್ಯರವರು ೧೦೦ ರೂಪಾಯಿಗಳ ತಲಬಿನಲ್ಲೇ ೨ನೇ ಗ್ರೇಡ್ ಸಬ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ.

ಸ್ಯಾನಿಟರಿ ಇಂಜನಿಯರ್ ಡಿವಿಜನ್ ೧ನೇ ಗ್ರೇಡ್ ಓವರ್ಸೀಯರ್ ಮೆ|| ಸಾಂಭಮೂರ್ತಿ ಮೊದಲಿಯಾರ್ಯವರು ಮೇಲಿನವರಂತೆಯೇ.

ಮೈಸೂರ್ ಡಿವಿಜನ್ ಫಸ್ಟ್ ಗ್ರೇಡ್ ಓವರ್ಸೀಯರ್ ಮೆ|| ಎಸ್. ಎನ್. ಮುಗ್ಗಪ್ಪಯ್ಯನವರು ಮೇಲೆ ತಿಳಿಸಿದಂತೆಯೇ.

ಕಡೂರು ಡಿವಿಜನ್ ೨ನೇ ಗ್ರೇಡ್ ಓವರ್ಸೀಯರ್ ಮೆ|| ಸಿ. ಕೃಷ್ಣಯ್ಯಂಗಾರ್ಯರವರು ೭೦ ರೂಪಾಯಿಗಳ ತಲಬಿನಲ್ಲೇ ೩ನೇ ಗ್ರೇಡ್ ಸಬ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ.

ಹಾಸನ ಡಿವಿಜನ್ ೨ನೇ ಗ್ರೇಡ್ ಓವರ್ಸೀಯರ್ ಮೆ|| ಕೆ. ಅನಂತಾಚಾರ್ಯರವರು ೭೦ ರೂಪಾಯಿಗಳ ತಲಬಿನಲ್ಲೇ ೩ನೇ ಗ್ರೇಡ್ ಸಬ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ.

ಹಾಸನ ಡಿವಿಜನ್ ೨ನೇಗ್ರೇಡ್ ಓವರ್ಸೀಯರ್ ಮೆ|| ಕಂಠ ಪೊನ್ನಪ್ಪನವರು ೭೦ ರೂ|| ತಲಬಿನಲ್ಲೇ ೩ನೇ ಗ್ರೇಡ್ ಸಬ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ.

ಮೈಸೂರ್ ಡಿವಿಜನ್ ೩ನೇ ಗ್ರೇಡ್ ಓವರ್ಸೀಯರ್ ಮೆಸ್ಸರ್ ಟಿ. ಜಿ. ಲಕ್ಷ್ಮಣಾಚಾರ್ಯರು ೬೦ ರೂಪಾಯಿ ತಲಬಿನಲ್ಲೇ ೩ನೇ ಗ್ರೇಡ್ ಸಬ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ.

ಹೆಸರುಘಟ್ಟದ ವಾಟರ್ ವರ್ಕ್ಸ್ ಡಿವಿಜನ್ ಹಂಗಾಮಿ ೩ನೆ ಗ್ರೇಡ್ ಓವರ್ಸೀಯರ್ ಮೆ|| ಟಿ. ಗರುಡಾಚಾರ್ಯ ೬೦ ರೂಪಾಯಿನ ತಲಬಿನಲ್ಲೇ ೩ ನೇ ಗ್ರೇಡ್ ಸಬ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ.

THE MONEY MARKET.

Stocks, Shares and Exchange.

ಮದರಾಸ್, ಶನಿವಾರ, ತಾರೀಖ್ 7ನೇ ಜುಲೈ 1894.

ಸೇಕಡ ೪ರೂ. ಬಾಬತು ಇಂಡ್ಯಾಗವರ್ನಮೆಂಟ್ ಪತ್ರಗಳ 103–4–0 ರೂ. ಗಳಿಂದ 104–0–0 ರೂ.ವರೆಗೆ

ಸೇಕಡ ಮೂರುವರೆ ರೂ. ಬಾಬತು, ಗವರ್ನಮೆಂಟ್ ಪತ್ರಗಳು, 102–12–0ರೂ.ಗಳಿಂದ 103–4–0ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 1,005–0–0ರೂ.ಗಳಿಂದ 1,010–0–0ವರೆಗೆ

ಕಮರ್ಷಿಯಲ್ ಅ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಷೇರುಗಳು, (100ರೂ.) ಬಾಬತು 150–0–0ರೂ ಗಳಿಂದ 155–0–0 ರೂ ವರೆಗೆ.

ಸವರನ್‌ಗಳು, ದರ 1 ಕ್ಕೆ 18–4–0 ರೂಪಾಯಿಗಳಿಂದ 18–10–0 ರೂ ವರೆಗೆ.

ಲಂಡನ್ ಬ್ಯಾಂಕಿನ ಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಯೆಂಬ ದರ್ಶನ ಹುಂಡಿಗಳು :—

6 ತಿಂಗಳ ವಾಯಿದೆಗೆ ...1 s. 0 27/32d.
4 „ ...1 s. 0 13/16 d.
ಕೇಳಿದಾಗ ಕೊಡಲ್ಪಡುವವಕ್ಕೆ ...1 s. 0 7/8 d.

ನಮ್ಮಗಳಿಗೆ ಬರತಕ್ಕ ಜಾಡ್ಯಗಳು ಎಂತಾವು.

ರಾತ್ರಿಯಲ್ಲಿ ಕಳ್ಳನಂತೆ ನಮ್ಮಗಳಿಗೆ ತಿಳಿಯದಹಾಗೆ ಜಾಡ್ಯಗಳು ನಮ್ಮಲ್ಲಿ ಪ್ರವೇಶ ಮಾಡುತವೆ. ಸಾಧಾರಣ ವಾಗಿ ಮನುಷ್ಯಕೋಟಿಗಳಿಗೆ ಎಡೆಯಲ್ಲಿ, ವರ್ಷಗಳಲ್ಲಿ ಕಾಲಗಳು ಕಾಣುತವೆ. ಆ ಕಾಲಗಳಲ್ಲಿ ಜನರು ಸಾಧಾರ ಣವಾಗಿ ಮಂದವಾಗಿ ವಿಶ್ರಾಂತವಾಗಿ ಬಾಯಲ್ಲಿ ಒಂದು ವಿಧ ರುಚಿಯು, ಇವುಗಳು ಪತ್ರಿಯಾಕ ಉದಯಕಾಲದಲ್ಲಿರುತವೆ, ಆಗ, ದಂತಗಳಲ್ಲಿ ಪಾಚಿ ಅಂಟು ನುಡ್ತು ಕಟ್ಟಿಕೊಂಡು ಉರುತದೆ. ಆ ಸಮಯಗಳಲ್ಲಿ ಆಹಾರವು ಕಮ್ಮಿ, ಗರ್ಭದಲ್ಲಿ ಒಂದು ಬಗೆ ಮಂದತ್ವ, ಕೆಲವು ವೇಳೆಗಳಲ್ಲಿ ವ್ಯಾಕುಲ, ನನ್ನದ ಅಸ್ತಿಭಾರದಲ್ಲಿ ಶೂಲೆ, ಭೋಜನದಲ್ಲಿ ಅಪ್ರೀತಿಯು, ಕಣ್ಣು ಗಳು ಆಳಕ್ಕೆ ಎಳೆದಂತಾಗುವದು, ಕೈ ಕಾಲುಗಳು ಹಿಡಿಗಳು ಕೀತವವು. ಆ ವೇಳೆ ಕೆಮ್ಮು ಆರಂಭಿಸಿ ಸ್ವಲ್ಪ ತಿಂಗಳಾದನಂತರ ಆ ಕೆಮ್ಮಿನಿಂದ ಬಾಯಲ್ಲಿ ಹಳದಿವರ್ಣದ ಗಳ್ಳೆಯ ಕೀವು ಬೀಳುವದು. ಇತ್ಯಾದಿ ಕಾರಣಗಳಿಂದ ಜಾಡ್ಯಗ್ರಸ್ತನು ಪಕ್ವವಾದ ಆಹಾರವನ್ನು ಬೇಕೆಂದು, ನಿದ್ರಾಭಂಗವೆ, ಆಕಾರಣದಿಂದ ಬಾಹ್ಯಗ್ರಸ್ತರಿಗೆ ಒಂದು ಬಗೆ ಚಿತ್ತದ ಕ್ಲೇಶವು, ಮೆಚ್ಚಿನ ಮನಶ್ಶಾಂತಿ, ಕೆಟ್ಟ ವ್ಯಸನವನ್ನೂ ಚಿಂತೆ ಉಂಟು ಮಾಡುತದೆ. ಹಿಂದುಗಳಾಗೆ ತಲೆಯಲ್ಲಿ ವಿಶೇಷ ವೈಕಲ್ಯವಾದ ತಿರುಗಾಟ, ಅಕಸ್ಮಾತ್ತಾಗಿ ಮೂರ್ಛೆ ಕಾಲದಲ್ಲಿ ಕಾಣುತವೆ. ಆ ತರುವಾಯ ಗರ್ಭದಲ್ಲಿ ಕೆಲವುಗಳು ಬೆಳೆದು, ಹುಳುಬಿದ್ದು ಸೂತಿ, ಶರೀರದ ಚರ್ಮವನ್ನು ಒಣಗಿಸಿ, ಉಬ್ಬಸವು, ರಕ್ತವನ್ನು ಮುದಗಾಡಿ, ಶರೀರದಲ್ಲಿ ಸೊಪ್ಪಿಗೆ ರಕ್ತವು ಓಡದೆ, ಕಣ್ಣುಗಳಲ್ಲಿರುವ ಸಾಧಾರಣವಾದ ಬಿಳುಪನ್ನು ಕಮ್ಮಿ ಮಾಡಿ, ಕಣ್ಣುಗಳ ಹುಬ್ಬು ಚುಕ್ಕೆಗಳು, ಅಲ್ಲಾ ಬಣ್ಣವು ಕೆಂಪು ಇಲ್ಲ ಕಪ್ಪಾಗಿ, ಅದಲ್ಲಿ ವಿಶೇಷವಾದ ಬಣ್ಣ, ಸಾಧಾರಣವಾಗಿ ಮೂತ್ರವು ಹರದ ಕತೆ ಯಿಂದ ಅದಗಳು ನಿರಿ ಮೂತ್ರವನ್ನು ಕಲ್ಲಿನಂಗೆ ಹೋದ ಹೊಂದುತಲೆ. ಆ ಕಾರಣದಿಂದ ಜೀರ್ಣಿಸಿದ ಅನ್ನವನ್ನು ಉಂಡುಕೊಂಡು, ಜೀರ್ಣಿಸದ ಅನ್ನವು ಬಾಯಲ್ಲಿ ಕೆಟ್ಟ ಹುಳಿ ಯಾಗದಿದ್ದು, ಮತ್ತು ಎದೆಯಲ್ಲಿ ಉರಿ, ಕಣ್ಣು ದೃಷ್ಟಿ ಬತ್ತುವು, ಕಣ್ಣುಗಳಲ್ಲಿ ಮಚ್ಚೆಗಳು, ವಿಶೇಷವಾಗಿ ಶರೀರದಲ್ಲಿ ಬಲವು ಕಡಿಮೆ ಇತ್ಯಾದಿ ಬೇನೆಗಳುಂಟಾಗುತ್ತ ಕ್ರಮೇಣ ಕಾಣುತವೆ. ಈ ಜಾಡ್ಯದ ಬೇನೆಗಳು ಅನೇಕವಿಧವಾಗಿ ಮನುಷ್ಯರಿಗೆ ಜನಕೋಟಿಗೆ ಸಂಪರಿವಿಧವಾಗಿ ಕಾಣುತವೆ. ಈ ಜಾಡ್ಯಗಳನ್ನು ವೈದ್ಯಶಾಸ್ತ್ರಗಳು ನೆಟ್ಟಗೆ ಪರೀಕ್ಷಿಸದೆ ನೋಡಿಲಿಕ್ಕೆ ಆಗದ ಒಂದು ವಿಧವಾದ ಜಾಡ್ಯಕ್ಕೆ ಮತ್ತೊಂದು ವಿಧ ಚಿಕಿತ್ಸೆ ಮಾಡುವ, ಇತ್ಯಾದಿ ಕಾರಣಗಳಿಂದ ಈ ಜಾಡ್ಯಗಳು ಸ್ವಸ್ಥವಾಗದೆ ಹಾಗೆ ಇರುತವೆ. ಇತ್ಯಾದಿ ಜಾಡ್ಯಗಳಿಗೆ ಸಮರ್ಪಕವಾದ ಔಷಧವು ಗರ್ಭದಲ್ಲಿ ಚಿಕಿತ್ಸೆ ಮಾಡಿದ ಪಕ್ಷದಲ್ಲಿ ಇವುಗಳನ್ನು ಸ್ವಸ್ಥ ಮಾಡುತವೆ. ವ್ಯಾಧಿ ಸಾಧಾರಣವಾಗಿ ಅಜೀರ್ಣವ್ಯಾಧಿಗೆ ತಕ್ಕ ಚಿಕಿತ್ಸೆ ಮಾಡದಿದ್ದಾಗ ಮತ್ತೊಂದು ವಿಧವಾದ ಚಿಕಿತ್ಸೆ ಮಾಡುವದರಿಂದ ಈ ರೀತಿಯಿಂದ ಜಾಡ್ಯಗಳು ಸ್ವಸ್ಥವಾಗದೆ ಇರುತವೆ.

ಮುಂದೆ ವಿವರಿಸಿ ಮಾಡಿದ ಜಾಡ್ಯಗಳನ್ನು ನಿವಾರಣೆ ಮಾಡಿ ಶಾಂತಿ ಮಾಡತಕ್ಕ ಔಷಧವು ತಾಯಿಕೇಗಿಲು ಕಷಾಯವು. ಈ ಕಷಾಯವನ್ನು ಕ್ರಮವಾಗಿ ಸೇವನೆ ಮಾಡುವದರಿಂದ ಜಾಡ್ಯಗ್ರಸ್ತರನ್ನು ಯುಕ್ತವಾಗಿ ಮಂತ್ರದಂತೆ ಸಮಾಡುವ ಹೊಡಿ ಶರೀರಕ್ಕೆ ಬಲವನ್ನು ಕೊಟ್ಟು ಆರೋಗ್ಯವನ್ನು ಶೀಘ್ರವಾಗಿ ಸ್ವಸ್ಥ ಮಾಡುತದೆ.

ತಾಯಿ ಕೇಗಿಲು ಕಷಾಯ ಔಷಧವು ಕವಿಸ್ಸು ಅಂಡ್ ಕಂಪೆನಿಯ ಆಸ್ಪತ್ರಿ ಬಜಾರುಗಳಲ್ಲಿ ವಿಕ್ರಯಕ್ಕೆ ಸಿಕ್ಕುತದೆ.

W. D

SUMMARY OF NEWS.
ವೃತ್ತಾಂತ ಸಂಗ್ರಹವು.

ಚೀನಿ ಪಟ್ಟಣದಲ್ಲಿ ಮಕ್ಕಳಿಗೆ ಸ್ತನ್ಯಪಾನ ಮಾಡಿಸುವದ ಕ್ಕೋಸ್ಕರ ತಾಯಂದಿರಿಗೆ ಉಪದೇಶ ಮಾಡುವದೊಂದು ಸಭೆ ಯು ಸ್ಥಾಪನೆಯಾಗಿದೆ.

ಕಳೆದ ಭಾನುವಾರ ರಾತ್ರಿ ಅಲಹಾಬಾದಿನಲ್ಲಿ ವಿಪರೀತ ಮಳೆಯಾಗಿ ನಾನಾ ಮನೆಗಳೂ ಜೋಪಡಿಗಳೂ ಕೊಚ್ಚಿ ಕೊಂಡು ಹೋದವೆಂತಲೂ, ಅನೇಕರು ಮನೆ ಸಾಮಾನುಗಳ ನ್ನು ಕಳಕೊಂಡು ಅನಾಥರಾದರೆಂತಲೂ ಕೇಳುತ್ತೇವೆ—ವೃ.

ಸಿಂಧೂನದಿಗೆ ಹಾಕಿದ್ದೊಂದು ಬಂಧವು ಆಕಸ್ಮಿಕವಾಗಿ ಬಹಳ ನೀರು ಬಂದು ಬಿದ್ದದರಿಂದ ಕಳೆದು ಹೋಗಿರುವ ಹಳ್ಳಿಗಳ ಹೊಲ್ಲೇ ನೀರೊಳಗೆ ಮುಳುಗಿ ಅನರ್ಥವಾಯಿತು. ಬಂಧದ ಭೇದವನ್ನು ಕಟ್ಟುವ ಪ್ರಯತ್ನ ನಡೆದಿದೆ. ಯಾರ್ಯಾರಾದರೂ ಸತ್ತರೋ ಯಾವುದು ಕೆಟ್ಟಿತೋ ಇನ್ನೂ ತಿಳಿಯಲಿಲ್ಲ-ಕ.ಪ.

ಜನರು ಕತ್ತಲೆ ಮನೆಯಲ್ಲಿ ಮಲಗಿಕೊಂಡಾಗಲೇ ಅವರಿಗೆ ಸುಖನಿದ್ರೆ ಬರುವದೆಂತಲೂ, ಬೆಳಕಿರುವ ಕೋಣೆಯಲ್ಲಿ ಮಲಗುವವರ ನಿದ್ರೆ ಒಂದುಗತ್ತು ಅದು ಆರೋಗ್ಯಕರವಾದ ದಾಗಿರುವದಿಲ್ಲವೆಂತಲೂ ಒಬ್ಬ ಫ್ರೆಂಚ್ ಶಾಸ್ತ್ರಜ್ಞನು ತಿಳಿಸುತ್ತಾನೆ ವೃ. ಪ.

ಬ್ರಿಟಿಷ್ ರಾಜ್ಯದಲ್ಲಿ ರೈಲುಗಳಲ್ಲಿ ಸಂಚಾರ ಮಾಡತಕ್ಕವರು ಅಗತ್ಯ ಗಾಡಿಯಲ್ಲಿ ಸಾಗಿಸುವುದು ಮಾತ್ರ ಹೋಗತಕ್ಕ ಸಾಮಾನುಗಳನ್ನು ವಶಪಡಿಸಿಕೊಂಡಾಗ ರೈಲ್ವೆ ಅಧಿಕಾರಿಗಳು ಜರಾಬ್ ಹಾಕಿಸುವದರಿಂದಲೇ ಅವರಿಗೆ ೫೦,೦೦೦ ರೂಪಾಯಿನ ವರೆಗೂ ಹುಟ್ಟುವದು ಆಗುತ್ತದಂತೆ—ವೃ. ಪ.

ಲಂಡನ್ ಪಟ್ಟಣದಲ್ಲಿ ದೊರೆಸಾನಿಗಳು ಸೇರಿ ಒಂದು ವರ್ತಮಾನ ಪತ್ರಿಕೆಯನ್ನು ಪ್ರತಿದಿನವೂ ಪ್ರಕಟಿಸಬೇಕೆಂದಿರುವರು. ಈ ಪತ್ರಿಕೆಗೆ ಬರೆಯುವವರೂ, ಅಚ್ಚು ಮೊಳೆ ಮೊದಲಾದವುಗಳನ್ನು ಜೋಡಿಸುವವರೂ, ಅಚ್ಚು ಹಾಕುವವರೂ ಜವಾನ ಕೆಲಸ ಮಾಡುವವರೂ ಎಲ್ಲರೂ ಹೆಂಗಸರೇ ಇರಬೇಕೆಂಬುವದು ಈ ಕೆಲಸಕ್ಕೆ ಪ್ರಯತ್ನ ಮಾಡಿರುವವರ ಉದ್ದೇಶವಂತೆ—ವೃ. ಚಿ.

ಐರೋಪ್ಯದಲ್ಲಿ ದರೋಡೆ ಮತ್ತು ಕಳವು ಮೊದಲಾದವುಗಳು ಬಹಳವಾಗಿ ಆಗುತ್ತ ನಡೆದಿವೆ. ಇಂತ ಪ್ರಸಂಗದಲ್ಲಿ ಮಹಾರಾಜರವರು ಪ್ರವಾಸದಲ್ಲಿ ಆರಾಮಪ್ರಕಾರ ಇರಲಿಕ್ಕಾಗದ ಮಾತು ಮಾಡುತಿದ್ದಾರೆ. ಪ್ರಜೆಗಳನ್ನು ಇಂತಾ ದುಃಖಕರವ ಸ್ಥಿತಿಯಲ್ಲಿ ಬಿಟ್ಟು, ಐಷ್ಟ ಆರಾಮಿನಿಂದ ಪ್ರವಾಸ ಮಾಡುತ್ತಾರೆ, ಅಂದವೇಲ ಮಹಾರಾಜರವರಿಗೆ ಪ್ರಜೆಗಳ ಕಾಳಜಿ ತಿಳಿವದಿತ್ತವಾದರೂ ಇರಲಿಕ್ಕಿಲ್ಲವೆಂದು ತೋರುತಿದೆ. ಇನ್ನಾದರೂ ಮಹಾರಾಜರವರು ಚನ್ನಾಗಿ ಪಾಲನ ಮಾಡುವರೆಂದು ಕೋರುತ್ತೇವೆ—ಸ. ವೃ.

ರಷ್ಯಾ ಪಟ್ಟಣದಲ್ಲಿ ಓಲ್ಗಾ ನದೀತೀರದಲ್ಲಿ ಒಂದು ಭಾಗದೊಳು ಮಹಾಷಕ ಬಾಧೆಯು ಬಹಳವಾಗಿದೆ. ಬಿಷ್ಟಗಳಲ್ಲಿ ಲಕ್ಷಾವಧಿ ಲಕ್ಷಗಳು ಒಂದೊಂದು ಗುಂಪು ಕೂಡಿಕೊಂಡು ಹೊರಟು, ಮನೆ ಮಠಗಳನ್ನೂ ಗದ್ದೆ ಹೊಲಗಳನ್ನೂ ನಾಶ ಮಾಡ ತೊಡಗಿವೆ. ಇದುವರೆಗೆ ೨೦—೩೦ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ. ಈ ಮಹಾಷಕ ಬಾಧೆಯನ್ನು ಪ್ರಜೆಗಳಿಗೆ ನಿವೃತ್ತಿ ಮಾಡುವದಕ್ಕಾಗಿ ಜಪ್ರಾಧಿಕಾರಿಗಳು ತಮ್ಮ ಚತುರಂಗ ಬಲವನ್ನು ಕಳುಹಿಸಿಕೊಟ್ಟಿದಾರೆ. ಇದು ಹೀಗಿರುವಲ್ಲಿ, ಪಿನು ಕಾರಣದಿಂದಲೊ ಪಕ್ಷಿಗಳು ಒಂದೊಂದು ಗ್ರಾಮದಿಂದ ಹೊರಟು, ಗ್ರಾಮದಲ್ಲಿ ಬಂದು ಬಿಡ್ಡಕ್ಕೆ ಇಳ್ಳ ದಂತೆ ಆಗಿ, ಎಲ್ಲಾ ಬಿಟ್ಟುಕೊಂಡಿ ಅದೊಂದು ಸೈನ್ಯವಾಗಿ, ಪೇರ ಬೆಟ್ಟನಿಂದ ಬಂದು ಕಡೆ ಜನಗಳಿಗೆ ಅವಾಂತರವನ್ನು ಪಟ್ಟಿದೊಡಗಿವೆ. ಈ ಯಾವು ಕಾಟವು ಸರಟೋವ್ ಮತ್ತು ಆಸ್ಟ್ರಾಖಾನ್ ಪ್ರಾಂತಗಳಲ್ಲಿ—ವೃ. ಚಿ

ಕಳೆದ ವರ್ಷದಲ್ಲಿ ಅಮೆರಿಕಾ ಖಂಡದ ಚಿಕಾಗೊ ಪಟ್ಟಣದಲ್ಲಿ ನಡೆದ ವಸ್ತು ಪ್ರದರ್ಶನೋತ್ಸವವನ್ನು ನೋಡುವದಕ್ಕಾಗಿ ಹೋಗುವವರನ್ನು ತೆಗೆದುಕೊಂಡು ಹೋಗುತಲಿದ್ದ ಒಂದು ಸ್ಪೆಷಲ್ ರೈಲ್‌ಗಾಡಿಯು ರಸ್ತೆಯಲ್ಲಿ ಒಂದು ದೊಡ್ಡ ಕಾಡು ಹತ್ತಿಕೊಂಡು ದಗಧಗನೆ ಉರಿಯುತಲಿತ್ತು. ಇದು ರೈಲ್ವೆ ಅಧಿಕಾರಿಗಳಿಗಾಗಲಿ, ಗಾಡಿಯಲ್ಲಿದ್ದವರಿಗಾಗಲಿ, ಯಾರಿಗೂ ತಿಳಿದಿರಲಿಲ್ಲ, ಗಾಡಿ ಸರ್ಪದ ಬಲ್ಲ ಬಾಲೆಯು ಆ ಮಾರ್ಗವಾಗಿ ಬುಲ್ಲಿಯೇ ಹೋಗುತ ಕಾಡು ಹತ್ತಿದ್ದನ್ನು ನೋಡಿ ಭಯಪಟ್ಟು, ಮುಂದೆ ಕೊಂಚ ದೂರದಲ್ಲಿ ಬರುವ ಸ್ಪೆಷಲ್ ಟ್ರೈನ್ ಆ ಊರಿಗೆ ಬರುವದ ಸಮಯವನ್ನು ತಿಳಿದುಕೊಂಡು, ಆ ರೈಲ್ ಮಾರ್ಗದಲ್ಲೇ ಹಿಂದಕ್ಕೆ ಹೋಗಿ, ತನ್ನ ಕೆಂಪು ಕಾವಚವನ್ನು ಕಿತ್ತು ಮುಂದೆ ಬರುವದರಿಂದ ಗಾಡಿಯನ್ನು ನಿಲ್ಲಿಸಬೇಕೆಂದು ತೋರುವಂತೆ, ಬಾವುಟವನ್ನು ಹಿಡಿದುಕೊಂಡು ಹಾರಿದ್ದಳು. ಇದನ್ನು ನೋಡಿ ಡ್ರೈವರು ಗಾಡಿಯನ್ನು ನಿಲ್ಲಿಸಿದನು. ಅದರೊಳಗಿದ್ದವರೆಲ್ಲರೂ ಆ ಹುಡುಗಿಯನ್ನು ಬಹಳವಾಗಿ ಕೊಂಡಾಡಿದರು. ಮತ್ತು ಅಲ್ಲಿ ಪ್ರಯಾಣ ಮಾಡುತಲಿದ್ದ ಕೆಲವರು ಫ್ರೆಂಚ್ ಅಧಿಕಾರಿಗಳು ಈ ವಿಷಯವನ್ನು ತಾವು ಸ್ವದೇಶಕ್ಕೆ ಹೋದನಂತರ ತಮ್ಮ ಪ್ರೆಸಿಡೆಂಟರಿಗೆ ಹೇಳಲು ಅವರು ಬಹಳ ಆಶ್ಚರ್ಯಯುಕ್ತರಾಗಿ, ಆ ತರುಣಿಗೆ ಬೆಲೆಬಾಳುವ ಬಹುಮಾನರೂಪವಾದ ಒಂದು ಮೆಡಲನ್ನು ಕೊಡಿಸಿದರು.

EXTRACTS.

ದಕ್ಷಿಣ ಕನಡಾ ಜಿಲ್ಲೆಯ ಕುಂದಾಪುರ ತಾಲ್ಲೂಕಿಗೆ ಸೇರಿದ ಶ್ರೀ ಕೊಲ್ಲೂರು ಮೂಕಾಂಬಿಕಾ ಅಮ್ಮನವರ ದೇವಸ್ಥಾನದಲ್ಲಿ ಕಳೆದ ಮೇ ತಿಂಗಳ ೧೩ನೇ ತಾರೀಖಿನ ರವಿವಾರ ರಾತ್ರಿ ಸುಮಾರು ೧೫ ದಿವಸಗಳ ಮೊದಲಿನಿಂದ ಆ ಊರಿನ ಸಮೀಪದಲ್ಲಿ ವಾಸ ಮಾಡಿಕೊಂಡಿದ್ದ ಕಳ್ಳರು ಪ್ರವೇಶಮಾಡಿ ಸುಮಾರು ಕೋಟ್ಯಂತರ ಮೌಲ್ಯ ಬಾಳುವ ಚಿನ್ನ ರತ್ನಾದಿ ಆಭರಣ ಮುಂತ ವಸ್ತುಗಳನ್ನು ಕಳವು ಮಾಡಿದರು. ಈ ಕೊಲ್ಲೂರು ಕ್ಷೇತ್ರವು ಮೈಸೂರು ನಗರ ಇತ್ಯಾದಿ ಹಿಂದೂ ಸಂಸ್ಥಾನಗಳಿಂದ ಪೂಜಿಸಲ್ಪಟ್ಟು ಅಪರಿಮಿತ ರತ್ನಾಭರಣಗಳಿಂದ ತುಂಬಲ್ಪಟ್ಟಿರುವ ಸಂಗತಿಯು ಜಗತ್ಪ್ರಸಿದ್ಧವಾಗಿರುತಿದೆಯಷ್ಟೆ.

ಈ ಕ್ಷೇತ್ರವು ಕಠಿಣ ಭೂತಾದಿಗಳ ಮಹತ್ಸ್ಥಾನವಾಗಿರುವದರಿಂದ ಈ ಭೂತಗಳಿಗೆ ಕಣ್ಣು ಕಟ್ಟುವ ವಿದ್ಯೆ ಬಲ್ಲ ಗಟ್ಟಿಗ ಮಂತ್ರವಾದಿಯು ಈ ಕಳ್ಳರಿಗೆ ಸಹಾಯಕನಾಗಿದ್ದನಂತೆ. ದೇವಸ್ಥಾನದಲ್ಲಿ ಪಹರೆಗೋಸ್ಕರ ಮಲಗಿರುತಲಿದ್ದ ೧೫ ಜನರ ಮೈಕೆ ಬಿದ್ದ ನಂತರ ಈ ಕಳ್ಳರು ತಮ್ಮ ಬಳಸಂಚಿಗೆ ತೆಗೆದುಕೊಂಡು ಬಾಕಿಯವರಿಗೆಲ್ಲ ಜಂಬೂರಿ ಚೆಂಬು ಮೋಹನಾಸ್ತ್ರವನ್ನು ಪ್ರಯೋಗಿಸಿ ಅವರ ತಲೆಯ ಕೆಳಗೆ ಬಂದಿಷ್ಟು ಬೂದಿಯನ್ನು ಒಂದೊಂದು ಮಂತ್ರಿಸಿದ ಕಣ್ಣೊ ಪಾಕಿಸ್ತ್ಲದೆ ದೇವಸ್ಥಾನದಲ್ಲಿ ಅಲ್ಲಲ್ಲಿ ನಾಯಿಗಳನ್ನೂ ಕೋಳಿಗಳನ್ನೂ ಕುಯಿದು ಬಲಿಕೊಟ್ಟ ಕುರುಹುಗಳು ತೋರುತಿದ್ದವು. ಈ ಕಳ್ಳರ ಪತ್ತೆಗೆ ಪ್ರಯತ್ನವು ಬಹಳ ಜಾಗ್ರತೆಯಿಂದ ನಡೆದಿರುತಿವೆ. ಬೇರೆ ಮೈಸೂರಿನ ಕಳ್ಳರು ಈಚಲ್ಲಿಯಲ್ಲಿ ಸಿಕ್ಕಿದಲ್ಲದೆ ತಂಜಾವೂರಿನಲ್ಲಿ ಇನ್ನೂ ಕಳ್ಳರುಕಳವಿನ ಮಾಲ್ ಸಹಿತ ಸಿಕ್ಕಿದರೆಂತ ತಂತಿ ಬಂದಿರುತಿದೆ—ಸು.

ಕಲಕತ್ತೆಯ "ಭಾರತಮಿತ್ರ" ಎಂಬ ಹಿಂದೀ ಪತ್ರದಲ್ಲಿ ಬಜಾರದೊಳಗಿನ ಚಮತ್ಕಾರಿಕ ಹಕೀಕತು ಪ್ರಸಿದ್ಧವಾಗಿದ್ದದ್ದೇನಂದರೆ—ಶಹಬಾದ್ ಜಿಲ್ಲೆಯೊಳಗಿನ ಒಂದು ಗ್ರಾಮದಲ್ಲಿ ಒಬ್ಬ ಒಕ್ಕಲಿಗನು ತಾನು ತನ್ನ ಸ್ನೇಹಿತನ ಸಂಗಡ ಅಕ್ಟೋಬರ್ ಹಗಲು ೬ ತಾಸು ಹೊತ್ತಿನಲ್ಲಿ ಹೊಲದೊಳಗೆ ರಂಟೆಯನ್ನು ಹೊಡೆಯುತ್ತಿರಲು ಇಷ್ಟರಲ್ಲಿ ವಿಕಟ ಒಂದು ಭಯಂಕರ ವೇಷದಾರಣನಾಗಿದ್ದ ಒಬ್ಬ ಪುರುಷನು ಅಲ್ಲಿ ಪ್ರತ್ಯಕ್ಷನಾಗಿ ಆ ಒಕ್ಕಲಿಗನಿಗೆ ಅಂದದ್ದು, ಎಲೇ ದುಷ್ಟಾ, ನೀನು ಮಹಾ ಮೂರ್ಖನಿರುವಿ? ಯಾಕಂದರೆ, ಯಾವ ಎತ್ತು ಜಗತ್ತನ್ನು ಪಾಲನಮಾಡುವಂಥಾ ಮತ್ತು ನನ್ನ ವಾಹನವಾಗಿದ್ದದ್ದು ಅದೆಯೋ ಅದನ್ನು ನೀನು ಈ ಮಧ್ಯಾಹ್ನದಲ್ಲಿ ಸಹಾ ಆರಾಮಗೊಳ್ಳ ಬಿಡಲಿಲ್ಲ. ಆದಕಾರಣ, ನಿನ್ನನ್ನು ಮತ್ತು ನಿನ್ನ ರು ಊರನ್ನು ಸಹ ಸುಟ್ಟು ಬಿಡ್ಡು ಮಾಡಿ ಬಿಡುತ್ತೇನೆಂಬ ದುಃಖವನ್ನು ಕೇಳಿದಾಕ್ಷಣಕ್ಕೆ ಗಾಬರಿಯಾಗಿ ಕೆಲಸವಿಟ್ಟು ಊರೊಳಗೆ ಓಡಿಹೋಗಿ ಎಲ್ಲ ಜನರಿಗೂ ನನ್ನ ಹೊಲದೊಳಗೆ ಶ್ರೀ ಶಂಕರನು ಪ್ರತ್ಯಕ್ಷನಾಗಿದ್ದಾನೆಂದು ಹೇಳಿದನು. ಆದರಿಂದ ಊರೊಳಗಿನ ಎಲ್ಲ ಜನರು ಅಲ್ಲಿಗೆ ಬಂದರು. ಆದಾಗ್ಯೂ ಮಹಾದೇವನು ಅವರಿಗೇನೂ ಕಾಣಿಸಲಿಲ್ಲವು. ಹತ್ತು ಅವನ ಸಂಗಡಿಗನಿಗೆ ತಾತ್ರಿ ದೃಷ್ಟಿಗೋಚರವಾಯಿತು. ಆವೇಳೆಯಲ್ಲಿ ಎಲ್ಲರೂ ವಿಶ್ವಾಸದಿಂದ ಪರಮೇಶ್ವರನ ಸ್ತೋತ್ರ ಮಾಡಿದರು. ಮತ್ತು ಎತ್ತು ಹೊಸ ಲಾಭವನ್ನು ತೆಗೆದುಕೊಂಡು ಮನೆಗೆ ಹೋದರು. ಪುನಃ ಆದಿನದ ರಾತ್ರಿಯಲ್ಲಿ ಆ ಒಕ್ಕಲಿಗನಿಗೆ ದೃಷ್ಟಾಂತವಾದದ್ದೇನಂದರೆ—ಆತನಿಗೆ ಶ್ರೀ ಶಂಕರನು ಪ್ರತ್ಯಕ್ಷವಾಗಿ ಎಲ್ಲ ಒಕ್ಕಲಿಗರು (ದನಗಳೊಳಗಿನ ಎಲ್ಲ ಒಕ್ಕಲಿಗರು) ಒಂದ ಸರಿ ಹೋಗಿ ಗಂಗೆಯಲ್ಲಿ ಸ್ನಾನ ಮಾಡಬೇಕು ಮತ್ತು ಮಾರನೇ ದಿನ ಬೆಳಿಗ್ಗೆ ಒಂದೊಂದು ಗೋವನ್ನು ದಾನ ಮಾಡಬೇಕು ಅಂದರೆ ಹಿಲ್ಲರಿಗಾ ಪ್ರಮಾಣ ಮಾಡತಕ್ಕದ್ದು ಎಂಬುದಾಗಿ ಉಪದೇಶ ಮಾಡಿದನು. ಇದರಿಂದ ಒಕ್ಕಲಿಗರು ಪ್ರಯಾಣಕ್ಕೆ ಜಮಾಯಿಸಿದರು. ತತ್ಪೂರ್ವ ಗಂಗೆಯು ಇಂಗ್ಲೀಷರ ಬಳಿ ಗಾಡಿಗಾಗಿ ಹೋದರು. ಈ ಶಿವದರ್ಶನದ ಪ್ರಕಾರವು ಬರೇ ಸುಳ್ಳು, ಅಥವಾ ಸುಳ್ಳು, ಪರಂತು ಬಿಹಾರ್ ಪ್ರಾಂತದೊಳಗಿನ ಎಲ್ಲ ಜನರಿಗೆ ಗೋರಕ್ಷಣದ ವಿಷಯವಾಗಿ ತಮ್ಮ ಜೀವದಾಸೆಯನ್ನೇ ಬಿಟ್ಟಬಿಟ್ಟಿದ್ದಾರೆ, ಇದು ಮಾತ್ರ ಖರೆ—ಕ. ವೃ.

ವಿದ್ಯೆಯು.

ಈ ಜಗತ್ತಿನಲ್ಲಿ ಅನೇಕ ಪ್ರಕಾರದ ಉಪಯುಕ್ತವಾದ ವಸ್ತುಗಳಲ್ಲಿ ವಿದ್ಯೆಯು ಒಂದಾಗಿದೆ. ಅದರ ವಿಚಾರವಾಗಿ ಸ್ವಲ್ಪ ಹೇಳಬೇಕಾಗಿರುವದೇನೆಂದರೆ, ವಿದ್ಯೆಯು ಸರ್ವ ವಸ್ತುಗಳಲ್ಲಿ ಶ್ರೇಷ್ಠವಾದದ್ದು, ಮನುಷ್ಯನು ವಿದ್ಯೆಯ ಉಪಯೋಗವನ್ನು ಮಾಡಿಕೊಳ್ಳುವದರಿಂದ ಅವನಿಗೆ ಹಿತವು ಆಗುವದು. ವಿದ್ಯೆಯನ್ನು ಕಲಿಯುವದರಿಂದ ಅವನಿಗೆ ಅನಂತವು ಭೂಷಣವು ಶಕ್ತಿಯೂ ಬಂದಂತೆ ಆಗುವದು. ಮನುಷ್ಯನಿಗೆ ನಾಲ್ಕು ಜನರಲ್ಲಿ ಕೂಡಿದಾಗ್ಯೂ ಅವನ ಮನಸ್ಸು ಸ್ವಸ್ಥ ಚಿತ್ತದಲ್ಲಿದ್ದು ಅವನಿಗೆ ಬೇಸರಿಕೆ ಬರುವದಿಲ್ಲ. ಆದರೆ ಏಕಾಂತ ಸ್ಥಾನದಲ್ಲಿದ್ದಾಗ್ಯೂ ವಿದ್ಯೆಯುಳ್ಳವನು ಅನೇಕ ತರದ ಗ್ರಂಥಗಳನ್ನು ಓದಿ ಏಕಾಂತದಿಂದ ಉಂಟಾಗುವ ಬೇಸರಿಕೆಯನ್ನು ಕಳಕೊಳ್ಳುತ್ತಾನೆ. ವಿದ್ಯೆಯನ್ನು ಕಲಿತವನು ಸಭೆಯಲ್ಲಿ ದೊಡ್ಡಾಗ್ಯೂ ಸುವಿಚಾರದಿಂದ ಸಮಯೋಚಿತ ಮಾತನಾಡಿದರೆ ಅವನಿಗೆ ಆಭರಣಗಳನ್ನು ಇಟ್ಟುಕೊಂಡದ್ದಕ್ಕಿಂತ ವಿಶೇಷವಾಗಿ ಭೂಷಣ ಬರುವದು. ಮತ್ತು ವಿದ್ಯೆಯುಳ್ಳವನು ರಾಜಕೀಯ ಕೆಲಸಗಳಲ್ಲಿ ತೊಡಗಿದಾಗ್ಯೂ ವಿದ್ಯೆಯುಳ್ಳವನು ವಿದ್ಯೆ ಕಾರಣ ದೀರ್ಘ ವಿಚಾರಶೀಲನಾಗಿ ಮಹತ್ಕಾರ್ಯಗಳನ್ನು ಆಯಾಸವಿಲ್ಲದೆ ಸಿದ್ಧಿಗೆ ತರುವನು. ಸಾಧಾರಣವಾಗಿ ಬುದ್ಧಿವಂತರಾದ ಜನರಿಗೆ ಯಾವುದಾದರೂ ಸಣ್ಣ ಕೆಲಸವನ್ನು ನಡಿಸಲಿಕ್ಕೆ ಒಂದೊಂದು ವೇಳೆ ಬರುವದು. ಆದರೆ ಮಹತ್ತಾದ ವಿಷಯಗಳಲ್ಲಿ ಆಲೋಚಿಸಿಗಳು ವಿದ್ಯಾಹೀನರಲ್ಲಿ ಮೋಹವೇ ಮಾಡಲಿಕ್ಕೆ ತಕ್ಕಷ್ಟು ಬುದ್ಧಿಯು ಉಂಟಾಗುತಿದೆ. ಯಾತಕ್ಕೆಂದರೆ, ಅವರು ಅನೇಕ ವರ್ಷಗಳ ವರೆಗೆ ಶಾಸ್ತ್ರ ಕಲಿತದ್ದನ್ನು ಅನುಭವದಿಂದ ಉಂಟಾದ ಪರಿಣಾಮಗಳನ್ನು ಪೂರ್ಣ ಮನಸ್ಸಿನಲ್ಲಿ ತಂದು ತಮ್ಮ ವಿಚಾರ ಶಕ್ತಿಯನ್ನು ಉಪಯೋಗಮಾಡಿ ಮಹತ್ಕಾರ್ಯಗಳನ್ನು ಸಮಾಧಾನದಿಂದಲೂ, ಸುಲಭರೀತಿಯಿಂದಲೂ ಜರಿಗಿಸುತ್ತಾನೆ. ಎಲ್ಲವಿದ್ಯೆಯೂ, ಜ್ಞಾನವೂ ಅನುಭವದಿಂದ ಬಾಲ್ಯದಾರಭ್ಯ ಹೊಸ ಜ್ಞಾನವಾದರೂ ಹೊಸ ಅನುಭವದಿಂದ ಬರುತ್ತಾಗುತಿದೆ. ವಿದ್ಯೆಯೂ ಜ್ಞಾನವೂ ಮನುಷ್ಯನಿಗೆ ಇಲ್ಲದಿದ್ದರೆ ಮನುಷ್ಯನಿಗೂ, ಪಶುವಿಗೂ ಏನೇನೂ ಭೇದ ಉಳಿಯಲಿಕ್ಕಿಲ್ಲ, ಯಾತಕ್ಕೆಂದರೆ, ಪಶುವು ಒಂದೊಂದು ಪಶುವು ಹೊಸ ಮತ್ತು ಚಮತ್ಕಾರದ ಪದಾರ್ಥವನ್ನು ನೋಡಿದ ಕೂಡಲೆ ಅದು ಅದರ ಸಮೀಪಕ್ಕೆ ಹೋಗಿ ಅದನ್ನು ತೆಗೆದುಕೊಳ್ಳುವದಕ್ಕೆ ಹವಣಿಸುತಿದೆ. ಇಂಥ ಆನಂದ ಅಥವಾ ಅಪಾಯವಾಗುವದನ್ನು ವಿಚಾರಕ್ಕೆ ತರುವದಿಲ್ಲ. ಆದರೆ ಮನುಷ್ಯನು ತನ್ನ ವಿದ್ಯೆಯ ಬಲದಿಂದ ಉಂಟಾದ ವಿಚಾರ ಶಕ್ತಿಯನ್ನು ಉಪಯೋಗ ಮಾಡಿ ಯಾವದು ಕೆಡಕು, ಮತ್ತು ಯಾವದು ಆನಂದವನ್ನು ಕೊಡುವಂತಾದ್ದೆಂದು ವಿಚಾರಮಾಡಿ ತನಗೆ ಹಿತಾದದನ್ನು ತೆಗೆದುಕೊಳ್ಳುತ್ತಾನೆ—ಸ. ವೃ.

ADVERTISEMENTS.

ನೋಟೀಸ್

ಪೋಲೀಸ್ ಕಟ್ಟಡಗಳನ್ನು ರಿಪೇರೀ ಮಾಡಿ ಸುಣ್ಣ ಮತ್ತು ಬಣ್ಣ ಬಳಿಯುವುದು ಮೊದಲಾದ ಕಾಮಗಾರಿಗಳ ಬಗ್ಗೆ, ಬೆಂಗಳೂರ್ ಸಿವಿಲ್ ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರವರು ದರಖಾಸ್ತುಗಳನ್ನು ಕರೆಯುತ್ತಾರೆ. ಡಿಕೊಳ್ಳುವರು.

ಮಾಡಬೇಕಾದ ಕಾಮಗಾರಿಗಳ ತಖ್ತೆಗಳನ್ನು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ಬೆಳಗ್ಗೆ ೧೦ ಘಂಟೆಯ ಮೊದಲು ಮಧ್ಯಾನ್ಹತ್ತರ ೩ ಘಂಟೆಯೊಳಗೆ ಯಾವಾಗ ಲಾದರು ನೋಡಬಹುದು.

ದರಖಾಸ್ತುಗಳನ್ನು, ಸನ್ ೧೮೯೪ನೇ ಇಸವಿ ಆಗಸ್ಟ್ ಮೊದಲ ತಾರೀಖ್ ಹಗಲು ೧೨ ಘಂಟೆಗೆ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಲ್ಲಿ ಖುದ್ದು ಕೊಡತಕ್ಕದ್ದು.

ಕಂ ದರಖಾಸ್ತುಗಳನ್ನಾಗಲಿ ಯಾವ ದರಖಾಸ್ತನ್ನೇ ಆಗಲಿ ಅವಶ್ಯ ಅಂಗೀಕರಿಸಬೇಕಾಗಿರಲಾರದು, ಯಾವ ದರಖಾಸ್ತಾದರು ತಿರಸ್ಕರಿಸಲ್ಪಟ್ಟರೆ ಅದಕ್ಕೆ ಕಾರಣ ತಿಳಿಸಲ್ಪಡಲಾರದು.

H. F. WILKINSON,
District Superintendent of Police.

ಸದರ್ನ್ ಮರಾಠಾ ರೇಲ್ವೆ ಕಂಪನಿ.
ಪ್ರಕಟನೆ.

ಎಲ್ಲಜನರಿಗೆ ತಿಳಿಸುವದೇನಂದರೆ:—ಮೇಜು, ಕುರ್ಚಿ, ಮುಂತಾದ ಕಛೇರಿ ಕೆಲಸದ ಸಾಮಾನು, ರೇಲ್ವೆಯ ಸಂಬಂಧೀ ಕಟ್ಟಡದ ಸಾಮಾನು, ಇಂಜಿನಿಯರಿಂಗ್ ಕೆಲಸಕ್ಕೆ ಬರುವ ಸಾಮಾನು, ಲಾಡಿನಗಳು ಮತ್ತು ಎತ್ತುಗಳ ಗಾಡಿಗಳು, ಉಕ್ಕಿನ ಮತ್ತು ಸಾಗವಾನೀ ಪೆಟ್ಟಿಗೆಗಳು, ಬಾಗಿಲುಗಳು, ಕಿಟಕಿಗಳು, ಬೇರಬೇರೆ ಬಗೆಯ ವಸ್ತುಗಳು, ಕಾಗದಗಳು, ಉಕ್ಕಿನ ಮತ್ತು ಕಬ್ಬಿಣದ ತುಣಕುಗಳು, ಹಳೇ ರೇಲುಗಳು, ಇವುಗಳಲ್ಲದೆ ಇನ್ನು ಅನೇಕ ತರದ ಸಾಮಾನುಗಳು, "ಹುಬ್ಬಳ್ಳಿ ಜನರಲ್ ಸ್ಟೋರ್ ಡೆಪೋ" ದ ಮೈದಾನದಲ್ಲಿ ತಾರೀಖು ೧೯ನೇ ಜುಲೈ ೧೮೯೪ನೇ ಇಸ್ವೀ ಗುರುವಾರದಿವಸ ಮುಂಜಾನೆ ೧೦ ಘಂಟೆಯಿಂದ ಪ್ರಸಿದ್ಧವಾಗಿ ಲಿಲಾವು ಮಾಡಲ್ಪಡುವವು.

ಸೂಚನೆ:—ಗಿರಾಕಿಗಳು ಕ್ರಯವನ್ನು ರೋಖ್ ಕೊಡತಕ್ಕದ್ದು. ಈ ಲಿಲಾವಿನಲ್ಲಿ ಕ್ರಯಕ್ಕೆ ಕೊಂಡಂಥ ಸಾಮಾನು ಸದರ್ನ್ ಮರಾಠಾ ರೇಲ್ವೇದ ಯಾವ ಸ್ಟೇಷನಕ್ಕೂ ಲಿಲಾವು ಆದ ತಾರೀಖಿನಿಂದ ಒಂದು ತಿಂಗಳೊಳಗೆ ಒಯ್ಯ ಬೇಕಾದವರಿಗೆ ಪ್ರತ್ಯೇಕ ಮಾಡಿ ದರ ಹೊಂದುಮ್ಮಿಗೆ! ಪ್ರಯಾಣಿ ಕಡಿಮೆ ದರವನ್ನು ತೆಗೆದುಕೊಳ್ಳಲಾಗುವುದು,

ಸ್ಟೋರಕೀಪರರ ಆಫೀಸ, ಹುಬ್ಬಳ್ಳಿ, ತಾ|| ೨೭—೬—೯೪.

H. WEIR,
ಆ| ಸ್ಟೋರಕೀಪರ,
ಎಸ್. ಎಂ. ರೇಲ್ವೆ.

NOTICE.

VAIDYASARA SANGRAHA.
A TREATISE ON THE PRINCIPLES OF
HINDU MEDICINE.
Price including Postage Rs 5—0—0

ವೈದ್ಯಸಾರ ಸಂಗ್ರಹ.
ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಸೇರಿಸಿ, ಪ್ರತಿ ಒಂದಕ್ಕೆ ರೂ ೫- 0—0

THE KARNATAKA PRAKASIKA.
ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ವರ್ಷಕ್ಕೆ, ಮುಂಗಡ ...	8—0—0
ಆರುತಿಂಗಳಿಗೆ ಮುಂಗಡ ...	4—0—0

ಮುಂಗಡವಾಗಿ ಚಂದಾ ಕೊಡುವ ಗಿರಾಕಿಗಳಿಗೆ ಮಾತ್ರ ಈ ಪತ್ರಿಕೆ ಕಳುಹಿಸಲ್ಪಡುವದು. ಮೂರು ತಿಂಗಳಿಗಿಂತ ಕಡಿಮೆ ಅವಧಿಗೆ ಚಂದಾ ಕೊಡುವದನ್ನು ಅಂಗೀಕರಿಸಲ್ಪಡಲಾರದು.

ಜಾಹೀರಾತಿನ ರಿವಾಜ್.

ಮೊದಲನೆಯ ಸಾರಿ ಪಙ್ಕ್ತಿ ಒಂದಕ್ಕೆ	0—2—0
ಎರಡನೆಯ ಸಾರಿ ಪಙ್ಕ್ತಿ ಒಂದಕ್ಕೆ	0—1—0

ಸೂಚನೆ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಸಾರಿ ಪ್ರಕಟಿಸಿದರೂ ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು.

BANGALORE :—Printed and Published at the KARNATAKA PRESS, No. 40 HOSPITAL Road, CITY.—1894

THE

Karnataka Prakasika.

ಕರ್ನಾಟಕ ಪ್ರಕಾಶಿಕಾ.

Published Every Monday Morning.

[illegible]

VOL. XXI. BANGALORE:—MONDAY JULY 23, 1894. No. 29.

Select Telegrams

Paris 14th July.—An Anarchist plot has been discovered [illegible] to destroy the arsenal and burn the new ironclad *Carnot*. Three arrests have been made.

St Petersburg [illegible] *July*.—There is a general extension of the cholera epidemic in Russia. Considerable alarm prevails at St Petersburg where 30[illegible] deaths took place from that cause during the past week.

Allahabad, 14th July.—U[illegible]khan of Jhandol is [illegible] hostile designs against the Mehtar of Chitral.

Captain Younghusband, the British Agent, returns there shortly.

London 16th July.—The infant son of the Duke and Duchess of York was baptised today by the Archbishop of Canterbury at White Lodge in the presence of Her Majesty the Queen, the Prince and Princess of Wales, the Duke of Cambridge, and other Royalties. He was named Edward Albert Christian George Andrew Patrick David.

London, 16th July.—The *Times* correspondent at Chemulpo telegraphs that fresh trouble has occurred in the locality of the recent rising in Corea. A number of Christians have been killed, and the French Fathers are menaced by the mob. A gunboat has been sent to protect the Christians and Missionaries.

St Petersburg 16th July.—The Russian Press, in discussing the situation in Corea, points out that it is the common interest of England and Russia to prevent war with China and Japan, but they declare that Russia will be prepared if the Corean difficulty is settled by England's intervention alone.

London, 17th July.—The *Times* in commenting upon the Blue Book which has been issued on the progress and condition of India at the end of 1893 considers the reduction of the military and civil expenditure of India not feasible and that the imposition of an import duty on cotton goods is the first and most obvious measure to avert a possible financial collapse.

Constantinople, 17th July.—The damage done by shocks of earthquake here is estimated at six million Turkish pounds. Over two hundred persons have been killed in Constantinople alone. His Highness the Khedive is staying on board his yacht.

London 18th July.—In the House of Commons last night the Budget passed its third reading by a majority of twenty votes.

London, 19th July.—In the House of Commons last night Sir W. Vernon Harcourt announced that Government had withdrawn the Welsh Disestablishment, the Registration and the Local Veto Bills, and proposes to pass the Irish Evicted Tenants and Miners Eight Hours Bills, and then a day will be fixed for the discussion of the Indian Budget.

London, 18th July.—Reuter's correspondent at Shanghai telegraphs that a party of Japanese soldiers at Seoul having assaulted the British Consul and his wife, thirty blue jackets have landed to protect the British Legation.

St Petersburg, 18th July.—Russia has decided to build a railway from Samarcand to Marghilan in Ferghana (Kokhand) with a branch line to Tashkend.

THE

Karnataka Prakasika.

MONDAY, JULY 23, 1894.

EDUCATION IN MYSORE.

IV

We will give what the Report says about [illegible]cal Instruction. This is a very important branch of the subject, and we are glad that the department has taken it in hand. The Maharani's school has a High School department and with this is connected a Normal School for the training of female teachers. There were fifteen during the year in this class. We are told that the results of the Mysore Lower Secondary Examination of successive years have shown how inefficient has been the teaching in the Vernacular schools of the subject of agriculture and hygiene. The failures in these subjects have been always more numerous than in any other subject, since the institution of the Mysore Local Examinations. With a view to improve the teaching of these subjects, classes for the instruction of Vernacular masters were in the absence of regular Normal schools, formed at the head quarters of each District in the months of April, May and June. The services of competent lecturers were engaged, and the courses of lectures were defined by syllabuses and text books. Altogether 169 teachers attended these classes, and they were examined at the end of the course of lectures. We are told that out of 169 examined 300 passed in agriculture and 155 in hygiene. In addition to these two subjects, the masters assembled in these classes were taught drill by police officers whose services were lent by the Inspector General of Police, and the Deputy Inspectors of schools also gave some instruction to the masters in the methods of teaching the subjects of primary instruction. We are told that the Normal classes were popular with the teachers, who were thankful for the instruction they received. We next come to Industrial schools, and the one established at Mysore in 1892 had 102 pupils, of whom fifty eight were learning carpentry, 13 masonry, 10 blacksmiths work, 2 pottery and 18 rattan work. Of the pupils nine were Brahmins, 55 Sudras, 18 Mahomedans, and fifteen Christians. [illegible] of the pupils drew scholarships of Rs 3 each. The school cost Rs 6,412 during the year, of which amount Rs 1,038 were spent on the purchase of labour-saving machinery. The pupils [illegible] able to make tables, chairs, locks, keys, simple tools, rattan tiffin boxes, office trays and other things. All the pupils were taught drawing, and 17 were taught modelling. There is another school of this kind at Hassan, and we are told that several of the pupils of the previous year are earning wages as carpenters. The net cost to Government of maintaining the school was less than Rs. 1,000. Of the thirty pupils on the roll 15 were Brahmins, ten Sudras, three Mahomedans and two Native Christians. Carpentry, rattan work and a little blacksmiths' work are taught in this school. Admission is restricted to those who have passed the Lower Primary Standard in the Vernacular in reading, writing and arithmetic. Then there is an Aided Industrial school at Melkote, which was started on the first of April 1891. During the year under review it had 19 pupils. Carpentry is the only industry taught. It is remarkable that the teacher and all the pupils were Brahmins. A number of articles was made in the school. The Wesleyans have an Industrial school at Tumkur in connection with the Mission Orphanage. During the year it had 56 pupils, of whom 26 were learning carpentry, six blacksmiths work, two tailoring and four bricklayers' work. We are told that work of the value of Rs 2,686 was turned out during the year. The same body has another institution of the same kind at Hassan in which there are 63 girls and seven boys on the roll. Knitting, agriculture and household management are taught. Every girl is also taught to cook and to perform household duties. Agriculture is taught to the boys, but the girls are taught all such work of farming as the wives of ryots are accustomed to do. All the pupils attend a day school on alternate days in order that they may receive some general education. The Government of Mysore is very liberal in the way of scholarships, and of these four Engineering, three Medical and two Agricultural were granted during the year. There were 19 students belonging to Mysore in the College of Science at Poona of whom 11 held Government scholarships. At the L. C. E. Degree Examination of the Bombay University two State scholars were successful, one obtaining a first class, and the other a second. A private student, who was a Mysorean, obtained a pass. At the second Examination for Civil Engineering two scholarship holders and two private students were successful. At the first Examination for Civil Engineering four Mysore scholarship holders were successful. In the Madras Medical College there were fourteen State scholars studying for the Degree Examination, and twenty-two for the Hospital Assistant's Examination. Four private students passed the Second L. M. S. Examination, and one passed the M. B., C. M. Degree Examination of 1892. One State scholar passed the second L. M. S. Examination, and four passed the examination for the Hospital Assistants' grade. One State scholar who was studying in the Grant Medical College, Bombay, did not pass the first Examination in Medicine. In the Agricultural College, Madras there were eight stipendiary and seven private students belonging to Mysore. Of these, one private student obtained the Agriculturists' Diploma. At the Imperial Forest school at Dehra Dun one Mysorean, who was a State scholar, passed the final examination. It will thus be seen that the young men of Mysore are able to hold their own with those in other parts of India and it is well that their abilities should be tested by competing with outsiders. In our next issue we shall give something about female education in the Province, and this will be the last of the series of articles on Education in Mysore.

News and Notes.

A Spaniard claims to have invented an automatic soldier which fires 5,000 shots a minute.

Mr. Gladstone is one of the greatest opponents of divorce. He believes that marriage is a contract which only expires when life itself expires.

THE healthiest spot in the world seems to be a little hamlet in France named Aumone. There are only forty inhabitants, twenty three of whom are eighty years of age, and one is over one hundred.

The Juma Masjid at Delhi has been struck by lightning and much damaged. The dome of the [illegible] minaret is said to have been destroyed. The Mahomedans are greatly concerned about the incident.

At the Lahore Durbar all the Punjab Chiefs will assemble, including the Maharajah of Kashmir. There will be a concentration of Punjab and Kashmir Imperial Service troops to the number of upwards of 5,000.

It is said that the Czar of Russia has in his household a person who resembles him very closely, and who takes his place at windows of railway carriages and on hotel verandas when His Majesty is indisposed, and does not care to appear.

A MUHAMMADAN has been sentenced to one and a-half year's imprisonment by the Assistant Commissioner of Pind Dadan Khan for cutting off the nose of his wife for infidelity. The accused is said to have swallowed the amputated nose to prevent his wife getting it sewn on again.

THE Queen's descendants, either occupy now or, in the natural course of events, bid fair to sit upon seven thrones—those of the British Empire, the German Empire, the Russian Empire, the Kingdom of Greece, the Grand Duchy of Hesse, the Duchy of Saxe Coburg and Gotha, and the Duchy of Saxe Meiningen.

The Viceroy will leave Simla on the 24th October, go straight to Dharamsala on the 27th, straight to Quetta on 3rd November, then to Kajjh and Karachi on the 10th November, Rawalpindi on the 17, and Peshawar 20th, and visiting Khyber and Alimasjid, comes to Lahore on the 27th and will remain there till 3rd December, and reach Calcutta on the 17th. His Excellency will receive Municipal addresses at Rawalpindi, Amritsar, Lahore, and Quetta.

A REUTER DESPATCH FROM BERLIN SAYS — The *Kleines Journal* publishes the following despatch from St. Petersburg:—"The discovery has been made on the Orel Witebsk Railway of an explosive mine, which was intended to blow up the imperial train conveying the Czar to the manœuvres in Central Russia. In consequence of this discovery his Majesty will probably not make his intended journey to Borki to be present at the consecration of the church erected there in commemoration of his escape in the disaster at that place.

ONE result of the assassination of President Carnot has, according to a contemporary, been to cause increased activity at Scotland Yard. All the royalties at present in England are to be carefully guarded by detectives who know the Anarchist desperadoes. Prominent politicians on both sides of the House of Commons and in the House of Lords are also to have increased protection by men from Scotland Yard. The Czarevitch is surrounded by a special guard of detectives, as it is feared he may have been followed to England by Nihilists. Elaborate police arrangements have been made for the safety of the Queen and the Prince of Wales, especially in their more public moments.

SIR ISAAC PITMAN, who was recently knighted by her Majesty, is one of the staunchest supporters of the new orthographical system, and this letter of his, written in the "reformed" method, has just appeared in the *Daily News*:—"Ser—In the *Daily News* ov yesterday ther iz a paragraf refering tu mi onar, ta the Nothud konferd on mi bei her Majesti, and tu reformd speling, which I advokat, and not I alon, but thouzands ov persons in this kuntri and akros the Atlantic, and bei their ritings, moni among the ilustrios ded, az Sir Thomas Smith, Sekretari ov Stait tu Edward VI and Elizabeth, Bishop Wilkins (Charles II), Benjamin Franklin, James Elphinstone, Noah Webster, &c. I shal be oblejd if yu wil alou me tu korekt an eror as tu mei ag, and tu sho, bei this noat, the iuz ov reformd speling I am sed tu be 'not veri far from mei nointie'th yeer,' I am in mei aito-sekond yeer"

On the 15th inst before the Chief Presidency Magistrate, Calcutta, an application was made on behalf of the Rev Father Hopkins for a warrant of arrest of the Editor of the *Sunday Times* In course of the application being made by Mr Pugh, he said that as the Government of Bengal had already taken up the matter, he would postpone the application. Mr Cowie, the Government Solicitor, under directions from the Government of Bengal, then applied for a warrant for the arrest of the Editor of the *Sunday Times* on a charge of selling an obscene publication, also for a search warrant at the office of the paper for copies of the issue of the 15th instant Evidence was supplied Both the applications were granted Mr Gasper, Editor of the *Sunday Times*, was arrested but released on personal bail in a bond for Rs 1,000 and two sureties for Rs 500 each. The manuscript was seized and the sale of the last edition of the paper interdicted

An oleographic press, has been opened in Girgaum, Bombay, the first of its kind in India, for the printing and publication of pictures illustrative of Indian mythology, history, and every day life The establishment is worked and managed by skilful and experienced European artists The well known Travancore artist Mr. Ravi Varma's charming picture, called "the Birth of Sakoontala," is now ready The history of the subject of the picture is shortly as follows —The great sage Vishwamitra by his severe penance excited the jealousy and fears of Indra, the King of the Heavens, who sent down the beautiful Nymph Menaka to tempt him and lead him astray She succeeded in her object and the result was the birth of "Sakoontala," the heroine of Kalidas's celebrated drama "the Sakoontala or the Lost Ring" The picture represents Menaka offering the infant to Viswamitra, who finding too late the trick played on him scornfully rejects it, and turns away from it Subsequently, Sakoontala was abandoned in the jungle by both the parents, and was rescued and brought up by another sage Kanva The price of a copy of this picture, which is an excellent oleograph, is Rs 6.

Local and Provincial.

THE MYSORE CIVIL SERVICE —The *Hindu* learns that Mr V R. Thongaraya Iyer B A, and Mr K. Chandy B A have come out successful in the Competitive Examination held this year for the Mysore Civil Service Examination

THE MAHARAJAH'S BALL —It is said that the annual Ball at the Palace of His Highness the Maharajah of Mysore will take place on the 8th proximo

GEOLOGISTS.—The Mysore Government call for 6 apprentice Geologists—salary Rs 100 to 150 per mensem with prospect of promotion after due qualification, to the grade of Assistant Geologists, to rise to Rs 200, 250 and 300 a month The Assistant Geologists will hold the same rank as Assistant Engineers.

THE P. W D MYSORE —It is alleged, on reliable grounds, that the Madras Government have protested against the reversion of Col. McNeil Campbell, on the score of the injustice it will entail on the P W. D, Madras, we (*I E*) should not, therefore, be surprised to find the same officer back again to Mysore in a capacity for which he was originally selected for the province, namely, Chief Engineer for Irrigation

"MARI CANAVAY."—This is the homely way says the *Indian Engineering*, of designating the "*Mari Kanave*" Pass in the Chitaldroog hills, which is now destined to form an immense reservoir by a dam thrown across the gorge, whereby sufficient water can be impounded to irrigate the adjoining thirsty plains and convert them into a vast expanse of rice cultivation The project has been long under contemplation, and lately formed the subject of a dispute with the Madras Government All difficulties having now been settled it is understood that arrangements are being made to commence the work on an early date The scheme will afford occupation for a large staff of Engineers and assistants, and it is probable that should Col McNeil Campbell return to Mysore it will afford full scope for his knowledge and ability as an Irrigation Engineer

THE HESSERGHATTA WATER SUPPLY SCHEME FOR THE CITY OF BANGALORE —W (*I E*) are glad to see several Indian Engineering firms represented by their machinery and plant on this large undertaking Messrs Richardson and Cruddas of Bombay were entrusted with the supply and arrangement of pipes and other appliances for the water tower, and have given great satisfaction by the manner in which they have worked out the details and otherwise met the requirements of the case Messrs John Fowler and Co's light portable trams and rails are being used advantageously for transfer of materials over long leads and trying places The merits of Messrs James Simpson and Co's Worthington Engines have been recognized by their adoption for raising the water to the reservoir on Bonvear Hill, whence it will gravitate to the city and cantonment if necessary

THE "EVENING MAIL" DEFAMATION CASE —We must congratulate our contemporary on gaining his case at Hyderabad A communication sent us from that city yesterday, informed us that the complainant, Clive Durant, alias James Holt, alias Stephen Howard, journalist, was in the witness box for one day, and cross-examined by the accused's counsel. This cross examination, we are informed, was unpleasant for the complainant, as it recalled many incidents in his past career, that took place in Calcutta, Pondicherry, Madras, Bombay, Poona, and Hyderabad When requested to go into the witness box on the second day, Mr Durant objected and eventually, refused to be cross examined any more. After the judge had warned Mr Durant of the consequences of his refusal, and he continuing to refuse, the Judge closed the case and acquitted the accused —B S

Extracts.

IMPORTANT INCOME TAX DECISIONS

The Government of India has ruled that under section 5 (1) ( ) of the Income-Tax Act the words "solely employed for religious or public charitable purposes" qualify the word "property" and not the word "income" in connection with the assessment of the incomes of temples, churches, and other religious or public charitable associations, and that consequently the income derived from offerings to shrines and temples is exempt from the tax But although voluntary donations or subscriptions employed for charitable or religious purposes are not held to form an income liable to taxation, the personal support or expenditure of a minister of religion is not, as regards the taxation of his income, a religious or charitable purpose, and is liable to taxation It has also ruled that clubs and societies, not engaged in trade or in any pursuit having gain for its object and having no realised property whatever and no income except that derived from the subscription of their members, which is expended for the purpose of the club or society, are not liable to assessment, as such subscriptions are in the opinion of the Government of India not in reality income or profits, but represent the expenditure of the members of the particular club or society for their common purposes. The case is different with proprietary clubs which are maintained with the view of producing an income to the owners, and which are therefore liable to assessment The Government of India has also decided that the owner of a house letting it on rent should, in estimating his income for the house for the purpose of the Income Tax Act, be allowed to deduct from the rent the amount of any municipal or other tax payable by him as owner.

ಕರ್ಣಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ಜುಲೈ ೨೩ ನೇ ತಾ॥ ಸೋಮವಾರ

ಬಾಲವಿಧವೆಯರ ಕಷ್ಟನಿವೃತ್ತ್ಯುಪಾಯ.

ಪ್ರೊಫೆಸರ್ ಮ್ಯಾಕ್ಸ್‌ಮುಲ್ಲರ್ ಎಂಬ ಒಬ್ಬ ದೊಡ್ಡ ಜರ್ಮನ್ ಪಂಡಿತರು ಇಂಡ್ಯಾ ದೇಶೀಯರ ವಿಷಯದಲ್ಲಿಯೂ, ಅವರ ಜಾತಿ ಮತಾಚಾರಾದಿಗಳ ವಿಷಯದಲ್ಲಿಯೂ ಆಗಿಂದಾಗ್ಗೆ ಪತ್ರಿಕಾ ಮೂಲಕ ವ್ಯಕ್ತಪಡಿಸುತಲಿರುವ ಅಭಿಪ್ರಾಯಗಳು ಪ್ರಾಯೇಣ ಬಹು ಮಂದಿಗೆ ತಿಳಿದವಾಗಿರುತಿವೆ. ಸದರೀ ಪಂಡಿತರು ಬಹು ಕಾಲದಿಂದ ನಮ್ಮ ವೇದ ಶಾಸ್ತ್ರ ಪುರಾಣೇತಿಹಾಸಾದಿ ಗ್ರಂಥಗಳಲ್ಲಿ ವಿಶೇಷವಾಗಿ ತಮ್ಮ ಬುದ್ಧಿಯಂ ಸಲ್ಲಿಸುತಲಿರುವದರಿಂದ ಅವರಿಗುಂಟಾಗಿರುವ ವಿಲಕ್ಷಣವಾದ ಪಾಂಡಿತ್ಯಗಳು ಅನೇಕರಿಗೆ ಗೌರವ್ಯಗಳಾಗಿ ಕಂಡು ಬರುವುದೆಂಬುದರಲ್ಲಿ ಸ್ವಲ್ಪವೂ ಸಂದೇಹಕಾಣಿಸಲಿಲ್ಲವು. ಪ್ರೊಫೆಸರ್ ಮ್ಯಾಕ್ಸ್‌ಮುಲ್ಲರವರು ನಮ್ಮ ವೇದ ಶಾಸ್ತ್ರಗಳ ಮತ್ತು ಶ್ರುತಿಸ್ಮೃತಿಗಳ ಉದ್ದೇಶಪ್ರಯೋಜನಗಳನ್ನು ಚೆನ್ನಾಗಿ ಅರಿತವರೆಂಬುದರಲ್ಲಿ ಲೇಶವೂ ನಾವು ಅನುಮಾನಿಸುವದಿಲ್ಲವು ಪರಂತು ಕೆಲವು ಸಂದರ್ಭಗಳಲ್ಲಿ ಅವರ ಅಭಿಪ್ರಾಯಗಳು ವಿಜಾತೀಯಗಳಾಗಿ ಕಂಡು ಬರುತಿವೆ ಈಗ ಇಂಡ್ಯಾ ದೇಶದೊಳು ವಿಶೇಷವಾಗಿ ಹಿಂದೂಗಳಲ್ಲಿ ತತ್ರಾಪಿ ಬ್ರಾಹ್ಮಣರಲ್ಲಿ ಅತ್ಯಧಿಕವಾಗಿ ದಿನೇ ದಿನೇ ವೃದ್ಧಿಯಾಗುತ ಬರುತಲಿರುವ ಬಾಲವಿತಂತುಗಳ ದುರ್ದಶೆಯಂ ಕೆಲವುಮಟ್ಟಿಗೆ ನಿವಾರಣಮಾಡಿ ಮಾನವ ಕೋಟಿಯೊಳು ಗೌರವ್ಯವಾದ ಒಂದು ನ್ಯಾಯಕಸ್ಥಿತಿಯನ್ನವರಿಗೆ ಕಲ್ಪಿಸಬೇಕೆಂಬ ಕುತೂಹಲದೊಡನೆ ವಿದ್ವಾಂಸರಾಗಿಯೂ ಸ್ವಸಮಯಾಚಾರ ಪರಿಷ್ಕರಣನಿಷ್ಠರಾಗಿಯೂ, ವೈಲಕ್ಷಣ್ಯಾಭಿಲಾಷಿಗಳಾಗಿಯೂ ಇರತಕ್ಕ ಇಂಡ್ಯಾದೇಶೀಯರಿಗೆ ತಮ್ಮ ಅಭಿಪ್ರಾಯವಂ ಒಂದು ಲೇಖನ ಮೂಲಕ ತಿಳಿಸಿರುತ್ತಾರೆ. ಸದರೀ ಲೇಖನವು ಇದುವರೆಗೆ ಅನೇಕ ಇಂಗ್ಲಿಷ್ ಪತ್ರಿಕೆಗಳಲ್ಲಿ ಪ್ರಚುರಗೊಳಿಸಲ್ಪಟ್ಟಿರುತಿದೆ. ಅವೆ ತತ್ಪತ್ರಿಕಾಪಠನಕ್ಕೆ ಯೆಲ್ಲರಿಗೂ ಅವಕಾಶವು ದುರ್ಲಭವಾದುದರಿಂದಲೂ, ಇಂಗ್ಲಿಷ್ ಭಾಷಾ ಜ್ಞಾನವಿಲ್ಲದವರು ಪ್ರಜಾ ಸಂಖ್ಯೆಯಲ್ಲಿ ಅತ್ಯಧಿಕವಾಗಿರುವದರಿಂದ ಅವರು ಸಹ ಸದರೀ ವಿದೇಶ ಪಂಡಿತರ ತಾತ್ಪರ್ಯವನ್ನರಿಯಬೇಕಾದುದು ಆವಶ್ಯಕವಾಗಿರುವದರಿಂದಲೂ ಅದಂ ಸಂಗ್ರಹಿಸಿ ಇದರಡಿ ಪ್ರಕಟಿಸುತ್ತೇವೆ ಏನೆಂದರೆ—ಬಾಲ ವಿತಂತುಗಳು ಹಿಂದೂ ದೇಶದಲ್ಲಿ ಇತರ ದೇಶಾಪೇಕ್ಷೆಯಾ ಅಧಿಕವಾಗುತ ಬರುವುದು ಬಹಳ ಆಶ್ಚರ್ಯಕರವಾದ ವಿಷಯವಾಗಿದೆಯೆಂತಲೂ, ಭಕ್ತಿಜ್ಞಾನ ಮತಾಚಾರಾದಿ ವಿಷಯಗಳಲ್ಲಿ ಸುಪ್ರಸಿದ್ಧರಾಗಿಯೂ, ಸುಶೀಲರಾಗಿಯೂ ಇರುವಂತ ಪರಮ ಸಾಧುಗಳಾದ ಹಿಂದೂ ಅಬಲೆಯರು ಪರಸ್ಕೃತ ನಿರ್ಬಂಧಗಳಿಗೊಳಗಾಗಿ ಇವರೆಲ್ಲರ ಸುಖವಿಮುಖರಾಗಿ ಮರಣಾಂತ ಅನುಪಶಾಂತವಾದ ಮತ್ತು ಅಪರಿಹಾರ್ಯವಾದ ದುರ್ದಶೆಗೆ ಪಾತ್ರರಾಗಿ ಖೇದ ಪಡುವಂತವರು ಇಂಡ್ಯಾ ದೇಶದಲ್ಲಿ ವಿನಾ ಈ ಭೂಲೋಕದಲ್ಲಿ ಬೇರೊಂದು ಕಡೆ ಇರಲಾರರೆಂತಲೂ, ಸದರೀ ಜರ್ಮನ್ ಪಂಡಿತರು ಅಭಿಪ್ರಾಯಪಟ್ಟಿರುತ್ತಾರೆ. ಬಾಲ್ಯದಲ್ಲಿ ಅಂದರೆ ಲೌಕಿಕಜ್ಞಾನ ವಿರಹಿತವಾದ ದಶೆಯೊಳಿರುವ ಎಳೇ ಮಕ್ಕಳ ವಿಷಯದಲ್ಲಿ ಕ್ರೌರ್ಯವಂ ತೋರಿಸದಿರುವಬಗ್ಗೆ ಇಂಗ್ಲೆಂಡಿನಲ್ಲಿ ನೆಲೆಗೊಳಿಸಲ್ಪಟ್ಟಿರುವಂತ ಸಂರಕ್ಷಣ ಸಂಘ ಒಂದು ಈ ದೇಶಕ್ಕೆ ಆವಶ್ಯಕವೆಂದು ಭಾವಗೊಂಡಿರುತ್ತಾರೆ ಅಂತ ಸಂಘ ಒಂದೇರ್ಪಡುವದರಿಂದ ಬಾಲೆಯರ ಕ್ಷೇಮ ಮಾತ್ರವೇಯಲ್ಲದೆ ಕಠಿಣ ಚಿತ್ತರಾದ ವೈದಿಕರ ದೆಸೆಯಿಂದಲೂ, ನಿರಭಿಮಾನಿಗಳಾದ ಸ್ತ್ರೀ ಸಮುದಾಯದಿಂದಲೂ, ತಿರಸ್ಕೃತರಾಗಿ ಬಹಳ ದೈನ್ಯವಂ ಹೊಂದಿ ಯಾವಜ್ಜೀವವೂ ದುಃಖಭಾಜನರೆನಿಸಿರುವ ಬಾಲವಿತಂತುಗಳ ದುರ್ದಶೆಯಂ ಹೋಗಲಾಡಿಸಿ ಅವರಿಗೆ ಸನ್ಮಾನಿತವಾದ ಸ್ಥಿತಿಯಂ ಸಹ ಏರ್ಪಡಬಹುದೆಂಬ ಭಾವ ಸಹ ಸೂಚಿಸಲ್ಪಟ್ಟಿದೆ. ಪ್ರಾಯೇಣ ಹಿಂದೂಗಳಲ್ಲಿ ಬಾಲ್ಯವಿವಾಹ ಪದ್ಧತಿಯು ಅಷ್ಟು ವಿಶೇಷವಾಗಿಲ್ಲವು. ಈ ಆಚಾರವು ಚೀನಾ ದೇಶದಲ್ಲಿಯೂ ಕೆಲವು ಯೂರೋಪಿಯನ್ ದೇಶಗಳಲ್ಲಿಯೂ ನೆಲೆಗೊಂಡಿರುತಿವೆ. ಪರಂತು ಅಲ್ಲಿನ ಸ್ಥಿತಿ ಪ್ರತ್ಯೇಕವಾದುದಾಗಿರುತಿದೆ. ವಿತಂತುವಿಗೆ ತಾನು ಅನುಭವಿಸಬೇಕಾದ ದುರ್ದಶೆಗಿಂತಲೂ ಮರಣವೇ ಕ್ಷೇಮಾವಹವೆಂದು ಅವರು ಭಾವಿಸಿದಂತ ಕೆಲವು ಅಪೂರ್ವೋದಾಹರಣೆಗಳನ್ನು ಪ್ರಾಮಾಣ್ಯೇನ ಉದಹರಿಸಿ ಅವುಗಳಿಗೆ ಪೋಷಕವಾಗಿ ಪಂಡಿತ ರಮಾಬಾಯಿ ಮೊದಲಾದ ಕೆಲವರು ಸ್ವೇಚ್ಛೆಯಿಂದ ಪ್ರವೃತ್ತಿಯುಳ್ಳ ಯುವತಿಯರ ವಾಕ್ಯಗಳನ್ನುದಹರಿಸಿರುತ್ತಾರೆ. ಆದಾಗ್ಯೂ ಅನೇಕ ಕುಟುಂಬಗಳಲ್ಲಿ ಬಾಲ ವಿಧವೆಯರು ಬಹಳ ಗೌರವ್ಯವಾದ ಸ್ಥಿತಿಯಲ್ಲಿಡಲ್ಪಟ್ಟು ಅನೇಕರು ಬಹಳ ಪರಿಶುದ್ಧರಾಗಿ ತಮ್ಮ ಕಾಲವಂ ಸನ್ಮಾರ್ಗದಲ್ಲಿ ಕಳೆಯುತ್ತಾರೆಂಬುದಂ ಸದರೀ ಪಂಡಿತರು ಬಹಳಮಟ್ಟಿಗೆ ಅಂಗೀಕರಿಸಿರುತ್ತಾರೆ. ಪ್ರಾಯೇಣ ವಿತಂತುಗಳೆಲ್ಲರೂ, ಮುಖ್ಯವಾಗಿ ಬಾಲವಿಧವೆಯರೆಲ್ಲರು ತಮ್ಮ ಬಂಧುಜನಗಳಿಂದ ಅತಿ ಕ್ರೂರ ಭಾವದೊಡನೆ ನೋಡಲ್ಪಡುತಿದಾರೆಂತಲೂ, ಅಥವಾ ಅವಮಾನಕರವಾದ ಜೀವನ ಮಾಡುವಂತೆ ಪ್ರೇರಿಸಲ್ಪಡುತ್ತಾರೆಂತಲೂ ತಿಳಿಸಲ್ಪಡುವ ಅತಿಶಯೋಕ್ತಿಗಳು ನಿರಾಧಾರವೆಂದೆಣಿಸಿ ಅವಂ ಸದರೀ ಪಂಡಿತರು ನಂಬಲಿಲ್ಲವು. ಆದರೂ ಗೃಹಾಂತರದಲ್ಲಿ ಅಬಲೆಯರ ವಿಷಯದೊಳು ತೋರಿಸಲ್ಪಡುವ ಕ್ರೌರ್ಯವನ್ನೂ, ಅದಂ ತಾಳಲಾರದೆ ಮನೆಗಳಂ ಬಿಟ್ಟು ಹೋದಂತವರ ಸಂಖ್ಯೆಯನ್ನೂ, ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆಯನ್ನೂ ನಿರ್ಧರಿಸಿ ತಿಳಿಸಲಿಕ್ಕೆ ಪ್ರಯಾಸವಾದರೂ ಸ್ವಲ್ಪ ಹೆಚ್ಚು ಕಡಮೆಯಾಗಿ ನಿಂದ್ಯವಾದ ಜೀವನವಂ ಮಾಡುವಂತ ವಿತಂತುಗಳ ಸಂಖ್ಯೆಯು ನಿರವಧಿಕವೆಂಬದಂ ಒಬ್ಬರೂ ನಿರಾಕರಿಸಲಾರರೆಂದು ಹೇಳಿ ಇದಕ್ಕೆ ನಿದರ್ಶನವಾಗಿ ಒಬ್ಬ ವೃತ್ತಚರ್ಯೆಯ ಮರಣಸ್ವರೂಪವಂ ತಿಳಿಸಿ, ಅನೇಕ ವಿಷಯಗಳಲ್ಲಿ ವಿಧವೆಯರ ನಿರ್ವೇದಕ್ಕೆ ಕಾರಣಭೂತಗಳಾದ ಅಂಶಗಳಂ ಪ್ರಸ್ತಾಪಿಸಿ ಅವರ ಜೀವಿತಕಾಲವು ಸಂತೋಷರಹಿತವಾದುದಾಗಿಯೂ, ಮುಂದೆ ಎಂದಿಗಾದರೂ ಸುಖಪಡುವೆವೆಂಬ ಪ್ರತ್ಯಾಶೆ ಸಹ ಇಲ್ಲದ್ದಾಗಿಯೂ ಇರುವದರಿಂದ ದುಃಖ ನಿಮಿತ್ತಕವಾದ ಇಂತ ವೈಧವ್ಯವಂ ಇನ್ನೆಷ್ಟುಕಾಲ ಅನುಭವಿಸುವೆವೆಂಬ ನಿರಂತರ ದುಃಖ ಸಂತಪ್ತ ಹೃದಯರಾಗಿ ಪ್ರತಿ ಕ್ಷಣದಲ್ಲಿಯೂ ತಮ್ಮ ಜೀವಿಕೆ ಭೂಭಾರ ರೂಪವೆಂದು ಭಾವಿಸಿ ಪ್ರಾಯೋಪವೇಶಾದಿಗಳಿಂದಲೂ, ವಿಷಪ್ರಯೋಗಾದಿಗಳಿಂದಲೂ, ಅಥವಾ ಇತರ ಬಲವತ್ಸಾಧನಗಳಿಂದಲೂ, ಮನಃಕ್ಷೋಭಕವಾಗಿ ಲಕ್ಷ್ಯಪಡಿಸ್ಯೇ ಮಾಡಿಕೊಳ್ಳದೆ ಹೋಗುವದಿಲ್ಲವೆಂದು ತಿಳಿಸಿ ಇಂತ ಕಷ್ಟಸ್ಥಿತಿಯಿಂದ ಸದರೀ ನಿರ್ಭಾಗ್ಯರಾದ ವಿಧವೆಯರಂ ತಪ್ಪಿಸಿ, ಅವರಿಗೆ ಗೌರವಕರವಾದ ವೃತ್ತಿ ಸಾಧನಗಳಂ ಕಲ್ಪಿಸಿ ಅವರು ಉತ್ತಮಸ್ಥಿತಿಗೆ ತರುವದಕ್ಕೆ ಉಂಟಾಗಿರುವ ಆಂತರಾಳಿಕ ನಿರ್ಬಂಧಗಳನ್ನೆಲ್ಲ ತೊಲಗಿಸಲಿಕ್ಕೂ, ಪ್ರತ್ಯವಾಯ ಕರಗಳಾದ ಜಾತಿ ಮತ ಸಂಪ್ರದಾಯಗಳನ್ನು ಪಾಲಿಸಿ ಪರಿಷ್ಕರಿಸಿಕೊಳ್ಳಲಿಕ್ಕೂ ವಯಃಪರಿಮಾಣತಾರತಮ್ಯವಂ ಪರಿಗಣಿಸದೆ ಇಂಡ್ಯಾದೇಶೀಯರೆಲ್ಲರು ಪ್ರವರ್ತಿಸಿ ಕೃಷಿ ಮಾಡುವ ಕಾಲವನ್ನೋಡಿ ಸಂತೋಷಿಸುವಬಗ್ಗೆ ಅದಂ ನಿರೀಕ್ಷಿಸುತಲಿರುವಂತೆ ಮ್ಯಾಕ್ಸ್‌ಮುಲ್ಲರವರು ಬರೆದಿರುತ್ತಾರೆ.

ಪ್ರೊಫೆಸರ್ ಮ್ಯಾಕ್ಸ್‌ಮುಲ್ಲರವರು ಅನುತಾಪದೊಡನೆ ಬರೆದಿರುವ ಬಾಲ ವಿತಂತುಗಳ ಸ್ಥಿತಿಯು ಪರಿಷ್ಕೃತವಾಗಿ ಅವರಿಗೆ ಸಮಾಜದಲ್ಲಿ ಉತ್ಕೃಷ್ಟಸ್ಥಿತಿ ಯುಂಟಾಗಬೇಕಾದರೆ ಅದು ಪ್ರಥಮತಃ ಈ ಮೈಸೂರ್ ಸಂಸ್ಥಾನದಲ್ಲಿಯೇ ಸಿದ್ಧಿಸಬೇಕಾದುದಾಗಿರುತಿದೆ. ಅದಕ್ಕೆ ಆವಶ್ಯಕಗಳಾದ ಸಾಧನ ಸಂಪತ್ತಿಗಳೂ ಪ್ರೋತ್ಸಾಹಗಳೂ, ಅನುಕೂಲ್ಯಗಳೂ ಇಲ್ಲಿ ನೆಲೆಗೊಂಡಿರುವಂತೆ ಅನ್ಯತ್ರ ಇಷ್ಟು ತೀವ್ರದೊಳು ಸಿದ್ಧಿಸಲಾರವು. ಹ್ಯಾಗಂದರೆ—ಕಳೆದ ಡಿಸೆಂಬರ್ ತಿಂಗಳಲ್ಲಿ ನಡೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಇಬ್ಬರು ವಿತಂತುಗಳು ತೇರ್ಗಡೆಯನ್ನೈದಿದರು. ಅದರ ಹಿಂದಿನ ವರುಷದಲ್ಲಿ ತೇರ್ಗಡೆಯಾ

ಗಿದ್ದ ಮತ್ತೀರ್ವರು ಮೆಟ್ರಿಕ್ಯುಲೇಷನ್ ಪರೀಕ್ಷೆಗಾಗಿ ಓದುತಲಿದಾರೆ. ಶ್ರೀಮನ್ಮಹಾರಾಣೀ ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತಲಿರುವ ಅಯಿದುಮಂದಿ ವಿಧವೆಯರು ಮುಂದಿನಸಂವತ್ಸರದ ಪರೀಕ್ಷೆಗೆ ಹೋಗುವದಕ್ಕೆ ಸನ್ನದ್ಧರಾಗಿದಾರೆ. ಮೇಲಕೋಟೆಯಲ್ಲಿ ಯಾರೋ ಒಬ್ಬ ಪಂಡಿತರು ಹನ್ನೆರಡುಮಂದಿ ವಿತಂತುಗಳನ್ನು ಪರೀಕ್ಷೆಗೆ ತಯಾರುಮಾಡುತಲಿದಾರೆಂತಲೂ, ಇಷ್ಟರಲ್ಲಿಯೇ ಅವರು ಉತ್ತೀರ್ಣರಾಗಿ ಪ್ರಸಿದ್ಧಿಗೆ ಬರಬಹುದೆಂತಲೂ, ಪ್ರಾರಂಭದಲ್ಲಿ ವಿಧವಾ ವಿದ್ಯಾಭ್ಯಾಸವು ಪ್ರಯಾಸವಾಗಿಯೂ, ಅಸಾಧ್ಯವಾಗಿಯೂ ಕಂಡುಬಂದರೂ ಅವರಿಗೆ ಕಲ್ಪಿಸಲ್ಪಟ್ಟ ಅನಿತರ ಸೌಲಭ್ಯ ಪ್ರೋತ್ಸಾಹಾನುಕೂಲ್ಯಗಳಿಂದ ಸ್ವಕೀಯ ಅವರಿಗೆ ವಿದ್ಯಾವ್ಯಾಸಂಗದಲ್ಲಿ ಪ್ರವೃತ್ತಿ ಯುಂಟಾಗಿ ಅಭಿರುಚಿಯಾಗಿ ಬಂದುದರಿಂದ ಕೆಲವು ಕಾಲದೊಳಗಾಗಿ ಮೈಸೂರು ದೇಶದಲ್ಲಿ ವಿದ್ಯಾವತಿಯರಾದ ವಿಧವೆಯರು ಪ್ರಬಲಿಸಿ ತಮ್ಮ ಸಹೋದರಿಯರ ಮುಂದಿನಸ್ಥಿತಿಗಳಂ ಪರಿಷ್ಕರಿಸಿಕೊಳ್ಳಬೇಕಾದ ವಿಷಯದಲ್ಲಿ ಪುರುಷ ಸಹಾಯಾಪೇಕ್ಷೆ ಇಲ್ಲದಂತೆ ಅವರೇ ಪ್ರವರ್ತಿಸದಿರಲಾರರೆಂತಲೂ, ಒಂದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸಿ ಅವರಿಗಾಗಿ ಶುಭಪಾದನ ಸಹ ಈಗಲೇ ಮಾಡಿರುತಿದೆ.

ನಿಖಿಲರೋಗಹಾರಿ ಕರ್ನಾಟಕ ವೈದ್ಯಶಾಲಾ.

ಮೇಲೆಕಂಡ ಹೆಸರಿನಲ್ಲಿ ಒಂದು ಹಿಂದೂ ದೇಶ್ಯ ವೈದ್ಯಶಾಲೆಯು ಮೈಸೂರ್ ಷಹರ್ ನಲ್ಲಿ ಸ್ಥಾಪಿತವಾಗಿ ಬಹುಕಾಲದ ಮೊದಲು ನಡೆದು ಬರುತಲಿದೆ. ಇದರ ವ್ಯವಸ್ಥಾಪಕರಾದ ಮ॥ ರಾ॥ ಪಂಡಿತ ಕೃಷ್ಣಜಟ್ಟಪ್ಪ ಯೆಂಬವರು ಬಹಳ ಶ್ರಮಪಟ್ಟು ಸದರೀ ವೈದ್ಯ ಶಾಲೆಯನ್ನು ಬಹಳ ಅಭಿವೃದ್ಧಿ ಪದಿಗೆ ತಂದಿರುವಂತೆ ತಿಳಿಯಬರುತಿದೆ. ಪ್ರಸಕ್ತ ವೈದ್ಯಶಾಲೆಯು ಪ್ರಥಮತಃ ಕೇವಲ ಸಾಮಾನ್ಯಸ್ಥಿತಿಯೊಳಿರುತಲಿತ್ತು. ಈಚೆಗೆ ಅದರಲ್ಲಿ ಧರ್ಮಾರ್ಥ ಮಾಡಲ್ಪಡುವ ಚಿಕಿತ್ಸೆಯು ಬಹುಮಂದಿಗೆ ಪ್ರಯೋಜನಕರವಾಗಿ ಕಂಡುಬಂದುದರಿಂದ ಚಿಕಿತ್ಸಾಪೇಕ್ಷಿಗಳಾಗಿ ಅಲ್ಲಿಗೆ ಹೋಗುವಂತೆ ರೋಗಿಗಳ ಸಂಖ್ಯೆಯು ಅಧಿಕವಾಗಿ ಇಂಗ್ಲಿಷ್ ಆಸ್ಪತ್ರಿಗಳಿಗೆ ಸಮಾನವೆನಿಸಿದೆ. ಪ್ರಬಲ ರೋಗಗಳಿಗೆ ಸಹ ಹಿಂದೂ ವೈದ್ಯಶಾಸ್ತ್ರ ಕ್ರಮವನ್ನನುಸರಿಸಿ ಔಷಧಗಳು ಕೊಡಲ್ಪಡುತಿವೆ. ಈ ವೈದ್ಯಶಾಲೆಯ ಪ್ರಯೋಜನವು ಇದರಡಿ ತಿಳಿಸಲ್ಪಡುವ ರೋಗಿಗಳ ಸಂಖ್ಯೆಗಳಿಂದ ವ್ಯಕ್ತವಾಗಬಹುದು

ಸನ್ ೧೮೯೩ ನೇ ಇಸವಿ ಡಿಸೆಂಬರ್ ೧೭ನೇ ತಾರೀಖು ಲಾಗಾಯಿತು ಮಾಹೇ ಜುಲೈನ್ ೧೬ನೇ ತಾ॥ ವರೆಗಿನ ೭ ತಿಂಗಳ ಕಾಲದಲ್ಲಿ ಚಿಕಿತ್ಸೆ ಮಾಡಿಸಿಕೊಂಡು ಗುಣವಂ ಹೊಂದಿದಂತಹವರ ಸಂಖ್ಯೆಯಂ ಕ್ರಮವಾಗಿ ತಿಳಿಸುತ್ತೇವೆ, ಹ್ಯಾಗಂದರೆ.—

ಡಿಸಂಬರ	೧೭ರ ಮೊದಲು		೩೧ರ	ವರೆಗೆ	೨೯೯
ಜನವರಿ	೧	,,	೩೧	,,	೪,೯೬೯
ಫೆಬ್ರವರಿ	೧	,,	೨೮	,,	೫,೦೯೮
ಮಾರ್ಚಿ	೧	,,	೩೧	,,	೩,೬೯೯
ಏಪ್ರಿಲ್	೧	,,	೩೦	,,	೩,೯೭೬
ಮೇ	೧	,,	೩೧	,,	೩,೯೯೩
ಜೂನ್	೧	,,	೩೦	,,	೩,೬೩೦
ಜುಲೈ	೧	,,	೧೬	,	೧,೭೩೪
		ಜುಮ್ಲಾ		. .	೨೬,೪೦೬

In all probability the object is substantially illegal Lotteries were once with us permitted, and even encouraged, by the State It is questionable, indeed, whether they were ever in any country so common as they were in England from the time of Charles II and for many years afterwards Lotteries were, in fact, part of the "domestic finance of the times. If our ancestors wanted to build a bridge or a hospital it seemed a most natural thing to set up a lottery and to draw the prizes amid great excitement at Guildhall The practice was not abandoned without protests and regrets, to which Charles Lamb gave expression when he said, "Life will now become a flat, prosaic, routine matter of fact, and sloon itself, erst so prolific in configurations and mysterious stimulants to lottery adventurers, will be disfurnished of its figures and figments." Morpheus will stifle Cupid with a handful of poppies, and our pillows will be no longer haunted by the book of numbers Parliament thought very differently from the humourist It held that lotteries, whether their object was good or bad, were pernicious incentives to dishonesty It declared them to be "common nuisances, and public nuisances, and said that the "adventurers" were to be dealt with as rogues and vagabonds It has persistently declined to modify these prohibitions except in the case of art unions, and as to them only subject to conditions which make it impossible for them, without violating the law, to become in substance lotteries Continental economists and statesmen often express amazement at the reluctance of England to sanction them in any form Private vices might, it is said, be made to minister to public advantages, many thousands a year which now go to bookmakers or are sunk in speculative companies or given to "outside brokers' would pass into the coffers of the State if it permitted lotteries for laudable object and the weal, wilful people who will not consent to lose the excitement attending efforts to make money without earning it, and will not be balked of the pleasure of risking and losing their substance, would at least know that they were taking part in an "honest gamble ' Such temptations have, fortunately, so far been resisted Seventy years have not passed since the last lottery was openly and legally held in England But the public conscience would no more now permit of its revival than it would sanction bull baiting or cock fighting, and philanthropic societies, with the rest of their operations in the Rotunda, Dublin, or In chicore, must not on the sly and circuitously do what would expose less pretentious 'adventurers" to being treated as "rogues and vagabonds"

There are at times contagious follies true moral epidemics, which only robust constitutions escape and the oddest feature of them is that they attack with marked virulence particular classes Man is a gambling animal, his present love of the excitements of the turf or speculation may be but a modified form of the impulse which made him of old a hunter and a trapper Vauvenargues has pointed out that all passions feed and foster the taste for gaming, no streets has so many tributaries But while the middle and upper classes are gradually purging themselves of folly in this respect, the lower class is a mutton with this passion to a degree of which those above them know nothing Education has not checked it On the contrary, it has increased the facility for gratifying this desire Question prison chaplains as to the most potent source of crime, and they would be divided in opinion as to whether it is drink or gambling But none will rate lightly the effect of the latter Some day we shall, perhaps, find a safe channel of escape for passions which now take delight in ignoble forms of betting It may be a passing prevalent mood attributable to a thirst for excitement with new means and opportunities for gratifying it in the shape of high wages and shorter hours But the turn of the tide is still a long way off, and the least that careful people can do is not to make matters worse by launching at Inchicore and elsewhere in Ireland lotteries flying the flag of philanthropy.

ಕರ್ನಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ಸೆಪ್ಟೆಂಬರ ೩ನೇ ತಾ|| ಸೋಮವಾರ

ವರಾನ್ವೇಷಣ.

ಶ್ರೀಮನ್ಮಹಾರಾಜರವರ ಜ್ಯೇಷ್ಠ ಪುತ್ರಿಯವರಾದ ಸೌಭಾಗ್ಯವತಿ ಶ್ರೀ ಜಯಲಕ್ಷ್ಮಮ್ಮಣ್ಣಿಯವರಿಗೂ, ಅವರ ಸಹೋದರಿಯವರಿಗೂ ಪರಿಣಯಕಾಲವು ಸನ್ನಿಹಿತವಾದುದರಿಂದ ಅವರಿಬ್ಬರಿಗೂ ಅನುರೂಪರಾದ ವರಾನ್ವೇಷಣಾಲೋಚನೆಯು ಶ್ರೀಮನ್ಮಹಾರಾಜರವರ ದಿವ್ಯಚಿತ್ತದಲ್ಲಿ ತಲೆದೋರಿ ರವರು ತಮ್ಮ ಗೌರವವೈಭವಗಳಿಗೆ ಅನುಗುಣವಾದ ಅನ್ಯ ಸಂಸ್ಥಾನಾಧಿಪತಿಗಳ ಸಂಬಂಧವನ್ನು ಬೆಳೆಸಬೇಕೆಂಬ ಕುತೂಹಲವು ಅಪ್ರೇರಿತವಾಗಿಯೋ ಅಥವಾ ಪರಪ್ರೇರಿತವಾಗಿಯೋ ಉಂಟಾಗಿ ವರಾನ್ವೇಷಣ ವಿಚಾರವಂ ತಮ್ಮ ಮಂತ್ರಾಲೋಚಕರಲ್ಲೊಬ್ಬರಾದ ಆನರೆಬಲ್ ಮಿ| ಚೆಂಚಲರಾವ್ ಸಿ.ಐ.ಇ. ಯವರಿಗೊಪ್ಪಿಸಿ ಸಕಲ ಸಾಮಗ್ರಿ ಸಂಯೋಗಗಳೊಡನೆ ಕಳುಹಿಸಿದ್ದರೆಂಬ ವಿಷಯವು ನಾವು ಕೆಲವು ವಾರಗಳ ಹಿಂದೆಯೇ ಪ್ರಕಟಿಸಿದ್ದೆವಷ್ಟೆ. ಮಿ| ಚೆಂಚಲರಾಯರವರು ಉತ್ತರ ದೇಶ ಸಂಚಾರವಂ ಪೂರ್ತಿ ಮಾಡಿಕೊಂಡು ಈಪೂರಿಗೆ ವಾಪಸ್ ದಯಮಾಡಿದರು. ಪರಂತು ಅವರು ನಿಯಮಿತರಾಗಿ ಕಳುಹಿಸಲ್ಪಟ್ಟದ್ದ ಮಹತ್ಕಾರ್ಯವು ಸ್ಥಗಿತ ವ್ಯವಸ್ಥೆಯಾಯಿತೋ ಆ ಅರ್ಥವು ಅವ್ಯಕ್ತ ಅಂತರಂಗದಲ್ಲಿಯೇ ಇದೆ. ಒಂದುವೇಳೆ ಅವರು ಹೋಗಿದ್ದ ಕಾರ್ಯವು ಸಾಧಿಸಿಕೊಂಡು ಬಂದಿರುವವರಾದರೆ ಅವರ ಪತ್ನ್ಯಾಯುಕ್ತವಾದ ಜ್ಞಾಪಕವು ಇಷ್ಟರೊಳಗೆ ಪ್ರಕಾಶವಾಗಿರುವುದು ಏತಕ್ಕೆಂದರೆ, ಲೋಕದಲ್ಲಿ ಪ್ರತಿ ಮನುಷ್ಯನಿಗೂ ಸಜಾತೀಯ ವರ್ಗದಲ್ಲಿ ಅಭಿಮಾನವು ನಿರೂಢವಾಗಿರುವುದು ಸ್ವಾಭಾವಿಕವಾದುದರಿಂದ, ಶ್ರೀಮನ್ಮಹಾರಾಜರವರು ತಮ್ಮ ಮಹದ್ಗೌರವಕ್ಕೂ, ಸಂಸ್ಥಾನದ ಕೀರ್ತಿ ಪ್ರತಿಷ್ಠೆಗಳಿಗೂ ಅನುರೂಪವಾದ ಸಂಬಂಧವನ್ನಾಶಿಸಬೇಕಾದುದು ಧರ್ಮವಾದುದರಿಂದ ಅವರ ಅಭೀಷ್ಟವು ಸಫಲಗೊಳಿಸತಕ್ಕ ಕಾರ್ಯವು ಸಾಧಾರಣವಲ್ಲವಾಗಿ ಅದರ ಮಹತ್ವರಹಸ್ಯವು ಸ್ಮರಣೀಯವೆನಿಸದಿರಲಾರದು. ಪ್ರಸಕ್ತ ಉದ್ದೇಶದಿಂದ ಮಿ| ಚೆಂಚಲರಾಯರವರು ಮೂವರು ರಾಜಪುತ್ರರುಗಳಂ ಆರಿಸಿ ಅವರ ತಸ್ವೀರುಗಳನ್ನು ಸಹ ತಂದಿರುತ್ತಾರೆಂದೂ ಕೇಳುತ್ತೇವೆ. ಸದರೀ ಮೂವರಲ್ಲಿ ಮೊದಲನೆಯವರು, ಜೋಧಪುರದ ಮಹಾರಾಜರವರಾಗಿಯೂ, ಎರಡನೇಯವರು ರತ್ಲಾಂ ಸಂಸ್ಥಾನದ ಅರಸರಾಗಿಯೂ, ಮೂರನೆಯವರು ಕೋಟಾ ಸಂಸ್ಥಾನದಲ್ಲಿರುವ ಮೋರ್ವಿ ಅರಸರ ಜ್ಯೇಷ್ಠಪುತ್ರರಾಗಿಯೂ ಇರುವಂತೆ ತಿಳಿಯಬರುತ್ತದೆ ಬಹುತರವಾಗಿ ಮೇಲೆ ಕಂಡ ಮೂವರಲ್ಲಿ ಕಡೆಯವರೇ ಈ ಸಂಸ್ಥಾನದ ಅಳಿಯತನಕ್ಕೆ ಬರಬಹುದೆಂದು ತೋರುತ್ತದೆಂಬುದಾಗಿ ಕಳೆದ ತಿಂಗಳ ೩೦ನೇ ತಾರೀಖಿನ ಮದರಾಸ್ ಸ್ಟ್ಯಾಂಡರ್ಡ್ ಪತ್ರಿಕೆಯು ಪ್ರಕಟಿಸಿರುತ್ತದೆ. ಪ್ರಾಯಶಃ ಇಲ್ಲಿನ ಸಕಲ ರಹಸ್ಯಗಳು ಇಲ್ಲಿಗಿಂತಲೂ ಮುಂದಾಗಿ ಮದರಾಸಿನಲ್ಲಿ ಪ್ರಕಟವಾಗುವಣಾ ನಾಟಕೀಯಾಗಿರುವುದರಿಂದ ಇಲ್ಲಿ ರಹಸ್ಯವಿಷಯಕವಾದ ವರ್ತಮಾನಗಳೊಂದೂ ಹೊರಪಡದಿದ್ದರೂ ಸ್ಟ್ಯಾಂಡರ್ಡ್ ಪತ್ರಿಕೆ ಮಾತ್ರ ಮಹಾರಾಜರವರ ಮನೋಗತಾಭಿಪ್ರಾಯವಂ ತಿಳಿದು ಪ್ರಕಟಿಸುತ್ತಿದೆಯಾಗಿ ಅದು ನಿಜವಾಗಿರಬಹುದೆಂದು ಸದ್ಯ ನಂಬುತ್ತೇವೆ. ಸದರೀ ಸ್ಟ್ಯಾಂಡರ್ಡ್ ಪತ್ರಿಕೆಯು ಪ್ರಕಟಿಸಿರುವ ಅಭಿಪ್ರಾಯಾನುಗುಣವಾಗಿ ಜೋಧಪುರ ಮಹಾರಾಜರವರಿಗೆ ಈಗಲೇ ದಾಂಪತ್ಯಯರಿಬ್ಬರಿದ್ದಾರೆಂತಲೂ, ರತ್ಲಾಂ ಸಂಸ್ಥಾನದ ಅರಸರವರು ಅಪ್ರಾಪ್ತವಯಸ್ಕರಾಗಿ ಇಂದೋರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಲಿದ್ದಾರೆಂತಲೂ, ತಿಳಿಯಬರುತ್ತದೆ ಏನಾದರೆ ಶ್ರೀಮನ್ಮಹಾರಾಜರವರು ಕುಟುಂಬ ಸಮೇತರಾಗಿ ನವರಾತ್ರಿ ಉತ್ಸವಾನಂತರ ಸದರೀ ಸಂಸ್ಥಾನಗಳಿಗೆ ದಯಮಾಡಿ ಸ್ವತಃ ವರನಿರ್ಣಯವಂ ಮಾಡಬಹುದೆಂದು ಸದರೀ ಪತ್ರಿಕೆಯು ತಿಳಿಸುತ್ತಿದೆ ಈಗ ಮೈಸೂರ್ ರಾಜವಂಶ ಸಂಬಂಧವನ್ನಪೇಕ್ಷಿಸಿರುವಂತ ಮೂವರು ಸಂಸ್ಥಾನಾಧಿಪತಿಗಳ ವಿಚಾರವು ತಿಳಿದುಕೊಳ್ಳಬೇಕಾದುದು ಈದೇಶೀಯರಿಗೆ ಅಪೇಕ್ಷಿತಾಂಶವಾಗಿರಬಹುದಾಗಿ ಅದುಮುಂದೆ ತಿಳಿಸುವೆವು.

ಹಿಂದೂ ಅನಾಥಬಾಲಕಪೋಷಣಶಾಲಾಸ್ಥಾಪನೆ.

ಈ ಪೂರು ಬಳೇಪೇಟೆಯಲ್ಲಿರುವ ಶ್ರೀನಿವಾಸ ಮಂದಿರವೆಂಬ ದೇವಸ್ಥಾನಕ್ಕೆ ಸೇರಿದಂತೆ ಅನಾಥ ಬಾಲಕ ರಕ್ಷಣ ಶಾಲೆಯೊಂದು ಸ್ಥಾಪಿಸಬೇಕೆಂಬ ಉದ್ದೇಶದಿಂದ, ಅವರ ಸಹಾಯಾರ್ಥಬು ೨ಲಕ್ಷ ರೂಪಾಯಿಗಳಿಗೆ ಲಾಟರಿ ಹಾಕಿ ಅದರಲ್ಲಿ ೫೦,೦೦೦ ರೂಪಾಯಿಗಳು ಸದರೀ ಕಾರ್ಯಕ್ಕೆ ಉಪಯೋಗಿಸಿ ಕೊಳ್ಳುವಂತೆ ಹುಕುಂ ಆಗಬೇಕೆಂದು ಈ ಗವರ್ನಮೆಂಟಿನವರು ಪ್ರಾರ್ಥಿಸಲ್ಪಟ್ಟ ಅದರಂತೆ ಮಹಾರಾಜಾ ಸರ್ಕಾರದವರು ಹುಕುಂ ಕೊಡುವ ಆಲೋಚನೆಯಲ್ಲಿರುವಂತೆ ನಮಗೆ ತಿಳಿಯಬಂದ ವರ್ತಮಾನವನ್ನು ಕಳೆದ ವಾರದ ಈ ಪತ್ರಿಕೆಯಲ್ಲಿ ಇಂಗ್ಲೀಷ್ ಭಾಷೆಯೊಳು ಪ್ರಕಟಿಸಿರುತ್ತೇವೆಯಷ್ಟೆ ಅನಾಥ ಬಾಲಕ ರಕ್ಷಣ ಶಾಲೆ ಎಂಬ ವಾಕ್ಯಾರ್ಥವು ಬೋಧಕವಾಗಿ ಅದು ಜಾತಿ ಮತ ತಾರತಮ್ಯಗಳು ಯಾವವೂ ಪರಿಗಣಿಸಲ್ಪಡದೆ ನಿಖಿಲ ಜಾತಿಯವರಿಗೂ ಉಪಯುಕ್ತವಾದುದಾಗಿರಬೇಕೆಂಬ ಅರ್ಥವ ಗ ದಲಿರೆ ಆರೀತಿ ಪರಮತವಣ ಪ್ರಜಾ ಮತ ತಾರತಮ್ಯಕ್ಕೆ ಬದ್ಧರಾದ ಹಿಂದುಗಳಲ್ಲಿ ಸುತರಾಂ ಅಸಾಧ್ಯವಾದ ಪ್ರಯತ್ನವೆಂದು ಹೇಳಬೇಕಾಗಿದೆ ಮತ್ತು ಸಾಮಾನ್ಯವಾಗಿ ಹಿಂದೂಗಳು ಇದಕ್ಕೆ ಒಡಂಬಡಲಾರರು. ಲಾಟರಿ ಎಂಬುದು ಬಹುವಿಧ ಜೂಜಾಟಗಳ ಲೆಕ್ಕಾಚಾರಗಳಿರುವುದರಿಂದ ಬ್ರಿಟಿಷ್ ಅಧಿಕಾರಕ್ಕೊಳಪಟ್ಟ ದೇಶಗಳಲ್ಲಿ ಅದು ನಡೆಸಕೂಡದೆಂದು ಖಂಡಿತವಾಗಿ ನಿಷೇಧಿಸಲ್ಪಟ್ಟಿರುತ್ತದೆ ಬ್ರಿಟಿಷ್ ಗವರ್ನಮೆಂಟಿನವರಿಂದ ನಿಷೇಧಿಸಲ್ಪಟ್ಟಿರುವ ಒಂದು ಕೃತ್ಯವನ್ನು ಶ್ರೀಮನ್ಮಹಾರಾಜಾ ಸರ್ಕಾರದವರು ನಡೆಸುವರಾಗಲಿ ಅವರಿಗೆ ಉಚಿತವಾಗಿ ತೋರಲಾರದು. ಮತ್ತು ಬ್ರಿಟಿಷ್ ಗವರ್ನಮೆಂಟಿಗೆ ಒಳಪಟ್ಟ ದೇಶಗಳಲ್ಲಿ ಜಾರಿಯೊಳಿರುವ ಕಾನೂನುಗಳೇ ಈ ದೇಶದಲ್ಲಿಯೂ ಅಚರಿಸಲ್ಪಡುತ್ತಿರುವುದರಿಂದ ಪ್ರಸಕ್ತ ವಿಷಯದಲ್ಲಿ ಮಾತ್ರ ಒಂದು ವಿನಾಯತಿಯು ಕಲ್ಪಿಸುವುದು ಪ್ರಜಾಸಮ್ಮತವಾಗಿರಲಾರದು ಪ್ರಸಕ್ತ ಆಲೋಚನೆಗೆ ಗವರ್ನಮೆಂಟಿನವರು ಸಹಾಯಕರಾಗುವದರ ಸ್ಥಾಪನೆಯು ಮುಂದಾಗುವ ಪಕ್ಷದಲ್ಲಿ ಜಾತಿ ಸಂಕರ ಪ್ರಾಪ್ತವಾಗಬಹುದೆಂದು ಕ್ರಿಸ್ತಾನರಲ್ಲದ ಹಿಂದೂಗಳು ಬಹಳ ಚಿಂತಿಸುತಲಿದ್ದಾರೆ. ಮಹಾರಾಜಾ ಸರ್ಕಾರದವರಾಗಲಿ, ಬ್ರಿಟಿಷ್ ಗವರ್ನಮೆಂಟಿನವರಾಗಲಿ ಪ್ರಸಕ್ತ ಪ್ರಯತ್ನದ ವಿಷಯದಲ್ಲಿ ಪ್ರಜೆಗಳ ಅಭಿಪ್ರಾಯವು ಚಿಟ ರಕ್ಷಣಕ್ಕೆ ತಿಳಿದುಕೊಳ್ಳುವದಕ್ಕೆ ಮುಂಚಿತವಾಗಿ ಅದು ಮುಂದಾಗುವದು ನ್ಯಾಯ ವಲ್ಲವಾಗಿರುವದೆಂದು ನಾವೆಣಿಸಲಾರೆವು ಈ ಪ್ರಯತ್ನದಿಂದ ಸಾಮಾನ್ಯವಾಗಿ ಪ್ರಜೆಗಳಿಗೆ ಯಾವವಿಧ ಪ್ರಯೋಜನವೂ ಉಂಟಾಗಲಾರದು ಹಿಂದೂಗಳಲ್ಲಿ ಜಾತಿ ಮತ ಪ್ರಯುಕ್ತವಾದ ತಾರತಮ್ಯಗಳು ಅನೇಕವಾಗಿರುವದರಿಂದ ಯೆಲ್ಲರು ಒಂದಾಗಿ ಸೇರಿರಲಾರದು ಅವರವರ ಜಾತಿ ತಾರತಮ್ಯಾನುಗುಣವಾಗಿ ಪ್ರತ್ಯೇಕವಾಗಿ ಅಡಿಗೆಯೂ ಭೋಜನವೂ ಆಗಬೇಕಾಗಿರುವುದು. ಎಲ್ಲ ಜಾತಿಯವರೂ ಏಕತ್ರ ಸೇರಿ ಭೋಜನ ಮಾಡುವ ಕಾಲವು ಇನ್ನು ಬಹು ದೂರವಾಗಿರುವದರಿಂದ ಅದುವರೆಗೆ ಆಯಾ ಜಾತಿ ಮತ ಸಂಪ್ರದಾಯ ಬದ್ಧರಾದವರ ಇಷ್ಟಾನುಸಾರ ಆಹಾರಗಳಂ ಸಿದ್ಧಪಡಿಸ ಬೇಕಾದುದು ಅವಶ್ಯ ಕರ್ತವ್ಯ ವಾಗಿರುವುದು ಪರಂತು ಆರೀತಿ ಮಾಡುವದು ಸಾಧ್ಯವೆಂದು ನಾವೆಣಿಸಲಾರೆವು ಒಂದುವೇಳೆ ಹಾಗೂ ಮಾಡುವ ಪಕ್ಷಕ್ಕೆ ಅದು ಬಹು ಧನ ವ್ಯಯದಿಂದಲ್ಲದೆ ಸಾಧ್ಯವಾಗಲಾರದು ಪರಂತು ಉದ್ದಿಷ್ಟ ಪ್ರಯೋಜನವು ಸಿದ್ಧಿಸುವುದು ಮಾತ್ರ ಸಂಶಯಗ್ರಸ್ತವಾಗಿರುವುದು. ಉದ್ದಿಷ್ಟ ಶಾಲೆಯಲ್ಲಿ ಸೇರಬಹುದಾದ ಮಕ್ಕಳೆಲ್ಲರು ಒಂದೇ ಮತಕ್ಕೂ ಒಂದೇ ಜಾತಿಗೂ ಸೇರಿದವರಾಗಿರುವ ಪಕ್ಷಕ್ಕೆ ಒಂದು ವೇಳೆ ಕ್ರಮವಾಗಿ ನಡೆದರೂ ನಡೆಯಬಹುದು. ಪ್ರಸಕ್ತ ಕಾರ್ಯ ಪ್ರವರ್ತಕರಾದವರು ಎಲ್ಲ ಜಾತಿಹುಡುಗ

ರನ್ನು ಮೇಲಿನ ಶಾಲೆಯಲ್ಲಿ ಒಂದಾಗಿ ಸೇರಿಸಬಹುದೆಂದು ಉದ್ದೇಶಿಸಿರಬಹುದು. ಪರಂತು ಅದು ಅವರಿಗೆ ಹ್ಯಾಗೆ ಸಾಧ್ಯವಾಗುವುದೊ ನಾವರಿಯೆವು. ಮೈಸೂರು ಸರ್ಕಾರದವರು ಪ್ರಸಕ್ತ ಪ್ರಯತ್ನಕ್ಕೆ ಸಮ್ಮತಿಸಿ ಅದಂ ಮಂಜೂರ್ಮಾಡುವದಕ್ಕೆ ಪೂರ್ವಭಾವಿಯಾಗಿ, ಅದರ ಔಚಿತ್ಯವಂ ಕುರಿತು ಚೆನ್ನಾಗಿ ಆಲೋಚಿಸಬೇಕು, ಏತಕ್ಕೆಂದರೆ, ಮುಂದೆ ಅದು ಯಾವ ಕ್ರಮವನ್ನನುಸರಿಸಿ ನಡೆಯಬೇಕೋ ಹಾಗೆ ನಡೆಯದೆ ಹೋದರೆ ಅದರಿಂದ ಗವರ್ನಮೆಂಟಗೂ ಹಿಂದೂಸಮುದಾಯಕ್ಕೂ ಅಪಪ್ರಥೆಯುಂ ತಪ್ಪಲಾರದು. ಈ ವಿಷಯದೊಳು ಗವರ್ನಮೆಂಟನವರು ಹಿಂದೂ ಸಮುದಾಯದಲ್ಲಿ ಪ್ರಮುಖರಾಗಿರುವ ಕೆಲರೊಡನೆ ಆಲೋಚಿಸುವರಾದರೆ ಆಗ ಅವರ ಯುಕ್ತಾಯುಕ್ತತೆಯು ಸ್ಪಷ್ಟವಹುದು. ಪ್ರಜೆಗಳಿಗೆ ಒಪ್ಪನಿಲ್ಲವೆಯೂ ಅನುಪಯುಕ್ತವಾಗಿಯೂ ಇರುವ ಪ್ರಸಕ್ತ ಪ್ರಯತ್ನವನ್ನು ಗವರ್ನಮೆಂಟನವರು ಮಂಜೂರ್ಮಾಡುವ ವಿಷಯದಲ್ಲಿ ಪರಪ್ರೇರಿತೆಯು ಕಾರ್ಯಕಾರಿಯಾಗದಿರಬೇಕೆಂದು ನಾವು ಕೋರುತ್ತೇವೆ. ಮುಖ್ಯವಾಗಿ ಮೇಲೆ ತಿಳಿಸಲ್ಪಟ್ಟಿರುವ ಅನಾಥಬಾಲಕರ ಶಾಲೆಯು ಅನಾವಶ್ಯಕವಾದುದು. ಇದಕ್ಕೆ ಪ್ರತ್ಯಾಮ್ನಾಯವಾಗಿ ಪ್ರಜೆಗಳ ಅಪೇಕ್ಷಿತಾರ್ಥವಂ ನೀಡುವಂತ ಬೇರೆಯೊಂದು ಉಪಾಯವು ನಮಗೆ ತೋರುತಿರ್ಪದೇನೆಂದರೆ, ಈ ದೇಶದಲ್ಲಿರುವ ನಾನಾವಿಧ ಹೆಸರುಳ್ಳ ಮಠಗಳಿಗೆ ಗವರ್ನಮೆಂಟನವರು ಸಾಲಿಯಾನಾ ಭಾರೀಯಾಗಿ ಅರ್ಥಸಹಾಯ ಮಾಡುವುದು ಮಾತ್ರವಲ್ಲದೆ ಇದರೀ ಮಠಗಳಿಗೆ ಕೊಡಲ್ಪಟ್ಟಿರುವ ಭೂಸ್ವತ್ತುಗಳಿಂದಲೂ ವಿಶೇಷವಾಗಿ ಹುಟ್ಟುವಳಿಯಾಗುತಲಿದೆ. ಇದು ಶಿವಾಯಿ ಶಿಷ್ಯಮಂಡಲಿಯಿಂದಲೂ ಆಯತಿಯುಂಟು. ಇವೆಲ್ಲವು ಸೇರಿ ಭಾರೀಯಾದ ಒಂದು ವರಮಾನವಾಗಿರುತದೆ. ಹೀಗಿರುವದರಿಂದ, ಅನಾಥರಾದ ಬಾಲಕರ ಪೋಷಣೆ ಮತ್ತು ವಿದ್ಯಾಭ್ಯಾಸ ಕಾರ್ಯಕ್ಕಾಗಿ ಮಠಾಧಿಪತಿಗಳು ತಮ್ಮ ಆಯತಿಯಲ್ಲಿ ಒಂದು ಭಾಗವನ್ನು ಉಪಯೋಗ ಪಡಿಸಬೇಕೆಂದು ಗವರ್ನಮೆಂಟನವರು ಅವರಂ ನಿರ್ಬಂಧಿಸಬೇಕು. ಪ್ರಕೃತ ಸ್ಥಿತಿಯಲ್ಲಿ ಪ್ರಾಯಶಃ ಮಠಗಳ ಆಯತಿಗಳಲ್ಲಿ ಬಹುಭಾಗ ದುರ್ವಿನಿಯೋಗವಾಗುತಲಿದೆಯೆಂಬ ಅಂಶವು ಪ್ರಸಿದ್ಧ ವಿಷಯವಾಗಿದೆ. ಈ ಮಠಾಧಿಪತಿಗಳು ತಮ್ಮ ಆಯತಿಗಳನ್ನು ತಮ್ಮ ಬಂಧುವರ್ಗಕ್ಕೆ ಸೇರಿದವರ ವಿಷಯದಲ್ಲೂ ಮಿತ್ರಮಂಡಲಿಯ ವಿಷಯದಲ್ಲೂ ಮನಸ್ವಿ ವ್ಯಯಮಾಡುವದಕ್ಕಿಂತಲೂ, ಅವರವರ ಜಾತಿ ಮತ ಸಂಪ್ರದಾಯಗಳಿಗೆ ಬದ್ಧರಾದ ಅನಾಥ ಬಾಲಕರ ಪೋಷಣೆ ಮೊದಲಾದವು ಮುಖ್ಯಮುಖ್ಯ ಪ್ರದೇಶಗಳಲ್ಲಿ ವಹಿಸಿಕೊಳ್ಳುವರಾದರೆ ಈಗ ಆಲೋಚನೆಗೆ ವಿಷಯವಾಗಿರುವ ಅನಾಥಶಾಲೆಯ ಆವಶ್ಯಕತೆಯು ಸುತರಾಂ ಇರಲಾರದು. ಪ್ರತಿಯೊಂದು ಮಠಾಧಿಪತಿಯು ಅಥವಾ ಅವರ ಕಡೆ ಅಧಿಕಾರಿಗಳು ಮೇಲೆ ತಿಳಿಸಲ್ಪಟ್ಟಿರುವಂತೆ ತಮ್ಮ ಜಾತಿಗೆ ಸೇರಿದ ಅನಾಥ ಬಾಲಕರನ್ನು ಪೋಷಿಸಿ ಅವರನ್ನು ಪ್ರವರ್ಧಮಾನ ಸ್ಥಿತಿಗೆ ತರುವಂತೆ ಯೇರ್ಪಾಡಾಗಬೇಕು. ಇದರ ಮೇಲೆ ಗವರ್ನಮೆಂಟ ಅಧಿಕಾರಿಗಳ ಮೂಲಕ ತನಿಖೆಯುಂಟಾಗಿ, ಯಲ್ಲಿ ಲೋಪ ಕಂಡುಬಂದಾಗ್ಯೂ ಅದಕ್ಕೆ ಕಾರಣಭೂತರಾದವರು ಗವರ್ನಮೆಂಟನವರ ಅವಧಾನಕ್ಕೆ ತರಲ್ಪಡುವರು. ಇಂತಾ ಕಾರ್ಯಗಳಿಗೆ ಬೇಕಾದಷ್ಟು ದ್ರವ್ಯೋತ್ಪತ್ತಿಯುಂಟಾಗಿದೆ. ಈಗ ಮುಜರಾಯಿ ಇಲಾಖಾ ಅಧಿಕಾರವಂ ವಹಿಸಿರುವ ದೊಡ್ಡ ಮನುಷ್ಯರು ಮೇಲಿನ ಉದ್ದೇಶವಂ ಆಚರಿಸುವದಕ್ಕೆ ಶಕ್ತರಾಗಿರುವರೆಂದು ನಂಬುತ್ತೇವೆ. ಜನಗಳಿಗೆ ಅಸಮ್ಮತವಾದ ಆ ಶಾಲೆಗಿಂತಲೂ ಮೇಲೆ ಸೂಚಿಸಲ್ಪಟ್ಟಿರುವ ಯೇರ್ಪಾಡು ಬಹಳ ಶ್ಲಾಘ್ಯವಾಗಿರುವುದು. ಈ ಏರ್ಪಾಡಿನ ವಿಷಯದಲ್ಲಿ ಗವರ್ನಮೆಂಟನವರು ಮುಜರಾಯಿ ಅಧಿಕಾರಿಗೆ ಪ್ರೋತ್ಸಾಹವನ್ನುಂಟುಮಾಡಿ ಸಂಪೂರ್ಣ ಸಹಾಯಕರಾಗುವರೆಂದು ನಂಬುತ್ತೇವೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

ಬಡೋದೆ ಮಹಾರಾಜರವರ ಮಾತುಶ್ರೀಯವರು ಕ್ಯಾಂಡಿಷ್ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮದಲ್ಲಿ ಮೃತಪಟ್ಟದ್ದಾಗಿ ಆಚೆ ಶನಿವಾರದ ದಿನ ಬಡೋದೆಗೆ ವರ್ತಮಾನ ಹೋಗಲು ಆದಿನ ನಿಶಿಷ್ಟ ಕಚ್ಚೇರಿಗಳೂ, ಸ್ಕೂಲುಗಳೂ, ವ್ಯಾಪಾರ ಕೋಠಿಗಳು ಮೊದಲಾದವೆಲ್ಲವೂ ಮುಚ್ಚಲ್ಪಟ್ಟವು.

ಈಗ ಚೀನಾ ಸಂಸ್ಥಾನದವರಿಗೂ ಜಪಾನ್ ಸಂಸ್ಥಾನದವರಿಗೂ ನಡೆಯುತಲಿರುವ ಯುದ್ಧದವಿಷಯದಲ್ಲಿ ಬ್ರಿಟಿಷಸರ್ಕಾರಕ್ಕೆ ಸೇರಿದ ಪ್ರಜೆಗಳೆಲ್ಲರು ಖಂಡಿತವಾಗಿ ತಾಟಸ್ಥ್ಯವಂ ವಹಿಸಿರತಕ್ಕದ್ದೆಂದು ವಿಕ್ಟೋರಿಯಾ ಮಹಾರಾಜ್ಞೀಯವರ ಸರ್ಕಾರದಿಂದ ಇಸ್ತಿಹಾರ್ನಾಮೆಯು ಕೊಡಲ್ಪಟ್ಟಿರುತದೆ.

ಕಳೆದ ಆರುವರ್ಷಗಳ ಕಾಲದಲ್ಲಿ ಇಂಗ್ಲೆಂಡುದೇಶದ ಯೂನಿವರ್ಸಿಟಿಗಳೆಂಬ ಶಾಸ್ತ್ರಪಾಠಶಾಲೆಗಳಿಂದ ಆರುಸಾವಿರ ಮಂದಿಗಿಂತಲು ಹೆಚ್ಚಾಗಿಯೇ ವಿದ್ಯಾರ್ಥಿಗಳು ಗ್ರ್ಯಾಜ್ಯುಯೇಟುಗಳೆಂಬ ಪ್ರಶಸ್ತಿಯಂ ಪಡೆದಿರುತ್ತಾರೆ. ವಿವಿಧ ಕಾಲೇಜುಗಳಲ್ಲೂ ಸ್ಕೂಲುಗಳಲ್ಲೂ ನಾಲ್ಕುಲಕ್ಷ ವಿದ್ಯಾರ್ಥಿಗಳು ಓದುತಲಿದ್ದಾರೆ.

ಕಳೆದವಾರದ ಅಂತ್ಯಭಾಗದಲ್ಲಿ ಜಪಾನ್ ದೇಶೀಯರಿಗೂ ಚೀನಾದೇಶದವರಿಗೂ ಮರಳಿ ಯುದ್ಧ ಪ್ರಾರಂಭವಾಗಿ ಚೀನಾದೇಶೀಯರು ಆರುಸಾವಿರಮಂದಿ ಕೋರಿಯಾ ದೇಶದ ಸೈನಿಕರ ಸಹಾಯದೊಡನೆ ಜಪಾನ್ ಸೈನ್ಯವನ್ನೆದುರಿಸಿದ್ದು ಹೊಡೆದು ಪ್ರಬಲ ನಷ್ಟದೊಡನೆ ಅವರನ್ನು ನಾಲ್ವತ್ತು ಮೈಲಿಗಳ ದೂರ ಹಿಂದಕ್ಕೆ ಓಡಿಸಿಬಿಟ್ಟು ಮುಂದಕ್ಕೆ ಹೋಗುತಲಿರುವದಾಗಿ ಲಂಡನ್ ಟೈಂಸ್ ಪತ್ರಿಕೆಗೆ ತಂತಿವರ್ತಮಾನ ಬಂದಿರುತದೆ.

ಗಂಗಾನದಿಯಲ್ಲಿ ಪ್ರಬಲ ಪ್ರವಾಹ ಬಂದು ಗಾಜೀಪುರ ಮೊದಲು ಬಕ್ಸರ್ ವರೆಗೂ ಏಳು ಮೈಲಿಗಳ ಅಗಲ ಜಲಮಯವಾಗಿರುವಂತೆಯೂ, ನದಿಯ ದಕ್ಷಿಣ ತೀರದಲ್ಲಿರುವ ಷಹರ ನಿವಾಸಿಗಳು ದುಸ್ಸಹವಾದ ಕಷ್ಟಕ್ಕೆ ಗುರಿಯಾಗಿರುವಂತೆಯೂ, ಕೆಲವು ಪ್ರದೇಶಗಳಲ್ಲಿ ಮನೆಗಳೊಳಗೂ ನದಿಯ ನೀರು ನುಗ್ಗಿ ವಾಸಯೋಗ್ಯವಲ್ಲದೆ ಹೋಗಿರುವಂತೆಯೂ ಉತ್ತರದೇಶದ ಪತ್ರಿಕೆಯೊಂದರ ಮೂಲಕ ತಿಳಿಯಬರುತದೆ.

ಫ್ರಾನ್ಸ್‌ದೇಶದ ಪ್ರಜಾ ಪ್ರಭುತ್ವ ಸಭೆಯ ಅಗ್ರಾಸನಾಧಿಪತಿಯವರಾಗಿದ್ದ ಮ! ಕಾರ್ನಟ್ ಎಂಬವರು ಈಚೆಗೆ ಎರಡು ತಿಂಗಳ ಹಿಂದೆ ಒಬ್ಬ ದುರಾತ್ಮನಿಂದ ಖೂನಮಾಡಲ್ಪಟ್ಟರಷ್ಟೆ. ಅವರ ಉತ್ತರ ಕ್ರಿಯೆಯಲ್ಲಿ ಪೇರಿಸ್ ಪಟ್ಟಣದಲ್ಲಿ ಮಾತ್ರ [illegible] ಒಂದುಲಕ್ಷರೂಪಾಯಿಗಳಿಗೆ ಮೇಲ್ಪಟ್ಟು ಕ್ರಯ ಬಾಳುವಷ್ಟು ಪುಷ್ಪಹಾರಗಳು ಶವದಮೇಲೆ ಹಾಕಲ್ಪಟ್ಟವು.

ಕಳೆದ ತಿಂಗಳ ೨೫ನೇ ತಾರೀಖಿನವರೆಗೆ, ಸಾಲಿಯಾನಾ ಸೇಕಡ ನಾಲ್ಕುರೂಪಾಯಿಗಳ ಬಡ್ಡಿಬಾಬತು ಹದಿನೇಳುಕೋಟಿ ಅರುವತ್ತೇಳು ಲಕ್ಷ ರೂಪಾಯಿಗಳ ಇಂಡ್ಯಾ ಗವರ್ನಮೆಂಟ ಪ್ರಾಮಿಸರಿ ಪತ್ರಗಳು ಸಾಲಿಯಾನಾ ಸೇಕಡ ಮೂರೂವರೆ ರೂಪಾಯಿಗಳ ಬಡ್ಡಿ ದರಕ್ಕೆ ಬದಲಾಯಿಸುವದಕ್ಕಾಗಿ ಹಾಜರ್ಮಾಡಲ್ಪಟ್ಟವು. ಇವುಗಳಲ್ಲಿ ೧೮೫೪ನೇ ಇಸವಿಯಲ್ಲಿ ಮಾಡಿದ ಸಾಲದ ಬಾಬತು ಹದಿನಾಲ್ಕುಕೋಟಿ ಎಪ್ಪತ್ತೈದು ಲಕ್ಷ ರೂಪಾಯಿಗಳ ಕ್ರಯವುಳ್ಳದ್ದು.

ತಿರುವಾಂಕೂರು ಸಂಸ್ಥಾನದ ದೊಡ್ಡ ರಾಣಿಯವರು ಬರುವ ಅಕ್ಟೋಬರ್ ತಿಂಗಳಲ್ಲಿ ರಾಮೇಶ್ವರ ಯಾತ್ರೆ ಹೊರಡಬೇಕೆಂದು ಯೋಚಿಸಿರುವದಾಗಿ ಅಲ್ಲಿನ ರೆಸಿಡೆಂಟರವರು ಮದರಾಸ್ ಗವರ್ನಮೆಂಟಗೆ ರಿಪೋರ್ಟ್ ಮಾಡಿದರಾಗಿ, ಮಾರ್ಗದಲ್ಲಿ ಆಕೆಯವರ ಸುಖ ಸಂಚಾರಕ್ಕೆ ಆವಶ್ಯಕಗಳಾದ ವಿಶಿಷ್ಟ ಯೇರ್ಪಾಡುಗಳು ಮಾಡಿರತಕ್ಕದೆಂದು ಮದುರೆ ಮತ್ತು ತಿರುನವೇಲಿ ಕಲೆಕ್ಟರಿಗಳಿಗೂ ಪೋಲೀಸ್ ಇನಸ್ಪೆಕ್ಟರ್ ಜನರಲ್ಲವರಿಗೂ ಗವರ್ನಮೆಂಟನವರು ಹುಕುಂ ಕಳುಹಿಸಿರುತ್ತಾರೆ.

ಕೆಲವು ಸಂವತ್ಸರಗಳ ಹಿಂದೆ ತನ್ನ ಪತಿಯಂ ತ್ಯಜಿಸಿದ ಬಗ್ಗೆ ದಂಡಿಸಲ್ಪಟ್ಟು ಕೆಲವುಕಾಲ ಕಾರಾಗೃಹವಾಸ ಮಾಡಿದವಳಾಯ ಇಂಗ್ಲೆಂಡಿಗೆ ಹೊರಟುಹೋದ ಬಾಯಿ ರುಕ್ಮಿಣಿಬಾಯಿಯೆಂಬಾಕೆಯು ಅಲ್ಲಿನ ವೈದ್ಯಶಾಸ್ತ್ರ ಪಾಠಶಾಲೆಯಲ್ಲಿ ಓದಿ ಕಳೆದ ಜುಲೈ ತಿಂಗಳ ೨೬ ನೇ ತಾರೀಖಿನಲ್ಲಿ ಯೋಗ್ಯತಾಪತ್ರಿಕೆಯಂ ಪಡೆದಂತೆಯೂ, ಇಂಡ್ಯಾದೇಶಕ್ಕೆ ವಾಪಸ್ ಬರುವದಕ್ಕೆ ಮುಂಚೆ ಇನ್ನು ಕೆಲವುಕಾಲ ಅಲ್ಲೇ ಓದುತಲಿದ್ದು ಡಾಕ್ಟರೆಂಬ ಘನತರವಾದ ಪ್ರಶಸ್ತಿಯಂ ಪಡೆದು ಬರಬೇಕೆಂದು ಯೋಚಿಸುತಲಿರುವಂತೆಯೂ ಒಂದಾನೊಂದು ಪತ್ರಿಕೆ ತಿಳಿಸುತಿದೆ.

ಸ್ಕೂಲುಗಳಲ್ಲಿ ಓದುವ ವಿದ್ಯಾರ್ಥಿಗಳ ವಿನೋದಾರ್ಥ ಆಯಾ ಸ್ಕೂಲುಗಳಿಗೆ ಸೇರಿದಂತೆ ಪ್ಲೇಗ್ರೌಂಡೆ ಎಂಬ ವಿಹಾರಸ್ಥಾನವು ಕಲ್ಪಿಸಲ್ಪಟ್ಟಿರುತಿರುವುದಷ್ಟೆ. ತದ್ವತ್ ಬಾಲಿಕಾ ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿನೀಯರಿಗೆ ವಿಹಾರಸ್ಥಾನವು ಕಲ್ಪಿಸಿ ಅದರೊಳು ಆಡುವ ಹೆಂಗುಸರು ಪುರುಷದೃಷ್ಟಿಗೆಗುರಿಯಾಗದಿರುವಂತೆ ಸದರೀ ಪ್ರದೇಶಕ್ಕೆ ಸುತ್ತಲು ಗೋಡೆ ಹಾಕಿಸಿದುದು ಉಪಯುಕ್ತವಾಗಿರುವದೆಂದು ಇಂಡ್ಯಾದೇಶದ ನೇಟಿವ್ ಲೇಡಿ ಡಾಕ್ಟರೊಬ್ಬಳೆಯು ಇಂಗ್ಲಿಷ್‌ಮ್ಯಾನ್ ಎಂಬ ಒಂದು ಪತ್ರಿಕೆಯ ಮೂಲಕ ತನ್ನ ಅಭಿಪ್ರಾಯವನ್ನು ಹೊರಪಡಿಸಿರುತ್ತಾಳೆ.

ಈಚೆಗೆ ಮದರಾಸಿನಲ್ಲಿ ನಡೆದ ಕೇವಲ ವಿಲಕ್ಷಣಸ್ವಭಾವವುಳ್ಳ ಒಂದು ಮೊಕದ್ದಮೆಯ ಸಾರಾಂಶವಂ ಇದರಡಿ ಪ್ರಕಟಿಸುತ್ತೇವೆ ಹ್ಯಾಗೆಂದರೆ:- ರಾಘವುಲುಶೆಟ್ಟಿ ಎಂಬಾತನ ಹೆಂಡತಿಯು ಈಚೆಗೆ ಸ್ವಲ್ಪಕಾಲದ ಹಿಂದೆ ಕ್ರಿಶ್ಚಿಯನ್ ಮತಕ್ಕೆ ಸೇರಿ ಹೋಗಲು ಆತನು ಬೇರೆಯೊಬ್ಬ ಹುಡುಗಿಯನ್ನು ಮದುವೆ ಮಾಡಿಕೊಂಡನು. ಮೊದಲನೆಯ ಹೆಂಡತಿಯಾದ ಅಂಡಾಳಮ್ಮಾಳ್ ಎಂಬಾಕೆಯು, ತನ್ನ ಗಂಡನು ಬೇರೆವಿವಾಹ ಮಾಡಿಕೊಂಡನಾಗಿಯೂ, ಕ್ರಿಶ್ಚಿಯನ್ ಮತಕ್ಕೆ ಸೇರಿದ ತಾನು ಆತನ ಸಂಗಡ ವಾಸಮಾಡುವದಕ್ಕಾಗಲಾರದವಳಾಗಿಯೂ, ಕ್ರಿಶ್ಚಿಯನ್ ಮತಕ್ಕೆ ಸೇರಿಹೋದವರ ವಿವಾಹ ಸಂಬಂಧ ಪರಿತ್ಯಾಗದ ವಿಷಯದಲ್ಲಿ ಹುಟ್ಟಿರುವ ಕಾನೂನನ್ನನುಸರಿಸಿ ತನಗೂ ತನ್ನ ಗಂಡನಿಗೂ ಇರುವ ವಿವಾಹ ಸಂಬಂಧವನ್ನು ಅಪ್ಪಸಬೇಕೆಂತಲೂ ಲಾಯರಿಮೂಲಕವಾಗಿ ಮದರಾಸ್ ಹೈಕೋರ್ಟನಲ್ಲಿ ಅರ್ಜಿಕೊಟ್ಟಳು. ಗಂಡನಾದ ರಾಘವುಲುಶೆಟ್ಟಿಯೆಂಬಾತನು ಕೋರ್ಟನಲ್ಲಿ ಹಾಜರಾಗಿ, ಮರಳಿ ಆಕೆಯನ್ನು ತನ್ನ ಹೆಂಡತಿಯಂತೆ ಅಂಗೀಕರಿಸಿ ಸಂರಕ್ಷಿಸುವದಾಗಿ ಒಪ್ಪಿಕೊಂಡದರಿಂದ ಮೊಕದ್ದಮೆಯು ರಾಜಿಯಾಗುವದಕ್ಕಾಗಿ ಬಿಡಲ್ಪಟ್ಟಿತೆಂಬದು.

THE MONEY MARKET.

Stocks, Shares and Exchange.

ಮದರಾಸ್, ಶನಿವಾರ, ತಾರೀಖ್ 1 ನೇ ಸೆಪ್ಟಂಬರ್ 1894

ಸೇಕಡ 4 ರೂ. ಬಾಬತು ಇಂಡ್ಯಗವರ್ನಮೆಂಟ್ ಪತ್ರಗಳ 103-14-0 ರೂ. ಗಳಿಂದ 104-8-0 ರೂ. ವರೆಗೆ

ಸೇಕಡ ಮೂರುವರೆ ರೂ ಬಾಬತು, ಗವರ್ನಮೆಂಟ್ ಪತ್ರಗಳು, 103-12-0 ರೂ ಗಳಿಂದ 104-4-0 ವರೆಗೆ,

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 1,090-0-0 ರೂ ಗಳಿಂದ 1,105-0-0 ವರೆಗೆ

[illegible] ಲ್ಯಾಂಡ್ ಮಾರ್ಟಿಗೇಜ್ ಬ್ಯಾಂಕ್ ಷೇರುಗಳು, (100 ರೂ) ಬಾಬತು 155-0-0 ರೂ ಗಳಿಂದ 160-0-0 ರೂ ವರೆಗೆ,

ಸವರಿನ್‌ಗಳು, ದರ 1 ಕ್ಕೆ 18-0-0 ರೂಪಾಯಿಗಳಿಂದ 18-6-0 ರೂ. ವರೆಗೆ,

ಲಂಡನ್ ಬ್ಯಾಂಕಿನ ಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ [illegible] —

6 ತಿಂಗಳ ಗಡುವಿಗೆ ...1 s 1 13/16d.

4 „ ...1 s 1 7/8d

ಕೇಳಿದಾಗ ಕೊಡಲ್ಪಡುವದಕ್ಕೆ...1 s 1 11/16d.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕು ಪ್ರಾಂತ್ಯ ವೃತ್ತಾಂತಗಳು

ಹಿಂದಿನ ವಾರದಲ್ಲಿ ತಿಳಿಸಿದ್ದಂತೆ, ಕಳೆದ ಶುಕ್ರವಾರದದಿನ ಬೆಳಿಗ್ಗೆ ಹತ್ತೂಮುಕ್ಕಾಲುಘಂಟೆ ಸುಮಾರಿಗೆ ಘನವಂತರಾದ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರು ತಮ್ಮ ಕುಟುಂಬ ಪರಿವಾರ ಸಮೇತರಾಗಿ ಸ್ಪೆಷಲ್‌ಟ್ರೇಯಿನ್ನಲ್ಲಿ ರಾಜಧಾನಿಗೆ ವಾಪಸ್ ದಯಮಾಡಿದರು. ಆ ಕಾಲದಲ್ಲಿ ಸಿಟಿ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಈ ಸಂಸ್ಥಾನದ ಬ್ರಿಟಿಷ ರೆಸಿಡೆಂಟರು ಮೊದಲಾದ ಯೂರೋಪಿಯನ್ ಆಫೀಸರ್‌ಗಳೂ, ಈ ಸಂಸ್ಥಾನದ ದಿವಾನರವರು ಮತ್ತು ಜಡ್ಜಿಗಳು ಮೊದಲಾದ ನೇಟಿವ್ ಅಧಿಕಾರಿಗಳೂ ಇತರರೂ ಹಾಜರಿದ್ದು ಶ್ರೀಮನ್ಮಹಾರಾಜರವರಂ ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡರು. ಮಹಾರಾಜರವರು ಕೆಲವು ನಿಮಿಷಗಳ ಕಾಲ ಅಲ್ಲಿದ್ದ ದೊಡ್ಡ ಮನುಷ್ಯರುಗಳೊಡನೆ ಸಂಭಾಷಣೆ ಮಾಡುತಲಿದ್ದು ತರುವಾಯ ರೈಲ್ ಗಾಡಿಗೆ ದಯಮಾಡಿದರು. ಕೂಡಲೆ ಗಾಡಿ ಹೊರಟಿತು, ಮಾಮೂಲ್ ಮರ್ಯಾದೆಗಳೆಲ್ಲವು ಸಾಂಗವಾಗಿ ನೆರವೇರಿಸಲ್ಪಟ್ಟವು.

ಕಳೆದ ತಿಂಗಳ ೨೫ನೇ ತಾರೀಖಿಗೆ ಪೂರ್ತಿಯಾದ ವಾರದ ಬಾಬತು ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡಲಾಗಿ ತಿಳಿಯಬರುವದೇನೆಂದರೆ:—ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಹತ್ತು ತಾಲ್ಲೂಕುಗಳಲ್ಲೂ ಒಂದು ಅಂಗುಳದ ಮೊದಲು ಏಳು ಅಂಗುಳದ ವರೆಗೂ, ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಹನ್ನೊಂದು ತಾಲ್ಲೂಕುಗಳಲ್ಲೂ ಒಂದರ ಮೊದಲು ಏಳು ಅಂಗುಳದ ವರೆಗೂ, ಮಳೆ ಬಿದ್ದಿರುತಿದೆ. ತುಮಕೂರು ಡಿಸ್ಟ್ರಿಕ್ಟ್ ಪೈಕಿ, ತುಮಕೂರು, ಗುಬ್ಬಿ, ತಿಪಟೂರು, ಕುಣಿಗಲ್, ಕೊರಟಗೆರೆ, ಇವುಗಳಲ್ಲಿ ಮಾತ್ರ ಒಂದೆರಡು ಅಂಗುಳ ಮಳೆ ಬಿದ್ದಿರುತಿದೆ. ಅನ್ಯತ್ರ ಕೇವಲ ಅಲ್ಪವೃಷ್ಟಿ. ಮೈಸೂರು ಡಿಸ್ಟ್ರಿಕ್ಟ ಪೈಕಿ ಮೈಸೂರು, ಚಾಮರಾಜನಗರ, ನಂಜನಗೂಡು, ತಿರುಮಕೂಡ್ಲುನರಸೀಪುರ, ಮಳವಳ್ಳಿ, ಮಂಡ್ಯ, ನಾಗಮಂಗಲ, ಇವುಗಳಲ್ಲಿ ಮಾತ್ರ ಒಂದರಿಂದ ಮೂರು ಅಂಗುಳದವರೆಗೂ ವರ್ಷ ಬಿತ್ತು, ಉಳಿದ ತಾಲ್ಲೂಕುಗಳಲ್ಲಿ ಕೆಲವು ಸೆಂಟುಗಳ ಮಳೆ ಆಗಿದೆ. ಹಾಸನ ಡಿಸ್ಟ್ರಿಕ್ಟ ಪೈಕಿ ಮಂಜರಾಬಾದಿನಲ್ಲೂ ಅರಸೀಕೆರೆಯಲ್ಲೂ ಸುಮಾರಾಗಿ ಮಳೆಯಾಗಿದೆ. ಅನ್ಯತ್ರ ಆದದ್ದು ಗಣನೀಯವಲ್ಲವು. ಶಿವಮೊಗ್ಗ ಡಿಸ್ಟ್ರಿಕ್ಟ ಪೈಕಿ ಸೊರಬ, ಸಾಗರ, ನಗರ, ತೀರ್ಥಹಳ್ಳಿ, ಕುಂಶಿ, ಈ ತಾಲ್ಲೂಕುಗಳಲ್ಲಿ ಮಾತ್ರ ಒಂದರ ಮೊದಲು ಯೆಂಟು ಅಂಗುಳದ ವರೆಗೆ ವರ್ಷವಾಗಿರುತ್ತೆ, ಉಳಿದ ತಾಲ್ಲೂಕುಗಳಲ್ಲಿ ಅತಿ ಸ್ವಲ್ಪ. ಕಡೂರು ಡಿಸ್ಟ್ರಿಕ್ಟ ಪೈಕಿ ತರೀಕೆರೆ, ಕೊಪ್ಪ, ಮೂಡಗೆರೆ ಈ ಮೂರರಲ್ಲಿ ಮಾತ್ರ ಒಂದರಿಂದ ಯೆಂಟು ಅಂಗುಳದ ವರೆಗೂ ಬಿತ್ತು. ಅನ್ಯತ್ರ ವರ್ಷವೇ ಇಲ್ಲವು.

THE MYSORE GAZETTE.
ಮೈಸೂರು ಗೆಜೆಟ.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಕೊಡಲ್ಪಟ್ಟ ಇಸ್ತಿಹಾರ್ನಾಮೆಗಳು.
ಗುರುವಾರ, ತಾ|| ೩೦ ನೇ ಆಗಸ್ಟು ೧೮೯೪.

ನಂ|| [illegible], ತಾ|| ೨೯ನೇ ಆಗಸ್ಟ ೯೪ — ಕಡೂರ ಡಿಸ್ಟ್ರಿಕ್ಟ ಆಫೀಸ ರೆವಿನ್ಯೂ [illegible] ಕೆ. ನರಸಿಂಹಯ್ಯಂಗಾರ್ಯರವರು, [illegible] ಶ್ರೀನಿವಾಸರಾಯರವರು [illegible] ಕೆಲಸದಲ್ಲಿರುವ ಕಾಲದಲ್ಲಿ [illegible] ಕೊಡಲ್ಪಡುವ ತನಕ, ಯೆಡೆಹಳ್ಳಿ ಸಬ್‌ತಾಲ್ಲೂಕ ಡೆಪ್ಯುಟಿ ಅಮಲ್ದಾರ ೩ ನೇ ಕ್ಲಾಸ ಪ್ರೊಬೇಷನರಾಗಿ ಕೆಲಸ ನೋಡುವಂತೆ ನೇಮಕಮಾಡಲ್ಪಟ್ಟಿರುತ್ತಾರೆ.

ನಂ|| ೩೦೮೯—೮ ೬೯—ಕಡೂರ ಡಿಸ್ಟ್ರಿಕ್ಟ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮ|| ಕೆ. ರಾಮಸ್ವಾಮಯ್ಯಂಗಾರ್ಯರವರು, ೧೮೯೪ನೇ ಇಸವಿ ಜುಲೈ ೨೬ನೇ ತಾರೀಖಿನ [illegible] ನೇ ನಂಬರ ಇಸ್ತಿಹಾರ್ನಾಮೆಯ ಮೂಲಕ ಕೊಡಲ್ಪಟ್ಟ ಆರು ವಾರಗಳ ಪ್ರಿವಿಲೇಜ್ ರಜಾವನ್ನು ಅದೇ ತಿಂಗಳ ೨೮ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ೧೮೯೪ನೇ ಇಸವಿ ಆಗಸ್ಟ್ ೧೮ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸ್ ಬಂದದರಿಂದ ಸದರೀ ರಜಾ ಪೈಕಿ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿತೆ.

ನಂ|| [illegible] — ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೩ನೇ ಆರ್ಟಿಕಲ್ ಅನುಸಾರ, ಕಡೂರ್ ಡಿಸ್ಟ್ರಿಕ್ಟ್ [illegible] ಪ್ರೊಬೇಷನರ್ ಅಸಿಸ್ಟೆಂಟ್ ಕಮ್ಮಿಷನರ್ ಮ|| ಆರ್ ಬಿ [illegible]ರವರು ೧೮೯೪ನೇ ಇಸವಿ ಆಗಸ್ಟ್ ೨೦ನೇ ತಾರೀಖ್ ಮೊದಲು ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| [illegible]—ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ ಎಸ್. ಆರ್ ಶ್ರೀನಿವಾಸ ರಾಮರವರು, ೧೮೯೪ನೇ ಇಸವಿ ಜೂನ್ ೨೬ ನೇ ತಾರೀಖಿನ [illegible] ನೇ ನಂಬರುಳ್ಳ ಇಸ್ತಿಹಾರ್ ನಾಮೆಯ ಮೂಲಕ ಕೊಡಲ್ಪಟ್ಟ ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ೧೮೯೪ ನೇ ಇಸವಿ ಜುಲೈ ೨೫ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ಅದೇ ತಿಂಗಳ ೩೧ನೇ ತಾರೀಖಿನಲ್ಲಿ ಕೆಲಸಕ್ಕೆ ವಾಪಸ್ ಬಂದದರಿಂದ ಸದರೀ ರಜಾ ಪೈಕಿ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿದೆ.

ನಂ|| [illegible], ತಾ|| ೨೯ನೇ ಆಗಸ್ಟ—ಮೈಸೂರ್ ಸರ್ವಿಸ ರೆಗ್ಯುಲೇಷನ್‌ಗಳ ೧೩೩ನೇ ಆರ್ಟಿಕಲ್ ಅ

ಸರ್ಕಿ, ದಿವಾನರವರ ಆಫೀಸಿನಲ್ಲಿ ಕೆಲಸ ನೋಡುತಲಿರುವ (ಹಾಲಿ ಹುಜೂರ್ ಖಜಾನೆ ಬಕ್ಷೀ ಕೆಲಸವಂ ಟವಲೀ ನೋಡುತಲಿರುವ) ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಬ್ರೀಶಾಲೇಶ್ವರಯ್ಯನವರು, ಹುಜೂರ್ ಟ್ರೆಜರಿ ಚಾರ್ಜಿನಿಂದ ಬಿಡುಗಡೆಯಾಗುವ ತಾರೀಖ್ ಮೊದಲು ಅಥವಾ ಅದರ ತರುವಾಯ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೩೩೪೭—G. F. ೨೫—೯೨, ತಾ|| ೨೭ನೇ ಆಗಸ್ಟ್—ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೧೯೯ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಗೋಲ್ಡ್ ಫೀಲ್ಡ್ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮತ್ತು ಮೊರ್ಗಸರಾದ ಮೆ|| ಜಿ. ಹ್ಯೂಂರೈಟ್‌ಯವರು ೧೮೯೪ನೇ ಇಸವಿ ಸೆಪ್ಟೆಂಬರ ೮ನೇ ತಾರೀಖ್ ಮೊದಲು ೨೮ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಮೆ|| ಜಿ. ಹ್ಯೂಂ ರೈಟ್ ಯವರು ರಜಾಮೇಲೆ ಗೈರಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಬೆಂಗಳೂರು ಡಿಸ್ಟ್ರಿಕ್ಟ್ ಪ್ರೊಬೇಷನರ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಎಂ ಆರ್ ಲೇಯಿಂಗ್ ಯವರು ಕೋಲಾರ ಗೋಲ್ಡ್ ಫೀಲ್ಡ್ ಸ್ಪೆಷಲ್ ಮ್ಯಾಜಿಸ್ಟ್ರೇಟ್ ವ ಮೊರ್ಗಸರಾಗಿ ಕೆಲಸ ನೋಡುವಂತೆ ಮೊಕರ್ರರಾದಲ್ಪಟ್ಟಿರುತ್ತಾರೆ.

ನಂ|| ೩೩೯೯—G. ೪೬೧—೧೮೯೪ನೇ ಇಸವಿ ಆಗಸ್ಟ್ ೨೯ನೇ ತಾರೀಖಿನ ಮಧ್ಯಾಹ್ನಾನಂತರ ಮೈಸೂರ್ ಗವರ್ನಮೆಂಟ್ ಮರಮ್ಮತ್ ಇಲಾಖಾ ಚೀಫ್ ಇಂಜನಿಯರ್ ವ ಸೆಕ್ರೆಟರಿ ಆಫೀಸ್ ಚಾರ್ಜನ್ನು ಮೆ|| ಹ್ಯೂಸ್ ಮೆಕ್ಹಟ್ಚಿಯವರು ಕೊಟ್ಟು ರಾಯಲ್ ಇಂಜನಿಯರ್ ಕರ್ನಲ್ ಸಿ. ಜೋನ್ಸ್‌ಯವರು ತೆಗದುಕೊಂಡಿರುತ್ತಾರೆ

ನಂ|| ೩೦೯೭—G. F. ೬೨—೯೩, ತಾ|| ೨೯ನೇ ಆಗಸ್ಟ್—ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿಯ ಆರು ಡಿವಿಜನ್‌ಗಳಿಗೆ ಚುನಾಯಿಸಲ್ಪಟ್ಟ ಅಥವಾ ನಿಯಮಿಸಲ್ಪಟ್ಟ ಕಮ್ಮಿಷನರ್‌ಗಳ ಪಟ್ಟಿಯು ಸಕಲ ಜನರ ತಿಳುವಳಿಕೆಯ ಬಗ್ಗೆ ಇದರಡಿ ಪ್ರಕಟಿಸಲ್ಪಟ್ಟಿರುತ್ತದೆ :—

ಎಕ್ಸ್ ಅಫಿಷಿಯೊ.

ಬೆಂಗಳೂರು ಡಿ|| ಡಿ|| ಕಮ್ಮಿಷನರು, ಪ್ರೆಸಿಡೆಂಟ್
ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜನ್ ವ ಸ್ಯಾನಿಟರಿ ಕಮ್ಮಿಷನರ್, ಮೆಂಬರ್.
ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಲ್ ,,
ಬೆಂಗಳೂರ್ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ,,
ಬೆಂಗಳೂರ್ ತಾಲ್ಲೂಕ್ ಅಮಲ್ದಾರ್ ,,
ಮೆ|| ಕೆ. ಶ್ರೀನಿವಾಸರಾವ್, ವೈಸ ಪ್ರೆಸಿಡೆಂಟ್ ,,

ನಾನ್ ಅಫಿಷಿಯಲ್.

ಡಿವಿಜನ್.	ಕಮ್ಮಿಷನರ ಹೆಸರು.
ಬಳೇಪೇಟೆ ಡಿವಿಜನ್	ಮೆ|| ಬಿ. ಗಂಗಯ್ಯನವರು (ಚು)
	,, ಡಿ ವೆಂಕಟರಾಮಯ್ಯ (ಚು)
ಮನವಾರ್ತಪೇಟೆ ,,	,, ವೀರಭದ್ರಶೆಟ್ಟಿ (ಚು)
	,, ಎಚ್. ರಾಮಯ್ಯ (ಚು)
ಅಲಸೂರುಪೇಟೆ ,,	,, ಎಸ್ ವಿ ಅಣ್ಣಯ್ಯಶೆಟ್ಟಿ (ಚು)
	,, ಮಲ್ಲಿಕಾರ್ಜುನನಾಗಪ್ಪ (ಚು)
ಪ್ಯಾಲೆಸ ,,	,, ಟಿ. ಟಿ ಲಿನಾರ್ಡ್ (ನೊ)
	,, ದೇವರಾಜ ಅರಸ್ (ನೊ)
ಲಾಲಬಾಗ ,,	,, ಜೆ ಕ್ಯಾಮರನ್ (ನೊ)
	,, ರುದ್ರಪ್ಪ (ನೊ)
ನಗರ್ತಪೇಟೆ ,,	,, ಹಫೀಜುಲ್ಲಾಖಾನ್ (ಚು)
	,, ಪಿ ಎನ್ ನರಸಿಂಹಯ್ಯಂಗಾರ್ (ನೊ)
ಕೋಟೆ ,,	,, ಸೋಮಸುಂದರಮುದಲಿ (ಚು)
	,, ಟಿ ಆರ್ ವೆಂಕಟಸ್ವಾಮಿನಾಯಿಡು (ನೊ)

ಮೆ|| ಬಸಪ್ಪಶೆಟ್ಟಿ ಜಾಸ್ತೀ ಮೆಂಬರ್.

SUMMARY OF NEWS.
ವೃತ್ತಾಂತ ಸಂಗ್ರಹವು.

ಬ್ರಿಸ್ಟ ದೇಶದಲ್ಲಿ ಬರಗಾಲ ಲಕ್ಷಣಗಳು ತೋರುತಲಿವೆ. ಹೊಳೆಗಳು ಮಿತಿಮೀರಿ ಹರಿದಿದ್ದರಿಂದ ಬೆಳೆಯೆಲ್ಲ ಹಾಳಾಯಿತು, ದನಗಳು ಪ್ರತಿ ನಿತ್ಯದಲ್ಲಿಯೂ ಸಾಯುತಲಿವೆ. ಆದರೂ ಸರ್ಕಾರೀ ಅಧಿಕಾರಿಗಳು ರೈತರ ಭೂಮಿಗಳನ್ನು ಕಂದಾಯವಸೂಲನ್ನು ವಸೂಲುಮಾಡುತಲಿದ್ದಾರೆ—ಕ. ಪ.

ಚಿಕಾಗೊ ಪಟ್ಟಣದಲ್ಲಿ ಹೋಟೆಲ್‌ಗಳ ಮಾಲೀಕನಾದ ಚಾರ್ಲೆಸ್ ಕೋನನೆಂಬವನು ಸಮುದ್ರದೊಳಗೆ ಒಂದು ಹೊಸ ನಡುಗಡ್ಡೆಯನ್ನು ಹುಟ್ಟಿಸಿ ಅದರಮೇಲೆ ಒಂದು ಗ್ರಾಮವನ್ನು ಕಟ್ಟುವ ಆಲೋಚನೆ ಮಾಡಿದ್ದಾನೆ. ಈ ಕೆಲಸಕ್ಕೆ ೧೦ ಲಕ್ಷ ಡಾಲರ್‌ಗಳು ವೆಚ್ಚವಾಗುವವು—ಕ. ಪ.

ಮಧ್ಯರಾಷ್ಟ್ರದಲ್ಲಿ ಬರಗಾಲದ ದುಃಸ್ಥಿತಿ ಹೆಚ್ಚು ಉಗ್ರವಾಗುತಲಿದೆ. ನಾಗರ, ದಾಮನ್ನು ಈ ಎರಡು ಜಿಲ್ಲೆಗಳಲ್ಲಿ ೪,೦೦೦ ಕ್ಕಿಂತ ಹೆಚ್ಚು ಜನರು ಸರ್ಕಾರೀ ರಿಲೀಫ್ ಆ ಮರಾಮತ್ತಿನಲ್ಲಿ ಕೆಲಸ ಮಾಡುತಲಿದ್ದಾರೆ. ಆದರೆ ಅವರಿಗೆ ದಿನಕ್ಕೆ ೫ ದುಡ್ಡಿಗಿಂತ ಹೆಚ್ಚು ಕೂಲಿ ದೊರೆಯುವದಿಲ್ಲ—ಕ.ಪ.

ಚೀನಾದೇಶದ ಸರ್ಕಾರದವರು ಯೂರೋಪ ಖಂಡದಲ್ಲಿ ಒಂದುಕೋಟಿ ಪೌಂಡು ಶೇಕಡಾ ೫ರಂತೆ ಬಡ್ಡಿಗೆ ಸಾಲ ತೆಗೆಯುವ ಪ್ರಯತ್ನದಲ್ಲಿದ್ದಾರೆ. ಕೆಲ ಕಾಲದನಂತರ ಚೀನಾದೇಶವು ಹಿಂದೂ ದೇಶದಂತೆ ಯುರೋಪಿಯನ್ನರ ಕೈ ಸೇರಲಿಕ್ಕೆ ಈ ಸಾಲದಿಂದ ಮಾರ್ಗವಾಗುವದೆಂದು ಎಣಿಸಲಿಕ್ಕೆ ಅಡ್ಡಿ ಇಲ್ಲವೆ—ಕ. ಪ.

ಭೋಪಾಳದ ಸಂಸ್ಥಾನದಲ್ಲಿ ದುರ್ಭಿಕ್ಷ ಪ್ರಬಲವಾಗಿರುತ್ತದೆ. ಆ ಸಂಸ್ಥಾನದ ಬೇಗಂ ಸಾಹೇಬರವರು ಬಡಜನರ ಸಂರಕ್ಷಣೆಗಾಗಿ ಸದ್ಯಕ್ಕೆ ೫ ಲಕ್ಷ ರೂಪಾಯಿಗಳು ಕೊಟ್ಟಿದ್ದಾರೆ. ರಿಲೀಫ್ ಕಾಮಗಾರಿಗಳಲ್ಲದೆ ಅನ್ನ ಸತ್ರಗಳು ಸಹ ಇಟ್ಟು ದುರ್ಬಲರಾದವರ ಸಂರಕ್ಷಣೆ ಮಾಡುತಲಿದ್ದಾರೆ. ರಿಲೀಫ್ ಕಾಮಗಾರಿಗಳಲ್ಲಿ ದಿನ ಒಕ್ಕೆ ೨, ೨|| ಆಣೆಯ ವರೆಗೆ ಕೂಲೀಕೊಡುತ್ತಾರೆ. ಅದ್ದರಿಂದ ದ.ಮೋ, ಸಾಗರ ಈ ಜಿಲ್ಲೆಗಳ ಜನರು ಸಾವಿರಗಟ್ಟಲೆಯಾಗಿ ಭೋಪಾಳಕ್ಕೆ ಹೋಗುತಲಿದ್ದಾರೆ. ದೇಶೀ ಸಂಸ್ಥಾನಿಕರ ದಯಕ್ಕೂ ಬ್ರಿಟಿಷ್ ಸರ್ಕಾರದ ದಯಕ್ಕೂ ಇರುವ ಹೆಚ್ಚು ಕಡಿಮೆಯು ಇದರಲ್ಲಿ ಬಹು ಸರಿಯಾಗಿ ವ್ಯಕ್ತವಾಗುತ್ತದೆ. ಬೇಗಂ ಸಾಹೇಬರವರು ಕಂದಾಯದ ಹಣವನ್ನು ಅವಶ್ಯವಿದ್ದಲ್ಲಿ ಮಾಫ್ ಮಾಡಲಿಕ್ಕೂ ಅಪ್ಪಣೆ ಕೊಟ್ಟಿದ್ದಾರೆ. ಇಂತಾ ಧೊರೆಯವರನ್ನು ಪ್ರಜೆಗಳು ಏನು ಮುಟ್ಟಿ ಪರಿಸಲಿಕ್ಕಿಲ್ಲವೆ—ಕ. ಪ.

EXTRACTS

ಕರ್ಮ ಎಂಬ ಶಬ್ದವು ಅನೇಕ ಸ್ಥಳಗಳಲ್ಲಿ ಪ್ರಯೋಗಿಸಲ್ಪಡುತ ಅನೇಕರನ್ನು ಸಂಶಯಾತ್ಮಕರನ್ನಾಗಿ ಮಾಡುತಲಿದೆ. ಇಂತಹ ಸಂಶಯದಿಂದಲೇ ಕೆಲವರು ಕರ್ಮವಿಲ್ಲವೇ ಇಲ್ಲವೆಂದು. ಮತ್ತೆ ಕೆಲವರು ವೃಥವಾಗಿ ಉಂಟೇ ಉಂಟೆಂದು ಪಾಪ ಪ್ರತಿಪಾದಗಳಂ ಮಾಡಲೆತ್ನಿಸಿ ಸಾಧಿಸಲು ಸಿದ್ಧರಾಗಿದ್ದಾರೆ. ಕರ್ಮವೆನ್ನು ಸಂಚಿತದ್ದು ಆಗಾಮಿ ಸಂಚಿತ ಪ್ರಾರಬ್ಧವೆಂದು ಮೂರುವಿಧ ಉಂಟು ಆಗಾಮಿ ಅಂದರೆ ಬರುತಿರುವ ಕರ್ಮವು ಸಂಚಿತವೆಂದರೆ ಕೂಡಿಟ್ಟಿದ್ದ ಕರ್ಮವು. ಪುನಃ ಪ್ರಾರಬ್ಧವು ಪರ ದೇಹವನ್ನೆತ್ತಿಸತಕ್ಕ ಕರ್ಮವು, ಅಥವಾ ಸನೇಹ ಕರ್ಮವೆಂದು ಕೆಲವರನ್ನುವರು. ಪುನಃ ಪ್ರಾರಬ್ಧವನ್ನುವರು ಇಷ್ಟ, ಅನಿಷ್ಟ, ಪರೇಷ್ಟ ಎಂದು ಮೂರು ವಿಧವಾಗಿದೆ. ಇದು ವೇದಾಂತ ಶಾಸ್ತ್ರ ಪದ್ಧತಿ. ಇನ್ನು ಕರ್ಮ ಶಾಸ್ತ್ರಜ್ಞರು ಉತ್ಕ್ಷೇಪಣ, ಅವಕ್ಷೇಪಣ, ಆಕುಂಚನ, ಪ್ರಸಾರಣ, ಗಮನ ಎಂಬದಾಗಿ ಐದುವಿಧ ಕರ್ಮಗಳೆಂದು ಹೇಳುವರು. ಮತ್ತು ವೈದಿಕರ ಪದ್ಧತಿಯ ಪ್ರಕಾರ ಯಜನ, ಯಾಜನ ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಎಂಬದಾಗಿ ಆರು ವಿಧಗಳೆಂದ ವರ್ಣಿಸುತಿದೆ ಇದೂ ಅಲ್ಲದೆ ಗರ್ಭಾಧಾನ, ಪುಂಸವನ, ಸೀಮಂತ, ಜಾತ, ನಾಮ, ಅನ್ನಪ್ರಾಶನ, ಚೌಲ, ಉಪನಯನ, ಪ್ರಾಜಾಪತ್ಯ, ಸೌಮ್ಯ, ಆಗ್ನೇಯ, ವೈಶ್ವದೇವ, ಗೋದಾನ, ಸಮಾವರ್ತನ, ವಿವಾಹ ಅಂತ್ಯಕರ್ಮಗಳೆಂದು ಹದಿನಾರು ಬಗೆಯಾಗಿರುತವೆ. ಈಗ ವಿವಾದವನ್ನಿರುವ ಕರ್ಮ ಮೊದಲು ವಿವರಿಸಿದ್ದು ಅದಾಗ್ಯೂ ಕರ್ಮ ಕಾಂಡಕ್ಕೆ ಸಂಬಂಧವಾದವಲ್ಲವು. ಕರ್ಮ ಉಂಟೆನ್ನುವ ಪಕ್ಷದವರು ಲೋಕವು ಕರ್ಮಾಧೀನವೆಂದು ಹೇಳುತ ಲೋಕದಲ್ಲಿ ಕುರುಡ ಕುಂಟ ಮುಂತಾದ ಅಂಗಹೀನರು, ಮೂಢರು, ಪಾಪಿಷ್ಠರು, ನಿಕೃಷ್ಟರು ಈ ವಿಧಗಳಾಗಿ ಹುಟ್ಟಿರುವರೆಂತಲೂ, ಈಗ ನಾವು ಅನೇಕ ಕಷ್ಟಗಳನ್ನು ಅನುಭವಿಸುವದನ್ನು ಸಹ ಪೂರ್ವ ಕರ್ಮಫಲದಿಂದಲ್ಲದೆ ಮತ್ತೊಂದಲ್ಲವೆಂತಲೂ ಹೇಳುವರು. ಕರ್ಮವಿಲ್ಲವೆನ್ನುವ ಪಕ್ಷದವರು ಈ ಕೆಳಗಿನ ಪ್ರತ್ಯಕ್ಷ ಪ್ರಮಾಣಗಳನ್ನು ತೋರಿಸುವರು. ಗುಣಗಳಲ್ಲಿಯೂ ಅಂಗಗಳಲ್ಲಿಯೂ ಲೋಪಗಳುಂಟಾಗಲಿಕ್ಕೆ ನಮ್ಮ ಪುರಾಣ ಶಾಸ್ತ್ರಗಳಲ್ಲಿ ಸ್ತ್ರೀಯರು ಋತುಸ್ನಾತರಾದಾಗಲಿ, ಗರ್ಭವನ್ನು ಧರಿಸಿದಾಗಲಾಗಲಿ, ನಿರ್ಮಲಚಿತ್ತರಾಗಿದ್ದರೆ ಆದರ ನಿರ್ಮಲ ಶಿಶು ಹುಟ್ಟುವದೆಂತಲೂ, ಇಲ್ಲದಿದ್ದಲ್ಲಿ ವಿಪರೀತಾಂಗರು ಹುಟ್ಟುವರೆಂತಲೂ ಹೇಳಲ್ಪಟ್ಟಿದೆ ಇದಕ್ಕೆ ದೃಷ್ಟಾಂತಗಳು—ಧೃತರಾಷ್ಟ್ರನು ಹುಟ್ಟು ಕುರುಡನಾಗಲು ಕಾರಣವು, ಆತನ ತಾಯಿಯಾದ ಅಂಬೆ ಸಂಭೋಗ ಕಾಲದಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡದ್ದು. ಮತ್ತು ಒಬ್ಬ ಮನುಷ್ಯನ ಭಾರ್ಯೆಗೆ ಹುಟ್ಟಿದ ಮಗನು ನೆರೆಮನೆಯವನ ಹೋಲಿಕೆಯಾಗಿದ್ದನು, ಒಬ್ಬ ಸ್ತ್ರೀ ತನ್ನ ಗಂಡನಲ್ಲಿ ಸಂಪರ್ಕ ಮಾಡುತಿದ್ದಾಗ ಒಂದು ಹಾವನ್ನು ಕಂಡು ಭಯಪಟ್ಟಿದ್ದರಿಂದ ಅವಳು ಹೆತ್ತ ಮಗುವಿಗೆ ಮನುಷ್ಯನ ತಲೆಯೂ ಹಾವಿನ ದೇಹವೂ ಉಂಟಾಯಿತು. ಒಬ್ಬ ಸ್ತ್ರೀಗೆ ಹನ್ನೆರಡುಜನ ಮಕ್ಕಳು ಹುಟ್ಟಿ ಅವರಲ್ಲಿ ಹನ್ನೊಂದುಜನ ಸರ್ವ ವಿಷಯಗಳಲ್ಲಿಯೂ ಸಜ್ಜನರಾಗಿದ್ದು ಹನ್ನೆರಡನೇಯವನು ಕರಡಿಯ ಗುಣ ಉಳ್ಳವನಾಗಿ ಹುಟ್ಟಲು ಆ ಸ್ತ್ರೀಯು ಕಡೆಗರ್ಭ ಧರಿಸಿದ್ದಾಗ ನಾಲ್ಕನೆಯ ತಿಂಗಳಲ್ಲಿ ಸಣ್ಣ ಜಂತುವಿನ ತಲೆಯನ್ನು ನೋಡಿ ಭಯಪಟ್ಟು ಕೇವಲ ವ್ಯಸನ ಪಟ್ಟ ಕಾರಣ ಕಾಡು ಹಂದಿ ಮಕ್ಕಳಿಗೆ ತಲೆಗಳು ನಿಜಗುಣವಾಗಿ ಹುಟ್ಟಿದಂತೆಯೋ ಇದ್ದವು. ನಮ್ಮ ಪುರಾಣಗಳಲ್ಲಿ ದಂಪತಿಗಳು ರಜಸ್ಸು ತಮೋ ಗುಣಗಳಲ್ಲಿ ಯಾವದರಲ್ಲಿ ಸಂಬಂಧಿಸಿ ಉಪಭೋಗಿಸುವರೋ ಆಗ ನಿಂತ ಗರ್ಭದಲ್ಲಿ ಶಿಶುವಿಗೆ ಅಂತಹ ಗುಣವೇ ಉಂಟಾಗುವದು. ಈ ವಿಧವಾಗಿ ಗುಣ ಭೇದದಿಂದಲೂ ಇಂದ್ರಿಯ ಭೇದದಿಂದಲೂ, ಸ್ತ್ರೀ ಪುರುಷ ಸಂತಾನಗಳುಂಟಾಗುವದೆಂದು ಹೇಳುವರು. ಇದಕ್ಕೆ ಕರ್ಮ ಉಂಟೆನ್ನುವ ಪಕ್ಷದವರು ಶಿಶುಗಳ ಕರ್ಮ ಫಲಗಳನ್ನನುಸರಿಸಿ ದಂಪತಿಗಳಿಗೆ ಅಂತಹ ಗುಣಾಗುಣ ಭಾವನೆಗಳುಂಟಾಗುವವೆಂದು ಹೇಳುವರು. ಅದಕ್ಕೆ ಕರ್ಮವಿಲ್ಲವೆನ್ನುವರು ಭಗವಂತನು ಪೂರ್ವಕರ್ಮ ಫಲಾನುಸಾರವಾಗಿ ಈ ಜನ್ಮದಲ್ಲಿ ಶಿಕ್ಷಿಸುವಂತಾದ್ದು ಯಾಕೆ? ಅದರಿಂದ ಫಲವೇನು? ಅರಸನು ಒಬ್ಬನನ್ನು ಶಿಕ್ಷಿಸಬೇಕಾಗಿದ್ದಲ್ಲಿ ಅವನ ತಪ್ಪುಗಳವನಿಗೆ ತಿಳಿಸಿ ಶಿಕ್ಷಿಸಿದ್ದೇ ಆದರೆ ಅವನು ಅಂತಹ ತಪ್ಪುಗಳನ್ನು ಮತ್ತು ಮಾಡದಿರಲಿಕ್ಕೂ ಇತರರು ಅಂತಹ ತಪ್ಪುಗಳನ್ನು ಮಾಡಲು ಅನಾಸ್ಥರಾಗಲಿಕ್ಕೂ ಸಾಧನವಾಗಿರುವದಲ್ಲದೆ, ಹಾಗೂ ಭಗವಂತನು ನಾವು ಮಾಡಿದ ತಪ್ಪುಗಳನ್ನು ನಮಗೆ ತಿಳಿಸದೆ ಇಂತಹ ಶಿಕ್ಷೆಯನ್ನು ವಿಧಿಸುವಿಕೆ ತಕ್ಕದ್ದಲ್ಲವೆಂದು ಪೂರ್ವಕರ್ಮ ಫಲಕ್ಕೆ ಈಗ ದರಿದ್ರವು ಬಂದ ನ್ಯಾಯವೆ ವರದರನೇ ಸಾಧಾರಣವಾಗಿ ಮನುಷ್ಯಕಾರ್ಯಗಳನ್ನು ಮಾಡುವರು. ಅದ್ದರಿಂದ ಭಗವಂತನ ಶಿಕ್ಷೆಯು ಆ ಕ್ರಮಕ್ಕೆ ದಾರಿಯನ್ನು ತೋರಿಸುವಂತಾದ್ದಾಯಿತೆಂದರೆ ನಮಗೆ ಸ್ವಕಷ್ಟಾ ಕರ್ತನೆ ಮೂಲಭೂತನಾದಮೇಲೆ ನಾವು ಮೋಕ್ಷಕ್ಕಾಗಿ ಪ್ರಯತ್ನ ಪಡಬೇಕಾದ ಅಗತ್ಯವೇನುಂಟೆಂದುನ್ನು ಅವನವನಿಗೆ ಅವನವನ ಕರ್ಮಫಲವು ಸಿಕ್ಕುತ್ತಿರುವಲ್ಲಿ ಲೋಕೋಪಕಾರ ಕಾರ್ಯಗಳನ್ನು ಯಾಕೆ ಮಾಡಬೇಕು? ಜನಗಳಿಗೆ ರೋಗಾದಿ ಗುಟಕೆಯೆಂದು ಕುರುಡ ಕುಂಟ ಮುಂತಾದವರಿಗೆ ಸಹಾಯಮಾಡುವ್ಯತಕ್ಕೆ, ಅಂತಹ ಪಾಪಕರ್ಮಫಲಗಳನ್ನು ಅನುಭವಿಸುವ ಮನುಷ್ಯರಿಗುಪಕಾರಗಳಂ ಮಾಡಿದ್ದಲ್ಲಿ ಪಾಪವೆಂದು ದಾರಾಳವಾಗಿ ಹೇಳುವರು. ಇದಕ್ಕೆ ಸಮುತ್ತರಗಳನ್ನು ಕೊಡಲಾರದವರು ಅವರಿಗೆ ಕರ್ಮ ಇಲ್ಲದವರು ನಾಸ್ತಿಕರೆಂದು ಹಾಸ್ಯ ಮಾಡುವರು ಇದು ಸರಿಯಲ್ಲ, ಪರೀಕ್ಷಿಸಿ ನೋಡಲಾಗಿ ಅವರಲ್ಲಿ ಅನೇಕರು ಸತ್ಪುರುಷ ಧುರೀಣರುತ್ತಾರೆ ಅನಂತರದ ವಾದವನ್ನು ಮಾಡುವದು ಸರಿಯೇ, ಕರ್ಮ ಉಂಟೆಂದು ಹೇಳಿ ತಾವು ಮಾಡುವ ಅಕ್ರಮಗಳೆಲ್ಲಾ ಕರ್ಮವೇ ಮೂಲಭೂತವೆಂದು ಹೇಳುವಿಕೆ ಮಾತ್ರ ಆಗದು ಸರಿಯಾದ್ದಲ್ಲವು ಒಬ್ಬನು ವ್ಯಭಿಚಾರ ರೋಗಪೀಡಿತರೋಗದಲ್ಲಿ ನರಳುವಾಗ ಕರ ಪರ ಹಿಂದು ಸ್ವಾಮಿಯನ್ನು ಭಜಿಸುತ ಸ್ವಾಮಿಯನ್ನು ತ್ಯಜಿಸುತ ಆಯ್ಯೋ ನನ್ನ ಪೂರ್ವಾರ್ಜಿತಕರ್ಮ, ನಾನೇನು ಮಾಡಲಿ ಅಂದ ಬಂದು ಮೆಚ್ಚುವರು, ಇದೇ ಕರ್ಮವನ್ನು ನಂಬಿದವರಿಗೆಲ್ಲರಿಗೂ ಕರ್ಮಸ್ವರೂಪ ತಿಳಿಯದು ಕೆಲವರು ವಿಕಲಾಂಗರನ್ನು ನೋಡಿ ಯುಕ್ತವಿಲ್ಲದ ಅಸಹ್ಯಪಟ್ಟು ದೂರ ಹೋಗುವರು ಕರ್ಮವನ್ನು ನಂಬಿದ್ದರೂ ತಮ್ಮ ಮನೆಗೆ ಬಂದ ಭಿಕ್ಷುಕರನ್ನು ಕೇಳುವವರನ್ನು ದೈವ ಗದರಿಸಿ ಕಳುಹಿಸಿಬಿಡುವರು ಕರ್ಮದಲ್ಲಿ ಕೆಲವರು ಉದ್ಯೋಗದ ಸ್ವಾಮಿಯಿಲ್ಲ ಎಂಬ ವಾಕ್ಯಕ್ಕೆ ವಿಧೇಯರಾಗಿರುವರು—ಕ ಸು.

ನಮ್ಮಗಳಿಗೆ ಬಾತಕ್ಕೆ ಜಾಡ್ಯಗಳು ಎಂತಾವು

ರಾತ್ರಿಯಲ್ಲಿ ಕನ್ನೆರೆದಿ ನಮ್ಮಗಳಿಗೆ ಬಿಡುವಾಗಿನ ಜಾಡ್ಯಗಳು ನಮ್ಮಲ್ಲಿ ಪ್ರವೇಶ ಮಾಡುತವೆ ಸಾಧಾರಣವಾಗಿ ಮನುಷ್ಯರಿಗುಂಟಾಗುವ ಎಲ್ಲಾ ರೋಗಗಳಲ್ಲಿ ಕೆಲವು ಕಾಣುತವೆ. ಆಹಾರ ಕಲ್ಲ ಜನರು ಸಾಧಾರಣವಾಗಿ ಮಂದವಾಗಿ ವಿಶ್ರಾಂತವಾಗಿ ಬಾಯಿಯ್ದ ಒಂದು ವಿಧ ಬೈಯು, ಕಣ್ಣುಗಳು ಗುಡ್ಡಗಳು ಇದ್ದುಕೊಳ್ಳುವದು. ದೇಹದ ದಂತಗಳಲ್ಲಿ ಸೀಟಿ ಅಂಟು ಸಹ್ಯ ಕಟ್ಟಿಕೊಂಡು ಊರುತದೆ ಆ ಸಮಯಗಳಲ್ಲಿ ಆಹಾರವು ಕಹಿ, ನಾಲಿಗೆ ಒಂದು ಬಗೆ ಚಾರವೆ, ಕೆಲವು ವೇಳೆಗಳಲ್ಲಿ ಮೈಕೆಡು, ನಿದ್ರೆಯ ಅಸ್ತಿರವಾದದ್ದಲ್ಲದೆ, ಭೋಜನದಲ್ಲಿ ಅಸಹ್ಯವು, ಕೈಗಳು ಆಗಾಗ್ಗೆ ಏಳುವದು ಇದೆ ಇದು, ... ತಲೆ ಸಿಡಿತ, ... ಆ ಕೆಮ್ಮಿನಿಂದ ಬಾಯಲ್ಲಿ ಹುಳುಗಳ ಕಫ ಕಟ್ಟಿಕೊಳ್ಳುವದು. ಇತ್ಯಾದಿ ಕಾರಣಗಳಿಂದ ಜಾಡ್ಯಸ್ಥನು ತನ್ನ ಆರೋಗ್ಯವನ್ನು ಕಳಕೊಳ್ಳುವನು, ನಿದಾನಿಸಿದರೆ ಆಹಾರದಲ್ಲಿ ಜಾಡ್ಯದ ಸ್ಥಿತಿ ಬರುವ ಪಿತ್ತದ ರೋಗ ಮತ್ತು ಮೂತ್ರದ ಮೇಲೆ ಕೆಟ್ಟ ಸ್ಥಳದಲ್ಲಿ ಒಂದು ವಾಸನೆ ಉಂಟು ಮಾಡುತದೆ. ಇವುಗಳಾಗಿ ಇದ್ದು ವಿಶೇಷ ವ್ಯಕ್ತವಾದ ತಿದ್ದುವದು, ಆತಿಸಾರ ತಗ್ಗಿ ವಿಷವ ಕಾಲಗಳ ಕಾಣುತದೆ. ಆ ರೋಗಿಯು ನಡೆದಲ್ಲಿ ಕೆರಳುಗಳು ಬಿಗಿತ, ಮಲಬದ್ಧ ನಾಡಿ, ಶರೀರದ ಚರ್ಮವನ್ನು ಒಣಗಿಸಿ, ಮುಖ್ಯವಾಗಿ, ರಕ್ತವನ್ನು ಮಂದವಾಗಿ, ಶರೀರದಲ್ಲಿ ನೆಟ್ಟಗೆ ರಕ್ತವು ಓಡದೆ, ಕೆಟ್ಟ ಗಳಲ್ಲಿರುವ ಸಾಧಾರಣವಾದ ಬಲವನ್ನ ಶಿಥಿಲ ಮಾಡಿ, ಕಣ್ಣುಗಳಲ್ಲಿ ಸಹಜ ಚುಕ್ಕೆಗಳು, ಆಲಸ್ಯ, ಚಲನವು ಕಮ್ಮಿ, ಇಲ್ಲದ ಕೆಡುಕುಗಳು, ಅದರ ವಿಶೇಷವಾದ ಬಣ್ಣ, ಸಾಧಾರಣವಾಗಿ ಮೂತ್ರವು ಬಾರದೆ ಕಡಿಮೆಯಿಂದ ಅದಗಳು ಸೇರಿ ಮೂತ್ರವನ್ನು ಕಾಲ ಗೆ ಮಾಡದೆ ಮಾಡುತವೆ. ಆ ಕಾರಣಗಳಿಂದ ಬಾಧಿತ ಅನ್ನವನ್ನು ಉಸುಳಿಸದು, ಜೀರ್ಣಿಸಿದ ಅನ್ನವು ಬಾಯಲ್ಲಿ ಕೆಟ್ಟ ಹುಳಿ ಯಾಗಿರುತದೆ, ವಿರಿಗ್ಗೆ ಏದುಸಿರು ಬರುವದು, ಕಣ್ಣು ದೃಷ್ಟಿ ಕೆಡುವದು, ಕಣ್ಣುಗಳಲ್ಲಿ ಸುಟ್ಟುಕಾವು, ವಿಶೇಷವಾಗಿ ಶರೀರದಲ್ಲಿ ಬಲವು ಕಡಿಮೆಯಾಗಿ ಜಡತ್ವವೂ ಉಂಟಾಗಿ ಕ್ಷೀಣಿಸಿ ಕಾಣುತದೆ ಈ ಜಾಡ್ಯದ ಚಿಹ್ನೆಗಳು ಅನೇಕವಿಧವಾಗಿ ಮುಖ್ಯವಾಗಿ ಜನರಿಗೆ ಇತರರಿಗೆ ವಿಪರೀತವಾಗಿ ಕಾಣುತವೆ ಈ ಜಾಡ್ಯಗಳನ್ನು ವೈದ್ಯರೆನಿಸಿಕೊಳ್ಳುವರು ಪರಿಶೋಧನೆ ಮಾಡಲಿಕ್ಕೆ ಅರಿಯದೆ ಒಂದುವಿಧವಾದ ಜಾಡ್ಯಕ್ಕೆ ಮತ್ತೊಂದುವಿಧ ಚಿಕಿತ್ಸೆ ಮಾಡುವದು, ಇತ್ಯಾದಿ ಕಾರಣಗಳಿಂದ ಈ ಜಾಡ್ಯಗಳು ಸ್ವಸ್ಥವಾಗದೆ ಇರುತವೆ. ಇತ್ಯಾದಿ ಜಾಡ್ಯಗಳಿಗೆ ಸಮರ್ಪಕವಾದ ಔಷಧವು ಇಲ್ಲದ್ದೆ ಚಿಕಿತ್ಸೆ ಮಾಡಿದ ಪಕ್ಷದಲ್ಲಿ ಇವುಗಳನ್ನು ವೃದ್ಧಿ ಮಾಡುತವೆ ವೈದ್ಯರು ಸಾಧಾರಣವಾಗಿ ಅಜೀರ್ಣವ್ಯಾಧಿಗೆ ತಕ್ಕಚಿಕಿತ್ಸೆ ಮಾಡದೆ ಹಾಗೆ ಮತ್ತೊಂದು ವಿಧವಾದ ಚಿಕಿತ್ಸೆಮಾಡುವದೂ ದ ರೀತಿಯಿಂದ ಜಾಡ್ಯಗಳು ಸ್ವಸ್ಥವಾಗದಿರುವದು.

ಮುಂದೆ ವಿವರಣೆ ಮಾಡಿದ ಜಾಡ್ಯಗಳನ್ನು ನಿರ್ಮೂಲ ಮಾಡಿ ಕಾಯಿ ಮಾಡತಕ್ಕ ಔಷಧವು ತಾಯಿಬೇರಿನ ಕಷಾಯವು ಈ ಕಷಾಯವನ್ನು ಕ್ರಮ ವಾಗಿ ಸೇವನೆ ಮಾಡುವ ದರಿಂದ ಪ್ರ್ಯಾಧ್ಯ ಲೋಪಗಳನ್ನು ಬಿಡುವತ್ತು ಮುಂತಾದುಬಗೆ ನಡಾಯವು ಮಾಡಿ ಶರೀರಕ್ಕೆ ಬಲವನ್ನು ಕೊಟ್ಟು ಆಲಸ್ಯ ನಿಲ್ಲದಾಗಿ ಸ್ವಸ್ಥ ಮಾಡುತದೆ

ತಾಯಿ ಬೇರಿನ ಕಷಾಯ ಔಷಧವು ಕೆಮಿಸ್ಟು ಅಂಡೊ ಡ್ರಗ್ಗಿ ಆಸ್ಪತ್ರಿ ಬಜಾರುಗಳಲ್ಲಿ ವಿಕ್ರಯಕ್ಕೆ ಸಿಕ್ಕುತದೆ.

W. D.

ADVERTISEMENTS.

ನೋಟಿಸು

ಚಿತ್ರಲೇಖನ ಕಾರ್ಯದಲ್ಲಿ ಪ್ರಖ್ಯಾತರಾದ ರಾಜಾ ರವಿವರ್ಮ ಎಂಬವರಿಂದ ತಯಾರಿಸಲ್ಪಟ್ಟಿರುವ ಶಕುಂತಲಾ ಜನ್ಮದರ್ಶನ ಎಂಬ ಚಿತ್ರಪಟವು ಇಪ್ಪತ್ತೊಂದುತರದ ಎಣ್ಣೆ ಬಣ್ಣಗಳುಳ್ಳದ್ದಾಗಿಯೂ, ಅತಿ ರಮಣೀಯವಾದುದಾಗಿಯೂ, ಪ್ರತಿಯೊಬ್ಬರು ತಮ್ಮ ಮನೆಯನ್ನಲಂಕರಿಸುವದಕ್ಕೆ ಅತ್ಯಂತಾವಶ್ಯಕವಾದ ವಸ್ತುವಾಗಿಯೂ ಇರುವುದು. ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುವವರ್ಣನೆಯು ಈ ಚಿತ್ರಪಟದಲ್ಲಿ ಪ್ರತ್ಯಕ್ಷವಾಗಿ ಕಂಡುಬರುವುದು. ಮೇನಕೆಯು ಶಕುಂತಲಾ ಬಾಲೆಯನ್ನು ವಿಶ್ವಾಮಿತ್ರ ಮಹರ್ಷಿಗಳವರ ವಶಮಾಡುವ ಸಂದರ್ಭವನ್ನು ನೋಡುವಲ್ಲಿ ಮನವು ಮೋಹಿಸುವುದು ಹೊರಗಿನ ಸಂಚಾರದಿಂದ ದಣಿದು ಮನೆಗೆ ಬಂದವರು ಈ ಚಿತ್ರಪಟವನ್ನು ನೋಡಿದ ಕೂಡಲೆ ಸಂಚಾರ ಶ್ರಮನಿವೃತ್ತಿಯಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವುದು.

ಪಟದ ಆಕಾರ—ಉದ್ದ ೩೩ ಅಂಗುಲ, ಅಗಲ ೨೩ ಅಂಗುಲ ಕ್ರಯ—ರೂ|| ೬ ೦—೦ ಚೌಕಟ್ಟಿನ ಲಾಗುವದು, ತಪಾಲ್ ವಾಸಲ್ ಪ್ರತ್ಯೇಕ ಕೊಡಬೇಕು.

ಈ ಪಟದ ಅಪೇಕ್ಷೆಯುಳ್ಳವರು ಕ್ರಯದ ಸೈಕಿ ಅರ್ಧವಾಸಿಯನ್ನಾದರು ಮುಂಗಡವಾಗಿ ಕಳುಹಿಸಿದರೆ ವ್ಯಾಲ್ಯೂಪೇಯಬಿಲ್ ಮೂಲಕ ರವಾನಿಸಲ್ಪಡುವುದು.

ಡಿ. ದಿನಕರರಾವ್ ಮತ್ತು ಕಂಪೆನಿ,
ಗಿರ್ಗಾಂ, ಮುಂಬೈ.

NOTICE.

VAIDYASARA SANGRAHA.

A TREATISE ON THE PRINCIPLES OF

HINDU MEDICINE

Price including Postage Rs. 5—0—0

ವೈದ್ಯಸಾರ ಸಂಗ್ರಹ.

ಇದರ ಕ್ರಯ—ರ್ಯಾಟಿಂಗ್ ವ ಸ್ಟ್ಯಾಂಪ್ ವಗೈರೆ ರೂ 5 0—0

THE KARNATAKA PRAKASIKA.
ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಮುಂಗಡವಾಗಿ, ಸಾಲಿಗೆ	...	3—0 -0
ಹಿಂದ್ಗಡೆಯಾಗಿ ಸಾಲಿಗೆ	...	4—0 0

ಮುಂಗಡವಾಗಿ ಚಂದಾಹಣ ಬಂದು ಸೇರುವಂತವರಿಗೆ ಮಾತ್ರ ಈ ಪತ್ರಿಕೆ ಕಳುಹಿಸಲ್ಪಡುವದು. ಮುಂದು ... ಅಂಗೀಕರಿಸಲ್ಪಡಲಾರದು.

ಪ್ರಕಟನೆಯ ನಿರಖ್.

ಮೊದಲನೆಯದಾ ಪಙ್ಕ್ತಿ ಒಂದಕ್ಕೆ		೦—೨—೬
ಎರಡನೆಯದಾ ಪಙ್ಕ್ತಿ ಒಂದಕ್ಕೆ		೦—೧—೦

ಸರಾ—ಎ ... ಎಷ್ಟು ... ಒಂದಕ್ಕೆ ೧ ಆಣೆಯಂತೆ ... ಕಳ್ಳವಾಯ್ಕತವರು

ನೋಟೀಸ್.

ಬೆಂಗಳೂರ್ ಕರ್ಣಾಟಕ್ ಪ್ರೆಸ್.

೧೮೭೪ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ತೀವ್ರವಾಗಿಯೂ ಒಳ್ಳೆಯದಾಗಿಯೂ ಮಾಡಲ್ಪಡುವವು.

ಇದರಲ್ಲಿ ಸದ್ಯ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತಿವೆ ಇತರ ತರಸೀಲುಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

BANGALORE:—Printed and Published at the KARNATAKA PRESS, No. 40 HOSPITAL Road, City.—1894

THE

Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning.

[illegible]

Vol. XXI. **BANGALORE:—MONDAY SEPTEMBER 10, 1894.** **No. 36.**

Select Telegrams

Tientsin, 3rd Sept—An Imperial Edict had been issued expressing satisfaction at the Chinese victory over the Japanese at Pingyang on the 17th August, and conferring rewards on General Yeh and the seven hundred officers of the Chinese army who took part in the engagement.

The report of General Yeh states that five thousand Japanese troops were killed, while the Chinese lost only a few men.

London, 2nd Sept—*The Times* has published a telegram from Chemulpo stating that the Japanese hold the Provinces of Seoul and Pwanghai also the country in the neighbourhood of the Corean Treaty ports. The feeling of the inhabitants against the Japanese is increasing, and the Coreans have commenced a guerilla warfare.

London, 4th Sept—A Russian squadron, consisting of two large ironclads, battleships, cruisers, gunboats and despatch vessels, have sailed under sealed orders with all speed to Corea.

St Petersburg 4th Sept—It is stated here that the despatch of the Russian squadron to the Corean waters is merely intended to protect *Russian trade and shipping*.

Berlin, 4th Sept—The German Emperor visited Konigsberg to-day for the purpose of unveiling a statue of the late Emperor William I, and was greeted with enthusiastic cheers and a demonstration of respect and loyalty by large crowds of people. Accompanied by a brilliant staff the Emperor unveiled the statue in the afternoon with great pomp and ceremony. Before separating his Imperial Majesty made a speech and alluded to the services rendered by his grandsire to the Fatherland and pointing to the statue's drawn sword said that that sword was an emblematic necessity at the present time.

Shanghai, 4th Sept—The American Consul here in compliance with the demands of the Pekin Government has surrendered to the Chinese authorities two Japanese accused of being spies.

Allahabad 4th Sept—Information which reaches the *Pioneer* from trustworthy sources shows that the Russian Government is bent upon embarking forthwith upon important railway extensions in Central Asia. Not only has sanction been accorded to the Samarkand Marghilan line with a branch to Tashkent, but funds are to be provided for a railway southwards from Merv to Penjdeh. It is further reported that an extension from Chharjui along the left Bank of the Oxus to Kerki is also contemplated. From Merv to Penjdeh is about 130 miles, from Chharjui 140 miles, in each case a surface line only need be laid *as the country is quite flat, and local rainfall* very small.

Shanghai, 6th Sept—A rumour is current here that the two Japanese who were delivered over to the Chinese officials by the American Consul General were taken to the native quarter and immediately beheaded. The Japanese residents hearing of the fate of their countrymen have been struck with dismay, and all are hastening their preparations to quit this port at once.

Rangoon, 6th Sept—It is officially announced here *that the Convention settling the frontier* between Burma and China has been ratified.

London, 7th Sept—Telegrams received from the Far East state that the Japanese have occupied a large island westward of Port Arthur, and are strongly fortifying it to serve as a base of operations. A portion of the fleet has returned to Japan to convey fresh transports carrying large reinforcements of Japanese troops.

The Chinese are strengthening the defences of Port Arthur and constructing new fortifications on the *landward side of the town*.

London, 7th Sept—It is believed here that an attack on Pekin is meditated.

Yokohama 7th Sept—Reuter's agent learns that Marshal Yamagata has sailed to take command of the Japanese Army which will shortly number 100 000 men.

THE

Karnataka Prakasika.

MONDAY, SEPTEMBER 10, 1894

ABSENTEE PRINCES

An English *paper to hand* says that the Gaekwar of Baroda has received a hint from the India office that he had better return to India as soon as possible. His Highness has been in Europe for sometime, and the authorities are of opinion he has remained there long enough. If we remember aright the Gaekwar went to England about two years ago, and again to Europe last year, and during all this time he must have spent a large sum of money. There is a report going about that he wishes to spend another two years on the continent, but this, we are told, the authorities at home object to, and rightly so. It is true that Baroda is fairly governed during the absence of its chief. The Dewan is an able *man, and he performs his* duty faithfully. The machine of State rolls on, and some people may think that matters go on much the same as if the Gaekwar was on the spot. But this is a mistake. The absence of the head of the Government must cause much delay. Important papers must be sent to England to be signed, and those interested must wait till this has been done, the result being much loss, not only *of time, but of money*. The Government of the country may go on but not in the same way that it would if the Gaekwar were there to direct, and though those at a distance may not perceive this those close at hand will be sure to do so. Matters, as we have said, appear to be going on satisfac*torily, but there must be something want*ing. The estate of an absentee landlord is not the same as one on which the owner dwells. Absenteeism has been the curse of Ireland. It has alienated the peasants of the country, and now they stand forth in opposition to the owners of the soil. There have been many troubles in Ireland on account of absenteeism and should this prevail to any extent in India we may be sure that the same evils would result here as elsewhere. It was the same principle that led to many of the atrocities of the French Revolution. The nobles had lived in Paris instead of on their estates, and they wrung as much money as they could out of their tenants. This they spent in debauchery in the capital of the country, and left those who provided the money to take care of *themselves. Probably matters would never* come to such a pass in India, but there is a danger of the Princes and Chiefs staying away from their estates and thus bring about an alienation of feeling between them and their subjects. We see signs of this, and though it is well that these men should pay *a visit to the west, they should not be en*couraged to go again and again. Their predecessors rarely left their dominions, and if they were extravagant the money was spent among their own people. It was not spent in foreign lands, and among people in no way connected with them. If the people were sometimes ground down they would submit with more readiness than if the money collected was squandered far away. *It is to be hoped that the exodus to the* West will not increase to an alarming extent, and should it show signs of doing so, the authorities ought to step in, and put a stop to it.

A GREAT RISE.

People in all ranks of life are complaining about the high price of the necessary articles of life. The aged tell us how cheap everything was years ago, when they were much younger than they are now, and how much farther the money they had to spend would go. If articles are brought out from Europe, we are told, it is the exchange that has enhanced the price, and this is true. The rupee is at the present time, not worth much more than a shilling, so the importer charges the purchaser on account of the extra cost incurred. Those who purchase these goods know why they have to give so much for them, and it is no use complaining. Till the exchange question assumes another phase, prices will remain much the same as they do now, and the buyers will have to suffer. There *does not appear* to be any chance of an improvement in this respect, and the present high prices may *last, if not for ever, for many years to come*. But not only are the articles brought into the country very dear, but those produced in the country fetch equally high prices. It is hard to understand why this should be so. The exchange question does not interfere with the cultivator. He uses the *rupee in the same way as he did years ago*. Its value to him is the same. It is true the assessment on the land has been raised but not to any great extent. Such being the case it is not clear why the price of the produce he sells should be raised so much. Never was the price of rice greater than it is now, not even during the time of famine, and everything else has gone up in proportion. From 1876—78 grain had to be brought into *this place by rail at a great* cost, but even then it was sold at a lower rate than it is now. There does not appear *any hope of prices falling, and they may go* up higher than they are at present. As we have said, we do not see any reason for this. Besides, we are told that the ryot is not becoming richer but poorer, that his poverty is abnormal, and that it is not likely to grow less. Here we have a strange anomaly. The price of every article of food is sold at a higher price, and yet the man who produces it seems to gain little or *nothing thereby. This is very strange,* and most certainly requires explanation. In other lands the ryot would grow rich; *in India, we are told, he is growing poorer* and poorer. This is an extraordinary state of affairs, such a state the world has never *seen before*. It has been said that the go-between enriches himself at the expense of the cultivator and the Government; that he is the person who reaps the advantage of high prices, to him the fruit falls, and to nobody else. This seems very likely to be the solution of the matter. There is no check on the dealers, and while they grow rich, people at large suffer. This is called free trade, but many think it is freedom to extract as much money as possible out of the pockets of purchasers. Somebody must be growing rich on account of the high prices now prevailing, but the ryots are not, neither is the Government, while those who have fixed incomes are being simply ruined. It would be well if some way out of the difficulty could be discovered. We may be certain that the dealers will not lower their prices till they are compelled *to do so, and if they could be compelled* it would be a good thing.

News and Notes.

The Hon'ble G Curzon, M P, Colonel Neville Chamberlain and Mr S V. Luke, C I E, are journeying together to Hunza, Nagar and Gilgit.

Italy gives to the world outside her borders 2,500,000,000 oranges, Spain, 14,000,000,000; Portugal, 80 000,000, Paraguay, 60,000,000; Florida, nearly as many as Paraguay.

One point in Mr Fowler's speech, which *has been specially noticed in financial circles*, is his remark that sooner or later, perhaps the sooner the better, India must come to have a *gold* standard.

It is reported that some Russians lately arrived at Srinaggur, their avowed object being the purchase of walnut trees. As they had no passes, as required by law, they were ordered to leave the country at once.

Chawarbi Pasha, against whom a warrant was issued in connection with the charge of purchasing slave girls and who had absconded from Cairo surrendered himself to the authorities to day. He confessed that he had bought girls for his harem. Chawarbi Pasha and two other Pashas and six slave dealers will be tried by Court Martial to-morrow.

A report is current that Russia and France have arrived at an understanding with Japan, and that a formal agreement is probable by which they will participate in the benefits secured should Japan succeed in her efforts. The report gives rise to much controversy. Should it prove correct, it is confidently asserted that England and Germany would support China.

The Russian Government has requested the Porte to give it permission to make soundings in the Sea of Marmora, in *order to ascertain* whether the sea bottom has undergone any changes since the late earthquake. After some *hesitation permission has been granted* by the Porte, with the stipulation that the expedition of Russian warships engaged on the work *shall be accompanied* by a Turkish vessel.

One of the most stupendous engineering projects of the present century is the great canal which Russia proposes to dig in Central Asia to take *the waters of the Oxus far across* the northern sands to the gates of Bokhara

which is said to be declining in prosperity owing to a chronic scarcity of water. The canal which is to be two hundred miles long, practically means the creation of a river course through a region which is indistinguishable from a sandy desert. This colossal undertaking is expected to be finished in three years.

THE "HISTORY of the Mahrattas" which was announced in June last year as under preparation by the Hon'ble Mr Justice Telang is not to be altogether abandoned in consequence of his death. He bequeathed the work, we understand, as a dying legacy to the friend whom he considered most qualified to undertake it, and thus it is that it will ultimately appear under the editorship of the Hon'ble Mr Justice Ranade. The work is, the *Bombay Educational Record* has reason to know, in a fairly advanced stage of preparation.

BABU Ramgopal Sanyal applied for the patronage of His Honour the Lieutenant Governor of Bengal in respect of a book he has just published, entitled "Reminiscences and Anecdotes of Great Men of India," and in reply he was told by His Honour that the author of the book entitled "Record of Criminal Cases between Europeans and Natives for the last 60 years" will not receive any patronage from the head of the Local Government. The reply is provoking much comment. It is no doubt undignified. But, in the application for patronage was there much dignity?

An official *Jareeda* or *Gazette* was issued on the morning of the 6th instant announcing the appointment of Viear-ul-Umra as Prime Minister of Hyderabad. The announcement was exceedingly well received. Congratulations were showered on the Minister this morning at the Railway Station, where he had a large concourse of people, including all the Nizam's officials, assembled to bid goodbye to the Resident and the Misses Plowden and party who left for Bombay *en route* to England under the usual salutes. During Mr Plowden's absence on three months leave Colonel Mackenzie, Commissioner of Berars, officiates.

THUS writes the *Rangoon Times*:—It is by the merest fluke that the last mail steamer for Calcutta did not have a strange passenger on board. A Japanese gentleman from Calcutta, who lives in the Collinga Bazaar of that city, called upon Miss Oding at her town residence, and invited that young Jap lady to take a drive with him, which invitation she accepted. The Jap man took the girl to his lodgings in another part of the town, and before she knew what his intentions were, he put her into a large teak wood box and locked it up. He then had it conveyed to a third spot, preparatory to embarking on board the mail steamer. Miss Oding's lengthy absence was reported to the police under Mr Peters, Assistant Superintendent of Police, and on the house where she was lying concealed being discovered, Inspector Mumford and Constable Strickland were sent to arrest the Jap and the woman. The police succeeded in making the capture. The woman denies that she was a consenting party, although the man has asserted that it was so. The box has a convenient trap door in the bottom which on removal gives ventilation to it.

The *Indian Social Reformer* says:—Hinduism as it is practised to-day is a code of antiquated social rules doing duty for the new conditions of life. What is now most needed is the knowledge in all the Hindus that the rules which are regarded as ordinances of religion, are only rules intended to regulate social relations, and that they can be changed or rescinded according to present needs. It is this teaching which has to be conveyed to all those who confound social conduct with religion. Until this is done there is no chance of people realising a higher religion. Vedantism may be a noble creed, its import may be understood, but it cannot be realised by any one whose every-day life is not in consonance with it. If Hindus are to lay claims to the heritage of a noble religion, they must drop many a petty prejudice and allow themselves to be guided by unclouded intelligence. The mind must be prepared to receive high flights of Vedantic thought. It must surrender its long cherished mistaken notions about caste, status of women, foreign travel, and many other things comprised in the general name of social reform. The mind must become pure, it must be weeded of all its extravagance and illusions. This is possible only when men in thought and deed cease to differentiate where no differentiation exists, and disregard restrictions which are really and truly obstructions to honest conduct.

Local and Provincial.

THE INCOME TAX.—This is undergoing revision in the Civil and Military Station, Mr Abdul Rahman being the valuator.

THE S. I. R. A. MEETING.—This commenced this morning, and will continue for twelve days. All the teams have arrived.

THE WEATHER.—This is still very pleasant, and some nice showers have fallen lately. The crops are looking well, and a good harvest is expected.

THE REVD. H. GOLDFORD.—This gentleman, late the Principal of the Wesleyan High School left for Hassan on Wednesday last to take up his new post there.

THE PLANTERS CONFERENCE.—This occupied the whole of last week. It was held in the Cubbon Rooms, and delegates from all parts of Southern India were present.

THE SOUTHERN MAHRATTA RAILWAY.—The revised Time Table of the Southern Mahratta Railway will not be introduced till the 1st proximo, in consequence of the line being obstructed by two bridges being washed away.

THE *Desabhimani* AGAIN.—A few days ago, the City police carried away into their office the press materials of the *Desabhimani*, which were held in attachment, but left temporarily in the Editor's house, duly guarded by the Police. The Editor, we understand, has despatched in this connection a long telegraphic message to His Excellency the Viceroy.—*M. H.*

THE MYSORE REPRESENTATIVE ASSEMBLY.—The citizens of Mysore have addressed a memorial to the Dewan, bitterly complaining against the withdrawal of the representation to the Assembly, which the city was enjoying for the last four years, and against disqualifying Graduates to become members. They have earnestly prayed that the privileges they were enjoying be regranted them.—*Ib.*

THE 1895 LOCAL SERVICE EXAMINATION.—The Government has ruled that public and non public candidates shall be treated alike in the matter of the concession allowing persons who have passed the Matriculation and Middle School Examinations to appear for the above to qualify themselves for first and second grade Pleaders, and has suggested the desirability of fixing a time within which non public candidates should present applications for enrolment as Pleaders, as has been done in regard to public servants.

EFFECTS OF EARLY MARRIAGES.—A very painful case has just been brought to our notice. A pensioned Amildar in Mysore has given in marriage his son's daughter to his daughter's son. The girl, a puny little creature weak and undeveloped, is just 12 and has attained her menstruous age. The consummation ceremony was performed a few days ago and the immature child wife fell a prey to hysterics. We understand the girl is now under medical treatment.—*M. H.*

The question of reserving date trees for toddy purposes was discussed at length and the Deputy Commissioners present were consulted. At present more date groves exist than necessary The Dewan promised that steps will be taken to demarcate only necessary groves and to give up the rest for cultivation

The existing laws allow ten feet of margin in the rear for tank lands Members desired its reduction The Dewan rejected this proposal

Proposal to grant grazing grounds in inland on dry rates was favorably considered by the Dewan

Mr Ganeshrow proposed that Savings Bank pass books may be accepted instead of cash security when parties buy Government lands and in similar cases The Dewan promised favorable consideration

The proposal to collect gun license fees *along with land revenue and licenses not to* be renewed each year unless resignation was approved by the Dewan

ಕರ್ನಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ಅಕ್ಟೋಬರ ೨೨ ನೇ ತಾ। ಸೋಮವಾರ

ಕರ್ನಲ್ ಪಿ. ಡಿ. ಹೆಂಡರ್ಸನ್ ಸಿ. ಎಸ್. ಐ.

ಸನ್ ೧೮೯೦ ನೇ ಇಸವಿ ಏಪ್ರಿಲ್ ಮಾಹೇಯಾರಭ್ಯ ಈಸಂಸ್ಥಾನದ ಬ್ರಿಟಿಷರೆಸಿಡೆಂಟಿ ಕೆಲಸವನ್ನೂ ಕೊಡಗು ಚೀಫ್ ಮತ್ತು ಜ್ಯುಡಿಷಿಯಲ್ ಕಮಿಷನರ ಕೆಲಸವನ್ನೂ ಸರ್ವಜನ ಸಮ್ಮತವಾಗಿ, ಶ್ರೀ ಮನ್ಮಹಾರಾಜರ ಸರ್ಕಾರಕ್ಕೂ, ಮಹಾರಾಣಿ ಸರ್ಕಾರಕ್ಕೂ, ಶ್ಲಾಘ್ಯತೆಯಾಗಿ ನಿರ್ವಹಿಸುತ್ತಲಿರುವ ಕರ್ನಲ್ ಪಿ. ಡಿ. ಹೆಂಡರ್ಸನ್ ಸಿ. ಎಸ್. ಐ. ಯವರು ಬರುವ ಫೆಬ್ರುವರಿ ತಿಂಗಳ ಅಂತ್ಯ ಭಾಗದಲ್ಲಿ ಇಲ್ಲಿನ ಕೆಲಸದಿಂದ ನಿವೃತ್ತರಾಗಿ ಹೊರಟು ಹೋಗುವರೆಂದು ಒಳದೇಶದ ಡೆಯಿಲೀ ಪೋಸ್ಟ್ ಪತ್ರಿಕೆಯು ತಿಳಿಸುತ್ತದೆ. ಬ್ರಿಟಿಷ್ ಚೀಫ್ ಕಮಿಷನರವರ ಅಧಿಕಾರವು ತಪ್ಪಿ ಮಹಾರಾಜರವರಿಗೆ ದೌಲತ್ ಒಪ್ಪಿಸಲ್ಪಟ್ಟ ಕಾಲದಿಂದಲು, ಅಂದರೆ ೧೮೮೧ನೇ ಇಸವಿ ಏಪ್ರಿಲ್ ಮೊದಲು ೧೮೯೪ನೇ ಇಸವಿ ಮಾರ್ಚ್ ಆಖೈರ ವರೆಗೆ ಗತಿಸುವ ೧೪ ಸಂವತ್ಸರಗಳ ಕಾಲದಲ್ಲಿ ಆರೇಳು ಜನ ರೆಸಿಡೆಂಟರುಗಳು ನಿಯಮಿತರಾಗಿದ್ದು ನಿವೃತ್ತರಾಗಿ ಹೋಯಿತಾಗುತ್ತವೆ. ಇವರಲ್ಲೊಬ್ಬರಿಬ್ಬರು ದೇಶಾಂತರ ಗತರಾಗಿಯೂ ಮಿಕ್ಕವರು ದೇಶಾಂತರಗಳಿಗೆ ಹೋದವರಾಗಿಯೂ ಇರುತ್ತಾರೆ. ಅಸಿಸ್ಟೆಂಟ್ ರೆಸಿಡೆಂಟರುಗಳ ಸಂಖ್ಯೆಯನ್ನು ಕುರಿತು ವಿಚಾರಿಸಬೇಕಾದುದೇ ಇಲ್ಲವು. ಸರಾಸರಿ ನೋಡಿ ನೋಡಲಾಗಿ ಇಪ್ಪತ್ತುನಾಲ್ಕು ತಿಂಗಳ ಕಾಲಕ್ಕಿಂತ ಅಧಿಕವಾಗಿ ನೌಕರಿಯಲ್ಲಿ ಒಬ್ಬ ರೆಸಿಡೆಂಟರಾಗಲಿ ನಿಲ್ಲಿಸಲ್ಪಟ್ಟಂತೆ ಕಾಣಿಸಲಿಲ್ಲವು. ಹೀಗೆ ಪದೇಪದೆ ರೆಸಿಡೆಂಟರನ್ನು ಬದಲಾಯಿಸುತ್ತ ಬರಲಿಕ್ಕೆ ಇಂಡ್ಯಾ ಗವರ್ನಮೆಂಟಿನವರಿಗೇನು ಉದ್ದೇಶವೋ ಅದು ಗೂಢವಾಗಿರುತ್ತದೆ. ಇಂತ ಬದಲಾವಣೆಯಂ ಕುರಿತು ಆಲೋಚಿಸಲಾಗಿ ಒಂದು ವಿಧದಲ್ಲಿ ಯುಕ್ತವಾಗಿಯೂ, ಮತ್ತೊಂದು ವಿಧದಲ್ಲಿ ಅಯುಕ್ತವಾಗಿಯೂ, ಕಂಡುಬರುತ್ತದೆ, ಹ್ಯಾಗೆಂದರೆ—ದೀರ್ಘಕಾಲ ಒಬ್ಬರನ್ನೇ ನಿಯಾಮಕವಾಗಿಡುವದರಿಂದ ಅವರು ತಮ್ಮ ಪ್ರಾಬಲ್ಯವನ್ನು ವೃದ್ಧಿ ಪಡಿಸಿಕೊಂಡು ತಮ್ಮ ಇಷ್ಟಾನುಸಾರ ವರ್ತಿಸುತ್ತ ಕಡೆಗೆ ಅಸಾಧ್ಯರಾಗಿ ಪರಿಣಮಿಸಬಹುದಾದುದರಿಂದ ಅದಕ್ಕೆ ಅವಕಾಶವನ್ನೀಯದಂತೆ ಬದಲಾಯಿಸುತ್ತ ಬರುವಣವು ಶ್ಲಾಘ್ಯವೆಂಬದಾಗಿ ಭಾವಿಸಲ್ಪಡಬಹುದು. ಇಂಗ್ಲೀಷ ಪ್ರಭುತ್ವದಲ್ಲಿ ಇದೇ ಸಿದ್ಧಾಂತವು ಸರ್ವತ್ರ ಸ್ವಯಂ ಪ್ರವೃತ್ತವಾಗಿರುತ್ತಿದೆ ಹೀಗೆಯೇ ಮತ್ತೊಂದು ವಿಧವಾಗಿ ಆಲೋಚಿಸಿದರೆ ಈರೀತಿ ಆಗಿಂದಾಗ್ಗೆ ಬದಲಾಯಿಸುತ್ತ ಬರುವಣದರಿಂದ ಬರುವಂತ ಅಧಿಕಾರರಿಗೆ ಪ್ರಜೆಗಳ ಶೀಲಸ್ವಭಾವಗಳನ್ನು ಅರಿಯಲಿಕ್ಕೂ ಅವರ ಶೀಲಸ್ವಭಾವಗಳನ್ನು ಇತರರು ತಿಳಿದುಕೊಳ್ಳಲಿಕ್ಕೂ, ಹೀಗೆ ಪರಸ್ಪರ ಸ್ವರೂಪ ಪರಿಜ್ಞಾನವಂ ಪಡೆದು ಪರಸ್ಪರ ಪ್ರಯೋಜನಾಭಿಮಾನ ಸಂಪಾದನಕ್ಕೂ ಅವಕಾಶವು ಕಡಮೆಯಾಗಿ ಹೋಗುತ್ತಿದೆ. ಇದಲ್ಲದೆ ಶ್ರೀಮನ್ಮಹಾರಾಜರ ಸರ್ಕಾರಕ್ಕೂ ಬ್ರಿಟಿಷ್ ರೆಸಿಡೆಂಟರಿಗೂ ನೆಲೆಗೊಳ್ಳತಕ್ಕ ಸಂಬಂಧವು ಮಹತ್ತರವಾದುದಾಗಿಯೂ, ಪರಸ್ಪರಾಂತರಂಗ ಯುಕ್ತವಾದುದಾಗಿಯೂ, ಪರಸ್ಪರ ಪ್ರಯೋಜನ ಪ್ರೋತ್ಸಾಹಕವಾದುದಾಗಿಯೂ ಇರುವಣದರಿಂದ ಕ್ಷಣೇ ಕ್ಷಣೆ ಬದಲಾಯಿಸಲ್ಪಡುವವರಿಂದ ಬರುವಂತವರ ಚಿತ್ತವೃತ್ತಿಯನ್ನರಿತು ವರ್ತಿಸಲಿಕ್ಕೆ ಸಾಧ್ಯವಿಲ್ಲದೆ ಹೋಗುತ್ತಿದೆಯಾದುದರಿಂದ ಇದು ಅನುಚಿತವೆಂದು ಸಹ ಭಾವಿಸಲ್ಪಡಬಹುದು. ಆದರೆ ಈಗ ನೆಲೆಗೊಂಡಿರುವ ಪದ್ಧತಿಯಂ ನೋಡಲಾಗಿ ಪ್ರಥಮಾಭಿಪ್ರಾಯವನ್ನೇ ಇಂಡ್ಯಾ ಗವರ್ನಮೆಂಟಿನವರು ಅಂಗೀಕರಿಸಿ ತದ್ವತ್ ಅನುಷ್ಠಿಸುತ ಬರುವಂತೆ ಕಾಣುತ್ತಿದೆ. "ಯದ್ಯದಾಚರತಿ ಶ್ರೇಷ್ಠಃ" ಎಂಬುವಂತೆ ಶ್ರೇಷ್ಠರಾದವರು ಗೈಕೊಂಡಿದ್ದೇ ಇತರರಿಗೂ ಗ್ರಾಹ್ಯವಾದುದರಿಂದ ಅದನ್ನೇ ಇತರರೂ ಕೊಂಡಾಡಬಹುದು. ಯಾವಾಗಲು ಒಂದು ವಿಧಿಯು ಕ್ವಚಿತ್ಪ್ರವೃತ್ತಿಯುಳ್ಳದ್ದಾಗಿಯೂ, ಕ್ವಚಿದಪ್ರವೃತ್ತಿಯುಳ್ಳದ್ದಾಗಿಯೂ ಇರುವದಕ್ಕಿಂತಲೂ ಸಾಧ್ಯವಾದಮಟ್ಟಿಗೆ ಸರ್ವತ್ರ ಸಮನ್ವಯ ಪ್ರವೃತ್ತವಾಗಿರುವುದೇ ಶ್ಲಾಘ್ಯವೆಂದೆಣಿಸಲ್ಪಡುವುದು.

ರಾಜಕೀಯ ಪ್ರಸಂಗಗಳು.

ಈಚೆಗೆ ಸುಮಾರು ಮೂರು ತಿಂಗಳ ಕಾಲದಿಂದಲು, ಪೂರ್ವ ಸಮುದ್ರದಲ್ಲಿರುವ ಪರ್ಯಾಯದ್ವೀಪವಾದ ಕೋರಿಯಾ ದೇಶದ ಪ್ರೋಟೆಕ್ಟ್ವ ವಿಷಯದಲ್ಲಿ ಚೀನಾ ಸರ್ಕಾರಕ್ಕೂ ಜಪಾನ ಸರ್ಕಾರಕ್ಕೂ ಕಲಹ ಪ್ರಾಪ್ತವಾಗಿ ಅದು ಕಡೆಗೆ ಪ್ರಬಲ ಯುದ್ಧದಲ್ಲಿ ಪರಿಣಮಿಸಿ, ಉಭಯ ಕಕ್ಷಿಯವರಲ್ಲೂ ಅನೇಕ ಸಹಸ್ರ ಸೈನಿಕರು ಪ್ರಾಣಗಳಂ ಹೋಗಲಾಡಿಸಿಕೊಳ್ಳುತ್ತಲಿದ್ದಾಗ್ಯೂ ಉಭಯ ಸಂಸ್ಥಾನಾಧಿಪತಿಗಳಿಗೂ ದಿನೇ ದಿನೇ ರೋಷಾವೇಶಗಳು ವೃದ್ಧಿಯಾಗುತ್ತ, ಅವರವರ ಅನುಕೂಲ್ಯಗಳಿಗೆ ಅನುಗುಣವಾಗಿ, ಹೊಸದಾಗಿ ಸೈನ್ಯಗಳಂ ಕಟ್ಟುತಲೂ, ಯುದ್ಧನಾವೆಗಳಂ ಕೊಂಡುಕೊಳ್ಳುತಲೂ, ಹಿಂದಿನ ಯುದ್ಧದಲ್ಲಿ ಶಿಥಿಲವಾದ ನಾವೆಗಳಂ ದುರಸ್ತಿ ಮಾಡುತಲೂ, ಮುಂದೆ ಇನ್ನು ಪ್ರಬಲ ಯುದ್ಧ ಸೂಚಕಗಳಾದ ಬಹುವಿಧ ಸನ್ನಾಹಗಳಂ ಮಾಡುತಲಿರುವದರಿಂದ, ಚೀನಾ ಸರ್ಕಾರಕ್ಕೂ ಯೂರೋಪ ಸಂಸ್ಥಾನಾಧಿಪತಿಗಳಿಗೂ ಬಹುಕಾಲದಿಂದಲು ನಡೆಯುತ್ತಿರುವ ಒಂದು ತಹನಾಮೆಯ ಮೂಲಕ ಚೀನಾ ದೇಶದ ಸಮುದ್ರ ತೀರದಲ್ಲಿರುವ ಕೆಲವು ಪಟ್ಟಣಗಳಿಗೆ ವ್ಯಾಪಾರಾರ್ಥ ಯೆಲ್ಲ ಸಂಸ್ಥಾನಾಧಿಪತಿಗಳೂ ಹೋಗಬಹುದೆಂದು ವ್ಯವಸ್ಥೆಯಾಗಿರುವದರಿಂದ, ಸದರೀ ಷಹರುಗಳಲ್ಲಿ ವಾಸವಾಗಿರುವ ಯೂರೋಪಿಯನ್ ಜನರ ಕ್ಷೇಮವನ್ನೂ ವ್ಯಾಪಾರ ಮೂಲಕವಾದ ಪ್ರಯೋಜನವನ್ನೂ ಪರ್ಯಾಲೋಚಿಸಿ, ಯೂರೋಪ ಸಂಸ್ಥಾನಾಧಿಪತಿಗಳೆಲ್ಲರು ಸೇರಿ ಯಾವದಾದರೆ ಒಂದು ಬಗೆ ಮೇಲೆ ತಿಳಿಸಿರುವ ಇಬ್ಬರು ಸಂಸ್ಥಾನಾಧಿಪತಿಗಳನ್ನೂ ಸಮಾಧಾನ ಪಡಿಸಿ, ಯುದ್ಧವಂ ನಿಲ್ಲಿಸಬೇಕಾದ್ದಾವಶ್ಯಕವೆಂದು ಇಂಗ್ಲೆಂಡ್ ಸರ್ಕಾರಕ್ಕೆ ಕಂಡುಬಂದು, ಆ ಪ್ರಕಾರ ಜರ್ಮನಿ ಮೊದಲಾದ ಕೆಲವು ಸಂಸ್ಥಾನಾಧಿಪತಿಗಳಿಗೆ ತಿಳಿಸಲು ಅವರು ಅದಕ್ಕೆ ಒಪ್ಪಲಿಲ್ಲವು, ಪರಂತು ಅವರೆಲ್ಲರು ಸ್ವಪ್ರಯೋಜನ ದೃಷ್ಟಿಯಿಂದ ತಮ್ಮ ತಮ್ಮ ಯುದ್ಧ ನಾವೆಗಳನ್ನು ಚೀನಾ ಸಮುದ್ರಕ್ಕೆ ಕಳುಹಿಸಿರುತ್ತಾರೆ. ಜಪಾನ ಸೈನ್ಯವು ಕೋರಿಯಾ ದೇಶದೊಳು ನಿರಾತಂಕವಾಗಿ ಪ್ರವೇಶಿಸಿ ಕೆಲವು ಷಹರುಗಳಂ ತಮ್ಮ ಸ್ವಾಧೀನ ಮಾಡಿಕೊಂಡದುಮಾತ್ರವಲ್ಲದೆ ಇನ್ನು ಮುಂದಕ್ಕೆ ಬರುತಲಿದ್ದಾರೆ ಚೀನಾ ದೇಶೀಯರಾದರೊ, ಶತ್ರುಗಳು ಯೆದಿರಿಸಿ ತಡೆಯುವದಕ್ಕೆ ಆವಶ್ಯಕಗಳಾದ ಸೈನಿಕ ಸನ್ನಾಹಗಳಂ ಮಾಡುತಲಿದ್ದಾರೆ. ಈ ತಿಂಗಳ ೧೫ನೇ ತಾರೀಖಿನಲ್ಲಿ ಸಹ ಒಂದು ಪ್ರಬಲ ಯುದ್ಧ ನಡೆದಂತೆಯೂ, ಅದರಲ್ಲಿನ ಜಯಾಪಜಯಗಳು ಇನ್ನು ವಿವರವಾಗಿ ತಿಳಿಯಬರಲಿಲ್ಲವೆಂತಲೂ ಈಚೆಗೆ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತ್ತಿದೆ. ಈ ಕಲಹವು ಮುಂದೆ ಯಾವರೀತಿಯಲ್ಲಿ ಪರ್ಯವಸಾನವಂ ಹೊಂದುವುದೊ ಅದಂ ಸದ್ಯಃ ನಿರ್ಧರಿಸಿ ತಿಳಿಸಲು ಸಾಧ್ಯವಲ್ಲದಿರುತ್ತದೆ.

ಕಾಬೂಲ್ ಅಮೀರರವರು ಈಚೆಗೆ ಕೆಲವು ದಿನಗಳ ಮೊದಲು ಅಸ್ವಸ್ಥಸ್ಥಿತಿಯಲ್ಲಿರುತ್ತ ಅವರ ಜೀವಮಾನದ ವಿಷಯದಲ್ಲಿ ಅಪಾಯ ಚಿಂತೆ ಸಹ ಉಂಟಾಗಿರುವಂತೆ ತಿಳಿಯಬರುತ್ತಿದೆ. ದೈವಾಜ್ಞೆಯಾ ಅವರು ಮೃತಪಡುವ ಪಕ್ಷದಲ್ಲಿ ಅವರ ಸ್ಥಾನಾಪನ್ನರಾಗಬೇಕಾದವರ ವಿಷಯದೊಳು ಕಲಹಗಳುಂಟಾಗಬಹುದೆಂಬ ಶಂಕೆಯಿಂದ ಇಂಡ್ಯಾ ಗವರ್ನಮೆಂಟಿನವರು ಆಗಿಂದಾಗ್ಗೆ

ಮಂತ್ರಾಲೋಚಕ ಸಮಾಜವಂ ಸೇರಿಸಿ ತನ್ನ ಕೃತ್ಯವಾಗಾಮ ಆಲೋಚಿಸುತಲಿದಾರೆ. ಇದೂ ಅಲ್ಲದೆ ರಷಿಯಾ ಸುಲ್ತಾನಾದಿ ಸತಿಯವರು ಬಹುಕಾಲದ ಮೊದಲು ಇಂಡ್ಯ ದೇಶದಮೇಲೆ ದೃಷ್ಟಿಯುಳ್ಳವರಾಗಿ, ತಮ್ಮ ರಾಜ್ಯಕ್ಕೂ ಇಂಡ್ಯ ದೇಶಕ್ಕೂ ಮಧ್ಯೆ ಇರುವ ಕಾಬೂಲನ್ನು ಸ್ವವಶ ಮಾಡಿಕೊಳ್ಳಬೇಕೆಂಬ ದುರಾಲೋಚನೆಯಿಂದ ಸದರೀ ದೇಶದ ಬಳಿ ತಮ್ಮ ಸೈನ್ಯವನ್ನಿಟ್ಟಿರುವದಲ್ಲದೆ ಇನ್ನು ನಾನಾವಿಧ ಖಿತಾಬಿ ಕೆಲಸಗಳಂ ಮಾಡುತ ಒಳಗೆ ಪ್ರವೇಶಿಸುವದಕ್ಕೆ ಉಚಿತ ಸಮಯವಂ ನಿರೀಕ್ಷಿಸುತಲಿರುವಣವು ಪ್ರಸಿದ್ಧ ವಿಷಯವಾಗಿರುತಿದೆಯಷ್ಟೆ. ಇಂತ ಸ್ಥಿತಿಯಲ್ಲಿ ಬ್ರಿಟಿಷ ಗವರ್ನಮೆಂಟಿನವರಿಗೆ ರಾಜಕೀಯವಾದ ಚಿಂತೆಯು ಇತರ ಕಾರ್ಯಾಪೇಕ್ಷೆಯಾ ಪ್ರಬಲತರವಾಗಿರಬಹುದೆಂದು ಎಣಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ರಷಿಯಾ ಚಕ್ರವರ್ತಿಯವರು ಸಹ ಈಚೆಗೆ ಕೆಲವು ದಿನಗಳಿಂದ ಅನಾರೋಗ್ಯಸ್ಥಿತಿಯಲ್ಲಿರುತಲಿದ್ದು, ಈಗ ಪ್ರಾಣಾಪಾಯ ತುಕಿನ ಕಾರಣಗಳಾದ ಚಿಹ್ನೆಗಳು ಕಂಡುಬರುವುವೆಂತ ವೃತ್ತಾಂತ ಬಬಿರುತಿದೆ. ಮೇಲೆ ತಿಳಿಸಲ್ಪಟ್ಟಿರುವ ಮೂರು ವಿಷಯಗಳೂ ಸದ್ಯ ಬ್ರಿಟಿಷ ಗವರ್ನಮೆಂಟಿನವರ ಅವಧಾನವಂ ಸಂಪೂರ್ಣವಾಗಿ ಆಕ್ರಮಿಸಿಕೊಂಡಿರುವದರಿಂದ ಅವುಗಳ ಕಾರ್ಯಸಾಧನವಂ ಕೇವಲ ಅಕ್ಕರೆಯೊಡನೆ ನಿರೀಕ್ಷಿಸುತಲಿರುವೆವು.

ತಿರುಪತಿ ವೆಂಕಟೇಶ ದೇವರ ಪ್ರಭಾವ

ಇದರಡಿ ತಿಳಿಸಲ್ಪಡುವ ವಿಷಯವಂ ಕುರಿತು ತಿರುಪತಿಯಿಂದ ನಮ್ಮ ಮಿತ್ರರೊಬ್ಬರು ಬರೆದಿರುತ್ತಾರೇನೆಂದರೆ —

"ಈ ಸಂವತ್ಸರದಲ್ಲಿ ತಿರುಪತಿ ಶ್ರೀ ವೆಂಕಟ್ರಮಣದೇವರ ಬ್ರಹ್ಮೋತ್ಸವವು ಸಾಂಗವಾಗಿ ನೆರವೇರಿತು. ಮೈಸೂರು ಮಹಾರಾಜರವರ ಸತ್ರದಲ್ಲಿ ಸಲ್ಲಾಪಿತ ಬ್ರಾಹ್ಮಣರಿಗೆ ಭೋಜನ ನಡೆಯಿತು. ಯಾತ್ರೆಗಳ ಮೈಕಿ ಮೂವರಿಗೆ ವಾಂತಿ ಭೇದಿ ರೋಗ ತಗಲಿ ಯಾವನಿಗೂ ಗುಣವಾಯಿತು. ಜನಗಳಿಗೆ ಯಾವ ಭಾಗದಲ್ಲಿಯೂ ಯಾವ ವಿಧ ತೊಂದರೆಯೂ ಇಲ್ಲವು. ಪುಷ್ಕರಣೀ ನೀರಿಗೆ ದುರ್ವಾಸನೆ ಹಿಡಿದಿರುವದರಿಂದ ಅದನ್ನು ಕುಡಿಯ ಕೂಡದು, ಮತ್ತು ಅದರಲ್ಲಿ ಯಾರೂ ಸ್ನಾನ ಮಾಡಕೂಡದೆಂದು ಸರ್ಕಾರದವರು ನಿರ್ಬಂಧ ಪಡಿಸಿದರಾಗಿ ಜನಗಳಿಗೆ ನಿರಿನ ವಿಷಯದಲ್ಲಿ ಅನಾನುಕೂಲ ಪ್ರಾಪ್ತಿಸಿತು. ಕಾವೇರಿ ಜಿಲ್ಲೆಯಿಂದ ಕಾಮಧ್ರ... ತಾಯಿ ಮಗ ಮತ್ತು ತಂದೆ, ಇವರು ದೇವರ ದರ್ಶನಾರ್ಥ ಇಲ್ಲಿಗೆ ಬಂದಿದ್ದರು. ಸದರೀ ಮಗನಿಗೆ ಎಂಟು ವರ್ಷಗಳ ವಯಸ್ಸು. ತಂದೆಯಾದವನು ಊರಿಂದ ಹೊರಡುವಾಗ ಪುಷ್ಕರಣಿಯಲ್ಲಿ ಸ್ನಾನ ಮಾಡುವದಾಗಿಯೂ, ಹುಂಡಿಗೆ ೩ ರೂಪಾಯಿಗಳು ಸಮರ್ಪಣೆ ಮಾಡುವದಾಗಿಯೂ ಪ್ರಾರ್ಥನೆ ಮಾಡಿಕೊಂಡು ಬಂದವನು ಇಲ್ಲಿ ಅದೇ ಪ್ರಕಾರ ನಡೆಸಲು ಮರೆತುಹೋಗಿ ಊರಿಗೆ ಪ್ರಯಾಣ ಮಾಡಲು ಮಗನಮೇಲೆ ದೇವರ ಆವೇಶ ಬಂದು "ನನ್ನ ಪ್ರಾರ್ಥನೆಯನ್ನು ಸಲ್ಲಿಸದೆ ಹೋಗುತ್ತೀಯಾ" ಎಂದು ಕೇಳಲು ಕೋಪದೊಡನೆ ಕೇಳಲು ಸದರೀ ತಂದೆಯು ಕೂಡಲೆ ಪುಷ್ಕರಣಿಯಲ್ಲಿ ಸ್ನಾನ ಮಾಡಿ ಹುಂಡಿಗೆ ೩ ರೂಪಾಯಿಗಳಂ ಸಮರ್ಪಣೆ ಮಾಡಿ, ತನ್ನ ಅಪರಾಧ ಕ್ಷಮಿಸಬೇಕೆಂದು ಬೇಡಿದನು. ಸಮೀಪದಲ್ಲಿರುವ ಇದನ್ನೆಲ್ಲ ಕೇಳುತಲಿದ್ದ ಪ್ರೊಫೆಸರ್ ಒಬ್ಬರು, "ನೀವು ಈ ರೂಪಾಯಿಗೆ ಪ್ರಾಧಾನ್ಯತೆ ಕೊಟ್ಟಿರಿ, ನಿಮ್ಮ ಹಣ ಲಕ್ಷಲಕ್ಷವಾಗಿ ವೇಶ್ಯೆಯರ ಪಾಲಾಗುತ್ತಲ್ಲಾ" ಎಂದು ಕೇಳಲು "ಅದು ನನಗೆ ತಿಳಿಯದು! ಎನ್ನು ಐದು ದಿನಗಳಲ್ಲಿ ನೋಡಿರಿ ನನ್ನ ತಮಾಷೆ" ಎಂದು ಆವೇಶ ಬಂದಿದ್ದ ಹುಡುಗನು ಹೇಳಿದನು. ಆ ಪ್ರೊಫೆಸರು ರಾತ್ರಿ ರಕ್ತಾತಿಸಾರವಾಗಿ ಮೃತಿಯಾಗಿದ್ದರು."ಎಂಬುದು.

ಅಲ್ಲಿ ತಿರುಪತಿ ಮಹಂತರಾದ ಮಹಾವೀರದಾಸ್ ಎಂಬವರು ಅನಿರೀಕ್ಷಿತವಾಗಿ ರಕ್ತ ರಕ್ತವಾಗಿ ವಾಂತಿ ಮಾಡಿಕೊಂಡು ಮೃತಪಟ್ಟರೆಂದು ಮದರಾಸ್ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟದ್ದ ಅಂಶವನ್ನು ಕಳೆದವಾರದ ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಾಗಿ, ನಮ್ಮ ಲೇಖಕರ ಕಾಗದದಲ್ಲಿ ತಿಳಿಸಲ್ಪಟ್ಟಿರುವವ್ಯಕ್ತಿಯು ಮಹಂತರಾಗಿಯೇ ಇರಬೇಕೆಂದು ನಂಬುತ್ತೇವೆ.

Occasional Notes.
ನೈಮಿತ್ತಿಕ ವಿಷಯ ನ್ಯಾಸ.

ಫೋರೆಸ್ಟ್ ಇಲಾಖಾ ನೌಕರರು ಕೋರ್ಟ್ ಸ್ಟ್ಯಾಂಪುಗಳನ್ನು ಸಹ ಮಾರಬಹುದೆಂದು ಈಚೆಗೆ ರೆವಿನ್ಯೂ ಬೋರ್ಡಿನವರು ನಿರ್ಣಯ ಮಾಡಿರುತ್ತಾರೆ.

ಇಂಡ್ಯ ದೇಶದೊಳು ಹೆಣ್ಣು ಮಕ್ಕಳಿಗೆ ಬಿ ಎ ಪರೀಕ್ಷೆಯ ವರೆಗೆ ಪಾಠಗಳಂ ಹೇಳುವದಕ್ಕೆ ತಕ್ಕದಾದ ಕಾಲೇಜ್ ಪಾಠಶಾಲೆಯು ದಕ್ಷಿಣ ಬಂಗಾಳ ದೇಶವೊಂದರಲ್ಲಿ ಮಾತ್ರವಿದೆ.

ಈಗ ಸವರನ್ ಕ್ರಯವು ಹದಿನೆಂಟು ರೂಪಾಯಿಗಳಿಗೆ ಮೇಲ್ಪಟ್ಟಿರುತಿದೆಯಷ್ಟೆ. ಅದು ಮೆಲ್ಲಮೆಲ್ಲನೆ ಪರುತು ಪಟ್ಟಾಗಿ ಇಳಿದುಹೋಗುವದೆಂಬುದಕ್ಕೆ ತಕ್ಕ ಕಾರಣಗಳುಂಟಾಗುತಲಿರುವಂತೆ ಮುಂಬೈ ಪತ್ರಿಕೆಯೊಂದು ತಿಳಿಸುತಿದೆ.

ಲಂಡನ್ ಪಟ್ಟಣದ ಒಂದು ಕಂಪೆನಿಯವರು ಬಿದುರಿನಿಂದ ಕಾಗದ ತಯಾರ್ಮಾಡುವ ಉದ್ದೇಶವೊಡನೆ ಬರ್ಮಾ ದೇಶಕ್ಕೆ ಸೇರಿದ ಬೇಷ್ಟ ಡಿಸ್ಟ್ರಿಕ್ಟುಗಳಲ್ಲಿ ಬಿದುರು ಕಡಿಯುವದಕ್ಕೆ ಇಂಡ್ಯ ಗವರ್ನಮೆಂಟಿನಿಂದ ಹುಕುಂ ಪಡೆದಿರುವದಾಗಿ ಕೇಳುತ್ತೇವೆ.

ಈತಿಂಗಳ ಆದಿಭಾಗದಲ್ಲಿ ಕರ್ನೂಲುಜಿಲ್ಲೆಯೊಳು ಅತಿ ಪ್ರಬಲವರ್ಷದವೆಯಿಂದ ಅನೇಕ ಮನೆಗಳು ಬಿದ್ದುಹೋಗಿ ತತ್ಕಾಲಕ ಅನೇಕರು ಪ್ರಾಣಗಳಂ ಕಳೆಗಳಾದಿಸಿಕೆ ಎಂದರಷ್ಟೆ. ಬಿದ್ದುಹೋದ ಕಟ್ಟಡಗಳನ್ನು ಅಗೆದು ನೋಡುವಲ್ಲಿ ಇದುವರೆಗೆ ೧೧೦ ಮಂದಿಗಳ ಶವ ಸಿಕ್ಕಿರುತೆಯಾ ಇನ್ನು ಅಗೆಯುತಲಿದ್ದಾರೆಂತಲೂ, ಮೂರು ಮನೆಗಳಲ್ಲಿ ಆಯಾ ಕುಟುಂಬಕ್ಕೆ ಸೇರಿದವರೆಲ್ಲರು ಕೆಳಗೆ ಸಿಕ್ಕಿಕೊಂಡು ಪ್ರಾಣಗಳಂಬಿಟ್ಟಿರುತಲೂ ತಿಳಿದು ಬಹಳ ವಿಷಾದಿಸುತ್ತೇವೆ.

ತಿರುಪತಿ ಮಹಂತರಾದ ಮಹಾವೀರದಾಸರು ಆರೋಗ್ಯದಿಂದಿರುತಲಿದ್ದು ಏಕಾ ಏಕಿ ರಕ್ತ ರಕ್ತವಾಗಿ ವಾಂತಿಮಾಡಿಕೊಂಡು ಪ್ರಾಣಬಿಡುವದಕ್ಕೆ ಯಾವದೋ ಒಂದು ವಿಷಪ್ರಯೋಗ ಪ್ರಾಪ್ತಿಸಿರಬೇಕೆಂಬ ಅನುಮಾನದ ಮೇಲೆ ಉತ್ತರ ಆರ್ಕಾಟು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟು ಖುದ್ದು ತಿರುಪತಿಗೆ ಹೋಗಿ ವಿಚಾರಣೆ ಮಾಡಿ ಮಹಂತರ ಮರಣಕ್ಕೆ ದುಷ್ಪ್ರಯೋಗಗಳು ಯಾವದೂ ಕಾರಣವಲ್ಲವೆಂದು ಅಭಿಪ್ರಾಯಪಟ್ಟರೆಂದು ಕೇಳುತ್ತೇವೆ.

Bangalore City Municipality
ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ
ನೋಟೀಸ

ತಾ. ೧೯ನೇ ಅಕ್ಟೋಬರ್ ೧೮೯೪

ಮ್ಯೂನಿಸಿಪಲ್ ರೆಗ್ಯುಲೇಷನ್ ೨೦ನೇ ಸೆಕ್ಷನ್ ನಿಯಮವನ್ನನುಸರಿಸಿ ಇದರಡಿ ರುಜು ಮಾಡಿರುವವರು, ಸನ್ ೧೮೯೪ನೇ ಇಸವಿ ಅಕ್ಟೋಬರ್ ೩೧ನೇ ತಾರೀಖಿನಲ್ಲಿ ಬೋರ್ಡಿನವರು ಸಾಮಾನ್ಯ ಸಭೆ ಸೇರುವಾಗ ಇದರಡಿ ಬರುವ ವಿಷಯಗಳನ್ನು ಅವರ ಆಲೋಚನೆಗೆ ಬರುವದಾಗಿ ಇದರಿಂದ ತಿಳಿಸುತ್ತಾರೆ.

(೧) ಮೈಸೂರು ಮ್ಯೂನಿಸಿಪಾಲಿಟಿಯ ವೈಸ್ ಪ್ರಸಿಡೆಂಟರ ತಲವ ಪ್ರಾವಿಡೆಂಟಿಯಲ್ ಮತ್ತು ಮ್ಯೂನಿಸಿಪಲ್ ಫಂಡಿನಲ್ಲಿ ಖರ್ಚು ಬೀಳುವದಾಗಿ ಮೈಸೂರು ಡಿಸ್ಟ್ರಿಕ್ಟ್ ಡಿಪ್ಯುಟಿ ಕಮಿಷನರವರು ಸನ್ ೧೮೯೪ನೇ ಇಸವಿ ಸೆಪ್ಟೆಂಬರ್ ೧೭ನೇ ತಾರೀಖಿನಲ್ಲಿ ಬರೆದ ೫೪೨ನೇ ನಂಬರ್ ತಾಕೀದು.

(೨) ಡಬ್ಬಿನ್ ಡಿಸ್ಟಿಲರಿ ಲಿಕ್ಕರ್ ಲೈಸೆನ್ಸದಾರರಾದ ಬಿ ಚಿಕ್ಕಣ್ಣ ಮುದಲಿಯಾರ್ರವರಿಂದ ವಸೂಲ್ಮಾಡಲ್ಪಟ್ಟ ರಿಜಿಸ್ಟ್ರೇಷನ್ ರುಸುಮನ್ನು ವಾಪಸ್ ಕೊಡಿಸಬೇಕೆಂದು ೧೮೯೪ನೇ ಇಸವಿ ಸೆಪ್ಟೆಂಬರ್ ೧೫ನೇ ತಾರೀಖಿನಲ್ಲಿ ಅವರು ಬರೆದುಕೊಂಡ ಅರ್ಜಿ.

K. Srinivasa Rao
Vice President
City Mun. Commission.

LOCAL AND PROVINCIAL NEWS.
ಒಳದೇಶಸಂಸ್ಥಾನ ತಾಲ್ಲೂಕುಗಳ ವೃತ್ತಾಂತಗಳು

ಈಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ ಡಿ ಹೆಂಡರಸನ್ ಸಾಹೆಬರವರು ಕಳೆದ ಬುಧವಾರದಬೆಳ ಮೈಸೂರಿಂದ ಈಪೂರಿಗೆ ವಾಪಸ್ ಬಂದರು. ಅದೇದಿನ ಸಾಯಂಕಾಲ ಮದರಾಸ್ ಕನಾಂಗರ್ ಇನ್ಚಾರ್ಜಿನವರು ಬಾಡುಸೇಂದರು.

ದಸರಾ ಉತ್ಸವದಬಗ್ಗೆ ಶೆಟ್ಟಿ ಬಿಡ್ಡ ಕಜಾ ಕಳೆದ ಬೃಹಸ್ಪತಿವಾರವೆ ತನೆ ಬ್ರಾಹ್ಮಣಯಾಗಿ ಶುಕ್ರವಾರದಿನ ಇಲ್ಲಿನ ಚೀಫ್‌ಕೋರ್ಟ್‌ವೊದಲಾದ ವಿಶಿಷ್ಟ ಆಫೀಸುಗಳ ಮರಳಿ ತೆರೆಯಲ್ಪಟ್ಟ ಕೆಲಸಗಳಿಗೆ ಪ್ರಾರಂಭವಾಯಿತು.

ಮೈಸೂರು ಗವರ್ನಮೆಂಟಿಗೆ ಬೇಕಾಗಿರುವ ಕೋರ್ಟ್‌ಫಿ ವಗೈರೆ ಸ್ಟ್ಯಾಂಪುಗಳಂ ಬಿ ಟಿಷ್ ಸ್ಟ್ಯಾಂಪ್ ಇಲಾಖೆಯಿಂದ ತರಿಸಿಕೊಳ್ಳುತಿದಾರೆಯಷ್ಟೆ. ಹೀಗೆ ಮಾಡುವದರಲ್ಲಿ ಮಟಾರೆ ಖರ್ಚಾಗುತಿರುವದು ಯೋಚಿಸಿ, ಸದರೀ ಸ್ಟ್ಯಾಂಪುಗಳನ್ನು ಇಲ್ಲೇ ಛಾಪಾ ಮಾಡಿಕೊಳ್ಳುವ ಉದ್ದೇಶದಿಂದ ಅದಕ್ಕೆ ತಕ್ಕ ಸಾಧನ ಯಂತ್ರೋಪಕರಣಗಳ ಬಗ್ಗೆ ವಿಲಾಯಿತಿಗೆ ಬರೆದಿದ್ದು ಈಗ ಅವೆಲ್ಲವು ಇಲ್ಲಿಗೆ ಬಂದು ಸೇರಿರುವದಾಗಿ ಕೇಳುತ್ತೇವೆ.

ಈಪೂರು ಕೋಟೆಗೆ ಪಶ್ಚಿಮಭಾಗದಲ್ಲಿ ಹೊಸದಾಗಿ ಮನೆಗಳಂ ಕಟ್ಟಿಕೊಳ್ಳಲು ಇದಕ್ಕೆ ಪೂರ್ವದಲ್ಲಿ ಸರಕಾರದ ನಿವೇಶನಗಳು ಕೊಡಲ್ಪಟ್ಟಿದ್ದವಷ್ಟೆ. ಸದರೀ ಜನರು ಅವರಿಗೆ ಕೊಡಲ್ಪಟ್ಟ ನಿವೇಶನಗಳಲ್ಲಿ ಮನೆಗಳಂ ಕಟ್ಟಲಿಲ್ಲವೆಂದು ಸಿಟಿ ಮ್ಯೂನಿಸಿಪಾಲಿಟಿಯವರಿಗೆ ತಿಳಿದು ಬರಲು, ಷರತ್ತುಗಳ ಪ್ರಕಾರ ನಡೆಯದೆ ತಪ್ಪಿಹೋಗುವಂತವರ ನಿವೇಶನಗಳು ವಾಪಸ್ ತೆಗೆದುಕೊಳ್ಳಲ್ಪಟ್ಟು ಮರಳಿ ಹರಾಜ್ ಮೂಲಕ ವಿಕ್ರಯಿಸಲ್ಪಡುವವೆಂದು ನೋಟೀಸುಕೊಟ್ಟಿರುವದಾಗಿಕೇಳುತ್ತೇವೆ.

ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಅಸಿಸ್ಟೆಂಟ್ ಕಮಿಷನರುಗಳಲ್ಲೊಬ್ಬರಾದ ವೈ ಪಿ ಕುಪ್ಪುಸ್ವಾಮಿ ನಾಯುಡರವರು ಈಚೆಗೆ ಕೆಲವು ದಿನಗಳ ಮೊದಲು ಅನಾರೋಗ್ಯ ಸ್ಥಿತಿಯಲ್ಲಿರುತಲಿದ್ದು ಈಗ ಆರೋಗ್ಯ ಪ್ರಾಪ್ತವಾಗಿದ್ದರೂ ಇನ್ನೂ ಬಹಳ ನಿಶ್ಶಕ್ತರಾಗಿರುವದರಿಂದ ಹೊರಗಿನ ಸಂಚಾರಕ್ಕೆ ಶಕ್ತಿ ಸಾಲದೆಂಬ ಕಾರಣದಮೇಲೆ ಡೆಪ್ಯುಟಿ ಕಮಿಷನರವರು ಮಾಡಿದ ಶಿಫಾರಸ್ಸನ್ನನುಸರಿಸಿ, ಸದರೀ ಅಧಿಕಾರಿಯು ಕೆಲವುಕಾಲದವರೆಗೆ ಹೆಡ್‌ಕ್ವಾರ್ಟರ್ಸನಲ್ಲೇ ಇದ್ದು, ಡಿಸ್ಟ್ರಿಕ್ಟ್ ಟ್ರೆಜರಿ ವಗೈರೆ ಕೆಲಸಗಳಂ ನೋಡುತಲಿರತಕ್ಕದ್ದೆಂದು ಗವರ್ನಮೆಂಟಿನವರು ಹುಕುಂ ಮಾಡಿರುವದಾಗಿ ಕೇಳುತ್ತೇವೆ.

ಈ ಸಂಸ್ಥಾನದ ಸ್ಥಿತಿ ಕೆಲವು ತಾಲ್ಲೂಕುಗಳಲ್ಲಿ ಸ್ಪೆಷಲ್ ಸಬ್ ರಿಜಿಸ್ಟ್ರಾರುಗಳು ನೇಮಕವಾಗಲ್ಪಟ್ಟಿಲ್ಲ, ಕೆಲವು ತಾಲ್ಲೂಕುಗಳಲ್ಲಿ ರಿಜಿಸ್ಟ್ರೇಷನ್ ಕೆಲಸವನ್ನು ತಾಲ್ಲೂಕ್ ಶಿರಸ್ತೇದಾರರು ನೋಡುತಲಿದಾರೆಯಷ್ಟೆ. ಸದರೀ ಕೆಲಸವನ್ನು ತಾಲ್ಲೂಕ್ ಶಿರಸ್ತೇದಾರರಿಗೆ ತಪ್ಪಿಸಬೇಕೆಂಬ ಕೆಲವು ತಾಲ್ಲೂಕ್ ಪ್ರತಿನಿಧಿಗಳ ಪ್ರಾರ್ಥನೆಯಂ ಆಲಿಸಿಯೂ, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲವರು ಮಾಡಿದ ಶಿಫಾರಸ್ಸನ್ನನುಸರಿಸಿಯೂ, ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರುಗಳ ಚಾರ್ಜಿನಿಂದ ರಿಜಿಸ್ಟ್ರೇಷನ್ ಕೆಲಸವನ್ನು ಡೆಪ್ಯುಟಿ ಕಮಿಷನರುಗಳು ವಹಿಸತಕ್ಕದ್ದೆಂದು ಹುಕುಂ ಆಗಿರುವುದಾಗಿ ನಮ್ಮ ಮೈಸೂರ್ ಲೇಖಕರು ತಿಳಿಸುತ್ತಾರೆ.

ಕಳೆದಶನಿವಾರದದಿನ ಅರ್ಧರಾತ್ರಿ ಪ್ರಾರಂಭವಾದ ಮಳೆ ರಾತ್ರಿಯೆಲ್ಲಾ ಸುರಿದು ಮರುದಿನ ಬೆಳಿಗ್ಗೆ ಆರು ಘಂಟೆ ಸುಮಾರಿಗೆ ಪರ್ವತಪ್ರಾರಂಭವಾಗಿ ವಿಳಂಬವಾಗಿ ಮೋಡ ಮುಚ್ಚಿಕೊಂಡು ಇನ್ನು ವರ್ಷ ಸೂಚನೆಗಳು ಕಾಣಬರುತಲಿವೆ. ಈವರ್ಷವು ರಾಗಿ ಫಸಲಿಗೆ ಬಹಳ ಅನುಕೂಲವಾಗಿದ್ದಾಗ್ಯೂ ಬಹಳ ಮನೆಗಳು ಕುಸಿದುಹೋಗುತಲಿವೆ. ರಾಗಿಯ ಕ್ರಯವು ೪ ದಿನಗಳ ಹಿಂದೆ ಇದ್ದದಕ್ಕಿಂತಲೂ ಈಗ ಗಾಡಿಂಗೆ ಅರೆ ದಾರು ರೂಪಾಯಿಗಳು ಇಳಿದಿರುತಿವೆ. ಇತರ ಪದಾರ್ಥಗಳ ದರಗಳಿಗಳು ಏಕರೂಪವಾಗಿವೆ. ಇವೆ ಜನರ ಆರೋಗ್ಯವು ಸಾಮಾನ್ಯವಾಗಿದೆ, ರೋಗಾದ್ಯುಪದ್ರಗಳು ವಿಶೇಷ ಯೊಂದರ ಕಾಣಿಸಲಿಲ್ಲವು.

THE MONEY MARKET.
Stocks, Shares and Exchange

ಮದರಾಸ್, ಶನಿವಾರ, ತಾರೀಖ್ 20 ನೇ ಅಕ್ಟೋಬರ್ 1894.

ಸೇಕಡ ಮೂರುವರೆ ರೂ ಬಾಬತ್ತು ಗವರ್ನ ಮೆಂಟ್ ಪತ್ರಗಳು, 102-14-0ರೂಗೆಂದ 103-12-0ವರೆಗೆ,

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತ್ತು,1,140-0-0ರೂಗೆಂದ1,160-0-0ವರೆಗೆ

ಅರ್ಬತ್ನಾಟ್ ವ ಆ್ಯಂಡ್ ಪಾರ್ಟ್ನರ್ಸ್ ಬ್ಯಾಂಕ್ ಷೇರುಗಳು (100ರೂ) ಬಾಬತ್ತು 15?-0-0ರೂ ಗೆಂದ 160-0-0 ರೂ ವರೆಗೆ

ಸವರನ್‌ಗಳು, ಪರ 1 ಕ್ಕೆ 18-0-0 ರೂಪಾಯಿಗಳಿಂದ 18-6-0 ರೂ ವರೆಗೆ.

ಇಂಡಿಯನ್ ಬ್ಯಾಂಕಿನ ಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ ಯೂನೆ ದರ್ಶನ ಹುಂಡಿಗಳು —

6 ತಿಂಗಳ ಪಾಯಿದೆಗೆ	1 s 1 3/8d
4 „	1 s 1 5/16d
ಕೇಳಿದಾಗಕೊಡಲ್ಪಡುವದಕ್ಕೆ	1 s 1 1/4d

ವ್ಯವಹಾರದ ಬ್ಯಾಂಕಿನ ನಿಬಂಧನೆಗಳು.

ಬ್ಯಾಂಕಿನ ಹೆಸರು.—ಈ ಬ್ಯಾಂಕು ಯಾವ ಡಿಸ್ಟ್ರಿಕ್ಟ್ ಯಾವ ತಾಲ್ಲೂಕು ಯಾವ ಗ್ರಾಮದಲ್ಲಿ ಸ್ಥಾಪಿಸಲ್ಪಡುವದೋ ಆ ಸ್ಥಳದ ವ್ಯವಸಾಯದ ಬ್ಯಾಂಕ್ (ಅನ್‌ಲಿಮಿಟೆಡ್) ಎಂದು ಕರೆಯಲ್ಪಟ್ಟು ಮೈಸೂರು ಸಿವಿಲ್ ಜಾಯಿಂಟ್ ಸ್ಟಾಕ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಸನ್ ೧೮೬೬ನೇ ಇಸವಿ ೧೦ನೇ ರೆಗ್ಯುಲೇಷನ್ ಕಂಪೆನೀಸ್ ಆಕ್ಟಿಗೆ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟು ಕ್ಲುಪ್ತವಾದ ತರದ ಬಾಧ್ಯತೆ ಇಲ್ಲದೆ ಬರತಕ್ಕದ್ದು.

ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಎಂದರೆ ಸಮಾಖ್ಯೆ ದ ಪತ್ರಿಕೆಯಲ್ಲಿ ರುಜು ಹಾಕತಕ್ಕ ಜನಗಳು ಮತ್ತು ಈ ಕೆಳಗಿನ ರೂಲ್ಸ್ ಅನುಸಾರ ಮುಂದೆ ಸೇರಿಸಿಕೊಳ್ಳಲ್ಪಡುವ ಜನಗಳು ಈ ಬ್ಯಾಂಕಿನ ಮೆಂಬರಾಗಿ ಇರತಕ್ಕದ್ದು.

ಮೆಂಬರಾಗತಕ್ಕವರು.—ಬ್ಯಾಂಕಿರುವ ಗ್ರಾಮದ ಸರಹದ್ದಿನಲ್ಲಿ ಸಾಗುವಳಿ ಜಮೀನು ಹೊಂದಿರುವವರಾಗಿಯೂ ವ್ಯವಸಾಯದ ಕೆಲಸವನ್ನು ಆಸ್ತಿಯಿಂದ ನಡಿಸುವವರೂ ಒಳ್ಳೇನಡತೆ ಯುಳ್ಳವರಾಗಿಯೂ ಒಬ್ಬರೊಬ್ಬರು ನಂಬಿಕೆಯಾಗಿ ಇರುವಂಥಾ ರೈತರುಗಳು ಈ ಬ್ಯಾಂಕಿನ ಮೆಂಬರಾಗಿ ಇರತಕ್ಕದ್ದು.

ಮೆಂಬರುಗಳ ಜವಾಬ್ದಾರಿ.—ಜವಾಬ್ದಾರಿಯು ಅನ್‌ಲಿಮಿಟೆಡ್ ಆಗಿರತಕ್ಕದ್ದು ಎಂದರೆ ಈ ಬ್ಯಾಂಕ್ ಸೆರತಕ್ಕ ಮೆಂಬರುಗಳೆಲ್ಲಾ ಜಾಯಿಂಟ್‌ಸ್ಟಾಕ್ ಕಂಪೆನೀಸ ಆಕ್ಟು ಸೆಕ್ಷನ್ ಮೇಲೆ ಒಳ್ಪಟ್ಟಿರುವ ಬಾಕಿ ಪೂರ್ತಾಗಿ ೧೦ ರ ಮಟ್ಟದ ವರೆಗೆ ಗಣಿಸತಕ್ಕದ್ದು.

ಮೆಂಬರುಗಳ ಸಂಖ್ಯೆ.—೨೦ ಕ್ಕಾಗೆ ಕಡಮೆ ಇಲ್ಲದ ತನಕ ಮೆಂಬರುಗಳು ಈ ಬ್ಯಾಂಕ್ ಇರತಕ್ಕದ್ದು. ಈ ಬ್ಯಾಂಕಿಗೆ ಸೇರತಕ್ಕ ಪ್ರತಿ ಮೆಂಬರು ಹತ್ತು ಷೇರಿಗಿಂತ ಮುಂತಾಗಿ ಕೊಂಡುಕೊಳ್ಳತಕ್ಕದ್ದಲ್ಲ.

ಪ್ರವೇಶದ ಫೀಜು.—ಪ್ರವೇಶಿಸಿದ ಪ್ರತಿ ಮೆಂಬರಾಗಲೇ ಕೆಂಪು ಆ ಕ್ಷಣದ ಪ್ರತಿಯೊಬ್ಬನೂ ಎಂಟ್ರೆನ್ಸ್ ಫೀ (೧) ರೂಪಾಯಿ ಹೊರ ಕೊಡತಕ್ಕದ್ದು.

ಬ್ಯಾಂಕಿನ ಆಡಳಿತ ನಡೆಸತಕ್ಕವರು.—ಮೆಂಬರುಗಳ ಒಬ್ಬರ ಜನರಲ್ ಕಮಿಟಿಯವರು ಪ್ರತಿ ವರ್ಷ ನಡಿಯುವ ಜನರಲ್ ಮೀಟಿಂಗಿನಲ್ಲಿ ಡೈರೆಕ್ಟರುಗಳನ್ನು ಚುನಾಯಿಸತಕ್ಕದ್ದು. ಬೋರ್ಡ್ ಮೆಂಬರುಗಳು ಪರ ಬಾಗಾಯಿತು ... ಮೆಂಬರುಗಳನ್ನು ಕರ್ನಾಸಿಲ್ ಇರುವಾಗ ಆಗಿ ನೇಮಿಸತಕ್ಕದ್ದು. ಆ ಮೀಟಿಂಗಿನಲ್ಲಿ ಬ್ಯಾಂಕಿನವರು ಇಷ್ಟಪಟ್ಟರೆ ಸರ್ಕಾರದ ಉದ್ಯೋಗಸ್ಥರಲ್ಲಿ ಒಬ್ಬನ್ನು ವಿಶಾರದಂತೆ ಡಿಸ್ಟ್ರಿಕ್ಟ್ ಬೋರ್ಡ್ ಡೈರೆಕ್ಟರ್ ಆಗಲ ಕಾರ್ಯದ ಮೆಂಬರುಗಳಾಗಿಯೂ ನೇಮಿಸಿಕೊಳ್ಳಬಹುದು ಅಥವಾ ಸರ್ಕಾರದವರೇ ಚುನಾಯಿಸುವ ಹಾಗೆ ಒಬ್ಬರನ್ನು ಕೇಳಿಕೊಳ್ಳಬಹುದು.

ಪರಮ ಸ್ಟು.—ಬ್ಯಾಂಕಿಗೆ ಮೆಂಬರಾಗಲು ಅಪೇಕ್ಷಿಸುವ ಜನಗಳು ಪರಮ ಸ್ಟು ಮಾಡತಕ್ಕದ್ದು. ಹಾಗೆ ಬರುವ ಅರ್ಜಿಗಳನ್ನು ಡೈರೆಕ್ಟರುಗಳು ತಮ್ಮ ವಿಶ್ವಾಸದಿಂದ ಕೌನ್ಸಿಲರುಗಳಲ್ಲಿ ಪರಿಶೀಲಿಸಬೇಕು. ಅವರು ಒಂದು ವರ್ಷದಲ್ಲಿ ಅರ್ಜಿಯನ್ನು ಮೆಂಬರಾಗಿ ಸೇರಿಕೊಳ್ಳತಕ್ಕದ್ದು. ಅದಕ್ಕಾಗಿ ವಸೂಲಾಗುವ ಎಂಟ್ರೆನ್ಸ್ ಫೀಯನ್ನು ಜಾಸ್ತಿ ಕಡಿಮೆ ಮಾಡುವದಕ್ಕೂ ಮತ್ತು ಕಮ್ಮಿ ಮಾಡುವದಕ್ಕೂ ಸಹ ಬ್ಯಾಂಕು ಜಾರಿಗೆ ಬಂದ ಎರಡು ವರುಷದ ಮೇಲೆ ಕಂಪೆನಿಯವರಿಗೆ ಅಧಿಕಾರವಿರುತ್ತೆ.

ಆಡಳಿತ ನಡೆಸತಕ್ಕ ರೀತಿ.—ಬ್ಯಾಂಕಿನ ನಿಬಂಧನೆಗಳನ್ನು ಅನುಸರಿಸಿ ಕಾರ್ಯಗಳು ಮುಂದಿನ ಡೈರೆಕ್ಟರುಗಳು ಕೆಳಗೆ ನಡಿಸತಕ್ಕದ್ದು.

ಡೈರೆಕ್ಟರ್ಸ ಮೈಕಿ ಮೂರು ಮಂದಿ, ಕೌನ್ಸಿಲರ ಪೈಕಿ ಇಬ್ಬರು ಕಡಮೆಯಿಲ್ಲದೆ ಕೋರಮ್ ಆಗಿ ಇರತಕ್ಕದ್ದು. ಡೈರೆಕ್ಟರುಗಳು ಮಾಡತಕ್ಕ ವಿಧಾಯಕರ್ಮಗಳ ಕಮ್ಮಿಟಿಯಲ್ಲಿ ವ್ಯಾಪಾರಗಳಿಗೆ ಆ ಬ್ಯಾಂಕಿನ ಎಲ್ಲ ವ್ಯವಹಾರಗಳನ್ನು ಕಾಲಕಾಲಕ್ಕೆ ಮಿನಿಟ್ ಬುಕ್ಕಿನಲ್ಲಿ ಬರೆದಿಡತಕ್ಕದ್ದು. ಕೌನ್ಸಿಲರುಗಳು ತಿಂಗಳಿಗೆ ಒಂದಾವರ್ತಿ ಮೊದಲಾಗಿ ಸೇರಿ ಆ ಸಭೆ ಕಳೆದ ಮೀಟಿಂಗಿನ ತಾರೀಖಿನ ವರೆಗೆ ನಡೆದ ವಿವರ್ಸ್ ಲೆಕ್ಕವನ್ನು ತನಿಖೆಮಾಡಿ ಮುಂದೆ ನಡೆಯತಕ್ಕ ಕಾರ್ಯಗಳಿಗೆ ತಕ್ಕ ಸೂಚನೆಗಳನ್ನು ಬರೆಯತಕ್ಕದ್ದು.

ಈ ಸಂಘದ ಕೆಲಸ —ಸರ್ಕಾರದಿಂದ ಸಾಲೀಯಾನಾ ಸೇಕಡ ನಾಲ್ಕು ರೂಪಾಯಿನ ದರದ ಬಡ್ಡಿಯಂತೆ ಸಾಲವಾಗಿ ಕೊಡಲ್ಪಡುವ ಡಿಪಾಜಿಟು ಮೊಬಲಗಿನಿಂದಲೂ ಈ ಸರ್ಕಾರದಂತೆ ಬ್ಯಾಂಕಿನ ಬಡ್ಡಿಯನ್ನು ತೆಗೆದುಕೊಳ್ಳಲು ಒಪ್ಪಿ ಇತರರು ಕೊಡುವ ಡಿಪಾಜಿಟು ಮೊಬಲಗಿನಿಂದಲೂ ಬ್ಯಾಂಕಿನ ಲೇವಾದೇವಿಯು ನಡಿಸಲ್ಪಡತಕ್ಕದ್ದು.

ಲೇವಾದೇವಿ ಕ್ರಮ —ಈ ಸಂಘದಲ್ಲಿ ಸೇರಿರುವ ಮೆಂಬರುಗಳಲ್ಲಿಯೇ ಈ ಕೆಳಗೆ ನಮೂದಿಸುವ ರೀತಿ ಲೇವಾದೇವಿ ನಡಿಸತಕ್ಕದ್ದು ಮತ್ತು ಸಾಲಕೊಡುವ ಕಾಲದಲ್ಲಿಯೇ ಪೂರಾ ಬಡ್ಡಿಯನ್ನು ಕಟಾಯಿಸಿಕೊಳ್ಳತಕ್ಕದ್ದು.

೧ ಸ್ಥಿರಾಧಾರಾ
೨ ಜಾಮೀನು ಪ್ರಾಮಿಸರಿ
೩ ಜಾಮೀನು ಕಂತು
೪ ಮುಚ್ಚಳಿಕೆ.

ಈ ಮೇರೆ ನಾಲ್ಕು ವಿಧವಾಗಿ ನಡಿಸತಕ್ಕದ್ದು.

೧—೩ನೇ ಕಲಂನಂತೆ ಕೊಡತಕ್ಕ ಸಾಲಕ್ಕೆ ಸಾಲೀಯಾನಾ ಸೇಕಡಾ ೬ ರೂಪಾಯಿನಂತೆಯೂ ೨ನೇದಾದ ಜಾಮೀನು ಪ್ರಾಮಿಸರಿಗೆ ನೂರು ರೂಪಾಯಿನೊಳಗೆ ಇದ್ದಲ್ಲಿ ಸೇಕಡ ೭ ರೂಪಾಯಿನಂತೆಯೂ, ಅದಕ್ಕೆ ಜಾಸ್ತಿ ಆಗಿದ್ದಲ್ಲಿ ಸೇಕಡ ೬ ರೂಪಾಯಿನಂತೆಯೂ ೪ನೇದ ಮುಚ್ಚಳಿಕೆ ಮೊಬಲಗಿಗೆ ದಿನ ೧ಕ್ಕೆ ೨೦ ರೂಪಾಯಿಗಳಿಗೆ ಒಂದು ಪೈನಂತೆಯೂ ಬಡ್ಡಿ ವಸೂಲ್ಮಾಡತಕ್ಕದ್ದು.

[illegible]

ನಮ್ಮಗಳಿಗೆ ಬಾರತಕ್ಕ ಜಾಡ್ಯಗಳು ಎಂತಾವು

[illegible]

W D

ADVERTISEMENTS

ನೋಟೀಸು

ಚಿತ್ರಲೇಖನ ಕಾರ್ಯದಲ್ಲಿ ಪ್ರಖ್ಯಾತರಾದ ರಾಜಾ ರವಿವರ್ಮ ಎಂಬವರಿಂದ ತಯಾರಿಸಲ್ಪಟ್ಟಿರುವ

ಶಕುಂತಲಾ ಜನ್ಮದರ್ಶನ

ಎಂಬ ಚಿತ್ರಪಟವು ಇಪ್ಪತ್ತೊಂದು ತರದ ಎಣ್ಣೆ ಬಣ್ಣಗಳುಳ್ಳದ್ದಾಗಿಯೂ, ಅತಿ ರಮಣೀಯವಾದುದಾಗಿಯೂ, ಪ್ರತಿಯೊಬ್ಬರು ತಮ್ಮ ಮನೆಯನ್ನಲಂಕರಿಸುವದಕ್ಕೆ ಅತ್ಯಂತಾವಶ್ಯಕವಾದಪದಾರ್ಥವಾಗಿಯೂ ಇರುವುದು. ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುವ ವರ್ಣನೆಯು ಈ ಚಿತ್ರಪಟದಲ್ಲಿ ಪ್ರತ್ಯಕ್ಷವಾಗಿ ಕಂಡುಬರುವುದು, ಮೇನಕೆಯು ತನ್ನ ಶಿಶುವಾದ ಶಕುಂತಲೆಯನ್ನು ವಿಶ್ವಾಮಿತ್ರ ಮಹರ್ಷಿಗಳವರ ವಶದಲ್ಲಿಡುವ ಸಂದರ್ಭವನ್ನು ನೋಡುವಾಗ ಎಂತವರಿಗೂ ಮನವು ಮೋಹಗೊಳ್ಳದಿರಲಾರದು. ಹೊರಗಿನ ಸಂಚಾರದಿಂದ ದಣಿದು ಮನೆಗೆ ಬರತಕ್ಕವರು ಈ ಚಿತ್ರಪಟವನ್ನು ನೋಡಿದಕೂಡಲೇ ಸಂಚಾರಪ್ರಯುಕ್ತವಾದ ಶ್ರಮವನ್ನದು ನಿವೃತ್ತಿಮಾಡಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವುದು.

ಪಟದ ಆಕಾರ—ಉದ್ದ ೩೬ ಅಂಗುಲ, ಅಗಲ ೨೬ ಅಂಗುಲ

ಕ್ರಯ — ರೂ| ೬-೦-೦ ಚೌಕಟ್ಟಿನ ಬೇಕಾಗುವದು, ಹ್ಯಾಂಡಲ್ ಪಾಸಲ್ ಪ್ರತ್ಯೇಕ ಕೊಡಬೇಕು

ಚಿತ್ರಕಲಾನಿಪುಣರಾದ ಮೇಲ್ಕಂಡವರಿಂದ ನೂತನವಾಗಿ ವಿರಚಿತಗಳಾದ

ಲಕ್ಷ್ಮೀ ಸರಸ್ವತೀ

ಚಿತ್ರಪಟಗಳು.

ಲಕ್ಷ್ಮಿಯು ಸರೋವರ ದೊಳಗಿನ ಪಂಕಜದಲ್ಲುದ್ಭವಿಸಿ ಕಿರೀಟಾಭರಣಾಲಂಕಾರಯುಕ್ತಳಾಗಿ ಅಭಯ ಹಸ್ತದಿಂದೊಡಗೂಡಿರುವಳು. ಸರಸ್ವತಿಯು ಕಿರೀಟಧಾರಿಣಿಯಾಗಿ ಚತುರ್ಭುಜಗಳೊಡನೆ ಯೆರಡುಹಸ್ತಗಳಿಂದ ರುದ್ರವೀಣೆಯಂ ಪಿಡಿದು, ಇನ್ನೊಂದು ಕೈಯಲ್ಲಿ ಪುಸ್ತಕವನ್ನು, ಮತ್ತೊಂದು ಕೈಯಲ್ಲಿ ಪುಷ್ಪವೊಂದನ್ನು ಧರಿಸಿರುವಳು. ಈ ಪಟಗಳು ಅತ್ಯಂತ ಶ್ಲಾಘ್ಯಗಳಾಗಿಯೂ ಮನೋಹರಗಳಾಗಿಯೂ, ಗೃಹಾಲಂಕಾರಾರ್ಹಗಳಾಗಿಯೂ, ದರ್ಶನೀಯಗಳಾಗಿಯೂ ಇರುತ್ತವೆ.

ಲಕ್ಷ್ಮೀಪಟದಆಕಾರ — 20 x 28 ಅಂಗುಲಗಳು,
ಸರಸ್ವತೀಪಟದ ಆಕಾರ — ಡಿಟೋ „
ಇವುಗಳ ಕ್ರಯ ತಲ 5 ಪಾಸಲ್ ಸಹ ರೂ|| ೨.

ಈ ಪಟಗಳನ್ನಪೇಕ್ಷಿಸತಕ್ಕವರು ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಅವು ವ್ಯಾಲ್ಯುಪೇಯಬಲ್ ಪೋಸ್ಟುಮೂಲಕ ಬಂದೋಬಸ್ತಾಗಿ ರವಾನಿಸಲ್ಪಡುವವು

ವಿ ಕಾಮತ್ ಮತ್ತು ಕಂಪೆನಿ,
ಸೋಲ್ ಏಜಂಟ್ಸ್,
ಗಿರಿಗಾಂ, ಮುಂಬೈ

NOTICE

ವೈದ್ಯಸಾರ ಸಂಗ್ರಹ.

ಇದರ ಕ್ರಯ —ಪ್ಯಾಕಿಂಗ್ ಮತ್ತು ಅಂಚೇ ಕಾಸಲ್ ಸಹಾ, ಪ್ರತಿ ಒಂದಕ್ಕೆ ರೂ 5--0—0

ಮೈಸೂರು ಗವರ್ನಮೆಂಟ್

ಫಾರೆಸ್ಟ ಇಲಾಖಾ.

ಸ್ಯಾಂಡಲ್ ಹರಾಜ್ ಇಷ್ತಿಹಾರ್‌ನಾಮೆ

ತಾರೀಖು ೧೮ನೇ ಸಪ್ಟಂಬರ್ ೧೮೯೪

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ —ಈ ಕೆಳಗೆ ನಮೂದಿಸಲ್ಪಟ್ಟಿರುವ ಸ್ಯಾಂಡಲ್ ಕೋಠಿಗಳಲ್ಲಿ ಅವುಗಳ ಬಾಜುವಿನಲ್ಲಿ ಕಂಡ ಆಯಾ ತಾರೀಖಿನೊಳು ಬಹಿರಂಗವಾಗಿ ಸಾಂದಲ್ ಹರಾಜ್ ನಡೆಸಲ್ಪಡುತ್ತದೆ —

ಡಿಸ್ಟ್ರಿಕ್ಟ	ಹರಾಜ ಸ್ಥಳ	ಹರಾಜ ತಾರೀಖ	ಮಾಮಲು
ಶಿವಮೊಗ್ಗ ಡಿಸ್ಟ್ರಿಕ್ಟ	ಸಾಗರ ಕೋಠಿ	1ನೇ ನವಂಬರ್ 1894	ಸ್ವಲ್ಪ ಹೆಚ್ಚುಕಡಮೆ 200 ಟನ್‌ಗಳು
ಡಿಟೊ	ಶಿವಮೊಗ್ಗ ಡಿಟೊ	19ನೇ ಡಿಟೋ	ಡಿಟೊ 460 „
ಡಿಟೊ	ತೀರ್ಥಹಳ್ಳಿ ಡಿಟೊ	21ನೇ ಡಿಟೋ	ಡಿಟೊ 120 „
ಕಡೂರು ಡಿಸ್ಟ್ರಿಕ್ಟ	ಚಿಕ್ಕಮಗಳೂರ ಡಿಟೊ	3ನೇ ಡಿಸಂಬರ್ 1894	ಡಿಟೊ 200 „
ಹಾಸನ ಡಿಸ್ಟ್ರಿಕ್ಟ	ಹಾಸನ ಡಿಟೊ	8ನೇ ಡಿಟೋ	ಡಿಟೊ 284 „
ಬೆಂಗಳೂರು ಡಿಸ್ಟ್ರಿಕ್ಟ	ಬೆಂಗಳೂರ ಡಿಟೊ	13ನೇ ಡಿಟೋ	ಡಿಟೊ 150 „
ಮೈಸೂರ ಡಿಸ್ಟ್ರಿಕ್ಟ	ಶ್ರೀರಂಗಪಟ್ಣ ಡಿಟೊ	17ನೇ ಡಿಟೋ	ಡಿಟೊ 350 „
ಡಿಟೊ	ಹುಣಸೂರ ಡಿಟೊ	20ನೇ ಡಿಟೋ	ಡಿಟೊ 450 „

ಮೇಲ್ಕಂಡ ಹರಾಜ್ ನಿಬಂಧನೆ ವಗೈರೆಯನ್ನು ತಿಳಿಯಲಪೇಕ್ಷಿಸುವಂತವರು ಮೈಸೂರ್ ಗೆಜೆಟ್ಟಿನಲ್ಲಿ ಪ್ರಕಟವಾಗಿರುವ ಇಷ್ತಿಹಾರ್‌ನಾಮೆಯನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

L. RICKETTS,
Inspector General of Forests,
Mysore.

BANGALORE —Printed and Published at the KARNATAKA PRESS, No 40 HOSPITAL ROAD, CITY—1894

THE

Karnataka Prakasika.

ಕರ್ನಾಟಕ ಪ್ರಕಾಶಿಕಾ.

Published Every Monday Morning.

[illegible]

Vol. XXI. BANGALORE:—MONDAY, OCTOBER 29, 1894. **No. 43.**

Select Telegrams

London, 20th Oct.—Intelligence received this morning, from Livadia states that dropsy of the legs has set in and is increasing in sympathy with the failing strength of the august patient.

London, 21st Oct.—It is reported that the Czar's second son the Grand Duke George, is in a dying condition.

The Czarina is seriously ill.

London, 22nd Oct.—Reuter's correspondent at Tientsin telegraphs that peace negotiations are proceeding at Seoul.

St. Petersburg, 22nd Oct.—It is reported here that Ishak Khan claims the throne in Afghanistan in case of the death of Abdul Rahman, possibly with the secret support of Russia.

Allahabad, 22nd Oct.—Abdul Rahman has announced that his eldest son, Habibullah, is to succeed him. The Afghan Sirdars and Generals have been apprised of this, and commanded to accept this settlement of the succession.

London, 24th Oct.—Reports have reached here from various sources of a battle fought at Wiju on Monday last. They state that the Japanese troops were compelled to retreat to their base at Pingyang. Both combatants lost heavily. The reports estimate the Japanese loss at three thousand, and the Chinese at four thousand killed and wounded.

Yokohama 24th Oct.—It is reported here that fighting took place yesterday near Port Arthur between the Chinese and the Japanese Army which recently left Hiroshima. No details have yet been received.

Tientsin 24th Oct.—The Emperor of China has issued an edict conferring honours on the foreign Officers of the Chinese Fleet which took part in the battle of Yalu and posthumous honours to the memory of Purvis and Nicholls who were killed during the engagement.

London, 24th Oct.—A despatch from Reuter's correspondent at Chemulpo says that another Japo-Corean Force has left Seoul against the Tonghaks, whose resistance is of a determined character. The Tonghaks propaganda among the people is seriously impeding the Japanese attempts to pacify the country. The Japanese are scattering a quantity of silver to gain popularity among the Coreans.

The report that peace negotiations have commenced at Seoul is denied.

According to the last bulletin issued regarding the condition of the Czar, His Majesty had renewed attacks of convulsions yesterday, and during the intervals was in a very somnolent state.

London, 25th Oct.—Reuter's correspondent at Shanghai telegraphs that it is reported that the Chinese have evacuated Port Arthur.

According to a later report the Japanese Army Corps, under Count Oyama, landed at Lienwan eastward of Port Arthur.

Reuter's correspondent at Yokohama telegraphs that the Japanese have crossed the Yalu River.

The latest bulletin issued regarding the condition of the Czar states that His Majesty's appetite and spirits were better yesterday, but the dropsy has increased in spite of tapping.

His Majesty received Holy Communion on Sunday.

The Czarewitch has signed the State papers since Thursday.

The official bulletins are silent regarding the reception of Princess Alix into the Greek Church and the marriage, which it is reported took place privately yesterday. But the occurrence is doubted in well informed quarters.

Simla, 25th Oct.—With regard to the statement made by Reuter that Ishak Khan will claim the Amirship of Afghanistan nothing has yet been received by the Government of India to this effect. The report that the Amir designated his eldest son to be his heir is now substantially confirmed, and also that the chief Afghan officials have sworn to be loyal and faithful to Habibulla Khan in the event of the Amir dying.

Reports received to-day from Sir Salter Pyne state that the Amir is making favourable progress, but although the crisis is over, his condition is still unsafe.

THE

Karnataka Prakasika.

MONDAY, OCTOBER 29, 1894.

THE DASSARAH ADDRESS

This Address was delivered on the 14th of this month before the assembled Representatives and a number of distinguished visitors. It is a very interesting and important document, and in some respects differs from those that preceded it. For instance, the Dewan had to defend himself against the remark made by the Secretary of State in the House of Commons to the effect that taxation was higher in this Province than in the British dominions. We shall take up this point in its proper place. The address shows progress, real, solid progress, but not quite so much as we should have liked to see. The revenue is increasing, but not "by leaps and bounds", it is becoming greater gradually, but the expenditure of the State is also travelling in the same direction. If more money comes in more is spent, and it is to be hoped that the latter will not catch up, much less overtake, the former. At present the two are a good distance apart, and it will be well if this distance can be maintained. We see no reason why it should not, that is, if nothing untoward happens, and the revenues of the State may go on increasing, so as to keep ahead of the expenditure. Now for some of the facts connected with the Address. We find that gross receipts for the year 1893-94 amounted to Rs. 169,21,409 against 165,55,322 during the preceding year, thus showing an increase to the amount of nearly 3½ lakhs of rupees. This is not a very large increase, still it is one and the Government ought to be thankful that this sum is on the right side. The Dewan, with an eye to what Mr. Fowler lately said, told the assembled guests that the revenue since the Rendition of the Province to the Maharajah had increased 61 per cent. But he added that "this high measure of financial improvement has no bearing upon the burdens of the people." This may appear to many rather extraordinary, but he said the revenue of the Province was obtained from "taxes properly so called," as well as from other sources. We must confess we do not quite go along with the Dewan. He may be quite right, but we do not think he is so. He tells us that the Land Revenue, Excise, Mohatarfa, Sayer, Stamps and Registration can only be regarded as taxes, and the increase under these heads has only been 48½ per cent since the Rendition. He thinks the money derived in other ways must not be looked upon as taxes properly so called. We question whether this is strictly correct. If the Government did not collect the Forest dues, for instance, the people of the Province would be all the richer for that amount. So with regard to the other sources from which money is derived. The subject requires much wider explanation than we can give it here, so we reserve it for a future occasion. We have not yet mentioned the amount of the surplus the Government has to show. This is Rs. 29,50,217 against Rs. 30,84,056 of the year before. The falling off is not great, still there is a falling off, and this is not satisfactory. We now come to the Land Revenue, and here we find a small decrease, which, however, may be explained away. In former years there were large outstandings, but all these have now been brought in, so that the collections during 1893-94 actually represent the amount due for the year, and nothing more. The decrease in the revenue of the land was Rs. 17,428, which is not large, and which has been accounted for. In fact, leaving the arrears out of the question, the Dewan is of opinion that under this head there was an actual increase of about 1¼ lakhs of rupees. We are told that about Rs. 34,000 of this increase were due to the introduction of Survey and Settlement into two more taluks, and the rest to the new land taken up. It is very satisfactory to know that new land has been brought under cultivation, and we will give the words of the Address on the subject:—"The occupied area rose from 5,591,263 acres in 1892—93 to 6,173,820 in 1893-94. Of the increased area 73,000 acres were due to the revision by the Survey of the occupied areas in two settled Taluks, while the remainder, namely, 200,000 acres, bearing an assessment of Rs. 1,82,000, represents land newly taken up for cultivation during the year." We are glad to find that such a large amount of new land has been taken up, and we hope this will go on increasing. Since the famine there has been a good deal of land lying waste, and it is well that the people of the Province have thought proper to take some of it up. They have to depend so much upon agriculture, that the more land is brought under cultivation the better will be both for them and the Government. As regards Excise, as we have said, there was a slight falling off in the receipts, though the amount of revenue obtained in this way has gone up from ten lakhs at the Rendition to thirty lakhs at the present time. He explains the cause of this increase, and we think he successfully proves that it is not due to the increase of drinking among the people. The Abkari system has been put on a better footing, more vigilance has been exercised, and moreover a number of labourers have been introduced into the country who consume a good deal of liquor. In former days it is well known that there was a great deal of arrack and toddy consumed which paid no duty whatever to Government. This has now been corrected and the treasury of the Maharajah has profited thereby. Still it is not pleasant to know that so much intoxicating liquor is consumed in the Province, and we would recommend those in favour of total abstinence to try what good they can accomplish. They have a fine field in which to work. We must reserve our remarks on the remainder of the Address for another issue.

News and Notes.

The Madras Government has passed an order that in disposing of an application for pension, when the year of entertainment in service is known but not the month, June 30th should be taken as the date of the entertainment.

Messrs. Higginbotham and Co. have for sale, price one rupee, an excellent map showing a bird's eye view of the seat of the War in the Far East, Corea, Japan, and Eastern China. It is published by the Whitehall Press.

The Panchayetdars of the Mutt at Tirupati are, it is reported, making arrangements after the tenth day ceremony to the late Mahant Mahabir Doss for the installation of Rama Kisori Doss the senior disciple in the Mutt, as his successor.

The Raja of Pudukota will take charge of the management of his State on the 17th proximo and an installation Durbar will be held on the same day. Mr. Seshiah Sastri, Dewan Regent, retires from office and Mr. R. Vedanta Charlu, Assistant Dewan, has been appointed Dewan to H. H. the Rajah.

All the Six Native Gentlemen who were successful in the recent competition for the Indian Civil Service have passed the medical examination, but they will remain another year in England on probation. Two of the successful native candidates came up straight from Cambridge without having had the assistance of a "crammer." Mr. P. K. Dadachanji, the Parsee who secured the tenth place, upon his arrival in England three years ago, went to a "coach," and remained with him all the time. He hopes to spend his probationary period at Oxford.

The *Nineteenth Century* for October is an interesting reading. Professor Max Muller writes on "*The alleged sojourn of Christ in India.*" M. Notovitch, a Russian traveller, has published the Life of Christ in French wherein he says that the interval between the 14th and the 29th year of Christ, a gap in Jesus' life, was due to his travelling in India and studying Sanskrit and Pali, after which he went to Persia and Palestine to preach the Gospel. The learned critic after discussing it in every point of view says, "We still prefer to suppose that M. Notovitch, like Lieutenant Wilford, like M. Jacolliot, like Madame Blavatsky and Mr. Sinnet was duped. It is pleasanter to believe that Buddhist monks can at times be wags than that M. Notovitch is a rogue."

We much regret to announce the death of Mr. Mahadev Chimnajee Apte, B. A., LL. B., at his residence, Girgaum, on Monday last. The deceased, says the *Times of India*, was a distinguished Pleader of the High Court, and won conspicuous success at the Bar by his remarkable intellect, industry, and force of character. He possessed uncommon talents as a lawyer, and his services to literature and philanthropy have been of such a character as to give him a lasting place in the history of

this Presidency. He spent about three lakhs of rupees in the establishment of a Library, where some of the most rare Sanskrit works have been preserved. He also maintained a printing press in which many rare Sanskrit works were published.

A CORRESPONDENT of the Lucknow *Advocate* mentions how Munshi Sadaruddin Ahmad, late Deputy Collector, Allahabad,—a Mahomedan gentleman of education, influence and enlightenment,—testified to his love for the Congress, even when on the threshold of death itself. When lying fatally ill, he expressed a wish to die, while making a speech in the Congress Hall. This desire of the dying man could not, of course, be fulfilled. A short while before he expired, munshi Sadaruddin raised his eyes towards heaven, prayed for the welfare and prosperity of the Congress, and said —' O God, if thou cannot suffer me to be present at the next Session of the Congress, let my soul be present at the Congress hall to welcome the coming delegates, and confer blessings on them "

A GOOD NATURED JOKE perpetrated by the Emperor is, a Berlin correspondent says, related from Kiel. As the Emperor William was stepping on board his yacht the other day he was met by a sailor named Joerg, who had in his hand a mug of beer, which he was carrying into the officers' cabin. The Emperor was very much amused at the discomfiture of the poor fellow, who did not know at first what to do, and who finally saluted the Emperor, holding the beer-mug convulsively against the *seat of his breeches. The Emperor stopped* up to the sailor, and addressed him most amiably " *See, Joerg, you have done that very* stupidly. I will show you how one should behave in such a situation. *Go up and imagine that you are the Emperor, and I shall be the sailor Joerg* " *The poor fellow did not dare* remonstrate, he had to come on board by the *Imperial gang way, and the Emperor William* met him below in his new role of a sailor with a beer mug. *When he saw Joerg, the Emper*or affected some embarrassment, but he then *set the glass to his lips, emptied it completely,* put it down on the ship's ledge, and then made his salute ' *Do you see, Joerg?* That is the way it must be done. Now, remember, *and now go below and tell them to give you* another glass of beer and one for you, too. If they question you, just tell them that I said so, and that they should not be angry, for the beer was beautifully fresh and tasted very good "

Local and Provincial.

THE " DEEPAVALI."—All the offices and Courts in the Civil and Military Station and City were closed last Saturday on account of this festival.

THE RESIDENT.—Colonel Henderson will shortly go on leave to Bombay and Poona. He retires for good in February next when he will be succeeded by Mr Lee Warner of the Bombay Civil Service.

THE MADRAS RAILWAY.—The Board of Directors of the Madras Railway Company have accorded sanction to increase the 3rd class passenger fare in ordinary trains from $1\frac{1}{2}$ pies to two pies per mile, the latter being the maximum rate.

THE WEATHER.—We had some good showers last week, and it is generally thought the north-east monsoon will soon put in an appearance. It rained nearly every day during the period just mentioned, and the place is looking remarkably well. All fears as to famine or scarcity may be said to have passed away.

A MARRIAGE.—*Tomorrow Miss Mansfield* Clarke, the daughter of the Commander-in-Chief of the Madras *Army will be married to* Lieutenant Campbell of the Rifle Brigade. The *marriage will take place at Trinity* Church, and the bridal party will afterwards proceed to the Camp of His Excellency on the Polo Ground.

MR. LEE-WARNER, has been appointed to succeed Colonel Henderson as Resident in Mysore. He is a Bombay Civilian who had claims to succeed Sir Mortimer Durand as Foreign Secretary. He has had considerable experience in the Political Department both under the Government of India and the Government of Bombay, and has recently written a book on the Protected Princes of India.

The Mysore Gazette.

Bangalore, Thursday, October 25, 1894.

NOTIFICATIONS BY THE GOVERNMENT OF HIS HIGHNESS THE MAHARAJAH OF MYSORE

The 9th October 1894

Under Section 12 of the Code of Criminal Procedure, M. Gulam Mohiudin Khan, Amildar of the Chikballapur taluk, is invested with the powers of a Magistrate of the second class.

The 23rd October 1894

Under Article 153 of the Mysore Service Regulations, P. Sitaramaiya, Amildar of the *Gubbi Taluk, was granted privilege leave of* absence for fourteen days from 17th to 30th August 1894, both days inclusive.

2. G. Tirunarayanaiengar, Deputy Amildar of the Huliyar Sub Taluk, was in charge of the Gubbi Taluk during the absence of P. Sitaramaiya on leave.

The one month's leave with allowances granted to A. Vedantadesigamaiengar, Amildar of the Sira Taluk, in Notification Camp No. 63, dated 22nd September 1894, is hereby extended by one month.

PUBLIC WORKS.

Assistant Engineer Mr. O. B. Halagaiya gauda attached to the Shimoga Division is granted privilege leave of absence for $1\frac{1}{2}$ months from date of departure.

Extracts.

LORD HARRIS ON SIMULTANEOUS EXAMINATIONS.

The Governor speaking at Sattara on Friday, in reply to a Municipal address, referred, among other subjects to simultaneous examinations. You regret, he said, that the Bombay Government has been unable to recommend that effect be given to the resolution of the House of Commons in connection with the holding of simultaneous examinations. The arguments that influenced the Bombay Government in coming to the conclusion it did on the reference made to it by the Secretary of State has been published, and I need not repeat them but I have to draw your attention to what has happened since we submitted our views. Let me put it in this way. If I had been a member of your corporation when the address you have been good enough to present came up for consideration, I should have probably found myself in a minority in offering an expression of regret, for you have seen our arguments and you remain unconvinced, but I should have moved an amendment that words be added to the effect " but we acknowledge that on subsequent consideration the *House of Commons did not endorse* the original resolution" Gentlemen if you utilise and lay stress on the English political constitution you must accept it in its entirety *and not ignore such part of it as does not suit* your views on a particular question. As regards the simultaneous examination question the House of Commons could have insisted, if it had chosen on the original resolution being regarded as a deliberate resolve of that part of the constitution. It was informed by the Secretary of State in a very remarkable statement that the Cabinet was unanimously opposed to the introduction of a system of simultaneous examinations. It could have, if it pleased, repeated its resolution, and indicated that it did disagree with the Cabinet. It did not do so, and I do not see how you can ignore that fact or place on it less value than you do on the opinion originally recorded. The fact is, gentlemen, that the practical working of the Parliamentary machine is a factor that is clearly required at home, and allowance is made for it, and you will have to do the same. It is perfectly well known that the work of the House of Commons is so laborious that on certain days whips cannot get a full house, and that there is chance of *theoretical resolutions passing without full* discussion, and in a house which is nothing like representative of the electorate. Allowance is made for this factor at home, and if you are wise you will do the same. If I am not mistaken, resolutions were passed by the House this year in favour of Home Rule for Scotland, but I have not yet observed any sign of the Government taking active steps to put that resolution into effect, or of any indignation meetings at the inaction of the Government, and it seems to me that if you are inclined to be indignant with anybody as regards the simultaneous examination question, it should not be with the Indian Government for honestly stating their views in reply to a question put by Lord Kimberley but with the House of Commons for not endorsing its first resolution when it had the opportunity.—*Correspondent of the Pioneer.*

ಕರ್ಣಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ಅಕ್ಟೋಬರ್ ೨೯ ನೇ ತಾರೀಖು ಸೋಮವಾರ

ಮುಂದೆ ಬರತಕ್ಕ ಬ್ರಿಟಿಷ್ ರೆಸಿಡೆಂಟರ ಕುರಿತು.

ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್ ರವರು ತಮ್ಮ ಕೆಲಸದಿಂದ ನಿವೃತ್ತರಾಗುವರೆಂದು ಪತ್ರಿಕೆ ಗತ ವಾರದಲ್ಲಿ ತಿಳಿಸಿದ್ದೆವಷ್ಟೆ. ಇಂಡ್ಯಾ ಗವರ್ನ್‌ಮೆಂಟಿನವರು ಈಗಲೇ ಬೇರೆಯೊಬ್ಬ ಆಫೀಸರನ್ನು ಚುನಾಯಿಸಿ ನೇಮಕರಾಗ್ಮಾಡಿದರೆಂಬದಾಗಿ, ಇಂಗ್ಲಿಷ್ ಪತ್ರಿಕೆಗಳ ಮೂಲಕ ತಿಳಿಯಬರುತ್ತಿದೆ. ಸದರಿ ವೃತ್ತಾಂತವು ನಿಜವಾಗಿರುವ ಪಕ್ಷಕ್ಕೆ ಇಂಡ್ಯಾ ಗವರ್ನ್‌ಮೆಂಟಿನವರು ಈ ವಿಚಾರವನ್ನು ಬಹಳ ಜಾಗ್ರತೆಯಲ್ಲೇ ಮಾಡಿದರೆಂದು ಭಾವಿಸುವೆವು. ಇಲ್ಲಿನ ರೆಸಿಡೆಂಟ್ ಕೆಲಸವು ಸರ್ವಪ್ರಕಾರದಿಂದ ಮಿ॥ ವಿಲ್ಯಂ ಲೀವಾರ್ನರ್ ಯೆಂಬವರಿಗೆ ಕೊಡಲ್ಪಡುವದೆಂಬ ಸಂಭವವು ಕಾಣಬರುತ್ತಿದೆ. ಇಂಡ್ಯಾ ಗವರ್ನ್‌ಮೆಂಟಿ ಫಾರಿನ್ ಇಲಾಖಾ ಸೆಕ್ರೆಟರಿಯಾಗಿದ್ದ ಸರ್ ಮಾರ್ಟಿಮರ್ ಡ್ಯೂರಾಂಡ್ ರವರು ಟೆಹೆರಾನ್ ರಾಜ್ಯಕ್ಕೆ ಬ್ರಿಟಿಷ್ ರಾಯಭಾರಿಯಾಗಿ ಕಳುಹಿಸಲ್ಪಟ್ಟ ಸಂದರ್ಭದೊಳು ಅವರ ಕೆಲಸವು ಮಿ॥ ಲೀವಾರ್ನರವರಿಗೆ ಕೊಡಲ್ಪಡಬೇಕಾಗಿತ್ತು. ಪರಂತು ಸರ್ ಡ್ಯೂರಾಂಡ್ ರವರ ಪ್ರಯತ್ನದಿಂದ ಆ ಕೆಲಸವು ಆಗ ಅಂಡರ್ ಸೆಕ್ರೆಟರಿಯಾಗಿದ್ದ ಮಿ॥ ಕನ್ನಿಂಗ್‌ಹಾಂ ರವರಿಗೆ ಕೊಡಲ್ಪಟ್ಟಿತು. ಇದರಿಂದ ತತ್ಕಾಲದಲ್ಲಿ ಮಿ॥ ಲೀವಾರ್ನರವರಿಗೆ ಲಭಿಸುವದಾಗಿದ್ದ ಅಧಿಕಾರವು ತಪ್ಪಿಹೋಗಲಿಕ್ಕೆ ಕಾರಣವಾಯಿತು. ಮಿ॥ ಲೀವಾರ್ನರವರೂ ಮಿ॥ ಕನ್ನಿಂಗ್‌ಹಾಂ ರವರೂ ಸರ್ಕಾರ ಉದ್ಯೋಗದೊಳು ಸ್ವಲ್ಪ ಹೆಚ್ಚು ಕಡಮೆಯಾಗಿ ಸಮಕಾಲೀನರೆಂದು ನುಡಿಯಬಹುದಾಗಿರುತ್ತಿದೆ ಹ್ಯಾಗಂದರೆ, ಮೊದಲನೆಯವರು ೧೮೬೯ ನೇ ಇಸವಿಯಲ್ಲಿಯೂ, ಎರಡನೆಯವರು ೧೮೭೦ನೇ ಇಸವಿಯಲ್ಲಿಯೂ ಈ ದೇಶಕ್ಕೆ ಬಂದು ಸರ್ಕಾರ್ ಉದ್ಯೋಗಗಳಲ್ಲಿ ಪ್ರವೇಶಿಸಿದವರಾಗಿರುತ್ತಾರೆ. ಮಿ॥ ಲೀವಾರ್ನರವರ ವೃತ್ತಾಂತವು ವಿದೇಶೀಯರಿಂದ ಸರ್ವರಿಗೆ ತಿಳಿಯದಕ್ಕಾದ್ದಾಗಿರುವದರಿಂದ ಸದರೀಯವರ ನಿಜಸ್ಥಿತಿಯನ್ನು ಕುರಿತು ಸಂಗ್ರಹವಾಗಿ ಇದರಡಿ ತಿಳಿಸುವೆವು ಹ್ಯಾಗಂದರೆ:—ಮಿ॥ ಲೀವಾರ್ನರವರು ಕೇಂಬ್ರಿಡ್ಜ್ ಪಟ್ಟಣದೊಳಗಿರುವ ರಗ್ಬೀ ಮತ್ತು ಸೆಂಟ್ ಜಾನ್ ಕಾಲೇಜಿನಲ್ಲಿ ವಿದ್ಯಾಭ್ಯಾಸವುಮಾಡಿ ೧೮೬೭ನೇ ಇಸವಿಯೊಳು ಲಂಡನ್ ಪಟ್ಟಣದಲ್ಲಿ ನಡೆದ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಯಂಹೊಂದಿ ಇಂಡ್ಯಾದೇಶಕ್ಕೆ ಬಂದು ಇಲ್ಲಿನ ಸರ್ಕಾರೀ ಉದ್ಯೋಗವು ಕೈಗೊಂಡರು. ಪ್ರಸಕ್ತ ದೊಡ್ಡಮನುಷ್ಯರು ತದಾರಭ್ಯ ಅನೇಕ ಇಲಾಖೆಗಳಲ್ಲಿ ನೌಕರಿಯಂ ಮಾಡಿ ರಾಜಕೀಯ ವಿಷಯಗಳೊಳು ಬಹಳ ಸಾಮರ್ಥ್ಯವಂ ತೋರ್ಪಡಿಸಿ ಪ್ರಸಿದ್ಧರೆನಿಸಿರುವದರಿಂದ ಮುಂದೆ ಪ್ರಾಪ್ತವಾಗತಕ್ಕ ಅಧಿಕಾರಕ್ಕೆ ಅವರು ಅರ್ಹರಾದ ಆಫೀಸರೆಂದು ನುಡಿಯಬಹುದು. ಪ್ರಥಮದಲ್ಲಿ ಮಿ॥ ಲೀವಾರ್ನರವರು ಒಬ್ಬ ಅಸಿಸ್ಟೆಂಟ್ ಕಲೆಕ್ಟರ್ ವ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟರು. ಕ್ರಮೇಣ ಸ್ವಸಾಮರ್ಥ್ಯದಿಂದ ಅಭಿವೃದ್ಧಿಯನ್ನೈದುತ ೧೮೭೨ನೇ ಇಸವಿಯಲ್ಲಿ ಬೀರಾರ್ ತುಕಡಿಯ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರ್ ಕೆಲಸವಂ ಕೈಗೊಂಡರು. ೧೮೭೨ನೇ ಇಸವಿಗೂ ೧೮೭೬ನೇ ಇಸವಿಗೂ ಮಧ್ಯೆ ಸದರೀ ದೊಡ್ಡಮನುಷ್ಯರು ಮುಂಬೈ ಗವರ್ನರವರ ಪ್ರೈವೇಟ್ ಸೆಕ್ರೆಟರಿಯಾಗಿರುತಲಿದ್ದು ತರುವಾಯ ಕ್ರಮೇಣ ಪೊಲಿಟಿಕಲ್ ಜ್ಯುಡಿಷಲ್ ಮತ್ತು ವಿದ್ಯಾಭ್ಯಾಸದ ಇಲಾಖೆಗಳ ಸೆಕ್ರೆಟರಿಯಾಗಿ ನಿಯಮಿತರಾಗಿದ್ದರು. ೧೮೮೨ನೇ ಇಸವಿಯಲ್ಲಿ ವಿದ್ಯಾಭಿವೃದ್ಧಿ ಕ್ರಮವಿಮರ್ಶಕ ಸಂಘದಲ್ಲಿ ಒಬ್ಬ ಮೆಂಬರಾಗಿ ಚುನಾಯಿಸಲ್ಪಟ್ಟರು. ಬಳಿಕ ಇಂಡ್ಯಾಗವರ್ನ್‌ಮೆಂಟ್ ಫಾರಿನ್ ಇಲಾಖಾ ನೌಕರಿಯಲ್ಲಿ ಪ್ರವೇಶಿಸಿ ಪ್ರೆಸ್ ಕಮ್ಮಿಷನರ ಆಫೀಸ್ ಚಾರ್ಜನ್ನು ಕೆಲವು ಕಾಲದ ಪರ್ಯಂತ ವಹಿಸಿದ್ದರು. ೧೮೮೭ನೇ ಇಸವಿಯಲ್ಲಿ ಮರಳಿ ಮುಂಬೈ ಗವರ್ನ್‌ಮೆಂಟಿನಲ್ಲಿ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರಾಗಿದ್ದು ಅಲ್ಲಿಂದ ವಿಶೇಷ ಕೆಲಸದಮೇಲೆ ಹೈದರಾಬಾದಿಗೆ ನಿಯಮಿತರಾಗಿ ಕಳುಹಿಸಲ್ಪಟ್ಟರು. ಬಳಿಕ ಕೊಲ್ಹಾಪುರ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಪೊಲಿಟಿಕಲ್ ಏಜಂಟ್ ಕೆಲಸವನ್ನು ನಿರ್ವಹಿಸುತಲಿದ್ದು ಕೊಲ್ಹಾಪುರದ ಅರಸರ ಅವ್ಯವಹಾರದಶೆಯೊಳು ರಾಜಪ್ರತಿನಿಧಿಯಾಗಿ ಅಲ್ಲಿನ ಆಡಳಿತಗಳಂ ಜರಿಗಿಸುತಲಿದ್ದರು. ಅನಂತರ ಮಿ॥ ಲೀವಾರ್ನರವರು ಮುಂಬೈ ಗವರ್ನ್‌ಮೆಂಟಿನಲ್ಲಿ ಪೊಲಿಟಿಕಲ್ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟರು. ಇವರಿಗೆ ೧೮೯೨ನೇ ಇಸವಿಯಲ್ಲಿ ಸಿ. ಎಸ್. ಐ. ಎಂಬ ಅಗ್ಗಳಿಕೆ ಕೊಡಲ್ಪಟ್ಟಿತು. ಆದಿಯಿಂದಲೂ ರಾಜ್ಯತಂತ್ರ ಪ್ರವೀಣರಾಗಿ ನೇಟಿವ್ ಸಂಸ್ಥಾನಗಳ ಸ್ಥಿತಿಯಂ ಚೆನ್ನಾಗಿ ತಿಳಿದಿರುವದಲ್ಲದೆ ಪೋಷಿತ ಸಂಸ್ಥಾನಗಳ ವಿಷಯವಾಗಿ ಒಂದು ಗ್ರಂಥವಂ ಸಹ ರಚಿಸಿರುತ್ತಾರೆ. ಆದರಿಂದ ಅವರ ಅನುಭವವೂ ಜ್ಞಾನವೂ ವ್ಯಕ್ತವಾಗುವದು. ಮಿ॥ ಫಿನ್ಲೆ ಪ್ಯಾಟ್ರಿಕ್‌ರವರ ತರುವಾಯ ಈ ರಾಜ್ಯಕ್ಕೆ ಬ್ರಿಟಿಷ್ ರೆಸಿಡೆಂಟರಾಗಿ ನಿಯಮಿತರಾಗಿ ಬಂದವರೊಳು ಎಲ್ಲರೂ ಮಿಲಿಟರಿ ಆಫೀಸರ್‌ಗಳಾಗಿರುತ್ತಾರೆ, ಪರಂತು ಮೇಲೆ ತಿಳಿಸಲ್ಪಟ್ಟವರು ಸಿವಿಲಿಯನ್ ಉದ್ಯೋಗಸ್ಥರೆಂದು ತಿಳಿಯಬರುತ್ತಿದೆ. ಇದುವರೆಗೂ ಸರ್ಕಾರೀಯವಾದ ಯೇರ್ಪಾಡುಗಳೊಂದೂ ನಡೆದಂತೆ ಕಾಣಿಸಲಿಲ್ಲವು. ಅದೂ ಶೀಘ್ರದಲ್ಲಿಯೇ ಹೊರಗಾಗಬಹುದು. ಮುಖ್ಯವಾಗಿ ಮಿ॥ ಲೀವಾರ್ನರವರು ಮನೋನಿಶ್ಚಯವುಳ್ಳ ವಿವೇಕಿಯಾದ ಆಫೀಸರೆಂಬ ಒಳ್ಳೆಯ ಪ್ರಖ್ಯಾತಿಯೊಡನೆ ಇಲ್ಲಿಗೆ ಬರುವದು ಸಂತೋಷಪಡಬೇಕಾದ ಅಂಶವಾಗಿರುತ್ತಿದೆ.

ವೆಂಕಟಗಿರಿ ಸಂಸ್ಥಾನದ ಪ್ರಜಾ ಪ್ರತಿನಿಧಿ ಸಭೆ

ಲೋಕದಲ್ಲಿ ಯಾವದಾದರೊಂದು ಉತ್ತಮ ವಿಷಯವು ಕಂಡುಬಂದರೆ ಅದನ್ನೆಲ್ಲರಾಗಲಿ, ತಮ್ಮ ಜಾತೀಯವಾದದ್ದಾಗಲಿ ಪಡೆಯಲಪೇಕ್ಷಿಸುವದು ಪ್ರಕೃತಿಧರ್ಮವಾಗಿರುತ್ತಿದೆ. ಈ ಮೈಸೂರು ಸಂಸ್ಥಾನದಲ್ಲಿ ೧೮೮೧ ನೇ ಇಸವಿ ಅಕ್ಟೋಬರ್ ತಿಂಗಳ ಮೊದಲು ನೆರೆಗೊಂಡು ಪ್ರತಿ ಸಂವತ್ಸರದಲ್ಲಿಯೂ ನಡೆಯುತಕ್ಕ, ಅನ್ಯತ್ರ ದುರ್ಲಭವಾದ, ಪ್ರಜಾ ಪ್ರತಿನಿಧಿ ಸಭೆಯ ಯೋಜನೆಯ ಕ್ರಮಗಳೂ, ಅದರ ಆಡಳಿತಗಳೂ, ತನ್ಮೂಲಕ ಇಲ್ಲಿನ ಪ್ರಜೆಗಳಿಗುಂಟಾಗುತಲಿರುವ ಪ್ರಯೋಜನಗಳೂ, ತತ್ಸಂಬಂಧವಾದ ಕೀರ್ತಿಪ್ರತಿಷ್ಠೆಗಳೂ, ಪ್ರಸಿದ್ಧಗಳಾಗಿರುವದರಿಂದ ತತ್ಸಮಾನ ವಿಷಯಸ್ವರೂಪ ವಿವರಣವು ಪ್ರಾಯೇಣ ಜನರಿಗೆ ಉತ್ಸಾಹಪ್ರದವಾಗದಿರಲಾರದೆಂಬ ಭಾವದೊಡನೆ, ವೆಂಕಟಗಿರಿ ಸಂಸ್ಥಾನದಲ್ಲಿ ಈಚೆಗೆ ಮಾಡಲ್ಪಟ್ಟ ನೂತನವಾದ ಒಂದು ಏರ್ಪಾಡನ್ನು ಈ ಪತ್ರಿಕೆಯ ಸ್ನೇಹದಕ್ಷತರ ತಿಳುವಳಿಕೆಯ ಬಗ್ಗೆ ಇದರಡಿ ಪ್ರಕಟಿಸುತ್ತೇವೆ, ಹ್ಯಾಗಂದರೆ.—

ಮದರಾಸ್ ಅಧಿಪತ್ಯಕ್ಕೊಳಗಾದ ಅನೇಕ ಜಮೀನ್ದಾರಿಗಳ ಪೈಕಿ ವೆಂಕಟಗಿರಿಯೂ, ಒಂದು ಸಂಸ್ಥಾನವೆನಿಸಿಕೊಂಡು ಪ್ರಸಿದ್ಧಿಯನ್ನೈದಿದ್ದಾಗಿದೆ. ಈ ಸಂಸ್ಥಾನದ ವೃತ್ತಾಂತಗಳನ್ನು ಹಿಂದೆ ನಾವು ಅನೇಕ ಪ್ರಕರಣಗಳಲ್ಲಿ ತಿಳಿಸಿರುತ್ತೇವೆ. ಇವರಿಗೆ ರಾಜಾ ಯೆಂಬ ಅಗ್ಗಳಿಕೆ ಸಹ ಇಂಡ್ಯಾ ಗವರ್ನ್‌ಮೆಂಟಿನವರಿಂದ ದಯಪಾಲಿಸಲ್ಪಟ್ಟಿರುತ್ತಿದೆ. ಪ್ರಸಕ್ತ ಅರಸರವರು ಹಿಂದೂ ಸಂಪ್ರದಾಯೈಕ ಬದ್ಧರಾಗಿಯೂ, ಹಿಂದೂ ಸಂಸ್ಥಾನದ ಮಾನ ಮರ್ಯಾದೆಗಳಂ ಲೋಪವಿಲ್ಲದೆ ಪೋಷಿಸುವ ಉತ್ಸಾಹಯುಕ್ತರಾಗಿಯೂ ಇರುತ್ತಾರೆ. ಈ ಅರಸರು ಪ್ರತಿವರುಷದಲ್ಲಿಯೂ ನವರಾತ್ರಿ ಉತ್ಸವವನ್ನು ತಮ್ಮ ವಿಭವಾನುಗುಣವಾಗಿ ಜರಿಗಿಸುತಬರುತ್ತಾರೆ. ಕಳೆದ ನವರಾತ್ರಿ ಹಬ್ಬದಲ್ಲಿ ಒಂದು ಪ್ರಜಾಪ್ರತಿನಿಧಿ ಸಭೆಯನ್ನೇರ್ಪಡಿಸಿ, ಅದು ವಿಶೇಷ ವಿಸ್ತರಣೆಯೊಡನೆ ಜರಿಗಿಸಿದಂತೆ ತಿಳಿಯಬರುತ್ತಿದೆ. ಈ ಜಮೀನ್ದಾರಿಗೆ ಒಳಪಟ್ಟಿರುವ ಪ್ರತಿ ತಾಲ್ಲೂಕಿನಿಂದಲೂ ೧೦ ಮಂದಿಗೆ ಕಡಮೆಯಿಲ್ಲದಂತೆ ಸಮರ್ಥರಾದ ಪ್ರತಿನಿಧಿಗಳನ್ನು ಚುನಾಯಿಸಿ ತಮ್ಮ ರಾಜಧಾನಿಗೆ ಕಳುಹಿಸಬೇಕೆಂದು ತಹಶೀಲ್ದಾರುಗಳಿಗೆ ಮುಂದಾಗಿ ಹುಕುಂ ಕೊಟ್ಟಿದ್ದರು. ಪ್ರಸಕ್ತ ಸಭೆಸೇರುವದ

ಕ್ಕೆ ಇದೇ ಪ್ರಥಮಾವರ್ತಿಯಾದುದರಿಂದ ಪ್ರತಿನಿಧಿಗಳ ಚುನಾವಣೆ ಸ್ವಾತಂತ್ರ್ಯವನ್ನು ತಹಸೀಲ್ದಾರರುಗಳಿಗೆ ಸದ್ಯಃ ಕೊಟ್ಟಿರುವಂತೆಯೂ, ಮುಂದಿನ ಸಂವತ್ಸರದ ಮೊದಲು ಪ್ರಜೆಗಳೇ ತಮಗೆ ಬೇಕಾದ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಬಹುದೆಂತಲೂ ಆಜ್ಞಾಪಿಸಿದರು. ಈ ರಾಜಾಜ್ಞೆಯನ್ನನುಸರಿಸಿ ಚುನಾಯಿಸಲ್ಪಟ್ಟ ಪ್ರತಿನಿಧಿಗಳೆಲ್ಲರು ಮಾಹೆ ಸುಜಕೂರ್ ೭ನೇ ತಾರೀಖ್ ಮೊದಲು ವೆಂಕಟಗಿರಿಗೆ ಹೊರಡಲಾರಂಭಿಸಿದರು. ೯ನೇ ತಾರೀಖಿನ ಬೆಳಗ್ಗೆ ದಹೋಬಸ್ತು ತಾಲ್ಲೂಕುಜಾತಿ ಪ್ರತಿನಿಧಿಗಳು ರಾಜಧಾನಿಗೆ ಬಂದು ತಲುಪಿದರು. ಇದಲ್ಲದೆ ಕೃಷ್ಣಾ, ಬಳ್ಳಾರಿ, ಡಿಸ್ಟ್ರಿಕ್ಟುಗಳ ಸರಹದ್ದು ಪ್ರಾಂತಗಳಲ್ಲಿರತಕ್ಕ ಉತ್ತರ ಬಕ್ಕಿನ ತಾಲ್ಲೂಕುಗಳಿಂದ ಅನೇಕಜನ ರೈತರುಗಳು ಈ ಸಭೆಯಂ ನೋಡುವ ಕುತೂಹಲದೊಡನೆಯೂ, ಅರಸರ ಭೇಟಿಯಂ ಮಾಡಿಕೊಂಡು ಅವರಿಗೆ ನಜರು ಮುಜರೆಯಂ ಒಪ್ಪಿಸುವದಕ್ಕಾಗಿಯೂ ಬಂದಿದ್ದರು. ವೆಂಕಟಗಿರಿ ಅರಸರವರಿಗೂ ಅವರ ಪ್ರಜೆಗಳಿಗೂ ನೆಲೆಗೊಂಡಿರತಕ್ಕ ಪರಸ್ಪರ ಪ್ರೀತಿ ಗೌರವಗಳು, ಪ್ರಜೆಗಳಿಗುಂಟಾದ ಬಹುದೂರದೇಶ ಸಂಚಾರ ಪ್ರಯುಕ್ತಗಳಾದ ಶರೀರಶ್ರಮವನ್ನೂ ಧನವ್ಯಯವನ್ನೂ ಚಿಂತಿಸಲಿಕ್ಕೆ ಅವಕಾಶಕೊಡಲಿಲ್ಲವು. ಮಾಹೆ ಸುಜಕೂರ್ ೯ನೇ ತಾರೀಖು ಮಂಗಳವಾರದದಿನ ವಿಜಯದಶಮಿಯಾದುದರಿಂದ ಆದಿನ ಸಾಯಂಕಾಲ ಉತ್ಸವವು ವಿಜೃಂಭಣೆಯೊಡನೆ ನಡೆಸಲ್ಪಟ್ಟಿತು. ಅರಸರವರು ತಮ್ಮ ಪುತ್ರರು ಪರಿವಾರದೊಡನೆ ವಿಶೇಷಾಲಂಕೃತವಾದ ಆನೆಯಮೇಲೆ ಹೌದಾವಿನಲ್ಲಿ ಕುಳಿತು ಸಂಸ್ಥಾನದ ಸಕಲ ಮರ್ಯಾದೆಗಳೊಡನೆ ಮೆರವಣಿಗೆ ಹೊರಟು ರಾತ್ರಿ ೧೦ ಘಂಟೆಗೆ ಅರಮನೆಯಂ ಸೇರಿದರು. ೧೦ನೇ ತಾರೀಖಿನ ದಿನ ಬೆಳಗ್ಗೆ ಡಿಸ್ಟ್ರಿಕ್ಟುಜಾತಿ ಪ್ರತಿನಿಧಿಗಳ ಸಭೆಯು ಪೂರ್ವಭಾವಿಯಾಗಿ ಸೇರಿತ್ತು. ಆ ಕಾಲದಲ್ಲಿ ಸದರೀ ಸಂಸ್ಥಾನದ ದಿವಾನರಾದ ಮ॥ ಎಸ್. ನಾರಾಯಣಸ್ವಾಮಿ ಶೆಟ್ಟರವರು ಅಗ್ರಾಸನವಂ ವಹಿಸಿ ಪ್ರತಿನಿಧಿಗಳಂ ಸ್ವಾಗತಪೂರ್ವಕ ಬರಮಾಡಿಕೊಂಡು ವಿಶೇಷ ಮರ್ಯಾದೆಯೊಡನೆ ಗೌರವಿಸಿದರು. ಆದಿನ ಸಾಯಂಕಾಲ ಸದರೀ ದಿವಾನರವರು ಪ್ರತಿನಿಧಿಗಳೆಲ್ಲರಿಗೂ ತಮ್ಮ ಗೃಹದಲ್ಲಿ ಔತಣವಂ ಮಾಡಿಸಿದರು. ೧೧ನೇ ತಾರೀಖಿನ ದಿನ ಅರಮನೆಯಲ್ಲಿ ಪ್ರತಿನಿಧಿಗಳೆಲ್ಲರಿಗೂ ವಿವಿಧ ಭಕ್ಷ್ಯಭೋಜ್ಯಗಳೊಡನೆ ರಾಜಾರ್ಹವಾದ ಔತಣವು ನಡೆಸಲ್ಪಟ್ಟಿತು. ಈಔತಣದಲ್ಲಿ ಫಲಾಸೆಯವರು ಕರೆಯಲ್ಪಟ್ಟವರು, ಫಲಾಸೆಯವರು ಕರೆಯಲ್ಪಡದವರು, ಫಲಾಸೆಯವರು ರಾಜಮಂದಿರ ಪ್ರವೇಶಾರ್ಹರು, ಫಲಾಸೆಯವರು ಅನರ್ಹರು, ಫಲಾಸೆಯವರು ಪೂಜ್ಯರು, ಫಲಾಸೆಯವರು ತ್ಯಾಜ್ಯರು, ಈ ಇಂವಿಧಗಳಾದ ಪಕ್ಷಪಾತ ತಾರತಮ್ಯಗಳೊಂದೂ ಪರಿಗಣಿಸಲ್ಪಡದೆ ಸರ್ವಸಮತ್ವದೃಷ್ಟಿಯೊಡನೆ ರಾಜಧಾನಿಗೆ ಬಂದಿದ್ದವರೆಲ್ಲರಿಗೂ, ಅವರವರ ಗೌರವಾನುಗುಣವಾಗಿ ಮರ್ಯಾದೆಗಳು ಮಾಡಲ್ಪಟ್ಟವು. ಅದೇದಿನ ಮಧ್ಯಾಹ್ನ ಅರಮನೆಯ ದರ್ಬಾರಿಹಾಲಿನಲ್ಲಿ ಪ್ರಜಾಪ್ರತಿನಿಧಿಗಳ ಸಭೆಯು ಸೇರಿತ್ತು. ಆ ಕಾಲದಲ್ಲಿ ಅರಸರವರೇ ಅಗ್ರಾಸನವುವಹಿಸಿದರು. ತತ್ಕಾಲದಲ್ಲಿ ಸಂಸ್ಥಾನದ ಅಧಿಕಾರಿಗಳೂ, ತಾಲ್ಲೂಕುಜಾತಿ ತಹಸೀಲ್ದಾರ್ರುಗಳೂ, ಪ್ರತಿನಿಧಿಗಳೂ, ಇತರ ದೊಡ್ಡಮನುಷ್ಯರೂ ಬಹುಜನಸೇರಿದ್ದರು. ಸಭೆಯ ಆಲಾಪವೆಲ್ಲವು ರಾಜಭಾಷೆಯಾದ ಆಂಧ್ರಭಾಷೆಯಲ್ಲಿ ಜರಿಗಿಸಲ್ಪಟ್ಟವು. ಅರಸರವರು ಪದಾಸನವನ್ನಲಂಕರಿಸಿದ ಕೂಡಲೆ ದಿವಾನರವರು ಪ್ರತಿನಿಧಿಗಳಿಗೆ ರಾಜಭೇಟಿಯಂ ಮಾಡಿಸಿದರು. ಅನಂತರ ಅರಸರವರು ಪ್ರತಿನಿಧಿಗಳನ್ನಧಿಕರಿಸಿ ಸ್ವಾಗತ ಪೂರ್ವಕಗಳಾದ ಕೆಲವು ಕುಶಲಪ್ರಶ್ನೆಗಳಂ ಮಾಡಿದರು. ಬಳಿಕ ದಿವಾನರವರು ರಾಜಾಜ್ಞಾಪ್ರೇರಿತರಾಗಿ ಪ್ರಕೃತ ಸಭೆಯ ಉದ್ದೇಶವನ್ನೂ ತನ್ಮೂಲಕ ಉಂಟಾಗತಕ್ಕ ಅನೇಕಸುಗಳಾದ ಪ್ರಯೋಜನಗಳನ್ನೂ ಆಂಧ್ರಭಾಷೆಯಲ್ಲಿ ಸಭಾಸದರಿಗೆ ತಿಳಿಯಪಡಿಸಿದರು. ಅರಸರವರು ತಮ್ಮ ಪ್ರಜೆಗಳ ಸಂಪತ್ಪ್ರಭವ ವೈಭವಸ್ವಾತಂತ್ರ್ಯಾಭಿವೃದ್ಧಿಯಂ ಕೋರಿ ನೆಲೆಗೊಳಿಸಿದ ಈ ಸಭೆಯ ಉದ್ದೇಶವಂ ಘೋಷಿಸಿ, ಪ್ರಜೆಗಳೆಲ್ಲರು ವಿವೇಕದೊಡನೆ ಸಹಕರಿಸಿ, ತಮಗೂ ಸಂಸ್ಥಾನಕ್ಕೂ ನೆಲೆಗೊಂಡಿರತಕ್ಕ ಸಂಬಂಧವಂ ವೃದ್ಧಿಗೊಳಿಸಿಕೊಳ್ಳಬೇಕೆಂದು ಪರ್ಯರೆ ಪ್ರತಿನಿಧಿಗಳಿಗೂ, ಮುಖ್ಯವಾಗಿ ಕೃಷಿ ಜೀವಿಗಳಿಗೂ ತಿಳಿಸಿದರು. ದಿವಾನರವರ ಪ್ರಸಂಗವು ಪೂರೈಸಿದ ಕೂಡಲೇ, ಅರಸರವರು ಪ್ರತಿನಿಧಿಗಳಂ ನಿರ್ದೇಶಿಸಿ, ಅವರ ಅಪೇಕ್ಷಿತಾಂಶಗಳನ್ನೂ, ರಾಜಕಾರ್ಯದಲ್ಲಿ ಅನುಸರಿಸಲ್ಪಡಬೇಕೆಂದಿರುವ ಸ್ವಾಭಿಮತಗಳಾದ ಸೂಚನೆಗಳನ್ನೂ, ತಮ್ಮ ದಿವಾನರವರ ಮೂಲಕ ತಿಳಿಯಲಪೇಕ್ಷೆಗೊಂಡಿರುವಂತೆ ಆಜ್ಞಾಪಿಸಿದರು. ದಿವಾನರವರು ಸ್ವಭಾಷಾ (ದುಬಾಷಿ) ಸ್ಥಾನವಂ ಕೈಗೊಂಡು ಪ್ರತಿನಿಧಿಗಳ ವಿಜ್ಞಾಪನೆಗಳನ್ನೆಲ್ಲ ಅರಸರವರಿಗೆ ಕ್ರಮವಾಗಿ ಶ್ರುತಪಡಿಸಿದರು. ಅವುಗಳ ಪೈಕಿ ಕೆಲವು ಅಂಶಗಳಿಗೆ ದಿವಾನರೊಡನೆಯೂ ಸಂಸ್ಥಾನದ ಮುಖ್ಯಾಧಿಕಾರಿಗಳೊಡನೆಯೂ ಪರ್ಯಾಲೋಚಿಸಿ ಅವುಗಳ ಸಾಧ್ಯಾಸಾಧ್ಯಗಳಂ ಕುರಿತು ಕೂಡಲೇ ಉತ್ತರಗಳಂ ದಯಪಾಲಿಸಿದರು. ಹೀಗೆ ಸಂಸ್ಥಾನದ ಪ್ರಜಾಸಾಮುದಾಯಿಕ ವಿಷಯ ವಿಚಾರಗಳೆಲ್ಲವು ವಿಮರ್ಶಿಸಲ್ಪಟ್ಟ ಬಳಿಕ ಅರಸರವರು ಪ್ರತಿನಿಧಿಗಳಂ ಕುರಿತು, ತತ್ತದ್ವ್ಯಕ್ತಿನಿಷ್ಠಗಳಾದ ಪ್ರಾರ್ಥನೆಗಳು ಯೇನಾದರು ಇರುವ ಪಕ್ಷಕ್ಕೆ ಅವು ದಿವಾನರವರಿಗೆ ತಿಳಿಯಪಡಿಸಿದರೆ ಅಂತ ಪ್ರಾರ್ಥನೆಗಳನ್ನು ಅವರ ಮೂಲಕ ತಾವು ಕೇಳಿ ಅನುಕೂಲಗಳಾದ ಉತ್ತರಗಳನ್ನೀಯುವೆವೆಂದು ತಿಳಿಸಿದರು. ತರುವಾಯ ಅರಸರವರು ಅಂತಃಪುರಕ್ಕೆ ದಯಮಾಡಿದ ಬಳಿಕ ದಿವಾನರವರ ಅಗ್ರಾಸನಾಧಿಪತ್ಯದಲ್ಲಿ ಸಭೆಯು ಜರಿಗಿ ಪ್ರತಿನಿಧಿಗಳು ತಮ್ಮ ತಮ್ಮ ಅಪೇಕ್ಷಿತಾಂಶಗಳನ್ನು ತಿಳಿಸಲು ಆ ಮಾರನೆಯದಿನ ಅವುಗಳಿಗೆಲ್ಲ ಸರ್ಕಾರೀ ಕಾಗದ ಪತ್ರಗಳ ದಾಖಲೆ ನಿಖ ಜವಾಬುಗಳು ಕೊಡಲ್ಪಟ್ಟವು. ಪ್ರತಿನಿಧಿಗಳು ಸದರೀ ಸಭೆಯಲ್ಲಿ ಸೂಚಿಸಿದ ವಿಷಯಗಳಪೈಕಿ ಮುಖ್ಯಗಳಾದ ಕೆಲವನ್ನು ಇಲ್ಲಿ ತಿಳಿಸುವೆವು, ಅವು ಯಾವವೆಂದರೆ:—ನೀರಾವರಿ ಉಪಯುಕ್ತಗಳಾದ ಕಾವ ಗಾರಿಗಳನ್ನು ಮಾಡಿಸುವಣ, ವ್ಯವಸಾಯೋಪಯುಕ್ತಗಳಾದ ಉಪಕರಣಗಳಿಗೆ ಆವಶ್ಯಕಗಳಾದ ಮರಗಳು ಪರ್ಯಯೆಯನ್ನು ಒದಗಿಸಿ ಕೊಡುವಣ, ಸುಲಭ ಕಂದಾಯಕ್ಕೆ ಬಂಜರ್ ಜಮೀನುಗಳನ್ನು ಪುಲ್ಲುಗಾವಲಿಬಗ್ಗೆ ಕೊಡುವಣ, ನಗರ ಪಾರಿಶುದ್ಧ್ಯತೆ, ರಸ್ತೆಗಳ ದುರಸ್ತು, ಠಾಣ್ಯಗಳನ್ನಭಿವೃದ್ಧಿಪಡಿಸುವಣ, ಪ್ರತಿಸಂವತ್ಸರದಲ್ಲಿಯೂ ಜಮಾಬಂದಿಯನ್ನು ಪೂರೈಸಿ ತಕರಾರುಗಳನ್ನು ಸಾಧ್ಯವಾದಷ್ಟು ಶೀಘ್ರವಾಗಿ ವ್ಯವಸ್ಥೆ ಮಾಡುವಣ, ಫಸಲಿ ನಷ್ಟಕ್ಕೆ ಕಂದಾಯವನ್ನು ಕ್ಷಮಾ ಮಾಫ್ ಮಾಡುವಣ, ಇವೇ ಮೊದಲಾದ ಸಾಮಾನ್ಯ ವಿಷಯಗಳ ವಿಚಾರವು ಬಹಳಮಟ್ಟಿಗೆ ಜರಿಗಿತು. ಅರಸರವರು ಕೇವಲ ಪ್ರಸನ್ನವದನರಾಗಿ, ಉಪಶಾಂತಿಯೊಡನೆ ಉತ್ಸಾಹಪ್ರದರ್ಶನ ಪೂರ್ವಕ, ಪ್ರಜೆಗಳ ಕ್ಷೇಮದಲ್ಲಿ ತಮಗಿರುವ ಅಭಿಲಾಷೆಯಂ ತತ್ತತ್ಸಂದರ್ಭೋಚಿತ ವಾಕ್ಯಗಳಿಂದ ತೋರ್ಪಡಿಸುತ ಪ್ರತಿನಿಧಿಗಳೊದವೆ ಆಯಾ ವಿಷಯಸ್ವರೂಪಾನುಗುಣವಾಗಿ ಚರ್ಚಿಸಿ ಪ್ರಕರಣೌಚಿತ್ಯಾನುಗುಣವಾಗಿ ತಮ್ಮ ದಿವಾನರೊಡನೆ ಆಲೋಚಿಸಿ ತೃಪ್ತಿಕರಗಳಾದ ಉತ್ತರಗಳಂ ಕೃಪೆಗೈದರು. ಅರಸರವರು ತಮ್ಮ ಪ್ರಜೆಗಳ ರಾಜಭಕ್ತಿಯನ್ನೂ, ತಮ್ಮ ಸಂಸ್ಥಾನದ ಪುರೋಭಿವೃದ್ಧಿ ವಿಷಯದಲ್ಲಿ ಅವರು ಪಡೆದಿರತಕ್ಕ ಅಭಿಲಾಷೆಯನ್ನೂ ಆಂತರವಾಗಿ ಅರಿತು ಬಹಳ ಸಂತೃಪ್ತರಾಗಿ ಪ್ರತಿನಿಧಿಗಳೆಲ್ಲರಿಗೂ ಪ್ರತಿ ವಂದನಪೂರ್ವಕ ಸಭಾಸಾದವಂ ಬಿಟ್ಟು ಅಂತಃಪುರಕ್ಕೆ ದಯಮಾಡಿದರು. ತರುವಾಯ ಮೂರು ದಿನಗಳು ಅರಸರವರ ಆಜ್ಞಾನುಸಾರ ದಿವಾನರವರು ರೈತರ ಅಹವಾಲುಗಳನ್ನು ಕೇಳಿ ಅವುಗಳನ್ನೆಲ್ಲ ರಾಜಸನ್ನಿಧಿಯಲ್ಲಿ ನಿಜ್ಞಾಪಿಸಿದರು. ಇನ್ನುಮುಂದೆ ಅರಸರವರು ತಾಲ್ಲೂಕುಜಾತಿ ತಹಸೀಲ್ದಾರ್ರುಗಳ ಸಭೆಯಂ ಮಾಡಿಸಿ ಅವರ ಮೂಲಕ ಪ್ರತಿತಾಲ್ಲೂಕಿನಲ್ಲೂ ಪ್ರಜೆಗಳ ಅಪೇಕ್ಷಿತಾಂಶಗಳಂ ತಿಳಿದು ಅವುಗಳಿಗೆಲ್ಲ ಕೂಡಲೆ ತಮ್ಮ ಅವಧಾನವಂ ಕೊಡುವಂತೆ ಆಜ್ಞಾಪಿಸಿದರು. ಇನ್ನು ಕೆಲವು ವಿಷಯಗಳಿಗೆ, ಬಾದೆರಡು ತಿಂಗಳ ಕಾಲದೊಳಗಾಗಿ ತಾವು ಉತ್ತರ ದಿಕ್ಕು ಸಂಚಾರ ಹೊರಡುವಂತೆ ಉದ್ದೇಶಿಸಿರುವದರಿಂದ, ಆ ಕಾಲದಲ್ಲಿ ಅನುಕೂಲವಾದ ವ್ಯವಸ್ಥೆಯಂ ಮಾಡುವದಾಗಿ ಸೂಚಿಸಿದರು. ಕಳೆದ ಜುಲೈ ತಿಂಗಳಲ್ಲಿ ಅರಸರವರು ಸ್ವತಃ ದಯಮಾಡಿ ದಕ್ಷಿಣ ದಿಕ್ಕು ತಾಲ್ಲೂಕುಗಳ ಸ್ಥಿತಿಯನ್ನು ತಿಳಿದುಕೊಂಡರು. ಮುಂದಿನ ಸಂವತ್ಸರದಲ್ಲಿ ಸೇರತಕ್ಕ 'ಸಭೆಯ ವಿಷಯದಲ್ಲಿ ವಿಶೇಷ ಯೇರ್ಪಾಡುಗಳಂ ಮುಂಚಿತವಾಗಿಯೇ ಮಾಡಬೇಕೆಂದು ದಿವಾನರವರಿಗೆ ಆಜ್ಞಾಪಿಸಿರುವಂತೆ ಕೇಳುತ್ತೇವೆ. ಸದರೀ ಸಂಸ್ಥಾನದ ಪ್ರಜೆಗಳ ಸುಖ ಸಂತೋಷಾಭಿವೃದ್ಧಿ ವಿಷಯದಲ್ಲಿ ಅರಸರವರೂ ಅವರ ದಿವಾನರವರೂ ಕೊಟ್ಟ ದೃಢತರವಾದ ಭರವಸೆಗಳಿಗೂ ಅವರು ಮಾಡಿದ ಸತ್ಕಾರಗಳಿಗೂ, ಪ್ರತಿನಿಧಿಗಳು ಬಹಳವಾಗಿ ಸಂತೃಪ್ತರಾದರೆಂಬ ಅಂಶವಂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಮುಖ್ಯವಾಗಿ ವೆಂಕಟಗಿರಿ ಅರಸರವರು ಕೇವಲ ಸುಲಭರಾಗಿಯೂ, ಉಪಶಾಂತರಾಗಿಯೂ, ಸ್ವಪ್ರತಿಷ್ಠಾಪರರಲ್ಲದೆಯೂ, ವಿದ್ಯಾವಂತರಾಗಿಯೂ ಇರುವಣದಿಂದ ಅವರ ಪ್ರವೃತ್ತಿಯು ಪ್ರಜೆಗಳಿಗೆ ವಿಶೇಷ ವ್ಯಾಮೋಹಕರವಾಗಿ, ರಾಜಭಕ್ತಿವಿಶ್ವಾಸಗಳಂ ಮತ್ತಷ್ಟು ವೃದ್ಧಿಪಡಿಸುತ ಬರುತದೆಂಬದು ಯೇನೂ ಆಶ್ಚರ್ಯವಲ್ಲವು: ಮೇಲೆ ಕಂಡ ಸಭೆಯ ವಿವರಣೆಯು ಈ ಪತ್ರಿಕೆಯನ್ನೋದತಕ್ಕವರೆಲ್ಲರಿಗೂ ವಿಶೇಷ ಆಶ್ಚರ್ಯವನ್ನು ಸಂತೃಪ್ತಿಯನ್ನು ಉಂಟುಮಾಡುವದರಲ್ಲಿ ಅವರ ನ್ಯಾಯಾನುಭವವು ಸಹಕರಿಸದೆ ಹೋಗಲಾರದು.

Occasional Notes.
ನೈಮಿತ್ತಿಕ ವಿಷಯನ್ಯಾಸ.

ರಷಿಯಾ ಚಕ್ರವರ್ತಿಯವರ ದೇಹಸ್ಥಿತಿಯು ಕೇವಲ ಅಪಾಯದಲ್ಲಿಯೇ ಇದೆ. ಪ್ರಾಣೋತ್ಕ್ರಮಣ ಸಮಯದಲ್ಲಿ ಮಾಡಬೇಕಾದ ಪ್ರಾಯಶ್ಚಿತ್ತಗಳು ನಡೆಸಲ್ಪಟ್ಟವು.

ಆಸ್ಟ್ರಿಯಾ ದೇಶದೊಳು ಪ್ರಜೆಗಳು ತಮ್ಮ ಮನೆಗಳೊಳು ಸಾಕುವ ಜೀವಜಂತುಗಳಲ್ಲಿ ಬೆಕ್ಕು ಒಂದು ವಿನಾ ಉಳಿದ ವಿಶಿಷ್ಟ ಪ್ರಾಣಿಗಳ ಮೇಲೂ ಕಂದಾಯ ವಸೂಲ್ಮಾಡಲ್ಪಡುತಿದೆ. ಈಚೆಗೆ ಬೆಕ್ಕನ್ನು ಸಹ ಕಂದಾಯಕ್ಕೆ ಗುರಿಮಾಡಬೇಕೆಂದು ಸದರೀ ಗವರ್ನಮೆಂಟಿನವರು ಯೋಚಿಸುತಿದಾರೆಂದು ತಿಳಿಯಬರುತಿದೆ.

ಕಾಬೂಲ್ ಅಮೀರರವರು ಪ್ರಕೃತ ತಮ್ಮ ಸ್ಥಿತಿಯಂ ಪರ್ಯಾಲೋಚಿಸಿ ತಮ್ಮ ಕಾಲಾನಂತರ ತಮ್ಮ ಜ್ಯೇಷ್ಠ ಪುತ್ರರಾದ ಹಬಿಬುಲಾಖಾನ್ ಎಂಬವರನ್ನು ಸಿಂಹಾಸನದಲ್ಲಿ ನೆಲೆಗೊಳಿಸಿ, ತಮ್ಮ ದೇಶದೊಳಿರುವ ಪ್ರಮುಖರಾದವರೆಲ್ಲರು ಅವರಿಗೆ ವಿಧೇಯರಾಗಿಯೂ ಸಹಾಯಕರಾಗಿಯೂ ಇರತಕ್ಕದ್ದೆಂದು ಆಜ್ಞಾಪಿಸಲು ಅದಕ್ಕೆ ಯೆಲ್ಲರು ಸಮ್ಮತಿಸಿದರು.

ಮುಂದಿನತಿಂಗಳ ೧೭ನೇ ತಾರೀಖಿನಲ್ಲಿ ಬಾಲಕರಾದ ಪುದುಕೋಟೆ ಅರಸಿನವರಿಗೆ ಪಟ್ಟಾಭಿಷೇಕೋತ್ಸವವು ನಡೆಸಲ್ಪಡುವುದು. ಸದರೀ ಸಂಸ್ಥಾನದ ಪ್ರಕೃತ ದಿವಾನರಾದ ಮ॥ ಶೇಷಯ್ಯಶಾಸ್ತ್ರಿಗಳವರು ತಮ್ಮ ಅಧಿಕಾರದಿಂ ನಿವೃತ್ತರಾಗಿ ನಾಯಬ್ ದಿವಾನರಾಗಿರುವ ಮ॥ವೇದಾಂತಾಚಾರ್ಲು ಎಂಬವರು ದಿವಾನರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮದರಾಸ ರೇವಿನಲ್ಲಿ, ಮೇಯಿಲ್ ಗಾಡಿಗಳು ವಿನಾ ಉಳಿದ ಯೆಲ್ಲಗಾಡಿಗಳಿಗೂ ಮೈಲಿಒಂದಕ್ಕೆ ಒಂದೂವರೆ ಕಾಸಿನಂತೆ ಟಕ್ಕೆಡಿ ದರವಸೂಲಿಮಾಡಲ್ಪಡುತಲಿದೆಯಷ್ಟೆ. ಸದರೀದರವನ್ನು ಎರಡು ಕಾಸುಗಳಿಗೆ ಹೆಚ್ಚಿಸಬೇಕೆಂದು ಇಲ್ಲಿನ ರೇವಿನ ಅಧಿಕಾರಿಗಳು ಮಾಡಿದ ಶಿಫಾರಸ್ಸಿನಂತೆ ಸದರೀ ಕಂಪೆನಿಯ ಬೋರ್ಡ್‌ಡೈರೆಕ್ಟರ್ಗಳು ಮಂಜೂರ್ಮಾಡಿರುವಂತೆ ತಿಳಿಯಲಾದೆವು.

ಪೆನ್ಷನ್‌ಬಗ್ಗೆ ಬರತಕ್ಕ ದರಖಾಸ್ತುಗಳನ್ನು ವ್ಯವಸ್ಥೆಮಾಡುವಲ್ಲಿ ದರಖಾಸ್ತುದಾರನು ಸರ್ಕಾರ್ ನೌಕರಿಯಲ್ಲಿ ಪ್ರವೇಶಿಸಿದ ವರ್ಷ ಮಾತ್ರ ತಿಳಿದು ತಿಂಗಳು ತಿಳಿಯದ ಪಕ್ಷದಲ್ಲಿ ಸದರೀ ಸಂವತ್ಸರದ ಜೂನ್ ೩೦ ನೇ ತಾರೀಖಿನಲ್ಲಿ ನೌಕರಿಯೊಳು ಪ್ರವೇಶಿಸಿದಂತೆ ಲೆಕ್ಕ ಮಾಡತಕ್ಕದ್ದೆಂದು ಮದರಾಸ ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ.

ಈಚೆಗೆ ಕೆಲವು ದಿವಸಗಳ ಹಿಂದೆ, ತಿರುಪತಿ ಮಾಹಂತರವರಾದ ಮಹಾಬೀರದಾಸ್ ಎಂಬವರು ಮೃತಪಟ್ಟರೆಂಬ ವಿಷಯವನ್ನು ಕಳೆದವಾರದ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆಯಷ್ಟೆ. ಸದರೀಯವರ ಸ್ಥಾನಕ್ಕೆ ಅವರ ಶಿಷ್ಯರ ಪೈಕಿ ಜ್ಯೇಷ್ಠರಾದ ರಾಮಕಿಶೋರದಾಸ್ ಎಂಬವರನ್ನು ನಿಯಮಿಸಬೇಕೆಂದು ಸದರೀ ಮಠದ ಪಂಚಾಯತಿದಾರರು ಆಲೋಚಿಸುತಲಿರುವಂತೆ ಕೇಳುತ್ತೇವೆ

ಜಯಪುರದ ಮಹಾರಾಜರವರು ತಮ್ಮ ಸಂಸ್ಥಾನದೊಳು ಕಳೆದ ಸಂವತ್ಸರದಲ್ಲಿ ಸಂಸ್ಕೃತ ಭಾಷಾಜ್ಞಾನ ಸಂಪಾದನಕ್ಕೆ ಪ್ರೋತ್ಸಾಹಾರ್ಥ ೯,೦೦೦ ರೂಪಾಯಿಗಳಂ ವ್ಯಯಮಾಡಿದರು. ಅಲ್ಲಿ ವಿದ್ಯಾರ್ಥಿಗಳು ಕೇವಲ ಕೀರವತ್ಪಾಠಿಗಳಾಗಿಯೋಗದೆ ಸದರೀ ಭಾಷೆಯಲ್ಲಿ ವ್ಯಾವಹಾರಿಕ ಜ್ಞಾನವಂ ಸಂಪಾದಿಸುವದಕ್ಕೆ ಅನುಕೂಲವಾಗಿ ಸದರೀ ಭಾಷೆಯು ಕಲಿಸಲ್ಪಡುತಿದೆ ಎಂದು ಕೇಳಿ ಸಂತೋಷಿಸುತ್ತೇವೆ.

ಈತಿಂಗಳ ೨೨ನೇ ತಾರೀಖ್ ಸೋಮವಾರದ ದಿನ ಕೋರಿಯಾ ದೇಶದಲ್ಲಿ ಜಪಾನ್ ಸೈನ್ಯಕ್ಕೂ ಚೀನಾ ದೇಶದ ಸೈನ್ಯಕ್ಕೂ ಮರಳಿ ಒಂದು ತಡವೆ ಯುದ್ಧ ನಡೆದು ಅದರಲ್ಲಿ ಜಪಾನ್ ದೇಶದವರು ಪರಾಜಿತರಾಗಿ ಹಿಮ್ಮೆಟ್ಟ ಬೇಕಾದವರಾದರು. ಜಪಾನ್ ದೇಶದವರಲ್ಲಿ ೩,೦೦೦ ಮಂದಿಯೂ, ಚೀನಾ ದೇಶದವರಲ್ಲಿ ೮,೦೦೦ ಮಂದಿಯೂ ನಷ್ಟವಾದರು. ಇದೇತಿಂಗಳ ೨೩ನೇ ತಾರೀಖಿನಲ್ಲಿ ಮರಳಿ ಒಂದು ತಡವೆ ಯುದ್ಧ ನಡೆಯಿತು.

ಇನ್ನು ಸ್ವಲ್ಪದಿನಗಳೊಳಗಾಗಿ ಡೆಹಲಿಯಲ್ಲಿ ನಡೆಯುವದಾಗಿರುವ ದರ್ಬಾರಿಗೆ ಬಾಲಕರಾದ ಗ್ವಾಲಿಯರ್ ಮಹಾರಾಜರವರು ಹೋಗುವರೆಂತಲೂ, ಬರುವ ನವಂಬರ್ ತಿಂಗಳಲ್ಲಿ ಸದರೀ ಯವರು ಪ್ರಾಪ್ತವಯಸ್ಕರಾಗುತ್ತಾರೆಯಾಗಿ ಹಿಂದೆ ವೈಸರಾಯಿಗಳಾಗಿದ್ದ ಲಾರ್ಡ್ ಡಫರಿನ್ ಮತ್ತು ಲಾರ್ಡ್ ಲ್ಯಾನ್ಸಡೌನ್ ಸಾಹೇಬರುಗಳು ಅವರನ್ನು ಬಹುಮುಖವಾಗಿ ಶ್ಲಾಘಿಸಿರುವದರಿಂದಲು ಈಸಂದರ್ಭದಲ್ಲಿ ಗವರ್ನಮೆಂಟಿನವರು ಅವರನ್ನು ಸಿಂಹಾಸನಾಸೀನರನ್ನಾಗಿ ಮಾಡಬಹುದೆಂತಲೂ ಬೆಹರೀ ಪ್ರಾಂತದಲ್ಲಿ ಒಂದು ಪ್ರವಾದ ಹುಟ್ಟಿರುವಂತೆ ಒಂದಾನೊಂದು ಉತ್ತರದೇಶದ ಪತ್ರಿಕೆ ತಿಳಿಸುತಿದೆ.

THE MONEY MARKET.
Stocks, Shares and Exchange

ಮದರಾಸ್, ಶನಿವಾರ, ತಾರೀಖ್ 26 ನೇ ಅಕ್ಟೋಬರ್ 1894

ಸೇಕಡ ಮೂರುವರೆ ರೂ. ಬಾಬತು, ಗವರ್ನಮೆಂಟ್ ಪತ್ರಗಳು, 102–14–0ರೂ.ಗಳಿಂದ 103–12–0ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು,1,130–0–0ರೂ ಗಳಿಂದ 1,150–0–0ವರೆಗೆ

ಕಮರ್ಷಿಯಲ್ ಅಂಡ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100ರೂ.) ಬಾಬತು 155–0–0ರೂ ಗಳಿಂದ 160–0–0 ರೂ ವರೆಗೆ.

ಸವರಿನ್‌ಗಳು, ಪ್ರತಿ 1 ಕ್ಕೆ 15–0–0 ರೂಪಾಯಿಗಳಿಂದ 15–6–0 ರೂ. ವರೆಗೆ.

ಲಂಡನ್ ಬ್ಯಾಂಕಿನ ಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ ಮೂನೆ ದರ್ಶನ ಹುಂಡಿಗಳು .—

6 ತಿಂಗಳ ಪಾವತಿಗೆ ...1 s. 1 13/32d.
4 „ ...1 s. 1 11/32d
ಕೇಳಿದಾಗಕೊಡಲ್ಪಡುವದಕ್ಕೆ ...1 s. 1 9/32d.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು.

ಕಳೆದ ಶನಿವಾರದದಿನ ದೀಪಾವಳಿ ಹಬ್ಬ ಮತ್ತು ಕಹೀ ಶನಿವಾರವಾಗಿದ್ದುದರಿಂದಲೂ, ಈದಿನ ಬಲಿಪಾಡ್ಯಮಿ ಯಾದುದರಿಂದಲೂ ಈಮೂರು ದಿನಗಳಲ್ಲೂ ಇಲ್ಲಿನ ವಿಶಿಷ್ಟ ಸರ್ಕಾರ್ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿರುತದೆ.

ಇಂಪೀರಿಯಲ್ ಸರ್ವಿಸ್ ಸೈನ್ಯದ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರು ಬರುವ ಡಿಸಂಬರ್ ತಿಂಗಳಲ್ಲಿ ಮೈಸೂರು ಇಂಪೀರಿಯಲ್ ಸರ್ವಿಸ್ ಸೈನ್ಯವನ್ನು ಪರೀಕ್ಷಿಸುವದಕ್ಕಾಗಿ ಇಲ್ಲಿಗೆ ಬರುವರೆಂದು ಮದರಾಸ್ ಮೆಯಿಲ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ.

ಮೈಸೂರು ನಿಖಿಲ ರೋಗಹಾರಿ ಕರ್ನಾಟಕ ವೈದ್ಯಶಾಲೆಯಲ್ಲಿ, ಕಳೆದ ಆಗಸ್ಟ್ ೧೭ನೇ ತಾರೀಖ್ ಮೊದಲು ಸೆಪ್ಟೆಂಬರ್ ೧೬ನೇ ತಾರೀಖ್ ವರೆಗೆ ೩೭,೧೪೯ ಮಂದಿ ರೋಗಿಗಳು ಚಿಕಿತ್ಸೆಯಂ ಹೊಂದಿರುವದಾಗಿ ಸದರೀ ಶಾಲಾಸ್ಥಾಪಕರು ತಿಳಿಸಿರುತ್ತಾರೆ

ಮಾಗಡಿ ಜಹಗೀರುದಾರರಾಗಿಯೂ ಕರಣೀಕ ತಿಪ್ಪಯ್ಯನವರ ಮಕ್ಕಳಾಗಿಯೂ ಇರುವ ಮಿ॥ ಎಂ. ಕೆ. ಕೃಷ್ಣಮೂರ್ತಿರಾಯರನ್ನು ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಒಬ್ಬ ರೆವಿನ್ಯೂ ಪ್ರೊಬೆಷನರನ್ನಾಗಿ ನೇಮಕಮಾಡುವಂತೆ ಹುಕುಂ ಆಗಿರುವದಾಗಿ ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ—ವೃ ಚಿ

ನಮ್ಮ ಶ್ರೀಮನ್ಮಹಾರಾಜರವರು ಈ ಅಕ್ಟೋಬರ್ ನವಂಬರ್ ತಿಂಗಳುಗಳನ್ನು ರಾಜಧಾನಿಯಲ್ಲಿ ಕಳೆದು, ಡಿಸಂಬರ್ ತಿಂಗಳ ಮಧ್ಯದಲ್ಲಿ ಕುಟುಂಬ ಪರಿವಾರ ಸಮೇತರಾಗಿ ಮುಂಬಯಿಗೆ ಪ್ರಯಾಣಮಾಡಿ, ಅಲ್ಲಿಂದ ಉತ್ತರದೇಶಯಾತ್ರೆಗೆ ದಯಮಾಡುವರೆಂದು ಇದುವರೆಗಿನ ಪಿರ್ಯಾದುಗಳಿಂದ ತಿಳಿದುಬರುತ್ತದೆ—ವೃ ಚಿ

ಕಳೆದ ವಾರದಲ್ಲಿ ಉತ್ತರಾ ಮಳೆಯಿಲ್ಲದೆ ಚೆನ್ನಾಗಿ ಬಿಸಿಲು ಕಾಯುತಲಿತ್ತು ದೀಪಾವಳಿ ಹಬ್ಬಕ್ಕೆ ಸೇರಿದಂತೆ ವಾಡಿಕೆಯಾಗಿ ಬೀಳುವ ಮಳೆಯು ಈಸಲ ದರ್ಶನವಾಯಿತು ರಾಗಿ ಫಸಲು ಪೂರ್ತಿಯಾಗುವದಕ್ಕೆ ಇನ್ನ ಒಂದೆರಡು ಮಳೆ ಬೇಕೆನ್ನುತ್ತಾರೆ. ವರ್ಷಸೂಚನೆಗಳು ಸದ್ಯಃ ಯಾವವೂ ಕಂಡುಬರಲಿಲ್ಲ ಇತರ ವಿಷಯಗಳು ಕಳೆದವಾರದಲ್ಲಿ ತಿಳಿಸಲ್ಪಟ್ಟದ್ದಂತೆಯೇ ಇವೆ

ಕಳೆದ ಗುರುವಾರದ ದಿನ, ತೀರ್ಥಪುರ ಕವ ದಿಗಂ ಪೇಟೆಯಲ್ಲಿರುವ ಗರೀ ಕೆಲಸ ಮಾಡುವ ಕುರುಬರ ಜಾತಿ ಮುನಿಯನೆಂಬವನು ಕೆಲಸಕ್ಕೆ ಹೋಗಿರುವಾಗ ಅಲ್ಲಿ ಅವನಿಗೆ ಸಿಕ್ಕಿದ ಒಂದು ಹಾವನ್ನು ಹಿಡಿದು ತನ್ನ ವಸ್ತ್ರದಲ್ಲಿ ಕಟ್ಟಿ ಮನೆಗೆ ತರುವಲ್ಲಿ ಮಧ್ಯೆ ಅಂಗಡಿಗಳ ಮುಂದೆ ಬಿಟ್ಟು ಆಡಿಸಿ ಕಾಸುಗಳು ಸಂಪಾದಿಸಿಕೊಂಡು ಮನೆಗೆ ಹೋಗಿ ಊಟ ಮಾಡಿಕೊಂಡು ಮರಳಿ ದುರಾಶೆಯಿಂದ ಹಾವನ್ನು ತೆಗೆದುಕೊಂಡು ಅಂಗಡಿ ಬೀದಿಗೆ ಹೋಗಿ ಅದನ್ನು ಆಡಿಸುತ್ತಿರುವಲ್ಲಿ ಅವನ ಬೆಟ್ಟುಗಳನ್ನು ಹಿಡಿದು ಕಚ್ಚಲು ಹಾಗೆಯೇ ಮನೆಗೆ ಹೋದಮೇಲೆ ವಿಷ ಹತ್ತಿ ಪ್ರಾಣ ಬಿಟ್ಟನು.

ಈಗ ಕೆಲವು ದಿನಗಳ ಕೆಳಗೆ ಹುಣಸೂರು ಪ್ರಾಂತ್ಯದಲ್ಲಿ ಒಂದು ಮದಹತ್ತಿದ ಆನೆಯು ಒಬ್ಬ ಬ್ರಾಹ್ಮಣನನ್ನು ಕೊಂದುಹಾಕಿದ್ದು ನಮ್ಮ ವಾಚಕರಿಗೆ ನೆನಪಿನಲ್ಲಿರಬಹುದು ಆತನ ಹೆಂಡತಿ, ತಾಯಿ, ಮಕ್ಕಳು ಇವರಿಷ್ಟು ಮಂದಿಯೂ, ತಮ್ಮ ಕಷ್ಟವನ್ನು ಹೇಳಿಕೊಳ್ಳುವುದಕ್ಕಾಗಿ ನಮ್ಮ ದಿವಾನರವರನ್ನು ಒಂದು ವಾರದಿಂದ ಅವರ ಮನೆಯ ಬಾಗಿಲಲ್ಲಿ ಕಾದಿದ್ದರು ನಿನ್ನೆ ಶನಿವಾರ ದಿವಾನರವರು ಅವರ ಅಹವಾಲುಗಳನ್ನು ಕೇಳಿ ತುಂಬ ಕನಿಕರಪಟ್ಟು, ೫೦೦ ರೂಪಾಯಿಗಳನ್ನೂ ಮಹಾರಾಜರ ಸರ್ಕಾರದಿಂದ ಆ ಸಂಸಾರಕ್ಕೆ ಸಲ್ಲಿಸಬೇಕೆಂದು ಹುಕುಂಮಾಡಿದರು ಇದಕ್ಕಾಗಿ ನಾವೆಲ್ಲರೂ ದಿವಾನರವರಿಗೆ ಕೃತಜ್ಞರಾಗಿರುವರೆಂದು ನಂಬಿರುವೆವು—ವೃ ಚಿ

THE MYSORE GAZETTE
ಮೈಸೂರು ಗೆಜೆಟ

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಹೊರಡಿಸಿದ ಇಸ್ತಿಹಾರನಾಮೆಗಳು
ಗುರುವಾರ, ತಾ॥ ೨೫ನೇ ಅಕ್ಟೋಬರ್ ೧೮೯೪

ನಂ ೬೧೮೯—೨ ೩೪೫ ತಾ॥ ೧೮ನೇ ಅಕ್ಟೋಬರ್ ೧೮೯೪—ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೦ನೇ ಸೆಕ್ಷನ್ ಅನುಸಾರ ಚಿಕ್ಕಬಳ್ಳಾಪುರ ತಾಲೂಕು ಅಮಲ್ದಾರ್ ಎಂ ಗುಲಾಂ ಮೊಹಿದೀನ್ ಖಾನರಿಗೆ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುವಿವೆ

ನಂ॥ ೬೨೩೦ ೧೬೩—೫—ತಾ॥ ೨೦ನೇ ಅಕ್ಟೋಬರ್ ೧೮೯೪—ಕಡೂರ್ ಸ್ಟೇಟ್ ಡಿಸ್ಟ್ರಿಕ್ಟ್ ಫಂಡ್ ಬೋರ್ಡ್ ಮೆಂಬರಾಗಿದ್ದ ಮ॥ ಕೃಷ್ಣೋಜಿ ಯವರಿಗೆ ಬದಲಾಗಿ ಮಿ॥ ಜೆ ಒ ಹಿಲ್ ರವರು ನಿಯಮಿಸಲ್ಪಟ್ಟಿದ್ದಾರೆ

ನಂ॥ ೬೩೩೯—೦ ೧೬೩—ತಾ॥ ೨೩ನೇ ಅಕ್ಟೋಬರ್, ೧೮೯೪—ಮೈಸೂರು ಸ್ಟಾಂಪ್ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ಗುಬ್ಬಿ ತಾಲೂಕ ಅಮಲ್ದಾರ್ ಪಿ ಶೇಷಯ್ಯನವರಿಗೆ ೧೮೯೪ನೇ ಇಸವಿ ಆಗಸ್ಟ್ ೧೭ರ ಲಾಗಾಯಿತು ೩೧ನೇ ತಾರೀಖ್ ವರೆಗೆ ಉಭಯ ದಿನಗಳೂ ಸೇರಿ ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು ಸದರಿಯವರ ಸ್ಥಾನದಲ್ಲಿ ಡೆಪ್ಯುಟಿ ಅಮಲ್ದಾರ್ ಪಿ ತಿರುವೆಂಗಡಯ್ಯಂಗಾರ್ಯರು ಪಿ ಶೇಷಯ್ಯನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಗುಬ್ಬಿ ತಾಲೂಕ್ ಆಫೀಸು ಚಾರ್ಜಿನಲ್ಲಿದ್ದರು

ನಂ॥ ೬೩೩೭—೧ ೧೮೪೯—ಮಾ ತಾಲೂಕ್ ಅಮಲ್ದಾರ್ ವೇದಾಂತ ದೇಶಿಕಾಚಾರ್ಯರವರಿಗೆ, ೧೮೯೪ನೇ ಇಸವಿ ಸೆಪ್ಟೆಂಬರ್ ೨೫ನೇ ತಾರೀಖು ೭ ಮೊಕ್ಕಂ ನಂಬರ್ ಇಸ್ತಿಹಾರನಾಮೆಯ ಮೂಲಕ ಬಿಗರ್ ಹೇಳಿಕೆ ಕೊಡಲ್ಪಟ್ಟಿದ್ದ ರಜಾ ಇನ್ನೊಂದು ತಿಂಗಳ ತನಕ ವಿಸ್ತರಿಸಲ್ಪಟ್ಟಿರುತ್ತದೆ

ಮರಮ್ಮತ್ ಇಲಾಖೆ,

ನಂ॥ ೪೧೯೯—೯೩ ತಾ॥ ೨೩ನೇ ಅಕ್ಟೋಬರ್ ೧೮೯೪—ಶಿವಮೊಗ್ಗ ಡಿವಿಜನಿಗೆ ಸೇರಿದ ಅಸಿಸ್ಟೆಂಟ್ ಇಂಜನಿಯರ್ ಮಿ॥ ಬಿ ಹಳಗಯ್ಯಂಗಾರರಿಗೆ ಅವರು ಪ್ರಯಾಣ ಹೊರಡುವ ತಾರೀಖ್ ಲಾಗಾಯಿತು ಒಂದೂವರೆ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ

ಮುಜರಾಯಿ ಇಲಾಖಾ

ನಂ॥ ೪೯೪—ತಾ॥ ೧೭ನೇ ಅಕ್ಟೋಬರ್, ೧೮೯೪—ಸಾಗರ ತಾಲ್ಲೂಕ್ ಕೆಳದಿ ಗ್ರಾಮದಲ್ಲಿರುವ ರಾಮೇಶ್ವರ ದೇವಸ್ಥಾನದ ವಿಚಾರಣೆಗಾಗಿ ಇವರುಗಳು ಧರ್ಮದರ್ಶಿಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ

೧ ಮ॥ ಕೆಳದಿ ದೇವಪ್ಪನವರು		ಸಭಾಸದರು
೨ ,, ಶಾನುಭೋಗ ಸುಬ್ಬರಾವ್		ಜಮೀನ್ದಾರರು
೩ ,, ಶಾನುಭೋಗ ಶಿವಣ್ಣ		
೪ ,, ಕರೂರ್ ಸುಬ್ಬರಾವ್		
೫ ,, ಅನಂತಿ ಚೆನ್ನಬಸಪ್ಪಗೌಡರು		

SUMMARY OF NEWS
ವೃತ್ತಾಂತ ಸಂಗ್ರಹವು

ಬರೋಡೆ ಸಂಸ್ಥಾನದ ಶ್ರೀಮಂತ ಮಹಾರಾಜರವರು ತಮ್ಮ ರಾಜ್ಯದ ಹಳ್ಳಿಯನ್ನು ಎನ್ನಬಹುದಾದ [illegible] ಕೊಟ್ಟರು ಒಂದು [illegible] ಬಳಿ ಬಿಟ್ಟಿದ್ದರು

ಯುನೈಟೆಡ್ ಸ್ಟೇಟ್ಸ್ ಎಂಬ ಸಂಯುಕ್ತ ರಾಜ್ಯಗಳಲ್ಲಿ ಭೂಮಂಡಲದಲ್ಲಿರುವ ಎಲ್ಲಾ ತೋಟಗಳಿಗಿಂತಲೂ ವಿಸ್ತಾರವಾದ ಉದ್ಯಾನವನವೊಂದು ಇರುವುದು ಅದರ ವಿಸ್ತೀರ್ಣವು ೩,೬೭೫ ಎಕರೆಗಳೆಂದು ಗೊತ್ತಾಗಿರುವುದು

೧೮೫೪ನೇ ಇಸವಿಯಲ್ಲಿ ಸ್ಕಾಟ್ಲೆಂಡ್ ದೇಶದವನೊಬ್ಬನು ಒಂದು ಲೋಟ ಗಿ ಕಸ್ಸಂ ಇಲ [illegible] ತಂದಿದ್ದನು ಅದರಲ್ಲಿ ಅವನಿಗೆ ಯಾವನ್ನು ದೊರೆಯಿತು ಪರಂತು ೧ ಲಕ್ಷ ವರ್ಷದಿಂದ ಅವನಿಗೆ [illegible] ಮೂರ್ ಹತ್ತಿತು

ಕರಾಚಿಯಲ್ಲಿ ಒಬ್ಬ ಹೆಣ್ಣು ಮಗು ಗೆ ಹೊಟ್ಟೆ ಕಡತದ ಉಪದ್ರವವು ಹೆಚ್ಚಾಗಿ ಪರ್ಯವಸಾನವಾಯಿತು ಒಬ್ಬ ವೈದ್ಯನು ಅವಳ ಹೊಟ್ಟೆಯೊಳಗಿಂದ ೬೬ ಡಿ ಉದ್ದ ಮತ್ತು ... ದಪ್ಪ ಇಂತಹ ದೊಡ್ಡದು ಹುಳವನ್ನು ತೆಗೆದನು, ಈಗ ಆ ಹೆಣ್ಣುಮಗಳು ಕ್ಷೇಮದಿಂದ ಳ—ಮಂ

ತಂಜಾವೂರು ಡಿಸ್ಟ್ರಿಕ್ಟಿಗೆ ಸೇರಿದ ಶಿಯಾಳಿನೆಂಬ ಎ ಪ್ರದೇಶದಲ್ಲಿ ಇರುವ ಐಶ್ವರ್ಯವಂತರಾದ ಪೊನ್ನುಸಾಮಿ ತಂಬಿರಾನ್ ಎಂಬವರು ಇಂಡಿಯನ್ ನ್ಯಾಷನಲ್ ಸಭೆಗೆ ೫,೦೦೦ ರೂಪಾಯಿಗಳು ಸಹಾಯ ಮಾಡಿದರೆಂದು ಅಂಕಪು ವಿಶೇಷತಃ ಕೊಂಡಾಡತಕ್ಕದ್ದಾಗಿರುವದಿ ಇವರು ಶೈವ ಮತಸ್ಥರಾದ ಪಂಡಾರ ಜಾತಿಯವರಿಗೆ ಗುರುಗಳಾಗಿರುವರೂ ಪ್ರಸಿದ್ಧರಾಗಿಯೂ ಇರುತ್ತಾರೆ

ಕಾಶೀ ಕ್ಷೇತ್ರದಲ್ಲಿ ಕೆಲವು ಹಿಂದೂ ಕ್ರೈಸ್ತ ಬಾಲಕರು ಮುಸಲ್ಮಾನರ ವಸ್ತುಗಳನ್ನು ವಿಧ್ವಂಸಕ್ಕೆ ಕಡದೊಯ್ದು ದೇವಿಯ ಗುಡಿಯೊಳಗೆ ಅನಾಚಾರ ಕೃತ್ಯ ಮಾಡಿದರು ಆಗ್ಯೆ ಆ ಹುಡುಗರಿಗೆ ಭಯಂಕರವಾದ ಕನಸು ಬಿತ್ತು, ಆಸ್ಥೆಯಿಂದ ಅವರು ಓಡಿಹೋದರು ಅಗ್ಯೆ ಮನೆಗೆ ಬಂದ ಕೂಡಲೆ ಜ್ವರ ಬಂದು ಎಲ್ಲ ಹುಡುಗರೂ ಸತ್ತುಹೋದರು ತರುವಾಯ ಆ ಗುಡಿಗೆ ಹೋಗುವಂತವರು ಭಯಂಕರವಾಗುವ ಧ್ವನಿಯನ್ನು ಕೇಳಿ, ದೇವಿಗೆ ಕೋಪ ಬಂದದ್ದರಿಂದ ಸನಾಥ ನವಾಯಿತ ದು ಹೇಳುತ್ತಾರೆ

ಇಂಗ್ಲೆಂಡಿನಲ್ಲಿ ಯುಕ್ತಿಹೀನನಾದ ಒಬ್ಬ ಬಿಕ್ಷುಕನು ಜೀವನ ಮಾಡುವದಕ್ಕೆ ಶಕ್ತಿಯಿಲ್ಲದೆ ವಿಲಕ್ಷಣವಾದ ಒಂದು ಉಪಾಯವಂ ಕಂಡು ಹಿಡಿದು ತನ್ನ ಕಾಲಕರಣ ಮಾಡುತಲಿದ್ದನು ಹ್ಯಾಗೆಂದರೆ ಅವನು ದಾರಿ ಬಳಿಗೆ ಹೋದಾಗ್ಯೂ ತನ್ನ ಮನೆಯ ಹೆಂಗಸರಿಗೆ ಕಾಗದ ಬರೆಯುವ ಕಾಲದ ತನ್ನಬಳಿ ಪೋಸ್ಟಲೆ ಬಿಲ್ಲಿಲ್ಲವೆಂತಲೂ ಅದನ್ನು ಕೊಂಡುಕೊಳ್ಳುವದಕ್ಕೆ ತನ್ನಲ್ಲಿ ಕಾಸಿಲ್ಲವೆಂತಲೂ ಹೇಳುತ್ತಾಇದ್ದನು ಅವರಮೇಲೆ ಜನರಿಗೆ ದಯೆಯುಂಟಾಗಿ ಅವನಿಗೆ ರೊಕ್ಕ ಕೊಡುತಲಿದ್ದರು ತನ್ಮೂಲಕ ಅವನು ಜೀವನಮಾಡುತಲಿದ್ದ ಒಂದು ಕಡೆಗೆ ಪೊಲಿಸರಿಗೆ ಎಡಲು ಅವನನ್ನು ದುಡ್ಡೀಮಾಡಿ ನೋಡಲಾಗಿ ಅವನಬಳಿ ಎಷ್ಟೋ ಚೀಟಿಗಳು ದೊರೆತವು

ನಮ್ಮಗಳಿಗೆ ಬರತಕ್ಕ ಜಾಡ್ಯಗಳು ಎಂತಾವು

ರಾತ್ರಿಯಲ್ಲಿ ಕಷ್ಟನಿದ್ರೆ ನಮ್ಮಗಳಿಗೆ ಇಲ್ಲದಿದ್ದರೆ ಜಾಡ್ಯಗಳು ನಮ್ಮಲ್ಲಿ ಪ್ರವೇಶ ಮಾಡುತವೆ ಸಾಧಾರಣವಾಗಿ ಮನುಷ್ಯಕೋಟಿಗಳಿಗೆ ಎದೆಯಲ್ಲಿ, ಪಕ್ಕೆಗಳಲ್ಲಿ ಕಟ್ಟಿಗಳು ಕಾಣುತವೆ ಆ ಕಾಲ ಕಲ್ಲಿ ಜನರು ಸಾಧಾರಣವಾಗಿ ಮಂದವಾಗಿ ವಿಶ್ರಾಂತರಾಗಿ ಬಾಯಲ್ಲಿ ಒಂದು ವಿಧ ವೈರಿ, ಇವುಗಳು ಪ್ರಾತಃಕಾಲದಲ್ಲಿ ಉದಯಕಾಲದಲ್ಲಿರುತವೆ ಬಳಿಕ, ದಂತಗಳಲ್ಲಿ ಪಾಚಿ ಅಂಟು ಸುತ್ತು ಕಟ್ಟಿಕೊಂಡು ಇರುತವೆ ಆ ಸಮಯಗಳಲ್ಲಿ ಆಹಾರವು ಕಮ್ಮಿ, ಗರ್ಭದಲ್ಲಿ ಒಂದು ಬಗೆ ಎಂಠವು, ಕೆಲವು ವೇಳೆಗಳಲ್ಲಿ ವಾಕರಿಕೆ, ಗರ್ಭದ ಅಸ್ವಾಸ್ಥದಲ್ಲಿ ನೋವು, ಭೋಜನದಲ್ಲಿ ಅತೃಪ್ತಿಯು, ಕಣ್ಣುಗಳು ಆಳಕ್ಕೆ ಎಳಕೊಂಡು ಇರೋದು, ಕೈಕಾಲುಗಳು ಹಿಂದಕ್ಕೆ ಶೀತಲವು ಆ ಮೇಲೆ ಕೆಮ್ಮು ಆರಂಭಿಸಿ ಸ್ವಲ್ಪ ಎಂಗಳಾದ ನಂತರ ಆ ಕೆಮ್ಮಿನಿಂದ ಬಾಯಲ್ಲಿ ಹಳದಿಯವರ್ಣದ ಗಳ್ಳೆಸ ಕೆಕರಿಸೋದು ಇತ್ಯಾದಿ ಕಾರಣಗಳಿಂದ ಜಾಡ್ಯಗ್ರಸ್ತನು ವಿಶೇಷ ಆಯಾಸವನ್ನು ಹೊಂದೋದು, ನಿಶ್ಶಕ್ತಿಯು, ತತ್ಕಾರಣದಿಂದ ಜಾಡ್ಯಗ್ರಸ್ತನಿಗೆ ಒಂದುಬಗೆ ಪಿತ್ತದ ರೋಗ ಜ್ವರ, ಮೆಚ್ಚಿನ ಮನಶ್ಯಾಂತಿ, ಕೆಟ್ಟ ವ್ಯಸನದಲ್ಲಿ ಎಡೆ ಉಂಟು ಮಾಡುತವೆ ಇದು ಬರಬರುತಾ ತಲೆಯಲ್ಲಿ ವಿಶೇಷ ದೃಷ್ಟಿಕವಾದ ತಿರುಗುವು, ಆಕಸ್ಮಾತ್ತಾಗಿ ಮಲಬದ್ಧ ಕಾಣುತವೆ ಆ ಪರ ಮಾಯ ಗರ್ಭದಲ್ಲಿ ಕೆಲವುಗಳು ಬಿಗಿದು ಮಲಬದ್ಧ ನೋವು, ಶರೀರದ ಚರ್ಮವನ್ನು ಒಣಗಿಸಿ, ಉಷ್ಣವಾಪಿ, ರಕ್ತವನ್ನು ಮಂದವಾಗಿ, ಶರೀರದ ನಡುವಿನ ನೋವು ಬಿಡದೆ, ಕಣ್ಣುಗಳಲ್ಲಿರುವ ಸಾಧಾರಣವಾದ ಬಣ್ಣವನ್ನು ಬದಲಾಯಿಸಿ, ಕಣ್ಣುಗಳಲ್ಲಿ ಹಸರು ವರ್ಣಗಳು, ಉಷ್ಣತೆಯವು ಕಮ್ಮಿ, ಇಲ್ಲದ ಕೆಡಿಮೆಯಾಗಿ, ಅದರಲ್ಲಿ ವಿಶೇಷವಾದ ಸಾಧಾರಣವಾಗಿ ಮೂತ್ರವು ಒಂದು ಕಡೆ ಯಂತ ಆದಗಳು ಸೇರಿ ಮಂದಿಕ್ರಿಯನ್ನು ಕಲ್ಲನಂಗೆ ಮುಂದವಾಗುತವೆ ಆ ಕಾರಣಗಳಿಂದ ಬಿಸಿಯಾದ ಅನ್ನವನ್ನು ಉಣುವರು, ಆ ಹಸಿದ ಅನ್ನವು ಬಾಯಲ್ಲಿ ಕೆಟ್ಟ ಹುಳಿ ಯಾಗಿರುತವೆ, ಮತ್ತು ಎದೆಯಲ್ಲಿ ಅದರು, ಕಣ್ಣು ದೃಷ್ಟಿ ಕೆಡೆಸೋ, ಕಣ್ಣುಗಳಲ್ಲಿ ಮಬ್ಬಾಗೋದು, ವಿಶೇಷವಾಗಿ ಶರೀರದ ಒಳಗಿನ ಚರ್ಮಕ್ಕೆ ಇತ್ಯಾದಿ ಚಿಹ್ನೆಗಳುಯೂ ಮತ್ತು ಕ್ರಮೇಣ ಕಾಲ ನೆ ಈ ವಿಧದ ಚಿಹ್ನೆಗಳು ಆವಿರ್ಭವಿಸುವ ಕಾಲದಲ್ಲಿ ಜನರಲ್ಲಿ ಪರಿಪರಿವಿಧವಾಗಿ ಕಾಣಸುತ್ತ ಅನೇಕ ಬಗೆಯನ್ನು ವೈದ್ಯರೀತಿಯ ರ ನಾಟಕ ಪರಿಶೋಧನೆ ಮಾಡುತ್ತಾರೆ ಆಯುರ್ವೇದ ವೈದ್ಯರು ಮನಸ್ಸಿಗೆ ತೋರಿದ ಚಿಕಿತ್ಸೆ ಮಾಡುವರು, ಇತ್ಯಾದಿ ಕಾರಣಗಳಿಂದ ಈ ವ್ಯಾಧಿಗಳು ಸ್ಪಷ್ಟವಾಗದೆ ಹೋಗುತವೆ ಇದಕ್ಕೆ ಬದ್ಧಗಳಿಗೆ ಸಾಧಾರಣವಾದ ಹೆಸರು ಅತಿ ದುರ್ಲಭವೆಂದು ಮಾಡಿದ ವಿಷಯವನ್ನು ಸರಿಯಾಗಿ ಹೇಳದೆ ವೈದ್ಯರು ಸಾಧಾರಣವಾಗಿ ಅಜೀರ್ಣವೆಂದು ತಪ್ಪು ಚಿಕಿತ್ಸೆ ಮಾಡುತ್ತಾರೆ ಮತ್ತೊಂದು ವಿಧವಾದ ಚಿಕಿತ್ಸೆಯನ್ನು ಮಾಡುವದರಿಂದ ಜಾಡ್ಯಗಳು ಸ್ವಸ್ಥವಾಗದೆ ಇರುತವೆ

ಮುಂದೆ ವಿವರಣೆ ಮಾಡಿದ ಚಿಹ್ನೆಗಳನ್ನು ನಿರೂಪಿಸಿ ಶಾಂತಿ ಮಾಡತಕ್ಕ ಔಷಧವು ತಾಯಿಶೀಗಲು ಕಷಾಯವು ಈ ಕಷಾಯವನ್ನು ಕ್ರಮವಾಗಿ ಸೇವನೆ ಮಾಡುವದರಿಂದ ಆ ವ್ಯಾಧಿಗಳನ್ನು ಅಡಗಿಸುತ್ತ ಆ ಜನ್ಮದ ಗುಣವು ಮೂಡಿ ಶರೀರಕ್ಕೆ ಬಲವನ್ನು ಕೊಟ್ಟು ಬಲಿಷ್ಠವಿಲ್ಲದವಗೆ ಸ್ವಸ್ಥ ಮಾಡುತದ

ರಾಮು ಶೇಟ್ ಕಷಾಯದ ಔಷಧದ್ರವ್ಯ ಕೆಮಿಸ್ಟ ಅಂಗಡಿಯಲ್ಲಿ ಅಸ್ಪತ್ರೆ ಬಳಿಯ ಗಲ್ಲಿ ವಿಕ್ರಯಕ್ಕೆ ಸಿಕ್ಕುತವೆ

W D

ADVERTISEMENTS

ನೋಟೀಸ್

ಚಿತ್ರಲೇಖನ ಕಾರ್ಯದಲ್ಲಿ ಪ್ರಖ್ಯಾತರಾದ ರಾಜಾ ರವಿವರ್ಮ ಎಂಬವರಿಂದ ತಯಾರಿಸಲ್ಪಟ್ಟಿರುವ
ಶಕುಂತಲಾ ಜನ್ಮದರ್ಶನ

ಎಂಬ ಚಿತ್ರಪಟವು ಇಪ್ಪತ್ತೊಂದು ತರದ ಎಣ್ಣೆ ಬಣ್ಣಗಳುಳ್ಳದ್ದಾಗಿಯೂ, ಅತಿ ರಮಣೀಯವಾದುದಾಗಿಯೂ, ಪ್ರತಿಯೊಬ್ಬರು ತಮ್ಮ ಮನೆಯನ್ನಲಂಕರಿಸುವದಕ್ಕೆ ಅತ್ಯಂತಾವಶ್ಯಕವಾದ ಪದಾರ್ಥವಾಗಿಯೂ ಇರುವುದು ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುವ ವರ್ಣನೆಯು ಈ ಚಿತ್ರಪಟದಲ್ಲಿ ಪ್ರತ್ಯಕ್ಷವಾಗಿ ಕಂಡುಬರುವ್ವದು, ಮೇನಕೆಯು ತನ್ನ ಶಿಶುವಾದ ಶಕುಂತಲೆಯನ್ನು ವಿಶ್ವಾಮಿತ್ರ ನ ಪರ್ಣಶಾಲೆ ಬಳಿ ಒಪ್ಪಿಸುವ ಸಂದರ್ಭವನ್ನು ನೋಡುವಾಗ ಎಂಥವರಿಗೂ ಮನವು ಮೋಹಗೊಳ್ಳದಿರಲಾರದು ಹೊರಗಿನ ಸಂಚಾರದಿಂದ ದಣಿದು ಮನೆಗೆ ಬರತಕ್ಕವರು ಈ ಚಿತ್ರಪಟವನ್ನು ನೋಡಿದಕೂಡಲೇ ಸಂಚಾರದಿಂದುಂಟಾದ ಶ್ರಮವನ್ನೆಲ್ಲ ನಿವೃತ್ತಿಮಾಡಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವುದು.

ಪಟದ ಆಕಾರ—ಉದ್ದ ೩೬ ಅಂಗುಲ, ಅಗಲ ೨೬ ಅಂಗುಲ ಕ್ರಯ—ರೂ॥ ೬—೦—೦ ಚೌಕಟ್ಟಿನ ಬಾಬತ್ತು, ವಿ.ಪಿ ಪಾರ್ಸಲ್ ಪ್ರತ್ಯೇಕ ಕೊಡಬೇಕು

ಚಿತ್ರಕಲಾನಿಪುಣರಾದ ಮೇಲಿಕಂ ಡನಲಂದ ನೂತನವಾಗಿ ವಿರಚಿತಗಳಾದ
ಲಕ್ಷ್ಮೀ ಸರಸ್ವತೀ
ಚಿತ್ರಪಟಗಳು

ಲಕ್ಷ್ಮಿಯು ಸರೋವರ ದೊಳಗಿನ ಪಂಕಜದಲ್ಲಿ ಕುಳಿತು ಶಿರೋಭೂಷಣಾಲಂಕಾರಯುಕ್ತಳಾಗಿ ಅಭಯ ಹಸ್ತದಿಂದೊಡಗೂಡಿರುವಳು. ಸರಸ್ವತಿಯು ಶಿರೋಮಣಿಯಾಗಿ ಚತುರ್ಭುಜಗಳೊಡನೆ ಯೆರಡುಹಸ್ತಗಳಿಂದ ರುದ್ರವೀಣೆಯನ್ನು ರಿಸುತ, ಇನ್ನೊಂದು ಕೈಯಲ್ಲಿ ಪುಸ್ತಕವನ್ನೂ, ಮತ್ತೊಂದು ಕೈಯಲ್ಲಿ ಪುಷ್ಪಮಾಲೆಯನ್ನೂ ಧರಿಸಿರುವಳು ಈ ಪಟಗಳು ಅತ್ಯಂತ ರಮ್ಯವಾದವುಗಳಾಗಿಯೂ ಮನೋಹರ ಗಳಾಗಿಯೂ, ಗೃಹಾಲಂಕಾರಾರ್ಹಗಳಾಗಿಯೂ, ದರ್ಶನೀಯಗಳಾಗಿಯೂ ಇರುತ್ತವೆ

ಲಕ್ಷ್ಮೀಪಟದಾಕಾರ — ೩೦ x 28 ಅಂಗುಲಗಳು
ಸರಸ್ವತೀಪಟದ ಆಕಾರ — ಡಿಟೋ "
ಇವುಗಳ ಕ್ರಯ ತಪಾಲ್ ಸಹಿತ ರೂ॥ ೨

ಈ ಪಟಗಳನ್ನಪೇಕ್ಷಿಸತಕ್ಕವರು ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಅವು ವ್ಯಾಲ್ಯೂಪೇಯಬಲ್ ಪೋಸ್ಟ್ ಮೂಲಕ ಬಹುಬೇಗನೆ ರವಾನಿಸಲ್ಪಡುವವು

ವಿ ಕಾನಟ್ ಮತ್ತು ಕಂಪೆನಿ,
ಸೋಲ್ ಏಜಂಟ್ಸ್,
ಗಿರ್ಗಾಂ ಮುಂಬೈ

NOTICE.

VAIDYASARA SANGRAHA
A TREATISE ON THE PRINCIPLES OF
HINDU MEDICINE
Price including Postage Rs 5—0—0

ವೈದ್ಯಸಾರ ಸಂಗ್ರಹ

ಇದರ ಕ್ರಯ—ಗ್ಯಾರಂಟಿ ಮತ್ತು ಅಂಚೆ ಹಾಸಲ್ ಲೇಬಲ್, ಪ್ರತಿ ಒಂದಕ್ಕೆ ರೂ ೫ 0—0

ನೋಟೀಸ್.

ಬೆಂಗಳೂರ್ ಕರ್ನಾಟಕ್ ಪ್ರೆಸ್
೧೮೮೫ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

ಇದರಲ್ಲಿ ಸಕಲವಿಧ ಕೆಲಸಗಳೂ ಸುಲಭ ಬೆಲೆಗೆ ತೀವ್ರವಾಗಿಯೂ ಅಚ್ಚುಕಟ್ಟಾಗಿಯೂ ಮಾಡಲ್ಪಡುವವು.
ಇದರಲ್ಲಿ ಸದ್ಯಃ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುವವು ಇತರ ದೇಶೀಯಗಳನ್ನು ಗದರ ಕಾಲ ದ ನೆಡು ಪ್ರೊಪ್ರೈಟರಿಗೆ ಬರಮಾಡಿಕೊಳ್ಳಬಹುದು

THE KARNATAKA PRAKASIKA.
ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಸ್ಥಳೀಯರಿಗೆ ಸಾಲಿಯಾನಕ್ಕೆ	3—0—0
ಪರಸ್ಥಳದವರಿಗೆ ಸಾಲಿಯಾನಕ್ಕೆ	4—0—0

ಮುಂಗಡವಾಗಿ ಚಂದಾಹಣ ಬರದ ಹೊರತು ಕಳುಹಿಸುವಂತವರಿಗೆ ಮಾತ್ರವೇ ಈ ಪತ್ರಿಕೆ ಕಳುಹಿಸಲ್ಪಡುವದು ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಹಣಗಳು ಅಂಗೀಕರಿಸಲ್ಪಡಬಾರದು.

ಪ್ರಕಟನೆಯ ರಿವಾಜ್.

ಮೊದಲನೆಯದು, ಒಂದು ಪಂಕ್ತಿ ಒಂದಕ್ಕೆ	೦—೨—೬
ಎರಡನೆಯದು ಪಂಕ್ತಿ ಒಂದಕ್ಕೆ	೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುತರವೆ ಪ್ರಕಟನೆ ಮಾಡಿಸುವಾಗ್ಯೂ ಒಂದು ಪಂಕ್ತಿಗೆ ೧ ಆಣೆಯಂತೆ ತೆಗೆದುಕೊಳ್ಳಲ್ಪಡುವದು ಈ ಪತ್ರಿಕೆಯಲ್ಲಿ ಪ್ರಕಟನೆಗಳನ್ನು ಕಳುಹಿಸತಕ್ಕವರು ಅವು ಎಷ್ಟಾವರ್ತಿ ಪ್ರಕಟನೆ ಮಾಡಲ್ಪಡಬೇಕೋ ಆ ಅಂಶವನ್ನು ತಮ್ಮ ಕಾಗದದಲ್ಲಿ ಸ್ಪಷ್ಟವಾಗಿ ತಿಳಿಸತಕ್ಕದ್ದು ಇಲ್ಲದಿದ್ದರೆ ಅವರು ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸಲ್ಪಡುವವಲ್ಲದೆ ಅವುಗಳಿಗೆ ಮೇಲ್ಕಂಡ ದರದಂತೆ ಚಾರ್ಜು ವಸೂಲ್ಮಾಡಲ್ಪಡುವುವು

BANGALORE —Printed and Published at the KARNATAKA PRESS, No 10 HOSPITAL ROAD, CITY—1894

THE

Karnataka Prakasika.

ಕರ್ನಾಟಕ ಪ್ರಕಾಶಿಕಾ.

Published Every Monday Morning.

[illegible Kannada motto]

VOL. XXI. BANGALORE:—MONDAY, NOVEMBER 5, 1894. No. 44.

Select Telegrams

London, 27th Oct.—Lord Rosebery speaking at Bradford to-day, [illegible] the [illegible] of [illegible] Chamber of the United Kingdom, [illegible] the present [illegible] House of Lords was an [illegible] to [illegible]. His Lordship [illegible] Majesty's Government would ask the House of Commons at an early day to [illegible] the [illegible] of the House affirming the [illegible] of the House of Commons against an irresponsible second House of Legislature, and that the House of Commons is the predominant legislative power of the United Kingdom. [illegible] will represent [illegible] demand of Government and the House of Commons for a revision of the British Constitution. If defeated the Premier said, Government will appeal to the verdict of the country.

According to the news received here the Chinese [illegible] from Kinlien Castle at the approach of the enemy. The Japanese captured thirty guns and a large quantity of war material in Kinlien Castle.

Simla, 27th Oct.—Mr. Macpherson, Deputy Secretary to the Government of India, has now completed his work in connection with British [illegible] in Native States and the work will be published by the Government of India almost immediately.

London, 29th Oct.—Telegrams received here from China show that the panic and flight of the Chinese Army at Yalu has completely dismayed the Chinese. The roads to Moukden and Pekin are now open.

Her Majesty the Queen has been pleased to confer the Order of the Garter on the Marquis of Lansdowne.

Poona, 29th Oct.—The statement made in my telegram on Saturday that the Sessions Judge [illegible] verdict of the jury [illegible] members of [illegible] was [illegible], the Judge having [illegible] deferred judgment till to-day as there was no time to write his judgment that day.

His Honour delivered judgment to-day in which he stated [illegible] to differ from the opinion of the [illegible] which was based on the fact that there [illegible] evidence regarding the [illegible] of [illegible] on [illegible]. The Judge [illegible] of witnesses [illegible] and acquitted all the accused.

The [illegible] crowded and great satisfaction expressed with the judgment by the crowds present.

London, [illegible] Oct.—[illegible]graphic despatches received here state that the Japanese have succeeded in capturing one of the forts of Port Arthur.

Philadelphia, 30th Oct.—The United States Minister of China has telegraphed [illegible] that the Chinese have again been defeated by the Japanese at [illegible]-ching and compelled to retreat to Moukden.

St. Petersburg, 30th Oct.—The latest bulletin regarding the Czar's condition states that *His Majesty's left lung is inflamed.* He is spitting blood, his cough is increasing, and he is in a dangerous condition.

Paris, 30th Oct.—The principal organs of the French Press are irritated at the nomination of Mr. Gorst to the Egyptian Ministry of the Interior. The French colonial party has resolved to raise at an early date a discussion in a determined manner on the Egyptian Question in the Chamber of Deputies.

The nomination of Prince Hohenlohe as Chancellor to the German Emperor is favourably received throughout France. The Prince was eleven years German Ambassador to France and is very popular at Paris.

London, 30th Oct.—The Liberal newspapers of Great Britain heartily applaud Lord Rosebery's resolute [illegible] Bradford [illegible] the [illegible] of dealing with the House of Lords.

The Unionist Press, commenting on Lord Rosebery's Bradford speech, [illegible] the view that English electors [illegible] the House of Lords in order to pass a Home Rule Bill.

Berlin, 30th Oct.—The Emperor William has conferred the Black Eagle on Count Von Caprivi.

London, 1st Nov., [illegible]—The Czar is dead.

Paris, 1st Nov.—A great sensation has been caused here owing to Captain Dreyfus, of the General Staff having been arrested on a charge of treason for divulging the French plans of defence and [illegible] to Italy and Germany.

THE

Karnataka Prakasika.

MONDAY, NOVEMBER 5, 1894.

THE DASSARAH ADDRESS.

We shall in to-day's issue take up the subject of Agricultural Banks, as the subject was introduced for the first time into an address of this kind. It is true they have been talked about in other parts of India, and their establishment has been strenuously advocated. Sir William Wedderburn when in India was much in favour of such institutions. He had seen a great deal of the Deccan, he knew the poverty of the ryots, and he thought matters could be remedied if such banks were established. So he put his views before Government, but without effect. It would not listen to him, or, at least, would not adopt the scheme he brought forward. The authorities were of opinion that the scheme would prove a failure if steps were taken to set it going. The ryots would not understand the principles on which it was worked, and if they borrowed money they would not be very willing to repay it. Then again, it was objected that if the Government established these banks it would become the creditor of the ryots, and thus would render itself unpopular. It would not only have to collect the land tax, but it would also have to collect the instalments on the principal borrowed. Thus, it was said, the Government would become the creditor of its own ryots, and this would not be productive of good. There is a great deal to be said in favour of this view of the question, and it is a pity that some other scheme could not have been thought of. The Dewan's scheme is somewhat different from that put forward by Sir William Wedderburn, but whether it is more feasible may be open to doubt. He proposes that the ryots should form themselves into a company, that they should collect money, and lend it out among themselves. In other words, there should be in every district a bank the shareholders of which form themselves into a joint stock company. They must lay down rules for the guidance of the banks, and these rules must not be broken. There should be no share capital, the funds required by a bank being obtained by means of loans [illegible] or [illegible]. We question whether this would answer. Such a concern would have only a hand-to-mouth sort of existence, and it might burst up at any moment. It is much better share capital if an institution of the kind is to do any good, and it would be only by the greatest care that a [illegible] would be kept in existence without it. The banks are not only to be on the joint stock principle, but on the co-operative also. Profits are not so much to be considered as the good of the community, and each man is to consider his neighbour's benefit as well as his own. In this world such a principle does not act well. When people invest their money they look for profit, and as much as they can make. It is to be feared the Dewan is of opinion that men will be willing to do more for their fellowmen than is the case in the affairs of life, and that something more, in accordance with [illegible] as they are, will have to be tried. Then we are told that the affairs of such a bank are to be managed by a body elected from among the members themselves, and that they must give their services gratuitously. This would never answer. Somebody must be paid to carry on the business, or to do the greater part of the work, and it is our opinion that if this is not done a bank would soon come to grief. In fact the plan described by the Dewan does not appear to be framed on sufficiently business-like principles. Too much would [illegible] to [illegible] and the disposition of those who assist in getting up a bank, and it might be that they would ruin it in a short time. We think the Dewan is right in restricting the money granted, as a rule, to agricultural purposes, now and then, and as a special case, a loan may be granted for domestic requirements, but this must be the exception. It is to be feared that the borrowers would not confine themselves to these banks. They would in all probability get as much as they could from them, and then try to obtain more from the sowcar. [illegible] the object for which a bank was established would be defeated. Should these banks be established great care would have to be taken to prevent the ryots borrowing elsewhere, for, should they do so their condition would be [illegible] worse by the attempt made to [illegible] them. But we are not without an example to guide us. A Mr. Milne, a Zemindar in Northern India, established such banks for the benefit of his tenants, and the result was anything but satisfactory. It is true that the ryots borrowed the money, but they did not show any [illegible] will [illegible] to repay it when the instalments became due. They wanted a [illegible]—to [illegible] this word—to be remitted. Much trouble was caused in getting [illegible] from [illegible] of the borrowers. They thought that as the Zemindar was rich he should not trouble himself about their repayments. But Mr. Milne was strict on this point and thus did not increase his popularity with his tenants. [illegible] he tells us they borrowed in other places, and often found it difficult to pay him even if they were willing. This is an evil that would have to be guarded against should banks be established in Mysore or in the British territory. In the next place Mr. Milne was disappointed with regard to what might be called the training power of his bank. He was of opinion that the institution he had brought into being would teach the ryots habits of economy; that they would not be so apt to run into needless expenditure. But he did not find this to be the case. The more money they were able to obtain the more they spent, and thus the object—or one of the objects—for which the bank was established was defeated. A bank of the kind might do good, but great care would be required. However, we should like to see the experiment tried on a small scale, and perhaps the Government of His Highness will do this.

News and Notes.

RAJAH GANAPATHI RAO has subscribed Rs. 1,000 to the Victoria Hostel Fund.

A New York dog, whose eyesight is affected, is daily seen wearing a pair of spectacles.

THE *Times* reaps nine thousand pounds a year by its Births, Marriages and Deaths column.

SOME Chinese and many Africans use the ear as a pocket to carry coins and other small articles.

THE Hon'ble Dr. Rash Behary Ghose, says the *Dainik*, has gone to England to enrol himself as a Barrister-at-Law.

THE rule prohibiting the defacement of postage stamps by rubber stamps comes into force on the 1st November.

JEWELLERS declare that the regularity of the running of a watch depends upon the magnetism of the man who carries it.

A telegram from Rangoon states that the ruby mines are gradually being deserted by the workers, who declare that the fees are too high and that the whole business is badly managed from a commercial point of view.

A COMMITTEE in London having addressed a remonstrance to the Government of Alabama regarding the recent lynching of two negro criminals in that State, his Excellency replied sharply censuring their interference in the internal concerns of his country as unauthorized, and also likely to defeat its professed object.

RURAL teachers in England declare, and are about to inform the Minister for Education, that the continual increase of subjects in the education curriculum is having a serious effect on the value of the teaching and on the scholars. It is asserted that this evil effect is having an expression in perfunctory instruction and indifferently taught scholars.

THE GAEKWAR AND MAHARANEE OF BARODA have brought their visit to England to a close. They started from London on the 12th instant, for the Continent and their destination is, in the first instance, Lucerne. Next month they go to Trieste, where the Maharanee and possibly the Gaekwar will embark for India. It will doubtless be a matter of sincere gratification to His Highness's subjects if his health is sufficiently re-established to enable him to return to his State at an early date.

It is stated that there are many "Suicide Clubs," especially in America. A man on joining one of those clubs has to fix a date for his own death, and he is bound by oath to kill himself when that date comes. If the [illegible]

-ment is not carried out, he forfeits the respect of all right-minded suicides. If he is bent upon fulfilling the contract, he must, previous to his committing suicide, leave a letter for the Coroner in the following words ' Dear Sir I have committed suicide as per Club Please give credit to such effect and oblige '

An authoritative statement has at last been made on the subject of Mr Gladstone's and Lord Tweedmouth's famous contributions to the funds of the Irish Parliamentary party Mr J F. X O'Brien, M P, who is the Treasurer of the Fund, states that by direction of the Committee of the Irish party, all British contributions to the fund have been returned save Mr. Gladstone's cheque alone, and that has been retained because Mr Gladstone is no longer an official member of the Liberal party, but principally because its sender was Mr. Gladstone

It has been proposed that legislation should be undertaken with a view to facilitating the *pursuit and arrest of criminals who, after committing dacoity or other heinous offences in* Native States, take refuge across the border in India For this it would be necessary to amend Section 54 of the Criminal Procedure Code and Section 15 of the Extradition Act It has been further proposed (*a*) that accredited police officers of Native States should be allowed, under proper conditions, to pursue and arrest dacoits in British India, and (*b*) that Punjab Native States should be invited to reciprocate the action taken by the Government of India in this matter, so as to facilitate the pursuit and arrest of fugitives from British India.

Mr H C Williams, Commissioner of the Presidency Division, in his interesting annual report gives an account of the local Native Press — Of the vernacular papers published in Calcutta, the following are the most important— The *Bangabasi* estimated circulation 20 000, the *Banganibasi* 8,000, the *Sanjivani* 4,000, the *Samaya* 4,000; the *Sulabh-Dainik* 3 000, the *Hitabadi* 3,000, the *Bharat Mitra* 2 000, the *Sudhakar* 2,000; the *Dainik* 1,000, the *Soma Prakash* 800, the *Sahachar* 500, the *Bangabasi*, *Dainik*, and *Banganibasi* are orthodox in their views as regards social and religious matters. The *Sanjivani*, which is an organ of the Sadharan Brahma Samaj, and the *Samaya* are heterodox in social and religious questions and advocate the cause of ryots and coolies The *Hitabadi* supports the Congress and is liberal in social matters The *Sudhakar* is an orthodox Mahomedan paper which is of use as showing what Mussalmans think of controversial questions The *Sahachar*, edited by a senior Pleader of the Alipur Judge's Court, is generally moderate in its views, and language Of the English newspapers, conducted by Natives, the *Indian Mirror, Amrita Bazar Patrika, Reis and Rayyet, Hindu Patriot, Indian Nation, Hope and Bengalee* are largely read and are generally conducted with considerable literary skill The tone of the Press, as reflected in the Native press, has been as hitherto generally antagonistic to the Legislative and administrative actions of Government They are also apt to criticise unfavourably the actions of Government officers of all ranks. *Their great object* seems to be to hamper Government in every way

Local and Provincial.

The British Resident —Colonel Henderson who went to Bombay on Friday last, will return to Bangalore on Thursday next

The Maharajah —Intends proceeding to Calcutta early next month. His Highness and suite will proceed there by railway not by sea

The Governor of Bombay —It is said that Lord Harris, the Governor of Bombay, will pay the Maharajah a visit at the end of this month

The Commander In Chief —His Excellency the Commander-in-Chief left last Saturday for Belgaum and will return to Bangalore on the 11th instant

The Dewan — Sir K Seshadri Iyer returned from the capital on Tuesday last It is said that he will not remain here long, but will go back to Mysore

The Mysore Races —We are told that a sum of Rs. 5,000 and odd has been paid out of the Treasury on account of the expenses incurred during the late races at Mysore

We are glad to inform the public that Mr Shamiengar, Superintendent of Kheddahs, entrapped 10 elephants in the Sakrebyle Kheddahs, Shimoga District, on the 29th ultimo, at 7 30 P. M

Death of a Murderer —The man Smith, who shot his wife, and then tried to kill himself, died in the City Hospital, last Thursday He was not expected to recover from the first

The Weather —We had a good deal of rain last week, and the weather is now very cold We have seldom known it to be so cold at this time of the year There are signs of more rain and there is every chance of a good monsoon

Munificence of the Maharajah —During the Dasara festivities a number of musicians —songsters and songstresses, had come to Mysore, and all of them were permitted to visit His Highness the Maharajah We learn that His Highness expended something like Rs 10,000 in rewarding these children of the Muses —*Mysore Herald*

City Improvement Committee —The Pettah Municipal Board have agreed to comply with the wishes of the Durbar and have resolved to delegate their powers to the City Improvement Committee within the western and northern extensions, the limits of which are well defined, subject to the formal ratification by the Board of any action taken by the Committee —D S

The Bangalore City Station —Subsequent to the sanctioning of the estimate for carrying out the alterations and additions to the Bangalore City Station (which is now the junction station of the Madras, Southern Mahratta, and Mysore State Railways), further improvements have been desired, and a supplemental estimate amounting to Rs. 1,37,402 for carrying them out has been sanctioned by the Board of Directors of the Madras Railway

A Royal Shikari —The Maharajah of Dholepur, known as the Rana of Dholepur, one of the important states in Rajputana, who has for some time past been sojourning in Ootacamund, has come to the Kakankote forests on a shooting excursion The large number of bisons with which some of our Forests abound, and the rogue elephants of Kakankote which have hitherto successfully baffled the strictest vigilance of our Kheddah Superintendent, will provide him with enough of sporting The Rana arrived at Kakankote on the 24th ultimo He intends stopping there for 10 days, and will then go back to Ootacamund —M H

The Mysore Gazette.

Bangalore, Thursday, November 1 1894

Notifications by the Government of His Highness the Maharajah of Mysore.

The 24th October 1894

Under Section 12 of the Code of Criminal Procedure, B Shankaraiya, B A, Amildar and third class Magistrate of the Belur Taluk, is appointed a Magistrate of the second class, and under Section 37, he is invested with the following powers specified in the fourth schedule as additional powers which Government may confer on a Magistrate of the said class —

(1) Power to make orders prohibiting repetitions of nuisances, Section 143

(2) Power to make orders under Section 144

(3) Power to hold inquests, Section 174

(4) Power to take cognizance of offences upon complaint, Section 191

(5) Power to take cognizance of offences upon Police reports, Section 191

(6) Power to take cognizance of offences upon information, Section 191

II He is further invested with power to try cases under Act XIII of 1859 arising in the Belur Taluk. The jurisdiction of the Amildar-Magistrate of the Manjarabad Taluk in this respect in the Belur Taluk is hereby withdrawn

The 25th October 1894

Under Article 188 of the Mysore Service Regulations, D. Madhava Rao, Deputy Amildar of the Srinivaspur Sub-Taluk, *is granted* privilege leave of absence for one month with effect from the 24th of September 1894

2 D Shamanna, Sheristadar of the Kolar Taluk, is appointed to act as Deputy Amildar and third class Magistrate of the Srinivaspur Sub Taluk during the absence of D. Madhava Rao on leave

Mr P Parameshwara Iyer, Assistant Commissioner, doing duty in the Dewan's offices having availed himself of the $1\frac{1}{2}$ months' privilege leave granted to him in Notification No 2166—G 480, dated 4th August 1894, from the 1st idem and returned to duty on the forenoon of the 14th September 1894, the unexpired portion of the leave is hereby cancelled.

The 28th October 1894

Under Section 12 of the Code of Criminal Procedure, Mr B J Kumaraswami Naik, B A Assistant Commissioner and second class Magistrate, Tumkur District, is appointed a Magistrate of the first class, and under Section 37 he is invested with the following powers specified in the fourth schedule as additional powers which Government may confer on a Magistrate of the said class —

(1) Power to require security for good behaviour, Section 110

(2) Power to make orders as to local nuisances, Section 133

(3) Power to make orders prohibiting repetitions of nuisances, Section 143

(4) Power to make orders under Section 144

(5) Power to hold inquests, Section 174

(6) Power to issue process for person within local jurisdiction who has committed offence outside the local jurisdiction Section 186

(7) Power to take cognizance of offences upon complaint, Section 191

(8) Power to take cognizance of offences upon Police reports, Section 191

(9) Power to sell property alleged or suspected to have been stolen, &c Section 524

2 He is further directed under Section 357 of the said Code to take down the evidence in his own hand in the English language

ಕರ್ಣಾಟಕ ಪ್ರಕಾಶಿಕೆ.

೧೮೯೪ ನೇ ಇಸವಿ ನವಂಬರ್ ೫ ನೇತಾ|| ಸೋಮವಾರ.

ರಷ್ಯಾಚಕ್ರವರ್ತಿಯವರ ಮರಣ ವೃತ್ತಾಂತವಂ ಕುರಿತು.

ರಷ್ಯಾ ಚಕ್ರವರ್ತಿಯವರ ಶರೀರ ಸ್ಥಿತಿಯಂ ಕುರಿತು ಗತವಾರದಲ್ಲಿ ಬಂದ ತಂತಿ ವೃತ್ತಾಂತಗಳೆಲ್ಲವು ಅಪಾಯ ಸ್ಥಿತಿಯಂ ಸೂಚಿಸುತ್ತಾ ಇದ್ದವೇ ಹೊರತು ಅವರ ಜೀವಿತಾಶೆಯನ್ನುಂಟು ಮಾಡತಕ್ಕದ್ದಾಗಿರಲಿಲ್ಲವು. ಆದುದರಿಂದ ಎಲ್ಲರೂ ಚಕ್ರವರ್ತಿಯವರ ಮರಣ ವೃತ್ತಾಂತವು ಯಾವ ಸಮಯದೊಳು ತಿಳಿಯ ಬರುವದೋ ಯೆಂದು ನಿರೀಕ್ಷಿಸುತಲಿದ್ದರು. ಅದಕ್ಕನುಸಾರವಾಗಿಯೇ ಮಾಹೇ ಅಕ್ಟೋಬರ್ ಗು ೧ ನೇ ತಾರೀಖಿನಲ್ಲಿ, ರೂಟರನವರ ತಂತಿವೃತ್ತಾಂತದ ಮೂಲಕ ಚಕ್ರವರ್ತಿಯವರಿಗೆ, ಅಪರಾಹ್ನ ೨ ಘಂಟೆ ೧೫ ನಿಮಿಷಗಳಿಗೆ ಸರಿಯಾಗಿ ಲಿವೇಡಿಯಾ ಯೆಂಬ ಪ್ರದೇಶದಲ್ಲಿ ರಾಜಮಂದಿರದೊಳು ಶರೀರ ವಿಯೋಗ ಸಂಭವಿಸಿತೆಂಬ ವರ್ತಮಾನವು ಅವರ ಪ್ರಜೆಗಳಿಗೆ ಮಾತ್ರವಲ್ಲದೆ ಸಕಲರಿಗೂ ಅಮಿತವಾದ ಸಂತಾಪವನ್ನುಂಟುಮಾಡದಿರಲಿಲ್ಲವು. ಚಕ್ರವರ್ತಿಯವರ ವಿಯೋಗ ವೃತಾಂತವು ಹೊರಗಾಗಿ, ಸಾರ್ವಭೌಮತ್ವ ನಿರೂಪಕವಾದ ರಾಜ ಪತಾಕೆಯು ದುಃಖ ಸೂಚಕವಾಗಿ ಅರ್ಧ ಭಾಗಕ್ಕಿಳಿಸಲ್ಪಟ್ಟುದಂ ಕಂಡ ಕೂಡಲೇ ಅವರ ಆಜ್ಞಾ ಪರಿಪಾಲಿತರಾದ ಸಮಸ್ತ ಪ್ರಜೆಗಳಿಗೂ, ಮಹತ್ತರವಾದ ಭೀತಿಯೂ, ಅತಿದಾರುಣವಾದ ಖೇದವೂ, ಅನಿರ್ವಚನೀಯವಾದ ಆಲೋಚನೆಯೂ ಉಂಟಾದವು. ರಾಜಧಾನಿಯ ಬೀದಿಗಳಲ್ಲಿ ಪ್ರಜೆಗಳು ಗುಂಪುಸೇರತೊಡಗಿದರು. ಚಕ್ರವರ್ತಿಯವರ ಉತ್ಕ್ರಮಣ ವೃತ್ತಾಂತವನ್ನರಿತು, ಪ್ರಿನ್ಸ್ ಆಫ್ ವೇಲ್ಸರವರು ತಮ್ಮ ಭಾರ್ಯೆಯವರೊಡನೆ ಆಸ್ಟ್ರಿಯಾ ದೇಶದ ರಾಜಧಾನಿಯಾದ ವಿಯನ್ನಾ ಪಟ್ಟಣದಿಂ ಹೊರಟು ಲಿವೇಡಿಯಾ ಎಂಬದಕ್ಕೆ ಪ್ರಯಾಣೋನ್ಮುಖರಾಗಿ ರೈಲುಗಾಡಿ ಹತ್ತತಕ್ಕ ಸಮಯದಲ್ಲಿ ಮೇಲೆ ಕಂಡ ವೃತ್ತಾಂತವಂ ಸದರೀ ದಂಪತಿಗಳು ಕೇಳಿ ಅತ್ಯಂತದುಃಖ ಪೀಡಿತರಾದರು. ಅನೇಕ ರಾಜಕೀಯಗಳಾದ ಮತ್ತು ಪ್ರಜಾಸಂಬಂಧಗಳಾದ ಕಾರ್ಯ ಕಾರಣಗಳಿಂದ ಚಕ್ರವರ್ತಿಯವರಮರಣವಂ ಕುರಿತುಯೂರೋಪಖಂಡದ ಸಂಸ್ಥಾನಾಧಿಪತಿಗಳೆಲ್ಲರುವಿಶೇಷತಃ ಚಿಂತಿಸತಕ್ಕವರಾಗಿರುತ್ತಾರೆ ಈಗ ಗತಿಸಿದ ಚಕ್ರವರ್ತಿಯವರಾದ ಮೂರನೇ ಅಲೆಗ್ಸಾಂಡರವರು, ೧೮೪೫ನೇ ಇಸವಿಯಲ್ಲಿ ಜನಿಸಿದರು. ೫೦ ಸಂವತ್ಸರಗಳ ವಯಸ್ಸು ಪೂರೈಸಲಿಕ್ಕೆ ಇನ್ನು ಕೆಲವು ತಿಂಗಳು ಬಾಕಿ ಇರುವಾಗಲೆ ಇವರಿಗೆ ಮರಣವು ಆಸನ್ನವಾಯಿತು. ಮೃತ್ಯುವು ಕರುಣಾಶೂನ್ಯವಾದುದರಿಂದ ಅದಕ್ಕೆ ಉಚ್ಚ ನೀಚ ತಾರತಮ್ಯ ಪರಿಜ್ಞಾನವೂ, ಕಾಲಾಕಾಲ ವಿವೇಚನೆಯೂ, ಉಪಪನ್ನಾನುಪಪನ್ನರೆಂಬ ಪರ್ಯಾಲೋಚನೆಯೂ ಇರುವದಿಲ್ಲವು, ಕಾಲವು ಸನ್ನಿಹಿತವಾದೊಡೆ ತನ್ನ ಶಕ್ತಿಯಂ ನಿರ್ವಂಚನೆಯಾಗಿ ತೋರಿಸದೆ ಬಿಡುವದಿದಿಲ್ಲವು. ಇವರ ತಂದೆಗಳಾದ ಯೆರಡನೇ ಅಲೆಗ್ಸಾಂಡರವರು, ೧೮೮೧ನೇ ಇಸವಿ ಮಾರ್ಚಿ ೧೩ನೇ ತಾರೀಖಿನಲ್ಲಿ ನಿರ್ದಯಾತ್ಮಕರಾದ ರಾಜದ್ರೋಹಿಗಳಿಂದ ವಧಿಸಲ್ಪಡಲು, ಅವರ ಸ್ಥಾನಾಪನ್ನರಾಗಿ ಪ್ರಸಕ್ತ ಚಕ್ರವರ್ತಿಯವರು ಪಟ್ಟಾಭಿಷಿಕ್ತರಾದ ಕಾಲದಲ್ಲಿ ಅವರ ಬಾಳ್ವಿಕೆಯು ನಿರಪಾಯವಾದುದಾಗಿರುವುದೇ ಯೆಂದು ಯೆಲ್ಲರೂ ಚಿಂತಾಕ್ರಾಂತರಾಗಿದ್ದರು. ರಷ್ಯಾ ರಾಜ್ಯದ ಆಧಿಪತ್ಯದಲ್ಲಿ ಪ್ರಜಾಶಕ್ತಿಗಿಂತಲೂ, ಪ್ರಭುಶಕ್ತಿಯು ವ್ಯಾಪಕವಾದುದರಿಂದ ಪ್ರಜೆಗಳ ಪೈಕಿ ಅಂತಃ ಪ್ರಭುಶಕ್ತಿಯು ತಡೆದುಬಿಡಬೇಕೆಂಬ ಉದ್ದೇಶ ಪ್ರಯತ್ನಗಳುಳ್ಳಂತ ನಿಹಿಲಿಸ್ಟ್ ಯೆಂಬ ರಾಜದ್ವೇಷಿಗಳು ಚಕ್ರವರ್ತಿಯವರ ವಧೆಗೆ ನಾನಾಪ್ರಕಾರಗಳಿಂದ ಆಗಿಂದಾಗ್ಗೆ ಪ್ರಯತ್ನ ಪಡದಿರಲಿಲ್ಲವು. ಪರಂತು ಅವರ ಪ್ರಾಣವೆಂಬದು ಅನರ್ಘವಾದುದರಿಂದ ಅವರು ರಾಜಮಂದಿರದಲ್ಲಿದ್ದಾಗಲೂ, ಹೊರಗೆ ಹೊರಟಾಗಲೂ, ಸರ್ವಕಾಲ ಸರ್ವದೇಶ ಸರ್ವಾವಸ್ಥೆಯಲ್ಲಿಯೂ, ಸಮರ್ಥರಾದ ಅಂಗರಕ್ಷಕರು ತಮ್ಮ ಖಡ್ಗಧಾರಾ ತೇಜೋರಾಶಿಯ ಮಧ್ಯೆ ಅವರ ಪ್ರಾಣವನ್ನಿಟ್ಟು ಕಾಪಾಡಿಕೊಳ್ಳುತಲಿದ್ದರು. ಅನೇಕ ಪ್ರಕರಣಗಳಲ್ಲಿ ಅನರ್ಗ ಜಾಗರೂಕತೆಯು ಸಹ ವಂಚಿಸಲ್ಪಟ್ಟು ಚಕ್ರವರ್ತಿಯವರಿಗೆ ಪ್ರಾಣಾಪಾಯ ಸಂಭವನವಾಗದಿರಲಿಲ್ಲವು ಪರಂತು ತಾದೃಶ ಅಪಾಯಗಳೆಲ್ಲವು ದೈವ ಕಟಾಕ್ಷದಿಂದ ತಪ್ಪಿಹೋದರೂ ಈಗ ಕಾಲಗತಿಯಿಂದುಂಟಾದ ರೋಗವು ಉಪಶಮಿಸದೆ ಅವರಿಗೆ ಪ್ರಾಣಹಾನಿಯನ್ನುಂಟುಮಾಡಿತು. ಈಗ ಇವರ ಜ್ಯೇಷ್ಠಪುತ್ರರಾದ ನಿಕೊಲಸ್ ಎಂಬವರು ಇವರ ಸ್ಥಾನಾಪನ್ನರಾಗಿ ಪಟ್ಟಾಭಿಷಿಕ್ತರಾಗುವರು. ಇವರಿಗೀಗ ೨೬ ವರ್ಷ ವಯಸ್ಸಾಗಿರುತಿದೆ ಇವರು ಆವಶ್ಯಕವಾದಷ್ಟು ದೇಶಾನುಭವವನ್ನೂ ತಮ್ಮ ತಂದೆಗಳಿಗಿದ್ದಷ್ಟು ಶರೀರ ದಾರ್ಢ್ಯವನ್ನೂ ಪಡೆಯದಿದ್ದರೂ ರಷ್ಯಾ ರಾಜ್ಯದ ಪ್ರಭುತ್ವ ಸ್ವಾತಂತ್ರ್ಯವು ಅವರಿಗೆ ಬೇಕಾದ ಮಟ್ಟಿಗಿರುತಿದೆ. ಅವರ ತಂದೆಗಳ ಕಾಲದಲ್ಲಿಯೇ ರಾಜ್ಯಕಾರ್ಯಗಳಲ್ಲಿ ಪ್ರವೃತ್ತಿಪೂರ್ವಕವಾದ ಜ್ಞಾನವಂಸಂಪಾದಿಸಿದ್ದರು. ಅವರ ಪ್ರಭುತ್ವವು ನಿರಪಾಯವಾದುದಾಗಿರಬೇಕೆಂದು ಕೋರುವೆವು

ಗತಿಸಿದ ಮಾ|| ಮಹದೇವ ಚಿಮ್ನಾಜಿ ಆಪ್ಟೆಯವರು.

ವರ್ತಮಾನ ಕಾಲದ ವಿದ್ಯಾವಂತರಲ್ಲಿ ವಿಶೇಷ ಪ್ರಾಶಸ್ತ್ಯ ಗೌರವವಂ ಪಡೆದು ಅತಿ ಸಮರ್ಥರೆನಿಸಿಕೊಂಡಿದ್ದ ಮುಂಬೈ ಹೈಕೋರ್ಟಿನ ವಕೀಲರಾದ ಮಾ|| ರಾ|| ಮಹದೇವ ಚಿಮ್ನಾಜಿ ಆಪ್ಟೆಯವರು ಈಚೆಗೆ ಕಾಲಗತಿಯನ್ನೈದಿದರೆಂಬ ವೃತ್ತಾಂತವಂ ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈ ದೊಡ್ಡ ಮನುಷ್ಯರ ವಿದ್ವತ್ಪ್ರಯುಕ್ತವಾದ ಕೀರ್ತಿಯೂ, ಪರೋಪಕಾರಬುದ್ಧಿಯೂ ಪ್ರಸಿದ್ಧಗಳಾಗಿದ್ದುದರಿಂದ ಅವರ ನಿರ್ಲೋಭತ್ವ ನಿಷ್ಪಕ್ಷ ಮುಂತಾದವುಗಳಿಂದ ಪ್ರಬಲ ನಷ್ಟರೂಪೇಣ ಪರಿಗಣಿಸಲ್ಪಡದಿರಲಾರದು. ಮ|| ರಾ|| ಆಪ್ಟೆಯವರು ದಕ್ಷಿಣದೇಶದ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರಾಗಿಯೂ, ತೀಕ್ಷ್ಣಬುದ್ಧಿ ಮನೋಸ್ಥೈರ್ಯ ಪೂರ್ಣರಾಗಿಯೂ ಇದ್ದರು. ಆದಿಯಲ್ಲಿ ಮ|| ರಾ|| ಆಪ್ಟೆಯವರು ಹಿಂದೂ ಸಮಯಾಚಾರ ಪರಿಷ್ಕರಣ ಪ್ರವರ್ತಕ ಸಂಘದವರಲ್ಲೊಬ್ಬರಾಗಿದ್ದರು. ಪರಂತು ಸದರೀ ವಿಷಯ ವಿಮರ್ಶನಾರ್ಥ ಪ್ರವರ್ತಿಸಿದ ಜನರಲ್ಲಿ ಆಪ್ಟೆಯವರಿಗೆ ಆಂತರವಾದ ಪ್ರತಿಪತ್ತಿಯೂ, ವಿಶ್ವಾಸವೂ ಇರದೆಯಾಗಲು, ಸದರೀ ಜನರ ವರ್ತನಗಳನ್ನು ಕುರಿತು ಬಹಳವಾಗಿ ಆಕ್ಷೇಪಿಸಿ, ಅವರ ಮಾಂದ್ಯ ವೃತ್ತಿಯನ್ನರಿತು ಅತೃಪ್ತಿಗೊಂಡು, ಸದರೀ ಜನರಿಗೆ ಅಂತಶ್ಶುದ್ಧಿಯೂ, ಮನೋದಾರ್ಢ್ಯವೂ ಶುದ್ಧಾಂಗ ಸಾಲದೆಂದು ನಿಂದಿಸಿ, ಸ್ವತಃ ಅವರ ಸಂಬಂಧವಂ ತ್ಯಜಿಸಿ ಪ್ರತ್ಯೇಕಿಸಿ ಬಿಟ್ಟರು. ಇದಲ್ಲದೆ ಈಗ ನೆಲೆಗೊಂಡು ಅನುಷ್ಠಿಸಲ್ಪಡುತ ಬರುವ ಸಂಪ್ರದಾಯಗಳನ್ನು ಬದಲಾಯಿಸಬೇಕೆಂದು ಅಭಿಪ್ರಾಯಪಡುವವರಿಗೆಲ್ಲ ಶುದ್ಧಪ್ರತ್ಯರ್ಥಿಯಾಗಿ ಪರಿಣಮಿಸಿದರು. ಇವರಿಗೆ ಬಾಲ್ಯದಲ್ಲಿಯೇ ಭಾರ್ಯಾ ವಿಯೋಗವೂ, ಏಕಪುತ್ರ ವಿಯೋಗವೂ ಪ್ರಾಪ್ತವಾದವು. ಈ ಖೇದವು

ಅದರಿಗೆ ಅತಿಶಯವಾದ ಮನೋದಾರ್ಢ್ಯವನ್ನುಂಟುಮಾಡಿ ಮರಳಿ ವಿವಾಹ ಮಾಡಿಕೊಳ್ಳುವದಿಲ್ಲವೆಂಬದಾಗಿ ಸಂಕಲ್ಪವಂ ಮಾಡಿಕೊಂಡುದು. ತದ್ವಶಿ ಮರಣಾವಧಿ ಕೇವಲಸಾತ್ವಿಕವೃತ್ತಿಯನ್ನಂಗೀಕರಿಸಿ ಅಕಳಂಕರಾಗಿದ್ದು ಗತಿಸಿದ್ದಕ್ಕಾಗಿ ಸಂತೋಷಿಸಬೇಕಾಗಿರುತಿದೆ. ಇವರಿಗೆಸಂಬಂಧಿಸಿದ ಅನೇಕವಿಷಯಗಳು ಜನರ ಸ್ಮರಣೆಗೆ ಬರುವಾಗಲೆಲ್ಲ ಇವರ ಮರಣವು ವಿಶೇಷ ಹೃದಯವ್ಯಥಾಕಾರಿಯಾಗದಿರಲಾರದು. ಸದರೀ ದೊಡ್ಡ ಮನುಷ್ಯರು ವಿದ್ಯಾವಂತರೆನಿಸಿದ್ದಾಗ್ಯೂ ಸ್ವಪ್ರತಿಷ್ಠಾಪರರಲ್ಲವು ವ್ಯಾಪಕರಾಗಿದ್ದಾಗ್ಯೂ ಉತ್ತರೋತ್ತರ ಕೀರ್ತಿ ಸಂಪಾದನೆಯೊಳು ಆಸಕ್ತಿ ಇಲ್ಲದವರು ಧನವಂತರಾಗಿದ್ದರೂ ಸ್ವಾರ್ಥಪ್ರಿಯಕರರಲ್ಲವು. ಸರ್ವತ್ರ ಸನ್ಮಾನಿತರಾಗಿದ್ದರೂ ಅಸುಲಭರಾಗಿರಲಿಲ್ಲವು. ಜ್ಞಾನಾಧಿಕ್ಯರೆನಿಸಿದ್ದರೂ ಸ್ವಯಂ ಘಟಿತರಾಗಿರಲಿಲ್ಲವು. ಮ|| ರಾ|| ಆಪ್ಟೆಯವರು ಸಕಲಜನೋಪಯುಕ್ತವಾದ ಆನಂದಾಶ್ರಮವೆಂಬ ಒಂದು ಧರ್ಮಸ್ಥಾಪನೆಯಂ ಸ್ವತಸ್ಸ್ಥಾಪನೆ ಮಾಡಿ ತಮ್ಮ ಸ್ಮರಣೆಯು ಜನರಿಗಿರುವಂತೆ ಅದಂ ಅವರಿಗೊಪ್ಪಿಸಿಗತಿಸಿದರು. ಸದರೀ ಆನಂದ ಶ್ರಮವೆಂಬದರ ಕಟ್ಟಾರ್ಥವೇನಂದರೆ—ಆನಂದಕ್ಕಾಶ್ರಯಸ್ಥಾನವು. ಇಲ್ಲಿ ಆನಂದವು ವಿಷಯಾನುಭವಗಳೆಲ್ಲನು, ಶುದ್ಧ ಜ್ಞಾನಾನಂದರೂಪವಾದುದೆಂದರಿಯುವುದು. ಪೂನಾ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ ಈ ಆನಂದಾಶ್ರಮದಲ್ಲೊಂದು ದೇವಾಲಯವೂ, ಪಂಡಿತರಾದ ಸನ್ಯಾಸಿಗಳಿಗೆ ವಾಸಯೋಗ್ಯವಾದ ಛತ್ರವೂ, ಅನಾಥರಾದ ಮತ್ತು ಅರ್ಹರಾದ ವಿದ್ಯಾರ್ಥಿಗಳ ಅನುಕೂಲ್ಯಕ್ಕಾಗಿ ವಿದ್ಯಾರ್ಥಿಸದನವೂ, ಪುರಾತನವಾದ ಸಂಸ್ಕೃತ ಭಾಷೆಯ ವ್ಯಾಪಕತೆಯಂ ಬಯಸಿ ತದರ್ಥ ಶೇಖರಿಸಲ್ಪಟ್ಟಿರುವ ಅಪೂರ್ವ ಗ್ರಂಥಗಳ ಸಂರಕ್ಷಣಾರ್ಥ ಅನುಪದವಾದ ಪುಸ್ತಕ ರಕ್ಷಣಶಾಲೆಯೂ, ಸೇರಿರುತಿವೆ. ಇದಲ್ಲದೆ ಸದರೀ ಅಪೂರ್ವ ಗ್ರಂಥಗಳನ್ನು ಮುದ್ರಿಸಿ ಪ್ರಚಾರದೊಳು ತರುವ ಉದ್ದೇಶದಿಂದೊಂದುಮುದ್ರಾಕ್ಷರಶಾಲೆಯು ಸಹ ಸ್ಥಾಪಿಸಲ್ಪಟ್ಟಿದೆ. ಅದೇರೀತಿ ಇದುವರೆಗೆ ಅನೇಕ ಗ್ರಂಥಗಳು ಆಶ್ರಮ ಕಾರ್ಯದರ್ಶಿಗಳಿಂದ ಮುದ್ರಿತವಾಗಿ ಪ್ರಚಾರಕ್ಕೆ ತರಲ್ಪಟ್ಟವು. ಮೆ|| ಆಪ್ಟೆಯವರು ತಮ್ಮಿಂದ ವ್ಯವಸ್ಥಾಪಿತವಾದ ಮೇಲ್ಕಂಡ ಧರ್ಮಕಾರ್ಯವು ಸ್ಥಿರವಾಗಿ ನಡೆಯುವದಕ್ಕೆ ಬೇಕಾದ ದ್ರವ್ಯೋತ್ಪತ್ತಿಯಂ ಕಲ್ಪಿಸಿಟ್ಟರು. ಸ್ವಾರ್ಜಿತ ದ್ರವ್ಯದಲ್ಲಿ ಲಕ್ಷಾಂತರ ರೂಪಾಯಿಗಳ ತನಕ ಇದಕ್ಕಾಗಿ ವ್ಯಯ ಮಾಡಿದರು. ಮೆ|| ಆಪ್ಟೆಯವರು ತಮ್ಮ ಶರೀರ ವಿಯೋಗಕಾಲವು ಸನ್ನಿಹಿತವಾಯಿತೆಂದರಿತು ಪೂರ್ವಭಾವಿಯಾಗಿಯೇ ತುರೀಯಾಶ್ರಮವಂ ಪರಿಗ್ರಹಿಸಿದರು. ಅವರ ನಿರ್ಯಾಣಾನಂತರ ಸದರೀ ಆನಂದಾಶ್ರಮದಲ್ಲಿಯೇ ಪೂಜ್ಯವಾದ ಅವರ ಕಳೇಬರವು ಯಥಾವಿಧಿಯಾಗಿ ಸಮಾಧಿ ಮಾಡಲ್ಪಟ್ಟಿತು. ಈ ದೊಡ್ಡಮನುಷ್ಯರು ಲೌಕಿಕರಾಗಿದ್ದು ಸಕಲಲೌಕಿಕತಂತ್ರಗಳನ್ನರಿತು ಸಂಸ್ಕೃತ ಮಹಾರಾಷ್ಟ್ರ ಆಂಗ್ಲೇಯ ಭಾಷೆಗಳಲ್ಲಿ ಅಸಾಧಾರಣವಾದ ಜ್ಞಾನವಂ ಸಂಪಾದಿಸಿ ಬಹುವಿಷಯ ಸನ್ನಿಕರ್ಷದಿಂದುಂಟಾಗ ಬಹುದಾದ ಭೋಗೇಚ್ಛೆಯಂ ತೊರೆದು ಶುದ್ಧವಾದ ವಿರಕ್ತಿಯಂತಾಳಿ ಬ್ರಹ್ಮಜ್ಞಾನಿ ಪ್ರಾಯರಾಗಿ ಗತಿಸಿದ್ದರಿಂದ ಅಂತವರ ಚರಿತ್ರವು, ಅತಿ ಶ್ರದ್ಧಾಳುಗಳೆಂದು ಹೊಗಳಿಸಿಕೊಂಡು ವೈದಿಕರೆನಿಸಿರುವವರಿಗೂ, ಹಿಂದೂ ಸಮುದಾಯದಲ್ಲಿ ಪ್ರಸಿದ್ಧನಾಗಿ ಪ್ರತಿಷ್ಠಾ ಸಂಪಾದಕರಾಗುವಂತವರಿಗೂ, ನಿದರ್ಶನ ರೂಪವಾಗಿರಬೇಕಲ್ಲದೆ ಗತಿಸಿದವರು ಆಪ್ಟೆ ಎಂಬ ಅನ್ವರ್ಥನಾಮವುಳ್ಳವರಾದುದರಿಂದ ಆಪ್ತಗುಣಾವಲಂಬನವು ಅಂತವರಿಂದ ಶ್ರೇಯಸ್ಕರವೆಂದೆಣಿಸಲ್ಪಡದೆ ಹೋಗಲಾರದು.

Occasional Notes.

ನೈಮಿತ್ತಿಕ ವಿಷಯನ್ಯಾಸ.

ಲಂಡನ್ ಟೈಂಸ್ ಎಂಬ ಪತ್ರಿಕೆಗೆ, ಜನನ, ಮರಣ ಮತ್ತು ವಿವಾಹವನ್ನು ಕುರಿತ ಪ್ರಕಟನೆಗಳ ಮೂಲಕ ವರ್ಷ ಒಂದಕ್ಕೆ ೯,೦೦೦ ಪೌಂಡುಗಳು ಹುಟ್ಟುವಳಿಯಾಗುತಿವೆ.

ಘುಡಿಯಾರವು ಕ್ರಮವಾಗಿ ನಡೆಯುವದಕ್ಕೆ ಅದನ್ನು ಧರಿಸಿಕೊಂಡಿರುವಂತವನ ದೇಹದಲ್ಲಿರುವ ಒಂದು ವಿಧ ಆಕರ್ಷಕ ಶಕ್ತಿಯೇ ಕಾರಣವೆಂದು ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ.

ಕಾಬೂಲ್ ದೇಶದ ಅಮೀರರವರಿಗೆ ಈಚೆಗೆ ದಿನೇದಿನೆ ಆರೋಗ್ಯ ವುಂಟಾಗುತ ರಾಜ್ಯಕಾರ್ಯಗಳಂ ಸ್ವಯಂ ನಿರ್ವಹಿಸುತ ಬರುವದಾಗಿ ತಿಳಿಯಬರುತಿದೆ.

ನ್ಯೂಯಾರ್ಕ್ ಎಂಬ ಪಟ್ಟಣದಲ್ಲಿ ಒಂದು ನಾಯಿಗೆ ಕಣ್ಣುಗಳು ಕಾಣದೆಹೋಗಲು ಅದು ಸುಲೋಚನಗಳಂ ಹಾಕಿಕೊಂಡು ಬೀದಿಗಳಲ್ಲಿತಿರುಗಾಡುತಿದೆಯೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

ರಂಗೂನ್ನಲ್ಲಿ ಕೆಂಪಿನಗನಿಗೆ ಹಾಕಲ್ಪಟ್ಟಿರುವ ಕುದಾಯಿಗಳು ಬಹಳಜಾಸ್ತಿಯಾಗಿರುವದರಿಂದ ಅವುಗಳಲ್ಲಿ ಕೆಲಸ ಮಾಡತಕ್ಕವರೆಲ್ಲರು ಒಬ್ಬೊಬ್ಬರಾಗಿ ಬಿಡುತಲಿದಾರೆಂದು ತಂತಿ ವೃತ್ತಾಂತ ಬಂದಿರುತದೆ.

ಚೀನಾ ದೇಶದೊಳು ಕೆಲವರೂ, ಆಫ್ರಿಕಾ ದೇಶದೊಳು ಅನೇಕರೂ ನಾಣ್ಯ ಮೊದಲಾದ ಸಣ್ಣಸಣ್ಣ ಪದಾರ್ಥಗಳನ್ನು ಇಟ್ಟುಕೊಂಡು ಹೋಗುವದಕ್ಕೆ ಜೇಬುಗಳಿಗೆ ತಮ್ಮ ಕರ್ಣರಂಧ್ರಗಳನ್ನು ಉಪಯೋಗಿಸುತ್ತಾರೆ.

ಲಕೋಟೆಗಳಿಗೆ ಹಚ್ಚುವ ಲೇಬಲ್‌ಗಳನ್ನು ರಬ್ಬರ್ ಸ್ಟ್ಯಾಂಪಗಳ ಮೂಲಕ ಮುಖಕೆಡಿಸಕೂಡದೆಂಬ ನಿರೋಧ ಪೂರ್ವಕ ಈಚಗೆ ರಚಿಸಲ್ಪಟ್ಟ ನಿಬಂಧನೆಯು ಈ ತಿಂಗಳ ಗುರ್ರೇತಾರೀಖ ಮೊದಲು ಜಾರಿಯಲ್ಲಿ ತರಲ್ಪಟ್ಟಿದೆ.

ಲಂಡನ್ ಪಟ್ಟಣದೊಳು ನಾಲ್ವತ್ತು ಭೋಜನಶಾಲೆಗಳಿರುತ, ಅವುಗಳಲ್ಲಿ ಭೋಜನಕ್ಕೆ ಬರುವಂತವರಿಗೆ ಶಾಕಾಹಾರವು ಅಂದರೆ, ಮಾಂಸವಿನಾ ಉಳಿದ ಪದಾರ್ಥಗಳು ಸರಬರಾಜು ಮಾಡಲ್ಪಡುತವೆ.

ಮದರಾಸಿನೊಳು ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ಉಪಯೋಗಾರ್ಥ ಸ್ಥಾಪಿಸಬೇಕೆಂದು ನಿಶ್ಚಯಿಸಲ್ಪಟ್ಟಿರುವ ವಿಕ್ಟೋರಿಯಾ ಹೋಟೆಲ್ ಎಂಬ ಭೋಜನಶಾಲಾ ನಿರ್ಮಾಣಾರ್ಥ ಏರ್ಪಡಿಸಲ್ಪಟ್ಟಿರುವ ಮೂಲಧನಕ್ಕೆ ರಾಜಾ ಗಜಪತಿರಾಯರವರು ೧,೦೦೦ ರೂಪಾಯಿಗಳು ಚಂದಾ ಮಾಡಿರುತ್ತಾರೆ.

ಪಂಜಾಬ ದೇಶದೊಳು ಬ್ರಾಹ್ಮಣರು ಮೊದಲಾದ ಉತ್ತಮ ಜಾತಿಯವರು ಉಪನಯನ ಮೊದಲಾದ ಶುಭಗಳನ್ನು ನಡೆಸುವದಕ್ಕೆ ಕಾಶ್ಮೀರದೇಶಕ್ಕೆ ಹೋಗುತ್ತಾರೆಯಾಗಿ ಪೂರ್ವಕಾಲದಲ್ಲಿ ಸಂಸ್ಕೃತ ಭಾಷಾಭ್ಯಾಸಕ್ಕೆ ಮುಖ್ಯಸ್ಥಾನವಾಗಿದ್ದುದು ಕಾಶ್ಮೀರವೇ ಹೊರತು ಕಾಶಿಯಲ್ಲವೆಂದು ಭಾವಿಸಬೇಕಾಗಿರುತಿದೆ.

ಜೆರ್ಮನ ದೇಶದೊಳು ಹೆಂಗಸರು ಯಾರಾದರು ಮದುವೆ ಇಲ್ಲದಿದ್ದರೆ ಒಬ್ಬ ವರನನ್ನು ವಿಚಾರಿಸಿ ಅವಳಿಗೆ ಮದುವೆ ಮಾಡಿಸಬೇಕೆಂದು ಒಂದು ಕಾನೂನು ಜಾರಿಯೊಳಿರುತಲಿತ್ತು. ವಿವಾಹವಿಲ್ಲದೆ ಇರುವದಕ್ಕೆ ಇಷ್ಟಪಟ್ಟುಳ್ಳವರು ಹಾಗೇಯೇ ಇರಬಹುದೆಂದು ಈಚೆಗೆ ಚಕ್ರವರ್ತಿಯವರು ಹುಕುಂ ಕೊಟ್ಟಿರುತ್ತಾರೆ.

ಬರೋಡೆ ಗಾಯಕವಾಡ ಮಹಾರಾಜರವರು ತಮ್ಮ ಕುಟುಂಬ ಪರಿವಾರ ಸಮೇತರಾಗಿ ಕಳೆದ ತಿಂಗಳ ೧೦ನೇ ತಾರೀಖಿನಲ್ಲಿ ಇಂಗ್ಲಾಂಡಿನಿಂದ ಹೊರಟು ಯೂರೋಪ ಖಂಡಕ್ಕೆ ಹೋಗಿರುವರೆಯೂ, ಅಲ್ಲಿ ಕೇವಲ ಮುಖ್ಯಗಳಾದ ಕೆಲವು ಪಟ್ಟಣಗಳಂ ನೋಡಿಕೊಂಡು ಅಲ್ಲಿಂದ ಇಂಡ್ಯಾದೇಶಕ್ಕೆ ಪ್ರಯಾಣ ಮಾಡುವರೆಂದಲೂ ತಿಳಿಯ ಬರುತಿದೆ.

ಕಳೆದ ತಿಂಗಳ ೨೧ನೇ ತಾರೀಖಿನಲ್ಲಿ, ಶ್ರೀರಂಗಕ್ಕೂ ತಿರುಚನಾಪಳ್ಳಿಗೂ ಮಧ್ಯ ಮಾರ್ಗದಲ್ಲಿ ತಿರುವಾನಕ್ಕಾವಲ್ ಎಂಬ ಸ್ಥಳದಲ್ಲಿರುವ ಜಂಬುಕೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕನ್ನ ಚೋರಿ ನಡೆದು ಸುಮಾರ್ ಎರಡು ಲಕ್ಷ ರೂಪಾಯಿಗಳ ಕ್ರಯ ಬಾಳುವಷ್ಟು ಆಭರಣಗಳು ಕಳವಾದವೆಂದು ಅಲ್ಲಿನ ಲೇಖಕರೊಬ್ಬರು ಬರೆದಿರುತ್ತಾರೆ.

ಫ್ರಾನ್ಸ್‌ದೇಶದ ರಕ್ಷಣೆಯಬಗ್ಗೆ ಮಾಡಲ್ಪಡುತಲಿರುವ ಸೈನಿಕ ಸಂಬಂಧವಾದ ನೂತನ ಏರ್ಪಾಡುಗಳಲ್ಲಿನ ಮರ್ಮಗಳಂ ಅವರಿಗೆ ವಿರೋಧಿಗಳಾಗಿರುವ ಇಟಲಿ ಮತ್ತು ಜರ್ಮನೀ ದೇಶೀಯರಿಗೆ ತಿಳಿಸಿದನೆಂಬ ರಾಜದ್ರೋಹಾಪರಾಧದ ಬಗ್ಗೆ ಒಬ್ಬ ಆಫೀಸರನು ದಸ್ತಗಿರಿ ಮಾಡಲ್ಪಡಲು ಅಲ್ಲಿ ಬಹಳ ಗದ್ದಲ ವುಂಟಾಗಿರುವಂತೆ ತಂತಿವೃತ್ತಾಂತದ ಮೂಲಕ ತಿಳಿಯಬರುತಿದೆ.

ಕಾಶೀ ಮಹಾರಾಜರವರು ಕ್ಷಿಪ್ರದಲ್ಲಿ ಪಶ್ಚಿಮ ಮತ್ತು ದಕ್ಷಿಣದೇಶ ಸಂಚಾರಾರ್ಥ ಪ್ರಯಾಣ ಮಾಡಬೇಕೆಂದು ಯೋಚಿಸಿರುವದರಿಂದ ಅವರು ಸಂಚರಿಸುವ ಮಾರ್ಗಗಳಲ್ಲಿ ಅವರ ಸುಖಕ್ಕೆ ಆವಶ್ಯಕಗಳಾದ ಸಕಲವಿಧ ಏರ್ಪಾಟುಗಳಂ ಮಾಡತಕ್ಕದ್ದೆಂದು ಡಿಸ್ಟ್ರಿಕ್ಟು ಜಾತಿ ಕಲೆಕ್ಟರ್‌ಗಳಿಗೂ, ಆಯಾ ರೈಲುಗಳ ಏಜೆಂಟರುಗಳಿಗೂ ಇಂಡ್ಯಾ ಗವರ್ನಮೆಂಟಿನವರು ಹುಕುಂಕಳುಹಿಸಿರುತ್ತಾರೆ.

ಈಗ್ಗೆ ನಾಲ್ವತ್ತು ವರ್ಷಗಳ ಹಿಂದಿನವರೆಗೆ ಜೆರ್ಮನ ದೇಶದೊಳು ಜನರಿಗೆ ದೇವಿ ಗುರ್ತನ್ನು ಅವರವರ ಮೂಗಿನ ತುದಿಯಮೇಲೆ ಹಾಕುವುದು ವಾಡಿಕೆಯಾಗಿರುತಲಿದ್ದುದರಿಂದ ಆ ವಿಷಯದಲ್ಲಿ ಲಿಖಿತ ರೂಪವಾದ ಸರ್ಟಿಫಿಕೇಟ ಎಂಬ ಸಂಖ್ಯಾ ಪತ್ರಿಕೆಯು ಪಡೆದಿರಬೇಕಾದುದು ಅನಾವಶ್ಯಕತ್ವೇನ ಭಾವಿಸಲ್ಪಡುತಲಿತ್ತು. ಈಚೆಗೆ ಮೇಲೆ ಕಂಡ ಪದ್ಧತಿಯು ಬದಲಾಯಿಸಲ್ಪಟ್ಟಿರುತಿದೆ.

ಬಂಗಾಳ ದೇಶಕ್ಕೆ ಸೇರಿದ ಒಂದು ಪ್ರದೇಶದೊಳು ಒಂದುಕೊಳವಿರುವುದೆಂದೂ, ವಾಯು, ಶ್ವಾಸ, ಅಜೀರ್ಣ, ಮಹೋದರ, ಪಾಕ್ಷವಾಯುಮೊದಲಾದ ಪ್ರಬಲರೋಗ ಪೀಡಿತರಾದವರು ಸದರೀ ಕೊಳದಲ್ಲಿ ಸ್ನಾನಮಾಡಿದರೆ ಸಂಪೂರ್ಣವಾಗಿ ರೋಗ ನಿವೃತ್ತಿಯಾಗುವುದೆಂದೂ, ಬರಾನಗರ ನಿವಾಸಿಯಾದ ಚಂದ್ರನಾಥ ಚಕ್ರವರ್ತಿ ಎಂಬ ದೊಡ್ಡಮನುಷ್ಯರು ಬಂಗಾಲಿ ಎಂಬ ಪತ್ರಿಕೆಗೆ ಬರೆದಿರುತ್ತಾರೆ.

ಈಚೆಗೆ ಫಿರೋಜಪುರದಿಂದ ಲೂಧಿಯಾನಾ ಎಂಬ ಪಟ್ಟಣಕ್ಕೆ ಹೋಗುವ ಭಾರೀ ಮಾರ್ಗದಲ್ಲಿ, ಡಕೋಡೆ ಕಳ್ಳರು ಪೋಲೀಸಿನವರಂತೆ ದುಸ್ತುಗಳು ಹಾಕಿಕೊಂಡು ಬಂದು ಪ್ರಯಾಣಸ್ಥರನ್ನೆಲ್ಲ ಅಡ್ಡಗಟ್ಟಿ, ಅವರು ತಮ್ಮ ಗಂಟುಗಳಲ್ಲಿ ಕಳ್ಳತನದಿಂದ ಅಫೀಮನ್ನು ಒಚ್ಚಿಟ್ಟುಕೊಂಡು ಹೋಗುವದರಿಂದ ಅವರ ಗಂಟುಗಳನ್ನೆಲ್ಲ ಶೋಧಿಸಿ ನೋಡಬೇಕೆಂಬ ನೆವದಿಂದ ಅವನ್ನೆಲ್ಲ ಶೋಧಿಸುತ್ತಿರುವಲ್ಲಿ ಪ್ರಾಂತ ವಾಸ್ತವವಾದ ಪೋಲೀಸಿನವರು ಕೆಲವರು ಅಲ್ಲಿಗೆ ಬಂದು ಸದರೀ ಜನರನ್ನು ನೋಡಿದವರಾಗಿ ಅವರೆಲ್ಲರು ಕಳ್ಳರೆಂದು ಕಂಡುಬಂದು ಅವರನ್ನು ದಸ್ತಗಿರಿ ಮಾಡ ಲೆತ್ನಿಸುವಲ್ಲಿ ಅವರಿಗೂ ವಾಸ್ತವವಾದ ಪೋಲೀಸಿನವರಿಗೂ ಮಾರಾಮಾರಿಗಳು ನಡೆದು ಪೋಲೀಸಿನವರಲ್ಲಿ ಯೊಬ್ಬನಿಗೆ ಒಂದು ಬಾಹುವು ಮುರಿದುಹೋಯಿತು, ಕಳ್ಳರೆಲ್ಲರು ತಪ್ಪಿಸಿಕೊಂಡು ಪರಾರಿಯಾಗಿ ಹೋದರು, ಪರಂತ ಪೋಲೀಸಿನವರಿಗೆ ಕಳ್ಳರು ಘಟಾನೆಯುವರೆಂಬ ಗುರ್ತು ತಿಳಿಯಬಹುದೆ, ಎಂಬದಾಗಿ ಈ ತಿಂಗಳ ಗುರ್ರೇ ತಾರೀಖಿನಲ್ಲಿ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯ ಬರುತಿದೆ.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕುವೃತ್ತಾಂತಗಳು

ಈ ತಿಂಗಳ ೨ನೇ ತಾರೀಖಿನಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಸಕ್ರೆಬೈಲು ಗಡಿಯಲ್ಲಿ ೧೦ ಆನೆಗಳು ಹಿಡಿಯಲ್ಪಟ್ಟಂತೆ ತಿಳಿಯಬರುತಿದೆ.

ಬ್ರಿಟಿಷ್ ಸರ್ಕಾರದ ನೌಕರಿಯಬಗ್ಗೆ ಈ ಪ್ರಾಂತದಲ್ಲಿಡಲ್ಪಟ್ಟಿರುವ ಸೆಕೆಂಡ್ ಸೇನೆಯ ಕಮಾಂಡರ್ ಆದ ಫಿಫ್ತ್‌ನಂಬರ್ ಕರ್ನಲ್ ದೇಶರಾಜ ಅರಸಿನವರ ಸಂಬಳವನ್ನು ಮಾಹೆಯಾನಾ ೨೦೦ ರೂಪಾಯಿಗಳಿಗೆ ಬಡ್ತಿ ಮಾಡಿ ಬಂಗ್ಲೆ ಬಾಡಿಗೆಯ ಬಗ್ಗೆ ಮಾಹೆಯಾನಾ ೫೦ ರೂಪಾಯಿಗಳು ಕೊಡತಕ್ಕದ್ದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿರುವಂತೆ ಕೇಳುತ್ತೇವೆ.

ಈಸಲ ಮೈಸೂರಲ್ಲಿ ನಡೆದ ದಸರಾ ಮಹೋತ್ಸವವನ್ನು ನೋಡುವದಕ್ಕಾಗಿ ಪರಸ್ಥಳಗಳಿಂದ ರಾಜಧಾನಿಗೆ ಹೋಗಿದ್ದ ಗಾಯಕರಿಗೂ ನರ್ತಕಿಯರಿಗೂ ಶ್ರೀಮನ್ಮಹಾರಾಜರವರ ಭೇಟಿಯಾಗಿ, ಅವರವರಯೋಗ್ಯತೆ ಮತ್ತು ಪ್ರಾವೀಣ್ಯಾನುಸಾರವಾಗಿ ಸನ್ಮಾನಗಳಂ ಹೊಂದಿದರೆಂದು ಮೈಸೂರು ಪತ್ರಿಕೆಯೊಂದರ ಮೂಲಕ ತಿಳಿದು ಶ್ರೀಮನ್ಮಹಾರಾಜರವರ ಉದಾರಸ್ವಭಾವಕ್ಕಾಗಿ ಬಹಳ ಸಂತೋಷಿಸುವೆವು.

ಈಚೆಗೆ ಎಂಟು ದಿನಗಳ ಮೊದಲು ರಾತ್ರಿ ಹಗಲು ಮೋಡ ಮುಚ್ಚಿಕೊಂಡು ಆಗಿಂದಾಗ್ಗೆ ತುಂತುರು ಹನಿಗಳು ಬೀಳುತಲಿವೆ. ಬಲವಾದ ವರ್ಷವಿಲ್ಲವು. ರಾತ್ರಿ ಕಾಲದಲ್ಲಿ ಚಳಿ ಹೆಚ್ಚು. ಹೊರಗಿನ ಸಂಚಾರ ದುಸ್ಸಹವಾಗಿದೆ. ಆಹಾರ ಧಾನ್ಯಗಳ ಧಾರಣೆಗಳ ವಿಷಯದಲ್ಲಿ ವಿಶೇಷ ಬದಲಾವಣೆ ಯಾವದೂ ಇಲ್ಲವು, ಪ್ರಾಯಶಃ ಯೆಲ್ಲವುಹಿಂದಿನ ವಾರದಲ್ಲಿ ತಿಳಿಸಿದಂತೆಯೇ ಇವೆ.

ಈ ಷಹರಿನ ಪಶ್ಚಿಮ ಮತ್ತು ಉತ್ತರ ಭಾಗಗಳು ಭರ್ತಿ ಮಾಡಲ್ಪಟ್ಟು ಅನೇಕರು ಖಾಲೀ ನಿವೇಶನಗಳಂ ಹರಾಜಿನಲ್ಲಿ ಪಡೆದು ಮನೆಗಳಂ ಕಟ್ಟಿಸುತಲಿರುವದಲ್ಲದೆ ಇದಕ್ಕಾಗಿ ಒಂದು ಕಮಿಟಿ ಸಹ ಏರ್ಪಾಟಾಗಿರುತಿದೆಯಷ್ಟೆ ಇದೇ ವಿಷಯದಲ್ಲಿ ಇಲ್ಲಿನ ಮ್ಯೂನಿಸಿಪಾಲಿಟಿಯವರಿಗೆ ಉಂಟಾಗಿದ್ದ ಅಧಿಕಾರವನ್ನು ಮೇಲ್ಕಂಡ ಕಮಿಟಿಯವರಿಗೆ ಒಪ್ಪಿಸಿಬಿಡುವಂತೆ ಗವರ್ನಮೆಂಟಿನವರ ತಿಳಿಸಿದ ಅಭಿಪ್ರಾಯಾನುಗುಣವಾಗಿ ಮ್ಯೂನಿಸಿಪಾಲಿಟಿಯವರು ಸದರೀ ಕಮಿಟಿಯವರಿಗೆ ಒಪ್ಪಿಸಿಬಿಟ್ಟರೆಂದು ತಿಳಿಯಬರುತಿದೆ.

ಅನೇಕ ಸಂವತ್ಸರಗಳ ಕಾಲದ ಮೊದಲು ಶೃಂಗೇರಿ ಶ್ರೀಮಠದ ಸರ್ವಾಧಿಕಾರಿಯಾಗಿದ್ದ ಬ್ರಹ್ಮಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳವರು ಶ್ರೀಮಠದ ಕಾರ್ಯಾರ್ಥ ೧೮೯೩ನೇ ಇಸವಿ ಆಗಸ್ಟ ತಿಂಗಳಲ್ಲಿ ಕಲ್ಕತ್ತೆಗೆ ಹೋಗಿ ಅಲ್ಲಿನ ಕಾರ್ಯಗಳನ್ನೆಲ್ಲ ನೆರವೇರಿಸಿಕೊಂಡು ಅಲ್ಲಿಂದ ನೇಪಾಳ ಸಂಸ್ಥಾನಕ್ಕೆ ಹೋಗಿ ಅಲ್ಲಿ ನಡೆಸಿದ ಕಾರ್ಯಗಳನ್ನೆಲ್ಲ ಕೆಲವು ತಿಂಗಳ ಹಿಂದೆ ಈ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆಯಷ್ಟೆ. ಸದರೀ ಶಾಸ್ತ್ರಿಗಳವರು ಒಂದೆರಡು ತಿಂಗಳ ಹಿಂದೆ ಅಲ್ಲಿಂದ ವಾಪಸ ಬಂದು ರಾಮನಾಥ ಪ್ರಾಂತದಲ್ಲಿ ಈಗ ದಯಮಾಡಿರುವ ಶ್ರೀ ಸ್ವಾಮಿಗಳವರ ಸನ್ನಿಧಿಯಂ ಸೇರಿ, ತಾವು ನಡೆಸಿದ ಕಾರ್ಯಗಳನ್ನೆಲ್ಲ ಶ್ರೀಸ್ವಾಮಿಗಳವರ ದಿವ್ಯ ಸನ್ನಿಧಿಯಲ್ಲಿ ವಿಜ್ಞಾಪನೆ ಗೈದಮೇಲೆ, ವಾರ್ಧಕ್ಯದಿಂದಲೂ, ದೂರದೇಶ ಸಂಚಾರದಿಂದಲೂ ತಮಗೆ ದೇಹವು ಬಹಳ ಗಳಿತವಾಗಿ ಹೋಗಿರುವದರಿಂದ ಶ್ರೀಮಠದ ಕಾರ್ಯದಿಂದ ತಮ್ಮನ್ನು ನಿವೃತ್ತಿ ಮಾಡಿ, ಉಳಿದ ಕಾಲವನ್ನು ಸುಖವಾಗಿ ಸ್ವಗ್ರಾಮದಲ್ಲಿ ಕಳೆಯುವದಕ್ಕೆ ಅಪ್ಪಣೆಯಂ ದಯಪಾಲಿಸಬೇಕೆಂದು ಶ್ರೀಸ್ವಾಮಿಗಳವರಂ ಪ್ರಾರ್ಥಿಸಲು ಶ್ರೀ ಸ್ವಾಮಿಗಳವರು ಅದಕ್ಕೆ ಸಮ್ಮತಿಸಿ ಉಚಿತ ರೀತಿಯಂ ಅವರಂ ಕಳುಹಿಸಿಕೊಟ್ಟರೆಂದು ರಾಮನಾಥಪುರದ ಲೇಖಕರೊಬ್ಬರು ಬರೆದಿರುತ್ತಾರೆ.

CORRESPONDENCE.

ದೇಹದಾರ್ಢ್ಯ.

ಪೂರ್ವಕಾಲದಲ್ಲಿ ನಮ್ಮ ಸ್ತ್ರೀಪುರುಷರು ವಿಶೇಷವಾಗಿ ಕಾಯಶಕ್ತಿಯುಳ್ಳವರಾಗಿದ್ದರೆಂತಲೂ ಮೂವತ್ತು ನಾಲ್ವತ್ತು ವರುಷಗಳಿಂದೀಚೆಗೆ ಆ ಶಕ್ತಿಯು ಕಡಮೆಯಾಗುತಿದೆಯೆಂತಲೂ ಪ್ರಾಜ್ಞರು ಹೇಳಿಕೊಳ್ಳುತ್ತಾರೆ. ಸರ್ವತ್ರ ಹೀಗಿಲ್ಲದೆ ಇದ್ದಾಗ್ಯೂ ರೋಗಗಳಿಂದ ಕೆಲವರು, ಕಾರಣಾಂತರಗಳಿಂದ ಕೆಲವರು, ಹೀಗೆ ಮೂರುಪಾಲು ಜನರು ದುರ್ಬಲರಾಗಿರುವುದು ಪ್ರತ್ಯಕ್ಷವಾಗಿಯೇ ಇದೆ. ಈ ಕಾಲದ ದೌರ್ಬಲ್ಯಕ್ಕೆ ಕಾರಣಗಳನ್ನೂ ಅದರ ನಿವೃತ್ತಿಗೆ ಉಪಾಯಗಳನ್ನೂ ವಿಚಾರಿಸೋಣ. ದೇಹದಾರ್ಢ್ಯಕ್ಕೆ ವ್ಯಾಯಾಮಗಳು ಅತ್ಯವಶ್ಯಕವಾದವುಗಳು. ಬಾಲ್ಯದಲ್ಲಿ ಅನೇಕ ವಿಧವಾದ ಆಟಪಾಟಗಳೇ ಅತ್ಯಂತಾವಶ್ಯಕವಾದ ಸಾಧನಗಳಾಗಿ ಪೂರ್ವಕಾಲದಲ್ಲಿ ಆಚರಿಸಲ್ಪಡುತಲಿದ್ದುವು. ನಿರ್ಮಲವಾದ ಗಾಳಿಯುಳ್ಳ ಮೈದಾನಗಳಲ್ಲಿ ಮಕ್ಕಳಿಗೆ ಆಡುವದಕ್ಕೆ ಅವಕಾಶವಿದ್ದರೆ ಅವರು ಕ್ರೀಡಾಸಕ್ತರಾಗಿ ದೇಹಕ್ಕೆ ಬೇಕಾದಷ್ಟು ಸಾಧನೆಯನ್ನು ಮಾಡಿಕೊಳ್ಳುವರು. ಈ ಸಾಧನೆಯಿಂದ ದೇಹದ ರಕ್ತಸಂಚಾರ ಮೊದಲಾದ ವ್ಯಾಪಾರಗಳು ಚೆನ್ನಾಗಿ ನಿರ್ಮಲವಾದ ಗಾಳಿ ಸೇವನೆಯಿಂದ ರಕ್ತವು ಶುದ್ಧವಾಗಿ ಶರೀರಕ [illegible] ನಿಶ್ವಾಸದಿಂದಲೂ ರೋಮಕೂಪಗಳಿಂದಲೂ [illegible] ವಿಸರ್ಜನೆಯಾಗುತಲಿರುವವು ಪೂರ್ವಕಾಲದಲ್ಲಿ ಮಕ್ಕಳು ಈವಿಧವಾದ ಕ್ರೀಡೆಗಳಲ್ಲಿ ವಿಶೇಷವಾಗಿ ಸೇರುತ್ತಿದ್ದದ್ದೇ ಅವರ ಆರೋಗ್ಯಕ್ಕೂ ಕಾಯಶಕ್ತಿಗೂ ಮುಖ್ಯಕಾರಣವಾಗಿತ್ತು. ಈಗ ಇಂತಾ ಕ್ರೀಡೆಗಳಿಗೆ [illegible] ಆರೋಗ್ಯಶಕ್ತಿಗಳ ಅಭಾವಕ್ಕೆ ಕಾರಣವಾಗಿದೆ

(ಸಶೇಷ)

ಲೋಕಾಭಿ[illegible]

ಶ್ರೀ ಜಗದ್ಗುರು ಸಂಸ್ಥಾನ.

ಶೃಂಗೇರಿ ಶ್ರೀಮಠ, ವೆಂಕ್ಯಾಂ ಮಧುರಾ ಡಿ॥ ರಾಮನಾಥ.

೧೮೯೪ನೇ ಅಕ್ಟೋಬರ್ ತಾರೀಖ್ ೨೯.

ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಆಜ್ಞಾ ಪ್ರಕಾರ ಈ ತಾರೀಖ್ ಲಾಗಾಯಿತು ಜಾರೀಯಲ್ಲಿ ಬರತಕ್ಕ ಬಗ್ಗ್ಯಾಗಿ ಮಾಡಲ್ಪಟ್ಟ ನಿಬಂಧನೆ.

೧. ಸಂಸ್ಥಾನದಲ್ಲಿ ಬಹಳ ದಿನಗಳಾರಭ್ಯ ಶ್ರೀ ಮಹಾಸ್ವಾಮಿಗಳವರಿಂದ ಅನುಗ್ರಹಿಸಲ್ಪಡ ನ ಶ್ರೀಮುಖಗಳಲ್ಲಿಯೂ, ಸೌಕರರು ವೃತ್ತೇರಿಗೆ ಕೊಡಲ್ಪಡುವ ನಿರೂಪಗಳಲ್ಲಿಯು ಸಹ "ಶ್ರೀ ವಿದ್ಯಾಶಂಕರ" ಎಂಬದಾಗಿ ಬಾಲಬೋಧ ಅಕ್ಷರದಿಂದ ಕೆತ್ತಲ್ಪಟ್ಟಿರುವವರ್ತುಲಾಕಾರವಾಗಿ ಸುಮಾರು ¼ ಅಣೆ ಪರಿಮಾಣವುಳ್ಳ ದ ಶ್ರೀ ಮುದ್ರಾಕ್ಷರಕ್ಕೆ ಪ್ರತಿನಿಧಿಯಾಗಿ ಬಾಲಬೋಧ (ಶ್ರೀ) ಕಾರದಿಂದ ಮಾತ್ರ ಕೆತ್ತಲ್ಪಟ್ಟ ಮೇಲೆ ಹೇಳಿದ ದೊಡ್ಡ ಮೊಹರಿನಲ್ಲಿ ಮೂರರಲ್ಲಿ ಒಂದು ಭಾಗ ಪರಿಮಾಣವುಳ್ಳ ಒಂದು ಮೊಹರಿನಿಂದ ಸಹ ಮೊಹರ್ ಮಾಡಲ್ಪಡತಕ್ಕದ್ದು ಸಂಪ್ರದಾಯವಾಗಿಯೇ ನಡೆದು ಬರುತ್ತಿದೆ.

೨. ಅನಾದಿ ಸಿದ್ಧವಾಗಿ ನಡೆದ ಬರುತ್ತಲಿರುವ ಈ ಸಂಪ್ರದಾಯವನ್ನು ಮಾತ್ರವೇ ಜಾರೀಯಲ್ಲಿ ಇರುವವರಲ್ಲಿ ಕಾಲ ವೈಪರೀತ್ಯದಿಂದ ಅನೇಕ ದುಷ್ಟಜನಗಳ ದುಷ್ಟ ಚೇಷ್ಟೆಗಳಿಗೆ ಅವಕಾಶ ಉಂಟಾಗಿ ವಿಶೇಷವಾದ ಅನರ್ಥಗಳಿಗೆ ಕಾರಣವಾಗಬಹುದಾದ ಸಂದೇಹವು ಶ್ರೀ ಮಹಾಸ್ವಾಮಿಗಳವರ ಚಿತ್ತದಲ್ಲಿ ಜನಿಸಿ [illegible] ಮೇಲೆ ಹೇಳಲ್ಪಟ್ಟಂತೆ [illegible] ಶ್ರೀಮುಖಗಳಲ್ಲಿಯೂ ಅಥವಾ ನಿರೂಪಗಳಲ್ಲಿಯೂ ತತ್ಸಂಬಂಧದಲ್ಲಿ ಸಂಸ್ಥಾನದ ಆಫೀಸುಗಳನ್ನು ನಡಿಸುತ್ತಲಿರತಕ್ಕ ಅಧಿಕಾರಿಯು ಪತ್ರಿಕೆಯ ಕೆಳಭಾಗದಲ್ಲಿ ದಸ್ತಾಕ್ಷರವನ್ನು ಮಾಡತಕ್ಕದ್ದೇಂತಲೂ, ಸಾಧ್ಯವಾದ ಮಟ್ಟಿಗೆ ಪತ್ರಿಕೆಗಳನ್ನು ಬರೆಯತಕ್ಕ ಮನುಷ್ಯನು ಒಬ್ಬನಾಗಿಯೇ ಇರತಕ್ಕದ್ದೆಂತಲೂ, ಪ್ರತಿ ಒಂದು ಪತ್ರಿಕೆಯಲ್ಲಿಯೂ ರಿಜಿಸ್ಟರ್ ನಂಬರುಗಳನ್ನು ಹಾಕಿರಬೇಕೆಂತಲೂ, ಮೇಲೆ ಹೇಳಿದ ನಿಬಂಧನೆಗಳಿಗೆ ಅನುಸಾರವಾಗಿ ಇರತಕ್ಕ ಪತ್ರಿಕೆಯನ್ನು ಮಾತ್ರ ಶ್ರೀ ಜಗದ್ಗುರು ಮಹಾಸ್ವಾಮಿಗಳವರಿಂದ ಸಾಕ್ಷಾತ್ತಾಗಿ ಅನುಗ್ರಹಿಸಲ್ಪಟ್ಟ ಪತ್ರಿಕೆಯಾಗಿ ಭಾವಿಸಲ್ಪಡತಕ್ಕದ್ದೆಂತಲೂ, ಈ ನಿಬಂಧನೆ ವಿಚಾರವನ್ನು ಎಲ್ಲಾ ದೇಶಗಳಲ್ಲಿಯೂ ಪ್ರಸಿದ್ಧ ಪತ್ರಿಕೆಗಳ ಮೂಲಕ ಪ್ರಸಿದ್ಧಗೊಳಿಸತಕ್ಕದ್ದೆಂ, ತಲು ಸದರಿ ಶ್ರೀ ಮಹಾಸ್ವಾಮಿಗಳವರ ಅಪ್ಪಣೆ ಆದ ಮೇಲೆ ಮಾಡಲ್ಪಟ್ಟ ನಿಬಂಧನೆ.

ಶ್ರೀಕಂಠಶಾಸ್ತ್ರಿ,
ಕಾರ್ಭಾರಿ.

THE MYSORE GAZETTE.
ಮೈಸೂರು ಗಜೆಟ.

ಶ್ರೀಮನ್ಮಹಾರಾಜರವರ ಸರಕಾರದ ಅಪ್ಪಣೆಯವರ ಸರ್ಕಾರದಿಂದ ಹೊರಡಿಸಲ್ಪಟ್ಟ ಪ್ರಕಟನೆಗಳು.
ಗುರುವಾರ, ತಾ॥ ೧ನೇ ನವಂಬರ್ ೧೮೯೪.

ಮೊಕಾಂ ಬೆಂ॥ ೧೮೯೪—ತಾ॥ ...ನೇ ಅಕ್ಟೋಬರ್ ೧೮೯೪— [illegible] ಸರ್ವೆ ಅಸಿಸ್ಟೆಂಟ್ ... ನೇ ಸರ್ಕಾರ ಆದಾಯದ ... ತಾಲ್ಲೂಕು ಅಮಲ್ದಾರ್ ಮ ... ಇನ್ಸ್ಪೆಕ್ಟರ್ ... ಶಂಕರಯ್ಯ ಬಿ ಎ ... ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ... ನೇ ಸರ್ಕಾರ ಅನುಸರಿಸಿ ... ಅಧಿಕಾರವಾಗಿ ಗವರ್ನಮೆಂಟಿನವರು ... ಅಧಿಕಾರಗಳು ಕೊಡಲ್ಪಟ್ಟಿರುತ್ತವೆ [illegible]

೧. ಪೋಲೀಸಿಯನ್ನು ದೂರಿ ... ಮಾಡತಕ್ಕವರೆಂದು ಮುಕ್ತಾ ಕೊಡುವ ಅಧಿಕಾರ, ಸೆಕ್ಷನ್ ... [illegible]
೨. ...ನೇ ಸೆಕ್ಷನ್ ಅನುಸರಿಸಿ ಮುಕ್ತಾ ಮಾಡುವ ಅಧಿಕಾರ
೩. ಅ...ನ ಮುಚಲಿಕೆ ... ಅಧಿಕಾರ, ಸೆ [illegible]
೪. ಫಿರ್ಯಾದಿಗಳನ್ನು ಹಿಡಿಯುವಾಗ, ಸೆಕ್ಷನ್ ೧೯೦
೫. ಪೋಲೀಸ್ ಡ್ಯೂಟಿ ... ಫಿರ್ಯಾದಿಗಳನ್ನು ಹಿಡಿಯುವುದು, ಸೆಕ್ಷನ್ ೧೯೦
ತನ್ನಿಂದ ನಡೆಸಲ್ಪಟ್ಟದ್ದಾಗಿ ವರ್ತಮಾನ ... ಮೇಲಿನ ವಿಚಾರಣೆ ಮಾಡುವ ಅಧಿಕಾರ, ಸೆ ... [illegible]

೬. ಅದ್ದರಿಂದ ಸದರಿ ಜನರು ... ನೇ ಅಧಿನಿಯಮಕ್ಕೆ ... ಎಂಬುದು ಸರ್ಕಾರದ ... ನ ಜಿಲ್ಲೆಯ ... ಅಧಿಕಾರ ಕೊಡಲ್ಪಟ್ಟಿದೆ [illegible]

ನಂ॥ ೬೫೦—೬ ೧೮೯೪—ತಾ॥ ...ನೇ ಅಕ್ಟೋಬರ್ ... ಕಾರ್ಯದರ್ಶಿ ... ಮೈಸೂರು ... ದ ಪ್ರಮಾಣ ... ಕೊಡಲ್ಪಟ್ಟಿರುತ್ತದೆ [illegible]

೭. ಕೋಲಾರ ತಾಲ್ಲೂಕ್ ... ದಿವಾನ್ ... ಮೈಸೂರು ... ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮಾಡಲ್ಪಟ್ಟಿರುತ್ತದೆ.

ನಂ॥ ೬೫೦—೬ ೧೮೯೪ ... ಸರ್ವೆ ... ಸೆಕ್ಷನ್ ... ಕೊಡಲ್ಪಟ್ಟ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ:—

೧. ... ಸೆಕ್ಷನ್ ೧೧೦.
೨. ... ಸೆಕ್ಷನ್ ೧೧೧.
೩. ... ಅಧಿಕಾರ.
೪. ... ಅಧಿಕಾರ.
೫. ... ಅಧಿಕಾರ.
೬. ... ಸೆಕ್ಷನ್ ೧೯೦.
೭. ... ಅಧಿಕಾರ.
೮. ... ಸೆಕ್ಷನ್ ೧೯೦.
೯. ... ಅಧಿಕಾರ, ಸೆ ...

೨. ಇದಲ್ಲದೆ ... ಸೆಕ್ಷನ್ ... ಅಧಿಕಾರ ಕೊಡಲ್ಪಟ್ಟಿರುತ್ತದೆ.

ನೋಟೀಸ್.

"ಆಂಗ್ಲೋ ಇಂಡಿಯನ್ ಪಾಕೆಟ್ ಡೈರಿ."

ನಾವು ಪ್ರತಿ ವರ್ಷದಲ್ಲಿಯೂ ಪ್ರಕಟಿಸುತ್ತಲಿರುವ ... ಇಂಗ್ಲೀಷ್ ... ಪಂಚಾಂಗ, ದಿನಗಳು, ತಿಥಿ, ವಾರ, ನಕ್ಷತ್ರ ಸಹಿತ ... ರೈಲ್ವೆ ... ಪೋಸ್ಟ್ ... ಇಂಗ್ಲೀಷ್ ... ಪ್ರಕಟಿಸುತ್ತೇವೆ. [illegible]

ಕ್ರಯ ಪ್ರತಿ ... ಟಪಾಲು ... ೦—೧—೦

ಶ್ರೀ ... ಈ ಕೆಳಗೆ ... ಉಚಿತ ... ಪ್ರತಿ ... [illegible]

೫—೧೦ ೯೪ } ಸತ್ಯಂ ... ಪ್ರೊಪ್ರೈಟರ್, ಕರ್ನಾಟಕ ಪ್ರಕಾಶಿಕಾ ಪ್ರೆಸ್.

ನಮ್ಮಿಗಳಿಗೆ ಬರತಕ್ಕ ಜಾಡ್ಯಗಳು ಪಂತಾಪು

ರಾತ್ರಿಯಲ್ಲಿ ... ನಮ್ಮ ... [illegible]

ಮುಂದೆ ... [illegible]

WD

ADVERTISEMENTS

ನೋಟಿಸ್

ಚಿತ್ರಲೇಖನ ಕಾರ್ಯದಲ್ಲಿ ಪ್ರಖ್ಯಾತರಾದ ರಾಜಾ ರವಿವರ್ಮ ಎಂಬವರಿಂದ ತಯಾರಿಸಲ್ಪಟ್ಟಿರುವ

ಶಕುಂತಲಾ ಜನ್ಮ ವರ್ತನ

ಎಂಬ ಚಿತ್ರಪಟವು ಇಪ್ಪತ್ತೊಂದು ರಿಂದ ಎಷ್ಟೋ ಬಣ್ಣಗಳುಳ್ಳದ್ದಾಗಿಯೂ ಅತಿ ರಮಣೀಯವಾದುದಾಗಿಯೂ, ಪ್ರತಿಯೊಬ್ಬರು ದ ... ಮನೆಯನ್ನಲಂಕರಿಸುವವಕ್ಕೆ ಅತ್ಯಂತ ಶ್ಲಾಘ್ಯಕ್ಕೆ ಪಾತ್ರವಾದದ್ದಾಗಿ ... ಇರುವುದು ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುವ ವರ್ಣನೆಯು ಈ ಚಿತ್ರಪಟದಲ್ಲಿ ಪ್ರತ್ಯಕ್ಷವಾಗಿ ಕಂಡುಬರುವುದು, ಮೇನಕೆಯು ತನ್ನ ಶಿಶುವಾದ ಶಕುಂತಲೆಯನ್ನು ವಿಶ್ವಾಮಿತ್ರ ಮಹರ್ಷಿಗಳವರ ವಶದಲ್ಲಿಡುವ ಸಂದರ್ಭವನ್ನು ನೋಡಿದಾಗ ... ಮನಸ್ಸು ... ದುಃಖಿತರಾದವರು ... ಸಂಸಾರದಿಂದ ... ಮನೆಗೆ ಬರತಕ್ಕವರು ಈ ಚಿತ್ರಪಟವನ್ನು ನೋಡಿದರೆ ... ಅವರ ... ಮನಸ್ಸಿಗೆ ಆಹ್ಲಾದವನ್ನುಂಟುಮಾಡುವುದು.

ಪಟದ ಆಕಾರ—ಉದ್ದ ೩೬ ಅಂಗುಲ, ಅಗಲ ೨೭ ಅಂಗುಲ ಕ್ರಯ—ರೂ॥ ೬—೦—೦ ಅಂಚೆಕಟ್ಟಿನ ಲಾಗಾಯತು ತ ಪಾಲ್ ಹಾಸಲ ಪ್ರತ್ಯೇಕ ಕೊಡಬೇಕು.

ಚಿತ್ರಕಲಾನಿಪುಣರಾದ ಮೇಲೆಕಂಡವರಿಂದ ನೂತನವಾಗಿ ವಿರಚಿತಗಳಾದ

ಲಕ್ಷ್ಮೀ ಸರಸ್ವತೀ

ಚಿತ್ರಪಟಗಳು.

ಲಕ್ಷ್ಮಿಯು ಸರೋವರ ದೊಳಗಿನ ಪಂಕಜ ಪುಷ್ಪದಲ್ಲಿ ಕಿರೀಟಾಭರಣಾಲಂಕಾರಯುಕ್ತಳಾಗಿ ... ಹಸ್ತದಿಂದೊಡಗೂಡಿರುವಳು. ಸರಸ್ವತಿಯು ಕಿರೀಟಾಭರಣೆಯಾಗಿ ಚತುರ್ಭುಜಗಳೊಡನೆ ... ರುದ್ರವೀಣೆಯ ... ಮತ್ತೊಂದು ಕೈಯಲ್ಲಿ ಪುಸ್ತಕ ... ಮತ್ತೊಂದು ಕೈಯಲ್ಲಿ ಪುಷ್ಪಮಾಲೆಯನ್ನು ಧರಿಸಿರುವಳು. ಈ ಪಟಗಳು ಅತ್ಯಂತ ... ಗಳಾಗಿಯೂ, ಮನೋಹರಗಳಾಗಿಯೂ, ಗೃಹಾಲಂಕಾರಯೋಗ್ಯಗಳಾಗಿಯೂ, ದರ್ಶನೀಯಗಳಾಗಿಯೂ ಇರುತ್ತವೆ.

ಲಕ್ಷ್ಮೀ ಪಟದ ಆಕಾರ — 20 × 28 ಅಂಗುಲಗಳು
ಸರಸ್ವತೀ ಪಟದ ಆಕಾರ ... "
ಪ್ರತಿ ಪಟದ ಕ್ರಯ ... ರೂ॥ ೨

ಈ ಪಟಗಳನ್ನು ... ಈ ಕೆಳಗೆ ... ಮೂಲಕ ... [illegible]

ಟಿ ರಾಮರಾವ್ ಮತ್ತು ಕಂಪೆನಿ,
ಸೋಲ್ ಏಜಂಟ್ಸ್,
ಗಿರಗಾಂ, ಮುಂಬಯಿ.

NOTICE.

VAIDYASARA SANGRAHA.

A TREATISE ON THE PRINCIPLES OF HINDU MEDICINE

Price, including Postage Rs 5—0—0

ವೈದ್ಯಸಾರ ಸಂಗ್ರಹ.

... ಕ್ರಯ—ಟಪಾಲ್ ... ಪ್ರತಿ ಒಂದಕ್ಕೆ ರೂ ೫ 0—0

ನೋಟೀಸ್.

ಬೆಂಗಳೂರ್ ಕರ್ನಾಟಕ್ ಪ್ರೆಸ್.

೧೮೯೪ ನೇ ... ಸ್ಥಾಪಿಸಲ್ಪಟ್ಟದ್ದು

[illegible]

THE KARNATAKA PRAKASIKA.
ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಸ್ಥಳದವರಿಗೆ ವರುಷಕ್ಕೆ	3—0 —0
ಪರ ಸ್ಥಳದವರಿಗೆ ವರುಷಕ್ಕೆ	4—0—0

ಮುಂಗಡವಾಗಿ ... [illegible]

ಪ್ರಕಟನೆಯ ದಿವಾಸ್.

ಮೊದಲನೆಯ ... ಪಙ್ಕ್ತಿ ಒಂದಕ್ಕೆ	0—2—6
ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ	0—1—0

[illegible]

BANGALORE—Printed and Published at the KARNATAKA PRESS, No 10 HOSPITAL ROAD, CITY—1894.

THE

Karnataka Prakasika.

ಕರ್ನಾಟಕ ಪ್ರಕಾಶಿಕಾ.

Published Every Monday Morning.

[illegible]

VOL. XXI. BANGALORE:—MONDAY, NOVEMBER 12, 1894. No. 45.

Select Telegrams

St Petersburg, 3rd Nov —The Grand Duke George, brother of Emperor Nicholas the Second, is proclaimed Czarowitch until a son is born from the union of his Majesty with Princess Alix

St Petersburg 4th Nov—Princess Alix was anointed and received into the Greek church yesterday

Tokio 3rd Nov —According to Japanese official reports the first Japanese Army Corps has occupied Feng Hang Tcheng the Chinese having fled from the place at the approach of the Japanese to Moto Chhing

Pekin, 6th Nov —China is disposed to conclude peace with Japan on a basis of acknowledgment of the autonomy of Corea, and a payment of a war indemnity to Japan to be fixed by the Great Powers

London, 6th Nov—The *Standard*, in a leading article this morning urges the necessity of the intervention of the Great Powers in the war between China and Japan in order to avert the disintegration of China The paper warns Japan that she may lose the whole fruits of her victory by clutching too much

China has formally appealed to the Great Powers to intervene in the war and restore peace. The Cabinets of the Great Powers are discussing the matter Great Britain and France are willing to co operate, but decline to take the initiative

London, 7th Nov —The *Times* publishes a telegram from its correspondent at Tientsin stating that Prince Kung the President, has acknowledged before Tsung li Yamen the impotence of China to withstand the Japanese attack

Poona 7th Nov —Tatya Saheb Natu was today acquitted by the Sessions Judge, who delivered a lengthy Judgment in the case His Honour held that it was not proved that the *mela of which the accused was leader, at any time became an unlawful assembly*, that under the circumstances proved the Police had not the authority to order the playing of music to be stopped in the neighbourhood of the Masjid, and that the directions given to that end were not reasonable, that playing music was not an illegal act, that it was not proved that religious worship or a ceremony was going on in the Masjid and that it appeared that rioting was committed by the Mahomedans, who had on the pretence of assembling for worship really laid in wait for the Hindus Tatya Saheb was therefore acquitted of all charges

The Sessions Judge commented on the way in which the prosecution had been conducted

---

THE

Karnataka Prakasika.

MONDAY, NOVEMBER 12, 1894.

THE MAHARAJAH'S VISIT TO CALCUTTA.

We are told that it is the intention of the Maharajah of Mysore to take a trip to Calcutta in the early part of next month Preparations are now being made for the journey, which will be by land, the railway being used instead of the steam ship. This is the second time His Highness visits the capital of India, and no doubt he will be as well received on his visit next month, as he was when he went there a few years ago We feel certain that the Maharajah will enjoy himself while he is away, and that the trip will be of benefit to him He will meet the Viceroy, and any business there may be to transact can easily be done The tedium of correspondence will not be required, and anything that requires *settlement can be settled in a* very short time In the next place, His Highness and those who accompany him will be able to see how the affairs of the State are carried on, what the views of the members of Government are, and what changes are believed to be necessary They can see the machinery of Government being worked at its full power under the guidance of those who are supposed to know *best how to work it* Then again, they will meet men from all parts of the country Probably other chiefs will be there, and thus His Highness will be able to converse with men of his own class, and they may be able to talk on matters that equally concern them In short he will see life in a different aspect from what he does in Mysore or in Bangalore, and this must be a benefit to him He is following the example of the sovereigns of Europe, who rarely let a year pass without paying a visit to some country over which a brother sovereign rules, and these visits are becoming more frequent every year As regards India, the railway has enabled the Princes of the country to travel from place to place with comfort, and to see far more than was possible for their predecessors to see. Formerly a Prince rarely left his capital, and still more rarely did he go outside his own dominions He was satisfied with his people, and did not care to see any other Such a man settled down for life in one spot and he rarely cared to leave it. But the railway has brought about a revolution in the way of travelling, and so we see the Princes of India going about the country to enjoy themselves like anybody else. But though there are many benefits to be derived from such trips as the one the Maharajah of Mysore intends taking next month, there are also drawbacks Such trips may *become a habit The Princes may imagine that their chief duty is to travel about the country, that they ought to see all they can, to enjoy themselves as much as possible Enjoyment is good if taken after labour, but it becomes pernicious when it is looked upon as sole business of life The duty of a Prince is first to those over whom he rules He should consider them the first, he should study their wants, he should know them intimately He should travel among them, more especially at the time of year when this can be done with the greatest ease The cold season in this part of India is the best time to travel, whether for a short or long time, and a trip through the Mysore State at this time of the year is very pleasant* We should *have been glad if His Highness had settled to visit a number of places within his territory, and then returned to his capital* This would have pleased the people, who *are always glad to see their ruler if only for a short time. A trip of this kind binds the ruler and the ruled together*, and upon the whole we think it would have been better if the Maharajah had decided to content himself with staying in Mysore, and seeing as much as he could of it. The evil may grow still greater Not only may the Princes spend a good deal of their time in other parts of India, but they may think it their duty to spend a good deal also in Europe There is a danger that absenteeism may become the order of the day, than which nothing could be more pernicious *Ireland is an example of what evil absenteeism may work in a country* It is to be hoped it will not be allowed to establish itself in India. The Guikwar of Baroda is now in Europe, and has been there for sometime. It is said that the authorities in London have given him a hint that he ought to return, but he does not appear willing to do so It may be that others will follow his example, and that the custom may become common Should this be the case, a great evil will be the result Much money will be taken out of the country, the people will be neglected, and the rule of the Native States will not be highly valued.

THE CITY WATER SUPPLY

The Hessaraghatta scheme is being pushed on vigorously, and before very long we may expect to have water brought into the City from the place just mentioned. *The Durbar* and well is not waiting for the British Government, for it might have had to wait for a very long time, perhaps fifty years or more It is about this time since a scheme for the Civil and Military Station was talked about, but up to this time very little, if anything, has been done We are *now given to understand that the Maligal* scheme, which the Supreme Government sanctioned, has been abandoned, and few will regret this It was believed by those able to judge that sufficient water could not be obtained In addition it is said that much would have been lost in its passage from Maligal to Bangalore. We are now told that the British Government has asked that of Mysore to allow it to have part of the water from the Hessaraghatta supply for the use of the Civil and Military Station, and that the request has been complied with Thus Mysore will show the way to the British Government, it will solve a problem it has been trying to solve for the last fifty years It is a great pity the rulers at Calcutta did not fix on this plan years ago, and then much money might have been saved Mysore will have the credit of supplying the Civil and Military Station with water

---

News and Notes

The Gaekwar of Baroda has accepted the post of vice president of the East India Association He has left London for Switzerland

Sir T Muthuswamy Iyer has given Rs 300 towards the Victoria Hostel Fund, and Rs, 750 towards the Ranganadham Memorial

We are glad to learn that Dewan Bahadur S Subramania Iyer, C I E, has consented to preside over the Social Conference to be held in Madras on the 30th December

The *King of Italy must have been surprised the other day to receive an official communication, asking him if he could read and write* Under the electoral law of Italy illiterate men are not allowed to vote, and King Humbert who owns some property in Rome which *would entitle him to the franchise, was sent the usual official catechism by some clerk*

The *Standard* in its issue this morning says there is little prospect of concerted action on the part of the Great Powers in response to China's appeal for their help in terminating the war Russia and France are willing, but Germany considers the intervention of the Powers useless.

Consequent on representations made to Government, it has been ruled that the Provincial Civil Service Examination should be thrown open to graduates of the First, Second and Third Classes, instead of being confined to the first two classes The fee for admission to the Examination has also been increased from Rs. 25 to Rs 50 per head

A *Correspondent writes* —The Panchayatdars of the Mahant's Mutt have subscribed Rs 100, *only for the Congress* Though they are willing to pay more, they are afraid that they shall have to lay themselves open to the charge of extravagance, if they subscribe more, because they are Managers only for the time being Ruggamatam Mahant, and Galigopuram Mahant, have also subscribed their mite

At a meeting of the Manchester Chamber of Commerce on the 5th instant, a resolution was passed declaring that necessity for fresh sources of revenue in India was solely due to the fall in exchange, and urging Government to adopt the policy of international bimetallism in order to obviate the imposition of import duties and remove the continuance of the exchange difficulty

At the special meeting of the Municipal Commissioners of Madras held last week a resolution was passed announcing the intention of the municipality to impose the nominal duty of 1/10 of a pie per pound of tobacco imported into Madras, from the 15th instant. In accordance also with the suggestion of Government, the President is authorised to suspend collecting should he consider it expedient.

His Highness the Nizam of Hyderabad has quite recently made an order by which no foreigner can in future visit the historical and interesting Fort of Golconda without special permission being obtained through the medium of His Highness' Prime Minister His Highness is also credited with having passed an order that in future no reviews of his troops can be held, or inspection of them by strangers allowed, without his special sanction being first obtained.

The letter *from the Government of India is communicated to the Hindu Religious Endowments Committee* with the request that the Government may be informed at an early date whether in the Committee's opinion, the Bill can be altered in such a way, by, for example, the removal of the provisions imposing duties and conferring powers upon the District Judge, as to render it acceptable to the Government of India

Appointments —Mr C Hanumantha Row, M A and B L to be Deputy *Collector*, 6th grade, and is posted to Chingleput, General Duty. Mr N. S *Somasundara* Sastri Avargal, B A to be Deputy Collector, 6th grade, and is posted to Godavari, General Duty, Mr P Duraisamy Aiyangar, B.A. to be Deputy Collector, 6th grade, and is posted to South Canara, General Duty, on probation for two years *Vide Paras* 2 and 3 of G. O, No 656, Public, dated 10th September 1894

CHINA HAS NOW FORMALLY APPEALED to the Great Powers to restore peace. Her humiliation is as complete as it has been rapid. Japan has outmanoeuvred her at every point and has given evidence that while the army of the Celestial is a thing on paper, and but a rabble in the field, the Mikado's troops are well drilled, well armed, and well officered. Great *Britain and France are willing to co-operate* for the restoration of peace, but decline to take the initiative. *Russia will probably join them*, but what about Germany and the United States?

M NOTOVITCH, the author of the "Unknown Life of Jesus Christ," writing a long reply to his critics, *refers thus* to Professor Max Muller's criticism which we published sometime ago. He says, '*It only remains for me to* furnish indisputable proofs that I am neither a "*hoaxer*," *nor a* "*forger*." I am about to take a further journey to Tibet, and this time *not only to see once more the documents in* the Tibetan language at Himis which are only copies but to push on as far as Lhassa in order to discover the original. I hope that the Press as well as all people of independent judgement will be good enough to await my return before forming a final opinion as to my work.

Local and Provincial

THE RESIDENT.—Returned to Bangalore from his trip to Hyderabad and Bombay last Thursday morning. His arrival was quite private.

A report is current in Bangalore that Mr L Ricketts, Inspector General of Forests in Mysore, *is to retire shortly from the service* of the state.

A NEW REGIMENT.—The 21st Pioneers came in from Trichinopoly on Thursday last to take the place of the 4th Pioneers who will now leave the Station.

A HOLIDAY.—Last Friday being the birthday of the Prince of Wales all the Courts and offices in the Civil and Military Station as well as in the City were closed.

GOVERNMENT has sanctioned the purchase of the buildings belonging to the Southern Mahratta Railway Company at Bangalore City Station, which will be converted into bungalows for the Madras Railway Company's guards.

UNDER instructions from the Board of Directors, the Agent and Manager, Madras Railway, proposes to bring into force the increased rate of two pies per mile *for 3rd class passengers*, travelling by the ordinary train, over the *whole system, from the 1st January next*.

THE WEATHER.—Last Monday *night* there was a splendid downpour of rain, 2 inches and 38 cents being registered at *the Central College*. Not quite so much fell in the Civil and Military Station. *A good many houses came* down, and other accidents happened during the fall.

THE BANGALORE DEPUTY COMMISSIONER.—We are given to understand that Mr Mir Shujaet Ali Khan, the Deputy Commissioner of Bangalore District, goes back to his per*manent appointment of Collector at Chittore*, in the North Arcot District, in January next. —E M

OFFICIAL CHANGES.—We learn that it is under contemplation by the Durbar to make a change amongst the Deputy Commissioners and Executive Engineers under the State *service*. It would *appear that these contem*plated changes will be given effect to by the end of *December* 1894.—E M

Sir Romesh Chunder Mitter, the Hon'ble Justice Chunder Madhub Ghose, and other gentlemen, of Calcutta whose visit to Madras is announced elsewhere, paid a visit yesterday evening to the *Triplicane Temple*. Sir Romesh Chunder and the Hon'ble Justice *Chunder Madhub Ghose visited Sir T Muthu*samy Iyer at his residence in Mylapore.—*Hindu*

A RAILWAY ACCIDENT AT KADUR.—On the night of the 10th instant the mixed train from Hubli to Bangalore was derailed between Birur and Kadur *owing* to a waggon axle breaking. Two third class carriages and one waggon left the *rails*. No passengers were injured. The permanent way was damaged for a quarter of a mile more or less. *Passen*gers are being transhipped and through communication will probably be restored soon.

THE GOVERNMENT has decided that, as its object is to obtain unofficial information at the Representative Assembly, to be held yearly at the capital, such persons as a Public Prosecutor, a Vice President or other Municipal servant, who are salaried officers, and whose acts are therefore controlled by Government, are not eligible for election as members under the rules.

THE MYSORE CIVIL SERVICE EXAMINATION.—Our readers will remember the announcement we made in a recent issue that one of the highest Officers of the State had written to the Government, asking it why it could not abolish the Mysore Civil Service Examination or at least postpone it for a period of five years. We now hear that the Government contemplates postponing the examination for five years.—M H.

TOUR OF H H THE MAHARAJAH.—With reference to the intended trip of His Highness the Maharajah and suit to Calcutta early next month, we now learn that arrangements for the running of special trains are being made by the Southern Mahratta, the G I P and the East Indian Railways. His Highness is expected to be away from the province for about nine or ten weeks.—B S

The Mysore Gazette.

Bangalore, Thursday, November 8 1894

NOTIFICATIONS BY THE GOVERNMENT OF HIS HIGHNESS THE MAHARAJAH OF MYSORE

The 24th October 1894

Under Section 37 of the Code of Criminal Procedure, M Gulam Mohadin Khan Amildar and Second Class Magistrate of Chikballapur Taluk is invested with the following powers specified in the fourth schedule as additional powers which Government may confer on a Magistrate of the said class:—

(1) Power to make orders prohibiting repetitions of nuisances, Section 143

(2) Power to make orders under Section 144

(3) Power to hold inquests, Section 174

(4) Power to take cognizance of offences *upon complaint*, Section 191

(5) Power to take cognizance of offences *upon Police reports*, Section 191.

(6) Power to take cognizance of offences *upon information, Section* 191

The 2nd November 1894

Mr C Meenacshaiya, Government Advocate, Secretary to the Dewan in the Legislative Department and Inspector General of Registration, having availed himself of the fifteen day's casual leave granted to him in Notification No 4670—G F 80 93 dated 14th September 1894 from the 25th idem and having returned to duty on the forenoon of 1st October 1894, the unexpired portion of the leave is hereby cancelled.

The 5th November 1894

Mr R Bruce Foote, F G S, is appointed State Geologist, Mysore Geological Department, and he entered upon his duties on the 1st October 1894.

The one month's privilege leave granted to D Madhava Rao, Deputy Amildar of the *Srinivaspur Sub-Taluk, in Notification No* 6192—1587, dated 25th October 1894, is hereby extended by one month and *twenty-one* days.

I Ramachandra Rao *Amildar* of the Heggaddevankote Taluk, having availed himself of the two months and twenty-eight day's privilege leave granted to him in Notifications Nos 21289—G F 123 93 2031—G F 123 93 and 3642—G F 123 93 dated respectively 6th June, 2nd August, and 30th August 1894, from the 10th July 1894 and returned to duty *on the forenoon of the 8th October* 1894, the unexpired portion of the leave is hereby cancelled.

The four months and twenty day's leave without allowances granted to Mr C Devaraj Ars, Probationary Assistant Commissioner, in Notifications Nos 13270—G F 338 92 and 251—G F 338 92 dated respectively 8th February and 7th July 1894, is hereby extended by one day.

The 6th November 1894

Under Section 37 of the Code of Criminal Procedure, Mr Mir Kamaludin Ali Khan, Assistant Commissioner and Magistrate of the second class, Chitaldroog District, is empowered to pass sentences of whipping under Section 32 of the said Code.

EDUCATION.

Mr. H Kesavaiya delivered over, and Mr B Das kachar assumed, charge of the office of the Deputy Inspector of Schools, Mysore South Circle, on the afternoon of the 25th October 1894.

ಕರ್ನಾಟಕ ಪ್ರಕಾಶಿಕಾ.

೧೮೯೪ ನೇ ಇಸವಿ ನವಂಬರ್ ೧೨ ನೇ ತಾ|| ಸೋಮವಾರ.

ಗವರ್ನ್ಮೆಂಟು ಆಫೀಸರರು ತಮ್ಮ ತಾಬೇದಾರರಲ್ಲಿ ಸಾಲಮಾಡುವದು ಕುರಿತು.

ಮಾಜೀ ಮಜಕೂರ್ ೪ನೇ ತಾರೀಖಿನ ಒಳದೇಶದ ಈವಿನಿಂಗ್ ಮೆಯಿಲ್ ಪತ್ರಿಕೆಯಲ್ಲಿ ಪರದಿ ಕಂಡ ಒಂದು ವೃತ್ತಾಂತವು ಪ್ರಕಟಿಸಲ್ಪಟ್ಟಿರುವುದು ನಮ್ಮ ದೃಷ್ಟಿಗೆ ವಿಷಯವಾಯಿತು, ಏನೆಂದರೆ—ಮೈಸೂರ್ ಸೀಮೆಯಲ್ಲಿ ಆಫೀಸರ್ ದರ್ಜೆಗಳಲ್ಲಿರುವವರು, ತಮ್ಮ ತಾಬೇದಾರಿ ಉದ್ಯೋಗಸ್ಥರಿಂದ ಸಾಲಗಳಂ ಪಡೆಯುವ ವಾಡಿಕೆಯೆಂದು ನೆಲೆಗೊಂಡು ಗೂಢವಾಗಿ ಜರುಗುತ್ತಲಿರುತಿದೆ. ಸದರೀ ತಾಬೇದಾರಿ ಉದ್ಯೋಗಸ್ಥರು ತಾವೇ ಸಾಲಗಳನ್ನು ಕೊಡುವದಕ್ಕೆ ಪ್ರತಿಯಾಗಿ ತಮಗೆ ಬೇಕಾದ ಅನ್ಯರ ಹೆಸರಿನಿಂದ ಕೊಡಿಸುತಲಿದಾರೆ, ಎಂಬುದು. ಇದು ನಿಜವಾಗಿರುವ ಪಕ್ಷಕ್ಕೆ ಈ ದುಸ್ಸಂಪ್ರದಾಯವನ್ನು ನಿಲ್ಲಿಸತಕ್ಕಬಗ್ಗೆ ಮಹಾರಾಜಾ ಸರ್ಕಾರದವರು ತಕ್ಕ ಏರ್ಪಾಡುಗಳಂ ಮಾಡಬೇಕಾದುದು ಆವಶ್ಯಕವೆಂತಲೂ ಯುಕ್ತವೆಂತಲೂ ಭಾವಿಸುತ್ತೇವೆ. ಸರ್ಕಾರದವರು ತಮ್ಮ ಕೈಕೆಳಗಣ ಉದ್ಯೋಗಸ್ಥರಿಗೆ ಸಾಲಗಳನ್ನು ಕೊಡುವಣವಾಗಲಿ, ಅವರಿಂದ ತಾವು ಸಾಲ ತೆಗದುಕೊಳ್ಳುವದಾಗಲಿ ಯೆರಡೂ ಆಕ್ಷೇಪಣೀಯಗಳಾದ ಕಾರ್ಯಗಳಾಗಿರುತಿವೆ. ಯಾವ ಸಿದ್ಧಾಂತವನ್ನನುಸರಿಸಿ ಒಬ್ಬ ಉದ್ಯೋಗಸ್ಥನು, ತನ್ನ ಅಧಿಕಾರಕ್ಕೊಳಗಾದ ಪ್ರದೇಶದಲ್ಲಿ ಭೂಸ್ವತ್ತು ಸಂಪಾದನೆಯಂ ಮಾಡಕೂಡದೆಂಬ ನಿಬಂಧನವು ಕಲ್ಪಿಸಲ್ಪಟ್ಟದೆಯೋ, ಯಾವ ಭಾವದೊಡನೆ ರಕ್ತಸಂಬಂಧಗಳಾದವರಿರುವ ಪ್ರದೇಶದಲ್ಲಿ ಅಂತವನಧಿಕಾರ ಸ್ಥಳಕೂಡದೆಂಬ ವಿಧಿ ಏರ್ಪಟ್ಟದೆಯೋ ಅದೇ ಸಿದ್ಧಾಂತವು ಸಾಲಕೊಡುವ ಮತ್ತು ತೆಗದುಕೊಳ್ಳುವ ವಿಷಯದಲ್ಲಿ ಸಹ ಅನ್ವಯಿಸದೆ ಹೋಗುವದಿಲ್ಲವು. ಲೋಕದಲ್ಲಿ ಋಣ ಸಂಬಂಧವು ಬಲೀಯವಾದದ್ದು. ಅದು ಸಾಲ ಕೊಡುವವನ ಪ್ರಾಬಲ್ಯ ದಾಕ್ಷಿಣ್ಯಗಳನ್ನು ಹೆಚ್ಚಿಸಿ ತೆಗದು ಕೊಳ್ಳುವವನ ಸ್ಥಿತಿಯಂ ತಗ್ಗಿಸದಿರುವದಿಲ್ಲವು. ಈ ಋಣಬಾಧೆಯ ಸಂಬಂಧವು ಒಡೆಯ ವಿನಾನರ್ಥ ಹೇತುವಾಗುತಿದೆ, ಹ್ಯಾಗೆಂದರೆ, ಮೊದಲು ಸಾಲತೆಗೆಯಬೇಕಾದ ಆವಶ್ಯಕತೆಯು ಏತರಿಂದುಂಟಾಗುತಿದೆಯೆಂದರೆ, ಅನುಪಪನ್ನರಂದ ಅಥವಾ ಅತಿವ್ಯಯ ಮಾಡುವಂತವರನ್ನು ಅಧಿಕಾರಗಳಲ್ಲಿ ಮೊಕರರ್ ಮಾಡುವಣದರಿಂದ ಅವರು ತಮ್ಮ ಉದ್ಯೋಗ ಗೌರವವಂ ಕಾಪಾಡಿಕೊಳ್ಳುವ ಕಾರಣವನ್ನು ಪ್ರಾಧಾನ್ಯೇನ ಉದಹರಿಸಿ ಅನಾವಶ್ಯಕಗಳಾದ ವಿಷಯಗಳಲ್ಲಿ ಅಮಿತವಾಗಿ ವ್ಯಯಮಾಡುತ್ತಾರೆ. ಅದಕ್ಕೆ ಉಪಪತ್ತಿ ಸಾಲದೆ ಹೋಗುವಲ್ಲಿ ಸಾಲ ಮಾಡಬೇಕಾಗುತಿದೆ. ಬೇಕಾದವನು ಅನ್ಯತ್ರ ದೊರೆಯದೆ ಹೋಗುವ ಸಂದರ್ಭಗಳಲ್ಲಾಗಲಿ, ಬೇರೆ ವಿಧವಿಂದ ತಮ್ಮ ಹಗಾವೆಯಂ ನಿವೃತ್ತಿಸಿಕೊಳ್ಳಲಾರದ ಸಂದರ್ಭಗಳಲ್ಲಾಗಲಿ, ಸಾಲಗಳನ್ನು ತಮ್ಮ ತಾಬೇದಾರರಿಂದ ಪಡೆಯುವದಕ್ಕೆ ಪ್ರಯತ್ನ ಪಡುತ್ತಾರೆ. ಪಹೀಲೆಯಂ ಸಂಪಾದಿಸಿಕೊಂಡು ಸ್ವೋದ್ದೇಶಗಳಂ ಪೂರ್ತಿ ಮಾಡಿಕೊಳ್ಳಬೇಕೆಂಬ ಯೋಚಿಕೆಯುಳ್ಳ ತಾಬೇದಾರರಿಗೆ ಅದು ವಸಂತಾಗಮನದಂತೆ ಮಹತ್ಸಂತೋಷವನ್ನುಂಟುಮಾಡುತಿದೆ. ಅನಂತರ ಉಂಟಾಗುವ ಪರಿಣಾಮವು ಪ್ರಸಿದ್ಧವಾಗಿಯೇ ಇದೆ. ಅಧಿಕಾರಿಯಾದವನು ತನ್ನ ಸಾಲಗಾರನ ತಗಾದೆಯನ್ನು ಕಡಮೆಮಾಡಿಕೊಳ್ಳುವದಕ್ಕಾಗಿ ಆತನಿಗೆ ಯಾವವಿಧವಿಂದಲಾದರು ಒಂದು ಯೆಹಸಾನ್ ತೋರಿಸಬೇಕಾದವನಾಗುತ್ತಾನೆ. ಕೂಡಲೆ ಅವನ ದಾಕ್ಷಿಣ್ಯವು ಪ್ರಬಲಿಸಿ ಅವನ ಇಷ್ಟಾನುಸಾರ ಪರಂತು ತನ್ನ ಮನೋವಿರುದ್ಧವಾಗಿ ವರ್ತಿಸಬೇಕಾದ ನಿರ್ಬಂಧಕ್ಕೊಳಪಡಬೇಕಾದವನಾಗುತ್ತಾನೆ. ಇಂತಹ ಸಂದರ್ಭದಲ್ಲಿ ಒಬ್ಬನಿಗೆ ಅನ್ಯಾಯ ಮಾಡಿದ ಹೊರತು ಮತ್ತೊಬ್ಬನಿಗೆ ಪ್ರಯೋಜನವನ್ನುಂಟುಮಾಡುವುದು ಪ್ರಯಾಸವು. ಇದಲ್ಲದೆ ತಾಬೇದಾರನು ಸಾಲ ಕೊಡುವದಕ್ಕೆ ಶಕ್ತನಾಗಿರುವಪಕ್ಷಕ್ಕೆ, ಅವನು ಉದ್ಯೋಗಧರ್ಮದಲ್ಲಿ ಮಾಡುವ ಅನೇಕವಿಧ ದ್ರೋಹಕಾರ್ಯಗಳಂ ಋಣಬದ್ಧನಾದ ಅಧಿಕಾರಿಯು ಉದಾಸೀನತೆಯೊಡನೆ ನೋಡುತ, ಅವನ ಅವ್ಯವಸ್ಥೆಗಳನ್ನು ಕದಾಚಿತ್ ಮುಚ್ಚಿಸಬೇಕಾದವನಾಗುತ್ತಾನೆ. ಕದಾಚಿತ ತಾಬೇದಾರನ ಅಕ್ರಮಗಳು ಉಪೇಕ್ಷಿಸಲ್ಪಡುವದಾದರೆ ಅವು ಕ್ರಮೇಣ ವೃದ್ಧಿಯನ್ನೈದಿ, ಅವನು ಲೋಕಕಂಟಕನೆನಿಸದಿರಲಾರನು. ಇದೇರೀತಿ ಸರ್ಕಾರದವರು ಭಾರೀಯಾಗಿ ತಾಬೇದಾರರಾದ ಉದ್ಯೋಗಸ್ಥರಿಗೆ ಸಾಲ ಕೊಡುವದರಿಂದ, ಆ ಸಾಲವನ್ನು ಬರಮಾಡಿಕೊಳ್ಳುವ ಉದ್ದೇಶದಿಂ ಅವನು ಮೂಢನಾದರೂ, ಮೂರ್ಖನಾದರೂ, ತುಂಟನಾದರೂ, ಕುರುಡನಾದರೂ, ವೃದ್ಧನಾದರೂ, ಅಕ್ರಮಸ್ಥನಾದರೂ, ಅನ್ಯಾಯಪರನಾದರೂ, ಅವನಂ ಉದ್ಯೋಗದಲ್ಲಿಟ್ಟುಕೊಂಡು ಗೌರವಿಸಬೇಕಾದ ನಿರ್ಬಂಧವು ಗವರ್ನ್ಮೆಂಟಿನವರಿಗೆ ತಪ್ಪಿದ್ದಲ್ಲವು. ಮೇಲೆ ನಾವು ತಿಳಿಸಿದಂತೆ ಅಂತವನು ಸರ್ಕಾರದವರೆಯೂ ಪ್ರಜಾ ವಿರೋಧಿಯಾಗಿ ಏರ್ಪಡುತ್ತಾನೆ. ಮುಖ್ಯವಾಗಿ ನಿಷ್ಪಕ್ಷಪಾತಿಯಾದ ಅಧಿಕಾರಿಯು, ಉಪದಾತ್ರ್ಯ ವಿವರ್ಜಿತನಾಗಿರಬೇಕೆಂದು ಕಾಮಂದಕಾದಿ ರಾಜನೀತಿಗಳು ವಿಸ್ತಾರವಾಗಿ ಹೇಳುತಿವೆ. ಅದೇ ಅಂತವನ್ನು ಇಂಗ್ಲಿಷ್ ಗ್ರಂಥಗಳು ಅಭಿನಂದಿಸಿ ಪ್ರೋತ್ಸಾಹಿಸದಿರುವದಿಲ್ಲವು. ಹೀಗಿರುವಲ್ಲಿ ಅದೇನಿಷಧವೋ ಅವ್ಯವಸ್ಥಿತ ವಿನಿಂದ ಒದು ಲಾಭಕರವಾಗಿಯಾಗಿರಲಿ, ಅಥವಾ ಋಣಕಾರವಾಗಿಯಾಗಿರಲಿ, ಸಮಾನ ವಿರುದ್ಧ ಸಂಬಂಧವನ್ನೈಯದೆ ಹೋಗಲಾರದು, ಹ್ಯಾಗಂದರೆ, ತೆಗದುಕೊಂಡ ಸಾಲವನ್ನು ಕೊಡಲಿಕ್ಕೆ ಉಪಪತ್ತಿಯುಂಟಾಗಿ ಹಾಗೆ ಮಾಡಿದರೆ ಅದು ಸಾಂತ್ವನಿಸಿಕೊಳ್ಳುತಿದೆ. ಅದು ತೀರಿಸಲಿಕ್ಕೆ ಶಕ್ತಿ ಸಾಲದೆ, ತೆಗದುಕೊಂಡವನು ತೀರಿಸದಿದ್ದರೆ ಅಥವಾ ಕೊಟ್ಟವನು ಬಾರಿ ಕೇಳದಿದ್ದರೂ ಅದು ಲಂಚವೆನ್ನಿಸಿಕೊಳ್ಳುತಿದೆ. ಆದಕಾರಣ ಋಣಬಾಧಿತರಾದವರನ್ನು ಜವಾಬ್ದಾರಿಯುಳ್ಳ ಅಧಿಕಾರಗಳಲ್ಲಿ ನಿಯಮಿಸುವಣವೂ, ಅವರು ತಮ್ಮ ಋಣನಿವೃತ್ತ್ಯರ್ಥ ಮನಸ್ವೀ ಸಾಲಮಾಡಿ ಸಾಲಗಾರರ ದಾಕ್ಷಿಣ್ಯಗಳಿಗೊಳಗಾಗುವದಂ ನೋಡುತಲಿರುವಣವೂ, ಆಕ್ಷೇಪಣೀಯವಾಗದೆ ಹೋಗುವದಿಲ್ಲವು. ಬಹು ವಿಧಾನರ್ಥ ಹೇತುವಾದ ಸದರೀ ಸಂಪ್ರದಾಯವು ನಿರಾಕ್ಷೇಪಣೀಯವೆಂದು ಒಂದುವೇಳೆ ಯಾರಾದರು ಭಾವಿಸುವ ಪಕ್ಷಕ್ಕೆ ಒಬ್ಬನು ತಾನಿರುವ ಪ್ರದೇಶದಲ್ಲಿ ಏತಕ್ಕೆ ಭೂಸ್ವತ್ತ ಮಾಡಿಕೊಳ್ಳಕೂಡದು? ಅದರಿಂದ ಯಾರಿಗೇನು ಬಾಧಕ ಉಂಟಾಗುವದು? ಮೊದಲನೆಯದಂತೆ ಎರಡನೆಯದು ಅಷ್ಟರ ಅನರ್ಥಕಾರಿಯಾಗಲಾರದೆ ವ್ಯವಹಾರವಾಗಿ ಹೇಳಬಹುದಾಗಿದೆ.

Occasional Notes.

ನೈಮಿತ್ತಿಕ ವಿಷಯನ್ಯಾಸ.

ಬರೋಡೆ ಗಾಯಕವಾಡಿ ಮಹಾರಾಜರವರು ಲಂಡನ್ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ ಈಸ್ಟ್ ಇಂಡಿಯಾ ಅಸೋಸಿಯೇಷನ್ ಎಂಬ ಸಭೆಯ ವೈಸ್ ಪ್ರಸಿಡೆಂಟಧಿಕಾರವನ್ನಂಗೀಕರಿಸಿರುತ್ತಾರೆ.

ಬರುವ ಡಿಸಂಬರ್ ತಿಂಗಳ ೩೦ನೇ ತಾರೀಖಿನಲ್ಲಿ ಮದರಾಸಿನೊಳು ನಡೆಯುವದಾಗಿರುವ ಸೋಷಿಯಲ್ ಕಾನ್ಫರೆನ್ಸ್ ಎಂಬ ಸಮಯಾಚಾರ ಪರಿಷ್ಕರಣ ಸಭೆಯಲ್ಲಿ ದಿವಾನ್ ಬಹದೂರ್ ಎಸ್ ಸುಬ್ರಹ್ಮಣ್ಯ ಅಯ್ಯರ್, ಸಿ. ಐ ಇ. ಯವರು ಅಗ್ರಾಸನಾಧಿಪತ್ಯವಂ ವಹಿಸುವರೆಂದು ತಿಳಿಯಲಾದೆವು.

ಮದರಾಸ್ ಹೈಕೋರ್ಟ್ ಜಡ್ಜಿಯವರಾದ ಸರ್ ಟಿ. ಮುತ್ತುಸಾಮಿ ಅಯ್ಯರವರು ವಿಕ್ಟೋರ್ಯಾ ಹೋಟಲ್ ಎಂಬ ಭೋಜನಶಾಲೆಗೆ ೩೦೦ರೂಪಾಯಿಗಳೂ, ಮೃತಪಟ್ಟ ರಂಗನಾಥ ಮುದಲಿಯಾರ್ರವರ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಸದರೀ ಭೋಜನಶಾಲೆಗೆ ೭೫೦ ರೂಪಾಯಿಗಳೂ ಕೊಟ್ಟರೆಂದು ಕೇಳುತ್ತೇವೆ.

ಮದರಾಸ್ ಪ್ರಾವಿನ್ಷಿಯಲ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಬಿ ಎ ಪರೀಕ್ಷೆಯಲ್ಲಿ ಒಂದು ಮತ್ತು ಎರಡನೇತರಗತಿಯಲ್ಲಿ ತೇರ್ಗಡೆ ಹೊಂದಿರುವಂತವರುಮಾತ್ರ ಉಮೇದ್ವಾರರಾಗಿ ಅಂಗೀಕರಿಸಲ್ಪಡತಕ್ಕದ್ದೆಂದು ಇದುವರೆಗೆಜಾರಿಯಲ್ಲಿದ್ದ ನಿಬಂ

ಧನೆಯನ್ನು ಗವರ್ನಮೆಂಟಿನವರು ರದ್ದುಮಾಡಿ ಮೂರನೆಯ ತರಗತಿಯಲ್ಲಿ ತೇರ್ಗಡೆಯಾದವರನ್ನು ಸಹ ಸದರೀ ಪರೀಕ್ಷೆಗೆ ಅಂಗೀಕರಿಸಬಹುದೆಂದು ಹುಕುಂ ಕೊಟ್ಟು, ಈ ಪರೀಕ್ಷೆಯ ಬಗ್ಗೆ ಇದುವರೆಗೆ ನಿಷ್ಕಾರಣವಾಗಿದ್ದ ದುಸ್ಸಂಖ್ಯೆ ರೂಪಾಯಿಗಳನ್ನು ಅಂತಹವರುಗಳಿಗೆ ಹೆಚ್ಚಿಸಿರುತ್ತಾರೆ

ಹಿಂದೂ ದೇವಸ್ಥಾನಗಳು ಮೊದಲಾದ ಮತಸ್ಥಾಪನೆಗಳ ಸ್ವತ್ತು ಪರಿಪಾಲನೆಯ ವಿಷಯದಲ್ಲಿ ಮದರಾಸ್ ಗವರ್ನಮೆಂಟಿನವರು ಒಂದು ಮಸವಿದಾ ಕಾನೂನನ್ನು ರಚಿಸಿ ಇಂಡ್ಯಗವರ್ನಮೆಂಟಿನವರ ಮಂಜೂರಾತಿಯ ಬಗ್ಗೆ ಅದನ್ನು ಅವರಿಗೆ ಕಳುಹಿಸಲು ಅವರು ತಮಗೆ ತೋರಿದ ಕೆಲವು ಕಾರಣಗಳಿಂದ ಪ್ರಾಯಶ್ಯೇನ ನಮೂದಿಸಿ ಸದರೀ ಮಸವಿದಾ ಆಕ್ಟಿನ ಸೆಕ್ರೆಟರಿ ಸಾಹೇಬರು ಕಳುಹಿಸಿದ ಅಂಶವನ್ನು ತಿಂಗಳ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆ ಯಷ್ಟೆ ಸದರೀ ಆಕ್ಟಿನ ಮೂಲಕ ಡಿಸ್ಟ್ರಿಕ್ಟ್ ಜಡ್ಜುಗಳಿಗೆ ಉಂಟುಮಾಡಲ್ಪಟ್ಟಿರುವ ಕೆಲಸಗಳು ಮತ್ತು ಅಧಿಕಾರಗಳನ್ನು ಕುರಿತ ನಿಯಮಗಳನ್ನು ತೆಗೆದುಹಾಕುವದರ ಮೂಲಕ ಅದು ಇಂಡ್ಯ ಗವರ್ನಮೆಂಟಿನವರ ಅಂಗೀಕಾರಕ್ಕೆ ಅರ್ಹವಾಗುವಂತೆ ಮಾಡುವದಕ್ಕೆ ಅದನ್ನು ರಚಿಸಿದ ಕಮಿಟಿಯವರಿಗೆ ಸಾಧ್ಯವಾದೀತೆ ಯೆಂಬ ವಿಷಯದಲ್ಲಿ ಅವರ ಅಭಿಪ್ರಾಯವು ಕೂಡಿದಷ್ಟು ತ್ವರೆಯಲ್ಲಿ ತಮಗೆ ತಿಳಿಸಬೇಕೆಂದು ಇಂಡ್ಯ ಗವರ್ನಮೆಂಟಿನವರು ಬರೆದ ಕಾಗದವನ್ನು ಮದರಾಸ್ ಗವರ್ನಮೆಂಟಿನವರು, ಮೇಲ್ಕಂಡ ಕಮಿಟಿಯವರಿಗೆ ಕಳುಹಿಸಿರುತ್ತಾರೆಂದು ಮದರಾಸ್ ಪತ್ರಿಕೆಯೊಂದರ ಮೂಲಕ ತಿಳಿಯಬರುತ್ತದೆ

ಕೋರಿಯಾ ಎಂಬ ಪಟ್ಟಣವನ್ನು ಸ್ವೀಕರಿಸುವ ವಿಷಯದಲ್ಲಿ ಜಪಾನ್ ದೇಶೀಯರಿಗೂ ಚೀನಾ ದೇಶೀಯರಿಗೂ ಯುದ್ಧ ನಡೆಯುತಲಿದೆ ಯಷ್ಟೆ. ಈಚೆಗೆ ನಡೆದ ಎರಡು ಮೂರು ಯುದ್ಧದಲ್ಲಿ ಚೀನಾದೇಶೀಯರು ಪರಾಜಿತರಾಗಿ ತಮ್ಮ ಆಯುಧಗಳನ್ನು ಯುದ್ಧರಂಗದಲ್ಲಿ ಬಿಟ್ಟು ಓಡಿಹೋಗಬೇಕಾದ ದುರ್ವಿಧಿ ಪ್ರಾಪ್ತವಾದುದಲ್ಲದೆ, ಕೆಲವು ಕೋಟೆಗಳು ಶತ್ರುಗಳಿಂದ ಆಕ್ರಮಿಸಿಕೊಳ್ಳಲ್ಪಟ್ಟು ಅವರ ಸೇನೆಯು ಮುಂದಕ್ಕೆ ತಟಾಯಿಸಿ ಬರುವ ಸಂದರ್ಭವನ್ನರಿತು, ತಾತ್ಕಾಲಿಕಸ್ಥಿತಿಯನ್ನೂ ತಮ್ಮ ಬಲಹೀನತೆಯನ್ನೂ ಪರ್ಯಾಲೋಚಿಸಿ, ತಮಗೂ ತಮ್ಮ ಶತ್ರುಗಳಾದ ಜಪಾನ್ ದೇಶೀಯರಿಗೂ ಸಮಾಧಾನ ಮಾಡಿಸಿ, ದೇಶವೊಳು ಪ್ರಾಣನಾಶವು ತಪ್ಪಿಸಬೇಕೆಂದು ಯೂರೋಪ್ ಖಂಡದ ದೊಡ್ಡ ಸಂಸ್ಥಾನಾಧಿಪತಿಗಳನ್ನು ಪ್ರಾರ್ಥಿಸಲು, ಅವರಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ಸರ್ಕಾರದವರು ಪ್ರವರ್ತಿಸುವದಕ್ಕೆ ಇಷ್ಟಪಟ್ಟವರಾಗಿದ್ದಾಗ್ಯೂ ರಷಿಯಾ, ಜರ್ಮನಿ ಮೊದಲಾದ ಇತರ ಪ್ರಬಲ ಸಂಸ್ಥಾನಾಧಿಪತಿಗಳ ಅಭಿಪ್ರಾಯಗಳನ್ನರಿಯದೆ ತಾವು ಮುಂದು ಬೀಳುವದಕ್ಕೆ ಇಷ್ಟವಿಲ್ಲದಂತಿರುತ್ತಾರೆ ಇವರ ಪರ್ಯವಸಾನವು ಇನ್ನು ಸ್ವಲ್ಪ ದಿನಗಳಲ್ಲಿ ಪ್ರಕಟವಾಗ ಬಹುದೆಂದು ತೋರುತ್ತದೆ.

ಕೆಲವು ತಿಂಗಳ ಹಿಂದೆ ಕಲ್ಕತ್ತೆಯಲ್ಲಿ ಕೆಲವರು ದೊಡ್ಡ ಮನುಷ್ಯರು ಸಭೆ ಸೇರಿ, ಬ್ರಾಹ್ಮಣರು ಸಮುದ್ರ ಮಾರ್ಗವಾಗಿ ಅನ್ಯದೇಶ ಸಂಚಾರ ಮಾಡುವ ಕಾಲದಲ್ಲಿ ಅವರ ವಿಷಯದಲ್ಲಿ ವಿಧಿಚೋದಿತವಾಗಿರುವ ಆಚಾರಗಳಿಗೆ ಯಾವಭಾಗದಲ್ಲೂ ಲೋಪ ಪ್ರಾಪ್ತವಾಗದಂತೆ ನಡೆದುಕೊಳ್ಳುವದಕ್ಕೆ ಸಾಧ್ಯವಾದೀತೆ ಯೆಂಬ ಅಂಶವನ್ನು ಸ್ವಾನುಷ್ಠಾನ ಪೂರ್ವಕ ನಿರ್ಧರಿಸಬೇಕೆಂದು ಸದರೀ ಸಭೆಯಲ್ಲಿ ನಿರ್ಣಯವಾದ ಅಂಶವು ಆ ಕಾಲದಲ್ಲೊಳು ಈ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆ ಯಷ್ಟೆ. ಈಗ, ಹಿಂದೆ ಕಲ್ಕತ್ತಾ ಹೈಕೋರ್ಟ್ ಜಡ್ಜಿಯಾಗಿದ್ದ ಸರ್ ರೋಮೇಶ ಚಂದ್ರಮಿತ್ತರ್, ಆನರಬಲ್ ಜಸ್ಟಿಸ್ ಚಂದ್ರನಾಥ ಘೋಸ್ ಮೊದಲಾದ ಕೆಲವರು ದೊಡ್ಡಮನುಷ್ಯರು ಕಲ್ಕತ್ತೆಯಿಂದ ಹೊಗೆ ಹಡಗಿನಲ್ಲಿ ಹೊರಟು ಸಿಲೋನ್ ದ್ವೀಪಕ್ಕೆ ಹೋಗಿದ್ದು ಈಗ ಮದರಾಸಿಗೆ ಬಂದಿರುವದಾಗಿ ಅಲ್ಲಿನ ಪತ್ರಿಕೆಯೊಂದರ ಮೂಲಕ ತಿಳಿಯಬರುವದರಿಂದ ಪ್ರಾಕೃತ ಮೇಲೆ ತಿಳಿಸಲ್ಪಟ್ಟಿರುವ ಕಾರ್ಯಕ್ಕಾಗಿ ಯೇ ಈ ದೊಡ್ಡ ಮನುಷ್ಯರು ಪ್ರಕೃತ ಪ್ರಯಾಣವಂ ಕೈಗೊಂಡಿರಬಹುದೆಂದು ನಂಬುತ್ತೇವೆ ಪರಂತು ಇವರ ಸಂಚಾರಕಾಲದಲ್ಲಿ ಇವರಿಗೆ ನಿಯತವಾಗಿರುವ ನಿತ್ಯ ಕರ್ಮಗಳು ನೆರವೇರಿಸಿಕೊಳ್ಳುವವಿಷಯದಲ್ಲಿ ಅವರಿಗುಂಟಾದ ಅನುಕೂಲ್ಯ ಪ್ರಾತಿಕೂಲ್ಯಗಳಂ ಕ್ರಮೇಣ ಅವರ ಲೇಖನದಿಂದಲೇ ತಿಳಿಯಬೇಕಾಗಿರುತ್ತದೆ.

LOCAL AND PROVINCIAL NEWS

ಒಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು

ಈ ಸಂಸ್ಥಾನದ ಫೋರೆಸ್ಟ್ ಇನ್ಸ್‌ಪೆಕ್ಟರ್ ಜನರಲವರಾದ ಮೆ॥ ಎಚ್ ರಿಕೆಟ್ಸ್ ಯವರು ಶೀಘ್ರದಲ್ಲಿ ತಮ್ಮ ಅಧಿಕಾರವಂ ಬಿಟ್ಟು ಸ್ವದೇಶಕ್ಕೆ ಹೊರಟುಹೋಗುವ ಆಲೋಚನೆಯಲ್ಲಿರುವಂತೆ ಕೇಳುತ್ತೇವೆ.

ಕಳೆದ ಶುಕ್ರವಾರದದಿನ ಶ್ರೀಮನ್ಮಹಾರಾಜ್ಞೀಯವರ ಜ್ಯೇಷ್ಠಪುತ್ರರಾದ ಪ್ರಿನ್ಸಾಫ್ ವೇಲ್ಸ್‌ರವರ ವರ್ಷ ವರ್ಧಂತಿಯಾದುದರಿಂದ ಆ ಬಗ್ಗೆ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿತ್ತು.

ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್, ಸಿ. ಎಸ್ ಐ ಸಾಹೇಬರವರು ಮುಂಬೈ ಪ್ರಾಂತಕ್ಕೆ ಹೋಗಿರುವದಾಗಿ ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ ಸದರೀ ಅಧಿಕಾರಿಯು ಕಳೆದ ಬೃಹಸ್ಪತಿವಾರದದಿನ ಇಲ್ಲಿಗೆ ವಾಪಸ್ ಬಂದರು

ಈ ಸಂಸ್ಥಾನದ ರೈಲ್ವೆ ಮಾರ್ಗದ ಅಭಿವೃದ್ಧಿಕಾರ್ಯವನ್ನು ಮುಂಬೆ ಬ್ರಿಟಿಷ್ ಗವರ್ನಮೆಂಟಿನವರು ವಹಿಸಿಕೊಳ್ಳುವರೆಂತಲೂ, ಅರಸೀಕೆರೆಯೆಂಬ ಮಂಗಳೂರು ವರೆಗೂ ಅಲ್ಲಿಂದ ತೆಲಚ್ಚೇರಿವರೆಗೂ ಸರ್ವೆಮಾಡುವದಕ್ಕಾಗಿ ಅವರೇ ಇಂಜನಿಯರ್‌ಗಳನ್ನು ನೇಮಕಮಾಡಿ ಕಳುಹಿಸಿರುವರೆಂತಲೂ ಈವನಿಂಗ್ ಮೆಯಿಲ್ ಪತ್ರಿಕೆಯ ಮೂಲಕ ತಿಳಿಯಲಾದೆವು

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮೆ॥ ಮೀರ್ ಸುಜಾಯತ್ ಅಲೀಖಾನರವರು ಬರುವ ಡಿಸೆಂಬರ್ ತಿಂಗಳ ಅಂತ್ಯಭಾಗದಲ್ಲಿ ಅಥವಾ ಜನವರಿ ತಿಂಗಳ ಆದಿಭಾಗದಲ್ಲಿ ಈ ಸಂಸ್ಥಾನದ ನೌಕರಿಯಂ ಬಿಟ್ಟು ಮದರಾಸ್ ಪ್ರೆಸಿಡೆನ್ಸಿಗೆ ಸೇರಿದ ಚಿತ್ತೂರ್ ಡಿಸ್ಟ್ರಿಕ್ಟ್ ಕಲೆಕ್ಟರ್ ಕೆಲಸಕ್ಕೆ ಯೋಗ್ಯವರೆಂದು ಒಳದೇಶದ ಇಂಗ್ಲಿಷ್ ಪತ್ರಿಕೆಗಳೆಲ್ಲವೂ ಏಕಕಂಠ್ಯವಾಗಿ ತಿಳಿಸುತ್ತವೆ

ಈ ತಿಂಗಳ ೩ನೇ ತಾರೀಖಿನಲ್ಲಿ ಸಕ್ರೆಬೈಲ್ ಬಂಗಡಿಯಲ್ಲಿ ಮರಳ ೩೯ ಆನೆಗಳು ಹಿಡಿಯಲ್ಪಟ್ಟದ್ದಾಗಿ ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆಗೆ ವರ್ತಮಾನ ಬಂದಿರುತ್ತದೆ ಕಳೆದ ೬ನೇ ತಾರೀಖಿನಲ್ಲಿ ಹಿಡಿಯಲ್ಪಟ್ಟ ೧೦ ಆನೆಗಳು ಸೇರಿ ಒಟ್ಟು ೪೯ ಆನೆಗಳು ಅಲ್ಲಿ ಸಿಕ್ಕಿದಂತೆ ಆಯಿತು.

ಈ ತಿಂಗಳ ೧೦ನೇ ತಾರೀಖಿನಲ್ಲಿ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬರುತಲಿದ್ದ ಸಾಮಾನುಗಳು ಸೇರಿದ ಪ್ರಯಾಣಸ್ಥರ ಗಾಡಿಯು ಬೀರೂರಿಗೂ ಕಡೂರಿಗೂ ಮಧ್ಯೆ ರೆಯಿಲಿನ ಕಂಬಿ ತಪ್ಪಿ ಕೆಳಗೆ ಬಿದ್ದು, ರಸ್ತೆಯು ಸುಮಾರು ಕಾಲು ಮೈಲಿನವರೆಗೆ ಕೆಟ್ಟು ಪ್ರಯಾಣಸ್ಥರನ್ನು ಇಳಿಸಿ ಬೇರೆ ಗಾಡಿಗಳಲ್ಲಿ ತರಬೇಕಾಯಿತೆಂದು ತಂತಿ ವೃತ್ತಾಂತ ಬಂದಿರುತ್ತದೆ

ಬರುವ ಜನವರಿ ತಿಂಗಳ ಗುರ್ರೆಂ ತಾರೀಖ್ ಮೊದಲು, ಮದರಾಸ್ ರೆಯಿಲ್ವೆ ಮಾರ್ಗಗಳಲ್ಲಿ ಮೆಯಿಲ್ ಗಾಡಿ ವಿನಾ ಇತರ ಸಾಮಾನ್ಯ ಗಾಡಿಗಳಲ್ಲಿ ಸಂಚಾರ ಮಾಡತಕ್ಕ ೩ನೇ ದರಗತಿ ಪ್ರಯಾಣಸ್ಥರಿಂದ ಈಗ ವಸೂಲ್ಮಾಡಲ್ಪಡುವ ಟಿಕೆಟ್ ದರ ಪ್ರೊಂ ಮೂರುಕಾಸನ್ನು ಎರಡುಕಾಸಿಗೆ ಇಳಿಸುವಂತೆ ಬೋರ್ಡ್ ಆಪ್ ಡೈರೆಕ್ಟರಿಂದ ಬಂದ ಹುಕುಮನ್ನು ಜಾರಿಯೊಳು ತರಬೇಕೆಂದು ಸದರೀ ರೆಯಿಲ್ವೆ ಏಜಂಟರು ಮತ್ತು ಮ್ಯಾನೇಜರು ನಿರ್ಣಯಿಸಿರುವಂತೆ ತಿಳಿಯಲಾದೆವು

ಈ ಸಂಸ್ಥಾನದ ಡಿಸ್ಟ್ರಿಕ್ಟ್ ಜಾತಿ ಡೆಪ್ಯುಟಿ ಕಮಿಷನರುಗಳ ಮತ್ತು ಯೆಗ್ಜಿಕ್ಯುಟಿವ್ ಇಂಜನಿಯರುಗಳ ಸ್ಥಳ ಬದಲಾವಣೆಗಳಂ ಮಾಡಬೇಕಾದ್ದಾವಶ್ಯಕವೆಂದು ಗವರ್ನಮೆಂಟಿನವರಿಗೆ ತೋರಿ ಆ ವಿಷಯವಂ ಕುರಿತು ಆಲೋಚಿಸುತಲಿರುವಂತೆಯೂ, ಪ್ರಾಯಶಃ ಬರುವ ಡಿಸೆಂಬರ್ ತಿಂಗಳ ಅಂತ್ಯಭಾಗದಲ್ಲಿ ಅದು ಜಾರಿಯೊಳು ತರಲ್ಪಡುವದೆಂತಲೂ ಒಳದೇಶದ ಪತ್ರಿಕೆಯೊಂದು ತಿಳಿಸುತ್ತದೆ

ಬರುವ ಡಿಸೆಂಬರ್ ತಿಂಗಳ ಆದಿಭಾಗದಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರು ಉತ್ತರದೇಶ ಸಂಚಾರ ಮಾಡಿಕೊಂಡು ಬರಬೇಕೆಂದು ಯೋಚಿಸಿ ಆಬಗ್ಗೆ ಆವಶ್ಯಕಗಳಾದ ಸರ್ವಸನ್ನಾಹಗಳು ನಡೆಯುತಲಿರುವಂತೆಯೂ, ಮಹಾರಾಜರವರ ಸವಾರಿಯು ವಾಪಸು ದಯಮಾಡುವಕ್ಕೆ ಮುನ್ನವೆ ಮತ್ತು ವಾರಗಳ ಕಾಲ ಹಿಡಿಯುವದೆಂತಲೂ, ದಿವಾನ್ ಸಾಹೆಬರವರು ಸಹ ಮಹಾರಾಜರವರ ಸವಾರಿಯೊಡನೆ ದಯಮಾಡುವರೆಂತಲೂ ಕೇಳುತ್ತೇವೆ.

ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಸ್ವತಂತ್ರರಾದ ಖುಷ್‌ಬಾಷ್ ಜನರ ಅಭಿಪ್ರಾಯಗಳನ್ನರಿಯ ಬೇಕೆಂಬುದು ಗವರ್ನಮೆಂಟಿನವರ ಮುಖ್ಯೋದ್ದೇಶವಾಗಿರುವದರಿಂದ, ಸಂಬಳಗಳಂ ಪಡೆಯುತ್ತ ಗವರ್ನಮೆಂಟಿನವರ ಅಧಿಕಾರಕ್ಕೆ ಒಳಪಟ್ಟಿರುವ ಪಬ್ಲಿಕ್ ಪ್ರಾಸಿಕ್ಯೂಟರುಗಳು, ಮುನ್ಸಿಪಲ್ ವೈಸ್ ಪ್ರೆಸಿಡೆಂಟರುಗಳು, ಪ್ರತಿನಿಧಿಗಳಾಗಿ ಚುನಾಯಿಸಲ್ಪಡುವದಕ್ಕೆ ಅರ್ಹರಲ್ಲವೆಂದು ಗವರ್ನಮೆಂಟಿನವರು ನಿರ್ಣಯಿಸಿರುವದಾಗಿ ಕೇಳುತ್ತೇವೆ

ಮೈಸೂರ್ ಗವರ್ನಮೆಂಟ್ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಮುಂದೆ ಐದು ಸಂವತ್ಸರಗಳ ಕಾಲದ ವರೆಗೆ ನಿಲ್ಲಿಸಬೇಕೆಂದು ಮಹಾರಾಜ ಸರ್ಕಾರದವರು ಆಲೋಚಿಸುತಲಿರುವದಾಗಿ ಮೈಸೂರು ಹೆರಲ್ಡ್ ಎಂಬ ಪತ್ರಿಕೆ ತಿಳಿಸುತ್ತದೆ ಕಳೆದ ದಸರಾ ದರ್ಬಾರಿನಲ್ಲಿ ಪ್ರತಿನಿಧಿಗಳು ಕೆಲವರು ಅದೇ ಅಂಶವಂ ಕುರಿತು ಪ್ರಸ್ತಾಪಿಸಿದ ಕಾಲದಲ್ಲಿ ಸದರೀ ಅಂಶವು ಅವರ ಹಿಂದಿನ ಸಂವತ್ಸರದಲ್ಲೇ ವ್ಯವಸ್ಥೆಯಾಗಿರುವದರಿಂದ ಮರಳಿ ತದ್ವಿಷಯದಲ್ಲಿ ಜಿಜ್ಞಾಸೆ ಮಾಡುವದು ನಿಷ್ಪ್ರಯೋಜಕವಾದ ಕಾರ್ಯವೆಂದು ದಿವಾನ್ ಸಾಹೇಬರವರು ಜವಾಬ್ ಕೊಟ್ಟಿರುವಲ್ಲಿ ಈಗ ಮೇಲ್ಕಂಡಂತೆ ತಿಳಿಸುವದಕ್ಕೆ ಸದರೀ ಪತ್ರಿಕೆಗೆ ಯೇನು ಆಧಾರವೊ ನಾವರಿಯೆವು

ಕಳೆದ ಸೋಮವಾರದದಿನ ರಾತ್ರಿ ಬಲವಾಗಿ ಮೋಡ ಮುಸುಕಿ ಯೆರಡುಗಳಿಗೆಗಳ ಮೇಲ್ಪಟ್ಟು ಮಳೆ ಬಿತ್ತು. ಅದರಿಂದೀಚೆಗೆ ಪ್ರತಿದಿನವೂ ಚೆನ್ನಾಗಿ ಬಿಸಿಲು ಕಾಯುತ್ತ, ರಾತ್ರಿ ಕಾಲದಲ್ಲಿ ಚಳಿಯು ಅಧಿಕವಾಗಿರುತ್ತ ಸ್ವಲ್ಪ ಮಂಜು ಬೀಳುವದಕ್ಕೆ ಸಹ ಪ್ರಾರಂಭವಾಗಿದೆ ತಾಲ್ಲೂಕುಜಾತಿನಲ್ಲಿ ಅನೇಕ ಸ್ಥಳಗಳಲ್ಲಿ ಪೈರಿಗೆ ಮಳೆ ಬಿದ್ದಂತೆ ತಿಳಿಯಬರುತ್ತದೆ. ಆಹಾರ ಪದಾರ್ಥಗಳ ಪೈಕಿ ಅಕ್ಕಿಯ ಧಾರಣೆ ಸ್ವಲ್ಪ ಹೆಚ್ಚಿರುತ್ತದೆ ಇತರ್ಥ ಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದೇ ವಿಧವಾಗಿವೆ ರೋಗಾವ್ಯಾಧಿಗಳ್ಯಾವವೂ ಇಲ್ಲವು. ಪಶುಗಳಿಗೆ ತೃಣ ಜಲ ಸಮೃದ್ಧಿಯುಂಟು. ಜನಾರೋಗ್ಯವು ಸಾಮಾನ್ಯವಾಗಿ ಚೆನ್ನಾಗಿದೆ.

ಇಲ್ಲಿನ ಸಿವಿಲ್ ಮ ಮಿಲಿಟರಿ ಸ್ಟೇಷನಿಗೆ ಉಂಟಾಗಿರುವ ಜಲಕೋಪವಂ ನಿವೃತ್ತಿಮಾಡುವದಕ್ಕಾಗಿ ಹೆಸರುಘಟ್ಟ ಎಂಬ ಪ್ರದೇಶದಿಂದ ನೀರು ತರಬೇಕೆಂದು ಯೋಚಿಸಿ ಅದಕ್ಕೆ ಆವಶ್ಯಕಗಳಾದ ಸನ್ನಾಹಗಳಂ ನಡೆಸುತಲಿದರಷ್ಟೆ. ಸದರೀ ಯೋಜನಾದಿನ ಡೆಸಿಯಿಂದ ಮಿಲಿಟರಿ ಸ್ಟೇಷನಿಗೆ ಬೇಕಾದಷ್ಟು ನೀರು ಸರಬರಾಯಿ ಆಗಲಾರದೆಂದು ಸ್ಟೇಷನ್ ಅಧಿಕಾರಿಗಳಿಗೆ ಕಂಡುಬರಲು, ಬೆಂಗಳೂರು ಪಟ್ಟಣಕ್ಕೆ ಜಲಸಮೃದ್ಧಿಯನ್ನುಂಟುಮಾಡುವದಕ್ಕಾಗಿ ಶ್ರೀಮನ್ಮಹಾರಾಜಾ ಸರ್ಕಾರದವರು ಕಟ್ಟಿಸುತಲಿರುವ ಹೆಸರುಘಟ್ಟದ ತಟಾಕದಿಂದಲೇ ಮಿಲಿಟರಿ ಸ್ಟೇಷನಿಗೂ ನೀರು ಕೊಡಬೇಕೆಂದು ಬ್ರಿಟಿಷ್ ಗವರ್ನಮೆಂಟಿನವರು ಅಪೇಕ್ಷಿಸಿ ಅದಕ್ಕೆ ಮಹಾರಾಜಾ ಸರ್ಕಾರದವರು ಒಪ್ಪಿಕೊಂಡದ್ದಾಗಿ ತಿಳಿಯಬರುತ್ತದೆ. ಈ ವರ್ತಮಾನವು ಯಥಾರ್ಥವಾಗಿರುವ ಪಕ್ಷದಲ್ಲಿ ನೀರಿನ ವಿಷಯದೊಳು ಬೆಂಗಳೂರು ಪಟ್ಟಣದವರ ಸುಖಕ್ಕೆ ಅನಿವಾರ್ಯತೆಯುಂಟಾಗಬಹುದೆಂದು ಚಿಂತಿಸುತ್ತೇವೆ.

THE MONEY MARKET.

Stocks, Shares and Exchange

ಮದರಾಸ್, ಶನಿವಾರ, ತಾರೀಖ್ 10 ನೇ ನವೆಂಬರ 1894

ಸೇಕಡ ಮೂರುವರೆ ರೂ ಬಾಬತು, ಗವರ್ನಮೆಂಟ್ ಪತ್ರಗಳು, 103–2–0ರೂ.ಗಳಿಂದ 103–14–0 ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 1,130–0–0ರೂ ಗಳಿಂದ 1,150–0–0ವರೆಗೆ

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100ರೂ) ಬಾಬತು 155–0–0ರೂ ಗಳಿಂದ 160–0–0 ರೂ ವರೆಗೆ,

ಸವರಿನುಗಳು, ಪ್ರತಿ 1 ಕ್ಕೆ 18–0–0 ರೂಪಾಯಿಗಳಿಂದ 18–6–0 ರೂ. ವರೆಗೆ,

ಲಂಡನ್ ಬ್ಯಾಂಕಿನ ಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ ಯೆಕ್ಸ್‌ಚೇಂಜ್ ದರದ ಹುಂಡಿಗಳು .—

6 ತಿಂಗಳ ಗಡುವಿಗೆ	1 s 1 3/8 d.
4 ,,	1 s 1 5/16 d
ಕೇಳಿದಾಗ ಕೊಡಲ್ಪಡುವದಕ್ಕೆ	1 s. 1 ½ d.

CORRESPONDENCE

ದೇಹದಾರ್ಢ್ಯ.

ಮ॥ ರಾ॥ ಕರ್ನಾಟಕಪ್ರಕಾಶಿಕಾ ಎಡಿಟರವರ ಸಮ್ಮುಖಕ್ಕೆ.

ಪೂರ್ವಕಾಲದಲ್ಲಿ ಮಹನ್ನಾದವರು ಕೆಲವರು ಗರಡೀ ಸಾಧನೆಗಳನ್ನು ಮಾಡುತಲೂ, ಕೆಲವರು ಸಾಧನೆಯಿಂದ ಶರೀರಕ್ಕೆ ಯಷ್ಟು ಕ್ಲೇಶ ಪ್ರಾಪ್ತವಾಗುವದೋ ಅಷ್ಟು ಕ್ಲೇಶವನ್ನು ಯೋಗದ ಪ್ರಯೋಜನಕಾರಿಯಾದ ಉದ್ಯೋಗದ ಮೂಲಕ ಶರೀರಕ್ಕೆ ಉಂಟುಮಾಡಿಕೊಳ್ಳುತಲೂ ಇದ್ದರು ಈ ಸಾಧನ ಬಲದಿಂದಲೇ ಅವರು ಆರೋಗ್ಯವಂತರಾಗಿಯೂ ಕಾಯಶಕ್ತಿಯುಳ್ಳವರಾಗಿಯೂ ಇದ್ದರು ಈಗಲೂ ಅನೇಕರು ದೇಹದಂಡನೆಯ ಮೂಲಕವಾದ ಸಾಧನೆಯಿಂದ ಜೀವಿಸತಕ್ಕವರು ಬಲಿಷ್ಠರಾಗಿಯೇ ಇದ್ದಾರೆ ಈಗಿನ ಕಾಲದ ಸಾಧನೆಗಳಲ್ಲಿ ಆಸ್ಥೆ ಇಲ್ಲದೆ ಇದ್ದರೂ ಕೂಡ ವೈದಿಕಸಾಧನೆಯಾದ ದೇವತಾಭ್ಯಾಸದಲ್ಲಿ ನಿರತರಾಗಿ, ಅನೇಕವಿಧವಾದ ಆಸನಗಳನ್ನು ಹಾಕುತಲಿದ್ದರು ಇದಕ್ಕೆ ಅವರು ಆಸ್ತಿಕ ಫಲವನ್ನೇ ಮುಖ್ಯವಾದದೆಂದು ತಿಳಿದುಕೊಂಡಿದ್ದಾಗ್ಯೂ ಅದೇ ಉತ್ತಮವಾದ ವ್ಯಾಯಾಮವಾಗಿ ಪರಿಣಮಿಸಿ ಲೌಕಿಕ ಸೌಖ್ಯಕ್ಕೆ ಕಾರಣಭೂತವಾದ ದೇಹದಾರ್ಢ್ಯವನ್ನುಂಟುಮಾಡುತಲಿತ್ತು. ನಮ್ಮ ಪೂರ್ವಿಕರಲ್ಲಿ ಅಬಾಲವೃದ್ಧರಿಗೂ ರೀತಿಯಲ್ಲಿ ಬಹು ವಿಧವಾದ ಸಾಧನೆಯು ಇರುತಲಿತ್ತು. ಅನೇಕರಿಗೆ ಗೃಹಕೃತ್ಯವನ್ನು ಮಾಡಿಕೊಳ್ಳುವದು, ನೀರು ಸೇದುವದು, ತೋಟ ಮಾಡುವುದು, ಕಟ್ಟಿಗೆಗಳನ್ನು ಒಡೆಯುವುದು, ಇವೆಲ್ಲವು ಸಾಧನರೂಪವಾಗಿದ್ದವು ಈಗ ಇವೇ ಮೊದಲಾದ ಕಾಯಕ್ಲೇಶವನ್ನುಂಟುಮಾಡತಕ್ಕ ಕೆಲಸಗಳನ್ನು ನಿರ್ಮೂಲವಾದ ವಾಯು ಸಂಚಾರವುಳ್ಳ ಸ್ಥಳಗಳಲ್ಲಿ ಮಾಡಿ ಜೀವಿಸತಕ್ಕ ಜನಗಳೆಲ್ಲರು ಆರೋಗ್ಯ ಭಾಗ್ಯವುಳ್ಳವರಾಗಿಯೂ, ಬಲಿಷ್ಠರಾಗಿಯೂ ಇರುವುದು ಪ್ರತ್ಯಕ್ಷವಾಗಿಯೇ ಇದೆ. ದ್ರವ್ಯ ಬಲದಿಂದ ಕೆಲಸ ಮಾಡಲಿಚ್ಛೆಯಿಲ್ಲದೆ ಕೂತಕಡೆ ಕೆಲಸ ಮಾಡುತ ದೊಳ್ಳು ಬೆಳಸಿಕೊಂಡಿರತಕ್ಕ ಧನಿಕರುಗಳನ್ನೂ ಅವರ ಮನೆಗಳಲ್ಲಿ ಪಾಚಕರಕತ್ತು ವೆಂದಲಾದವುಗಳನ್ನು ಮಾಡಿಕೊಂಡು ಕಾಯಕ್ಲೇಶವಿಲ್ಲದ ಜೀವನ ಮಾಡತಕ್ಕವರನ್ನೂ ಹೋಲಿಸಿ ನೋಡಿದರೆ ಆರೋಗ್ಯಕ್ಕೂ ವ್ಯಾಯಾಮಕ್ಕೂ ಇರುವ ಕಾರಣಪ್ರೇ ಸ್ಪಷ್ಟವಾಗುವದು.

(ಸಶೇಷ) ಲೋಕಾಹಿತ ನಿ.

THE MYSORE GAZETTE

ಮೈಸೂರು ಗಜೆಟು

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡಲ್ಪಡುವ ಇಸ್ತಿಹಾರುನಾಮೆಗಳು.

ಗುರುವಾರ, ತಾ॥ ೮ನೇ ನವೆಂಬರ್ ೧೮೯೪.

ನಂ॥ ೬೭೩೩–೧, ೯೬೩, ತಾ॥ ೩೧ನೇ ಅಕ್ಟೋಬರ್ ೧೮೯೪ – ಕ್ರಿಮಿನಲ್ ಪ್ರೊಸೀಜರ್ ಕೋಡ್ ೩೭ನೆಯ ಸೆಕ್ಷನ್ ಅನುಸಾರ ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್ದಾರ್ ಮ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಎಂ. ಗುಲಾಂ ಮೊಹಿದ್ದೀನ್ ಸಾಹೇಬರವರು, ಸದರೀ ಕ್ಲಾಸ್ ಮ್ಯಾಜಿಸ್ಟ್ರೇಟರಿಗೆ ಜಾಸ್ತೀ ಆಗಿ ಕೊಡಬಹುದೆಂದು ಗವರ್ನಮೆಂಟಿನವರು ಕೊಡಬಹುದೆಂದು ನಾಲ್ಕನೆಯ ಷೆಡ್ಯೂಲಿನಲ್ಲಿ ನಮೂದಿಸಿರುವ ಇದಡಿ ತಿಳಿಸಲ್ಪಡುವ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ —

೧ ಅನೀಂದ್ಯ ಜೇನಿಗೆ ಮಾಡತಕ್ಕದೆಂದು ಹುಕುಂ ಕೊಡುವ ಅಧಿಕಾರ, ಸೆ॥ ೧೦೬

೨ ೧೪೩ನೆಯ ಸೆಕ್ಷನ್ ಅನುಸಾರ ಹುಕುಂ ಕೊಡುವ ಅಧಿಕಾರ

೩ ಲಾಷು ವಿಚಾರಣೆ ಮಾಡುವ ಅಧಿಕಾರ, ಸೆ ೧೭೬,

೪ ಫಿರ್ಯಾದಿಯ ಮೇಲೆ ಮೊಕದ್ದಮೆಯನ್ನು ಹಿಡಿಯುವ ಅಧಿಕಾರ, ಸೆ॥ ೧೯೧

೫ ಪೋಲೀಸಿನವರ ರಿಪೋರ್ಟಿನ ಮೇಲೆ ಮೊಕದ್ದಮೆಯನ್ನು ಹಿಡಿಯುವ ಅಧಿಕಾರ, ಸೆ॥ ೧೯೧

೬ ತಪ್ಪಿತ ನಡೆಸಲ್ಪಟ್ಟಂತೆ ತಿಳಿಯಬಂದರೆ ಮೊಕದ್ದಮೆಯನ್ನು ಹಿಡಿಯುವ ಅಧಿಕಾರ, ಸೆ॥ ೧೯೧

ನಂ॥ ೮೪೭೩ ಐ ೯. ೪೦ ೯೨, ತಾ॥ ೩ನೇ ನವೆಂಬರ್ — ಗವರ್ನಮೆಂಟ್ ಅಡ್ವೊಕೇಟ್, ಆಫೀಸ್ ಹೆಡ್ ಕ್ಲಾರ್ಕ್ ಮ ವಿಚಾರಣ ಶಿರಸ್ತೆದಾರ್, ಮತ್ತು ರಿಜಿಸ್ಟ್ರಾರ್ ಆಫ್ ಅಸ್ಸುರೆನ್ಸ್ ಜನರಲ್‌ರವರ ಮೆಸ್ಟರ್ ಸಿ. ವಿಶ್ವನಾಥಯ್ಯನವರಿಗೆ ೧೮೯೪ನೇ ಇಸವಿ ಸೆಪ್ಟೆಂಬರ್ ೧೫ನೇ ತಾರೀಖು ಮೊದಲ್ಗೊಂಡು ... ೧ ... ತಿಂಗಳ ರಜೆ ಇಸ್ತಿಹಾರಿನ ಮೂಲಕ

ಮೂಲಕ ಕೊಡಲ್ಪಟ್ಟ ಐವತ್ತೈದು ದಿವಸಗಳ ಕ್ಯಾಜುಯಲ್ ರಜಾವನ್ನು ಅವರು ಅದೇ ತಿಂಗಳ ೨೫ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು, ೧೮೯೪ನೇ ಇಸವಿ ಅಕ್ಟೋಬರ್ ೧೯ನೇ ತಾರೀಖಿನ ಮಧ್ಯಾಹ್ನದಲ್ಲಿ ಕೆಲಸಕ್ಕೆ ವಾಪಸ ಬಂದ ಕಾಗಿ ಸದರೀ ರಜಾ ಪೈಕಿ ಅವರುಪಯೋಗಿಸಿಕೊಳ್ಳದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿದೆ.

ನಂ|| ೩೦೩೦—೧ ೧೩೦೨, ತಾ|| ೫ನೇ ನವಂಬರ ಮೆ|| ಬ್ರೌನ್ ಘಟ್, ಎಫ್ ಜೆ ಎಸ ಯಂಬವರು ಮೈಸೂರ ಜಿಯೋಲಾಜಿಕಲ್ ಇಲಾಖೆಯಲ್ಲಿ ಸರ್ಕಾರ ತರಫ ಜಿಯೋಲೋಜಿಸ್ಟ ಅವರ ಪ್ರತ್ಯೇಕ ಪ್ರಕಾರ ಧಾತುವರ್ಗ ಪರೀಕ್ಷಕರಾಗಿ ನಿಯಮಿಸಲ್ಪಟ್ಟಿರುತ್ತಾರೆ

ನಂ|| ೩೦೪೪—೧ ೪ ೫೯೬ ೯೦—ಶ್ರೀನಿವಾಸಪುರ ಸ ತಾಲ್ಲೂಕ ಡೆಪ್ಯುಟಿ ಅಮಲ್ದಾರರು ಡಿ. ಮಾಧವರಾಯರವರಿಗೆ, ೧೮೯೪ನೇ ಇಸವಿ ಅಕ್ಟೋಬರ್ ೨೫ನೇ ಮತ್ತು ನುಳ್ಳ ೩೪೯೨—೧೫೮ನೇ ನಂಬರ ಇಸ್ತಿಹಾರ ನಾಮೆಯ ಮೂಲಕ ಕೊಡಲ್ಪಟ್ಟ ಒಂದು ತಿಂಗಳ ಪ್ರಿವಿಲೇಜ್ ರಜಾ ಇದರಿಂದ ಒಂದು ತಿಂಗಳು ಇಪ್ಪತ್ತೊಂದುದಿನಗಳಿಗೆ ಜಾಸ್ತಿ ಮಾಡಲ್ಪಟ್ಟಿದೆ.

ನಂ|| ೩೦೪೫—೧. ೪ ೧೨೩- ೯೦—ದೊಡ್ಡಬಳ್ಳಾಪುರ ಕೋಟೆ ತಾಲ್ಲೂಕ ಅಮಲ್ದಾರ ಟಿ ರಾಮಚಂದ್ರರಾಯರವರ್, ಕ್ರಮವಾಗಿ ೧೮೯೪ನೇ ಇಸವಿ ಜೂನ್ ೩, ಆಗಸ್ಟು ೨ ಮತ್ತು ಅದೇ ೩೧ನೇ ತಾರೀಖುಗಳುಳ್ಳ ೨೨೮೯ ೧ ೪ ೧೨೪ -೯೩, ೨೦೪೯—೧ ೯ ೧೨೪- ೯೩ ಮತ್ತು ೩೩೪೦ ೧. ೪ ೧೨೪—೯೩ನೇ ನಂಬರುಗಳುಳ್ಳ ಇಸ್ತಿಹಾರನಾಮೆಗಳ ಮೂಲಕ ಕೊಡಲ್ಪಟ್ಟ ಎರಡು ತಿಂಗಳು ಇಪ್ಪತ್ತೆಂಟು ದಿವಗಳ ಪ್ರಿವಿಲೇಜ್ ರಜಾವನ್ನು ೧೮೯೪ನೇ ಇಸವಿ ಜುಲೈ ೧೦ನೇ ತಾರೀಖ್ ಮೊದಲು ಉಪಯೋಗಿಸಿ ಕೊಂಡು ೧೮೯೪ನೇ ಇಸವಿ ಅಕ್ಟೋಬರ ೮ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸ ಬಂದದರಿಂದ ಸದರೀ ರಜಾ ಪೈಕಿ ಉಪಯೋಗಿಸಿಕೊಳ್ಳದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿದೆ

ನಂ|| ೩೦೪೬—೧ ೪ ೪೩೪—೯೦—೫೯ ೧೮೯೪ನೇ ಇಸವಿ ಫಿಬ್ರುವರಿ ೮ ಮತ್ತು ಜುಲೈ ೩ನೇ ತಾರೀಖ್ ಗಳುಳ್ಳ ೧೨೩೦—೧ ೪ ೪೩೪—೯೦ ಮತ್ತು ೨೩೧೦—೧ ೪ ೪೩೪ ೯೦ನೇ ನಂಬರ ಇಸ್ತಿಹಾರ ನಾಮೆಗಳ ಮೂಲಕ ಪ್ರಬೇಷನರ ಅಸಿಸ್ಟೆಂಟ ಕಮಿಷನರ ಮೆ|| ಸಿ ದೇವರಾಜ ಅರಸಿನವರಿಗೆ ಬಗರೆ ರಜಾ ಕೊಡಲ್ಪಟ್ಟ ನಾಲ್ಕು ತಿಂಗಳು ಇಪ್ಪತ್ತು ದಿನಗಳ ಪ್ರಿವಿಲೇಜ್ ರಜಾ ಇದರಿಂದ ಒಂದು ದಿನ ಜಾಸ್ತಿ ಮಾಡಲ್ಪಟ್ಟಿದೆ

ನಂ|| ೩೦೬೧ ೮. ೯೯೩ನೇ ನವಂಬರ,—ಕ್ರಿಮಿನಲ್ ಪ್ರೊಸೀಜರ್ ಕೋಡ್ ೩೩ನೇ ಸೆಕ್ಷನ್ ಅನುಸಾರ, ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ ಕಮಿಷನರ ಮತ್ತು ಎಕ್ಸ್ ಮ್ಯಾಜಿಸ್ಟ್ರೇಟರಾದ ಮೆ|| ವಿಜಾರ ಕಮರಾಲುದ್ದೀನ್ ಅಲ್ಲಿಖಾನರು ಜಾಬ್ತೆಕೋಡಿನ ೩೦ನೇ ಸೆಕ್ಷನನುಸಾರ ಛಡಿಸಜಾ ವಿಧಿಸುವ ಅಧಿಕಾರ ಕೊಡಲ್ಪಟ್ಟಿರುತ್ತಾರೆ

ವಿದ್ಯಾಭ್ಯಾಸದ ಇಲಾಖಾ.

ನಂ||೬೩ ತಾ||೩೧ನೇ ಅಕ್ಟೋಬರ—೧೮೯೪ನೇ ಇಸವಿ ಅಕ್ಟೋಬರ ೩ನೇ ತಾರೀಖಿನ ಮಧ್ಯಾಹ್ನಾತ್ಪರ ಮೈಸೂರ ದಕ್ಷಿಣ ಸರ್ಕಲ್ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ ಆಫೀಸ ಚಾರ್ಜನ್ನು ಮೆ||ಎಚ್. ಕೇಶವಯ್ಯನವರು ಇವರಿಂದ ಮೆ|| ಬಿ ದೇಶಾಚಾರ್ಯ ವಹಿಸಿಕೊಂಡಿರುತ್ತಾರೆ

SUMMARY OF NEWS.
ವೃತ್ತಾಂತ ಸಂಗ್ರಹವು.

ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವ ವಿಷಯದಲ್ಲಿ ಮೈಸೂರ ಸರ್ಕಾರದವರು ಕಾನೂನ್ ಮಾಡಿ ಪ್ರಜೆಗಳನ್ನು ಹಿಂಸಿಸುವದು ಸರ್ಕಾರದವರಿಗೆ ಧರ್ಮವಲ್ಲವೆಂದು ಅನೇಕ ಹಿಂದುಗಳು ಗುಣಗುಟ್ಟುತಿದ್ದಾರೆ—ಕನ್ನ

ಹೈದರಾಬಾದಿನಲ್ಲಿರುವ ಷಹಪೂರಚಿ ಎಂಬುವರು ತಮ್ಮ ಪತ್ನಿಯು ಜೀರಿಗಹೋದದ್ದರಿಂದ ಉತ್ತರ ಕ್ರಿಯಾದಿಗಳನ್ನು ನಡಿಸುವಾಗ ತಮ್ಮ ಆಸ್ತಿಯಲ್ಲಿ ೩೫,೦೦೦ ರೂಪಾಯಿಗಳನ್ನು ಧರ್ಮ ಕಾರ್ಯಗಳಿಗೆ ತೆಗೆದಿಟ್ಟು ಈಗ ಆ ಹಣದಿಂದ ತಮ್ಮ ಹೆಂಡತಿಯ ಹೆಸರಿನಲ್ಲಿ ಒಂದು ಧರ್ಮದ ಆಸ್ಪತ್ರೆಯನ್ನು ಸ್ಥಾಪಿಸುವವರಾಗಿದ್ದಾರೆ

ಚೀನಾದೇಶದಲ್ಲಿ ಒಂದು ಮಗು ಹುಟ್ಟಿದಕೂಡಲೇ ಅದರ ನಡುವಿಗೆ ಒಂದು ಕೆಂಪು ದಾರವನ್ನು ಕಟ್ಟುತ್ತಾರೆ, ಹೀಗೆ ಕಟ್ಟಿದರೆ ಆ ಮಕ್ಕಳು ಸಾಧುಗಳಾಗಿಯೂ ಗುಣವಂತರಾಗಿಯೂ ಮಾತಾಪಿತೃಗಳಿಗೆ ವಿಧೇಯರಾಗಿಯೂ ಇರುತ್ತಾರಂತೆ ದಾರ ಕಟ್ಟದಿದ್ದರೆ ಮಕ್ಕಳು ಕೆಟ್ಟುಹೋಗುತ್ತಾರಂತೆ ! ಮೂಢತ್ವವೆಂಬುವದು ಹೀಗೂ ಉಂಟೇ !

